● www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ ಕಲ್ಪನೆಯನ್ನು ಚಿತ್ರಕ್ಕಿಳಿಸುವ ಎಐ ತಂತ್ರಜ್ಞಾನ ಈಗ ಜನಸಾಮಾನ್ಯರ ಕೈಗೂ ಸುಲಭವಾಗಿ ಸಿಗುತ್ತಿದೆ

ಬ್ಲ್ಯಾಕ್‌ಮೇಲ್ ಮಾಡಿ ಅಧ್ಯಕ್ಷರಾದ ವಿಜಯೇಂದ್ರ: ಯತ್ನಾಳ ವಾಗ್ದಾಳಿ 6

ಜಾತಿ ಗಣತಿ: ಡಿಕೆಶಿ ವಿರುದ್ಧ ಖರ್ಗೆ ಟೀಕೆ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
69,551 ▼	20,906 ▼	₹63,150 (ಬೆಂಗಳೂರು)	₹73,400 (ಬೆಂಗಳೂರು)	83.37

ಬೆತ್ತಲೆ ಪ್ರಕರಣ 1,328

ರಾಜ್ಯದಲ್ಲಿ ಮಹಿಳೆಯ ಘನತೆಗೆ ಧಕ್ಕೆ ತರುವ ಯತ್ನ: 2022ರ ಎನ್‌ಸಿಆರ್‌ಬಿ ವರದಿ

ಕುಕಿ ಬುಡಕಟ್ಟು ಸಮುದಾಯದ ಇಬ್ಬರು ಮಹಿಳೆಯರನ್ನು ಬೆತ್ತಲೆಗೊಳಿಸಿ, ರಸ್ತೆಗಳಲ್ಲಿ ಮೆರವಣಿಗೆ ಮಾಡಿಸಿ ಸಾಮೂಹಿಕ ಅತ್ಯಾಚಾರ ಮಾಡಿದ ಘಟನೆಯು ಮಣಿಪುರದಲ್ಲಿ ಇದೇ ವರ್ಷ ನಡೆದಿತ್ತು. ಈಗ ಕರ್ನಾಟಕದಲ್ಲಿ ಇದೇ ರೀತಿಯಲ್ಲಿ ಮಹಿಳೆಯನ್ನು ಬೆತ್ತಲೆ ಮಾಡಿ ಥಳಿಸಿದ ಕೃತ್ಯ ಭಾನುವಾರ ನಡೆದಿದೆ. ಈ ಕೃತ್ಯದ ವಿರುದ್ಧ ಆಕ್ರೋಶ ವ್ಯಕ್ತವಾಗಿದೆ. ಆರೋಪಿಗಳ ವಿರುದ್ಧ ತ್ವರಿತವಾಗಿ ಕ್ರಮ ತೆಗೆದುಕೊಳ್ಳಲಾಗಿದೆ. ರಾಜ್ಯದಲ್ಲಿ ಪ್ರತಿ ವರ್ಷ ಇಂತಹ ಕೃತ್ಯಗಳ ಸಾವಿರಾರು ಪ್ರಕರಣಗಳು ದಾಖಲಾಗುತ್ತಿವೆ. ಆದರೆ ಅವುಗಳಲ್ಲಿ ಬಹುತೇಕವು ಸುದ್ದಿಯಾಗುತ್ತಲೇ ಇಲ್ಲ

● ಸುಕೃತ ಎಸ್.

ಬೆಂಗಳೂರು: ಗೌರವಕ್ಕೆ ಧಕ್ಕೆ ತರಬೇಕು ಎಂಬ ಉದ್ದೇಶದಿಂದಲೇ ಮಹಿಳೆಯನ್ನು ಬೆತ್ತಲೆಗೊಳಿಸುವ ಪ್ರಕರಣಗಳು ರಾಜ್ಯದಲ್ಲಿ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಲೇ ಇವೆ. 2022ರಲ್ಲಿ ರಾಜ್ಯದಾದ್ಯಂತ ಇಂಥ ಒಟ್ಟು 1,328 ಪ್ರಕರಣಗಳು ದಾಖಲಾಗಿದ್ದವು. ದೇಶದಲ್ಲಿ ಇಂತಹ ಅತಿಹೆಚ್ಚು ಪ್ರಕರಣಗಳು ದಾಖಲಾದ ಮೂರನೇ ರಾಜ್ಯ ಕರ್ನಾಟಕ.

ರಾಜ್ಯ ಪೊಲೀಸ್ ಇಲಾಖೆಯು ನೀಡಿದ ದತ್ತಾಂಶಗಳ ಆಧಾರದಲ್ಲಿ ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ (ಎನ್‌ಸಿಆರ್‌ಬಿ) ಸಿದ್ಧಪಡಿಸಿರುವ 'ಭಾರತದಲ್ಲಿ ಅಪರಾಧ–2022' ವರದಿಯಲ್ಲಿ ಈ ಮಾಹಿತಿ ಇದೆ. ಪ್ರತಿ ವರ್ಷ ಇಂತಹ ಪ್ರಕರಣಗಳ ಸಂಖ್ಯೆ ಮತ್ತು ಸಂತ್ರಸ್ತೆಯರ ಸಂಖ್ಯೆಯೂ ಏರುತ್ತಿದೆ. 2018ರಲ್ಲಿ ರಾಜ್ಯದಲ್ಲಿ ಒಟ್ಟು 1,014 ಮಹಿಳೆಯರು ಇಂತಹ ಕೃತ್ಯಗಳ ಸಂತ್ರಸ್ತೆಯರಾಗಿದ್ದರು. 2022ರಲ್ಲಿ ಸಂತ್ರಸ್ತೆಯರ ಸಂಖ್ಯೆ 1,573ಕ್ಕೆ ಏರಿಕೆಯಾಗಿದೆ.

ಇಂಥ ಕೃತ್ಯಗಳು ಐಪಿಸಿ ಸೆಕ್ಷನ್‌ನ 354ಬಿ ಅಡಿಯಲ್ಲಿ ಬರುತ್ತವೆ. ಕಳೆದ ಐದು ವರ್ಷಗಳ ಎನ್‌ಸಿಆರ್‌ಬಿ ವರದಿಯನ್ನು ಗಮನಿಸಿದಾಗ ರಾಜ್ಯದಲ್ಲಿ ಇಂತಹ ಕೃತ್ಯಗಳ ಏರಿಕೆಯು ಗಾಬರಿ ಹುಟ್ಟಿಸುವಂತಿದೆ. ಮಹಿಳೆಯನ್ನು ಬೆತ್ತಲೆಗೊಳಿಸಿದ 983 ಪ್ರಕರಣಗಳು 2018ರಲ್ಲಿ ದಾಖಲಾಗಿದ್ದವು. ಆ ವರ್ಷ ರಾಜ್ಯವು ಇತರ ರಾಜ್ಯಗಳ ಹೋಲಿಕೆಯಲ್ಲಿ ಮೂರನೇ ಸ್ಥಾನದಲ್ಲಿತ್ತು.

2019ರಲ್ಲಿ ಪ್ರಕರಣಗಳ ಸಂಖ್ಯೆಯಲ್ಲಿ ಇಳಿಕೆ ಕಂಡುಬಂದರೂ ಸಂತ್ರಸ್ತೆಯರ ಸಂಖ್ಯೆಯು ಏರುಗತಿಯಲ್ಲಿಯೇ ಇತ್ತು.

ಇದೇ ಸೆಕ್ಷನ್ ಅಡಿಯಲ್ಲಿ 2020ರಲ್ಲಿ 903 ಪ್ರಕರಣಗಳು ರಾಜ್ಯದಲ್ಲಿ ದಾಖಲಾಗಿದ್ದವು. ಈ ಸಂಖ್ಯೆಯು 2021ರ ಹೊತ್ತಿಗೆ ತೀವ್ರ ಏರಿಕೆ ಕಂಡಿತು. ನಂತರದ ಎರಡೂ ವರ್ಷಗಳಲ್ಲಿ ಇಂತಹ ಪ್ರಕಣಗಳು ಏರಿಕೆಯಾಗುತ್ತಲೇ ಇವೆ. ಇಷ್ಟೊಂದು ಸಂಖ್ಯೆಯಲ್ಲಿ ಪ್ರಕರಣಗಳು ದಾಖಲಾಗುತ್ತಿದ್ದರೂ ಪ್ರಕರಣಗಳ ತನಿಖೆ ಹಾಗೂ ವಿಚಾರಣೆ ಯಾವ ಹಂತದಲ್ಲಿವೆ ಎನ್ನುವ ರಾಜ್ಯವಾರು ಮಾಹಿತಿಯು ಈ ವರದಿಯಲ್ಲಿ ಲಭ್ಯವಿಲ್ಲ. ಆದ್ದರಿಂದ, ರಾಜ್ಯದಲ್ಲಿ ದಾಖಲಾದ ಪ್ರಕರಣಗಳ ಸ್ಥಿತಿಗತಿಯ ಬಗ್ಗೆ ಮಾಹಿತಿ ಇಲ್ಲ.



5,264 2018–2022ರ ಅವಧಿಯಲ್ಲಿ ರಾಜ್ಯದಾದ್ಯಂತ ದಾಖಲಾದ ಐಪಿಸಿ ಸೆಕ್ಷನ್ 354ಬಿ ಪ್ರಕರಣಗಳ ಒಟ್ಟು ಸಂಖ್ಯೆ

6,038 ಈ ಅವಧಿಯಲ್ಲಿ ದಾಖಲಾದ ಪ್ರಕರಣಗಳ ಸಂತ್ರಸ್ತೆಯರ ಒಟ್ಟು ಸಂಖ್ಯೆ

46 2022ರಲ್ಲಿ ರಾಜ್ಯದಾದ್ಯಂತ ಪರಿಶಿಷ್ಟ ಜಾತಿ-ಪರಿಶಿಷ್ಟ ವರ್ಗದ ಮಹಿಳೆಯರ ಮೇಲೆ ಎಸಗಲಾದ ಇಂಥ ಕೃತ್ಯಗಳ ಸಂಖ್ಯೆ

ಆಳ–ಅಗಲ 9

ರಾಜಸ್ಥಾನ: ಮೊದಲ ಬಾರಿಯ ಶಾಸಕನಿಗೆ ಒಲಿದ ಪಟ್ಟ

ಭಜನ್ ಲಾಲ್ ನೂತನ ಸಿ.ಎಂ

ಪ್ರಜಾವಾಣಿ ವಾರ್ತೆ/ಪಿಟಿಐ

ಜೈಪುರ: ಮತ್ತೊಂದು ಅಚ್ಚರಿಯ ತೀರ್ಮಾನ ತೆಗೆದುಕೊಂಡಿರುವ ಬಿಜೆಪಿ ವರಿಷ್ಠರು ಮೊದಲ ಬಾರಿಗೆ ಶಾಸಕರಾಗಿರುವ ಭಜನ್ ಲಾಲ್ ಶರ್ಮಾ ಅವರನ್ನು ರಾಜಸ್ಥಾನದ ನೂತನ ಮುಖ್ಯಮಂತ್ರಿಯಾಗಿ ಮಂಗಳವಾರ ಆಯ್ಕೆ ಮಾಡಿದ್ದಾರೆ. ಇದರೊಂದಿಗೆ ಹಲವು ದಿನಗಳ ಕುತೂಹಲಕ್ಕೆ ತೆರೆ ಎಳೆದಂತಾಗಿದೆ.

ಬ್ರಾಹ್ಮಣ ಸಮುದಾಯಕ್ಕೆ ಸೇರಿದ 56 ವರ್ಷದ ಭಜನ್ ಲಾಲ್ ಆಯ್ಕೆ ಮೂಲಕ, ವಿವಿಧ ರಾಜ್ಯಗಳಲ್ಲಿ ಹೊಸ ತಲೆಮಾರಿನ ನಾಯಕರನ್ನು ಬೆಳೆಸುವುದು ಪಕ್ಷದ ಆದ್ಯತೆಯಾಗಿದೆ ಎಂಬ ಸ್ಪಷ್ಟ ಸೂಚನೆಯನ್ನು ಬಿಜೆಪಿ ವರಿಷ್ಠರು ನೀಡಿದ್ದಾರೆ. ಪಕ್ಷವು ಇದಕ್ಕೂ ಮುನ್ನ ಛತ್ತೀಸಗಢ ಮತ್ತು ಮಧ್ಯ ಪ್ರದೇಶದಲ್ಲೂ ಸಿ.ಎಂ ಪಟ್ಟವನ್ನು ಹೊಸಬರಿಗೆ ನೀಡಿತ್ತು.

ಭಜನ್ ಲಾಲ್ ಶರ್ಮಾ

ಕೇಂದ್ರದ ವೀಕ್ಷಕರ ಸಮ್ಮುಖದಲ್ಲಿ ನಡೆದ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯು, ಭಜನ್ ಲಾಲ್ ಅವರನ್ನು ನಾಯಕನಾಗಿ ಆಯ್ಕೆ ಮಾಡಿತು. ದಿಯಾ ಕುಮಾರಿ ಮತ್ತು ಪ್ರೇಮಚಂದ್ ಬೈರವ ಅವರು ಉಪಮುಖ್ಯಮಂತ್ರಿ ಆಗಲಿದ್ದಾರೆ. ಈ ಮೂವರೂ ಆಡಳಿತದಲ್ಲಿ ಅನನುಭವಿಗಳಾಗಿದ್ದು, ಈ ಹಿಂದೆ ಸಚಿವರಾಗಿಯೂ ಕಾರ್ಯ ನಿರ್ವಹಿಸಿಲ್ಲ.

ಸ್ಪೀಕರ್ ಆಗಿ ವಾಸುದೇವ ದೇವ್ನಾನಿ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ವೀಕ್ಷಕರಲ್ಲಿ ಒಬ್ಬರಾದ, ಕೇಂದ್ರ ಸಚಿವ ರಾಜನಾಥ್ ಸಿಂಗ್ ಪ್ರಕಟಿಸಿದರು.

ಶಾಸಕಾಂಗ ಪಕ್ಷದ ನಾಯಕನಾಗಿ ಆಯ್ಕೆಯಾದ ಬೆನ್ನಲ್ಲೇ ಭಜನ್ ಲಾಲ್, ರಾಜಭವನಕ್ಕೆ ತೆರಳಿ ಸರ್ಕಾರ ರಚನೆಯ ಹಕ್ಕು ಮಂಡಿಸಿದರು. ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಬೆಂಬಲ ಇರುವ ಅವರು, ಬಿಜೆಪಿಯ 'ಭದ್ರಕೋಟೆ' ಸಂಗಾನೇರ್ ಕ್ಷೇತ್ರದಿಂದ ಕಾಂಗ್ರೆಸ್‌ನ ಪುಷ್ಪೇಂದ್ರ ಭಾರದ್ವಾಜ್ ವಿರುದ್ಧ 48,081 ಮತಗಳಿಂದ ಗೆದ್ದಿದ್ದಾರೆ.

ಸತತ ನಾಲ್ಕು ಅವಧಿಯಿಂದ ಬಿಜೆಪಿ ರಾಜಸ್ಥಾನ ಘಟಕದ ಪ್ರಧಾನ ಕಾರ್ಯದರ್ಶಿಯಾಗಿದ್ದಾರೆ.

10ನೇ ಪುಟ ನೋಡಿ

ಒಪಿಎಸ್ ಮರು ಜಾರಿ ಇಲ್ಲ: ಕೇಂದ್ರ ಸ್ಪಷ್ಟನೆ

ನವದೆಹಲಿ (ಪಿಟಿಐ): '2004ರ ಜನವರಿ 1ರ ನಂತರ ಕೇಂದ್ರ ಸರ್ಕಾರಿ ನೌಕರರಾಗಿ ನೇಮಕವಾದವರಿಗೆ ಮತ್ತೆ ಹಳೆಯ ಪಿಂಚಣಿ ವ್ಯವಸ್ಥೆ (ಒಪಿಎಸ್) ಜಾರಿಗೊಳಿಸುವ ಯಾವುದೇ ಪ್ರಸ್ತಾವವು ತನ್ನ ಪರಿಶೀಲನೆಯಲ್ಲಿ ಇಲ್ಲ' ಎಂದು ಕೇಂದ್ರ ಸರ್ಕಾರವು ಸೋಮವಾರ ಲೋಕಸಭೆಗೆ ಸ್ಪಷ್ಟಪಡಿಸಿದೆ.

ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ ಅವರು, ಈ ಕುರಿತು ಮಾಹಿತಿ ನೀಡಿದ್ದಾರೆ.

ಕೇಂದ್ರ ಪಿಂಚಣಿ ಮತ್ತು ಪಿಂಚಣಿದಾರರ ಕ್ಷೇಮಾಭಿವೃದ್ಧಿ ಇಲಾಖೆಯ ಮಾಹಿತಿ ಅನ್ವಯ ಈ ವರ್ಷದ ಮಾರ್ಚ್ ಅಂತ್ಯಕ್ಕೆ ಒಟ್ಟು 67.95 ಲಕ್ಷ ಕೇಂದ್ರ ಸರ್ಕಾರಿ ಪಿಂಚಣಿದಾರರು ಇದ್ದಾರೆ ಎಂದು ವಿವರಿಸಿದ್ದಾರೆ.

ಈ ಪೈಕಿ ನಾಗರಿಕ ಸೇವೆ 11.42 ಲಕ್ಷ, ರಕ್ಷಣೆ 33.87 ಲಕ್ಷ, ದೂರಸಂಪರ್ಕ 4.38 ಲಕ್ಷ, ಅಂಚೆ 3.01 ಲಕ್ಷ ಹಾಗೂ ರೈಲ್ವೆ ಇಲಾಖೆಯಲ್ಲಿ 15.25 ಲಕ್ಷ ಪಿಂಚಣಿದಾರರು ಇದ್ದಾರೆ ಎಂದು ಹೇಳಿದ್ದಾರೆ.

ಹೊಸ ವರ್ಷಾಚರಣೆ ₹21 ಕೋಟಿಯ ಡ್ರಗ್ಸ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿರುವ ಸಿಸಿಬಿ ಪೊಲೀಸರು, ಹೊಸ ವರ್ಷಾಚರಣೆ ಪಾರ್ಟಿಗಳಿಗೆ ಮಾರಾಟ ಮಾಡಲು ಸಂಗ್ರಹಿಸಿದ್ದ ₹21 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ.



ಲಿಯೋನಾರ್ಡ್

'ರಾಮಮೂರ್ತಿ ನಗರ ಠಾಣೆ ವ್ಯಾಪ್ತಿಯ ಮನೆಯೊಂದರ ಮೇಲೆ ದಾಳಿ ನಡೆಸಿ, ನೈಜೀರಿಯಾ ಪ್ರಜೆ ಲಿಯೋನಾರ್ಡ್ ಒಕ್ವುಡಿಲಿ (44) ಎಂಬಾತನನ್ನು ಬಂಧಿಸಲಾಗಿದೆ. ಈತನಿಂದ 16 ಕೆ.ಜಿ ಎಂಡಿಎಂಎ, 500 ಗ್ರಾಂ ಕೊಕೇನ್, ಮೂರು ತೂಕದ ಯಂತ್ರ, ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಕಮಿಷನರ್ ಬಿ. ದಯಾನಂದ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

5ನೇ ಪುಟ ನೋಡಿ

ಸಿಇಸಿ ನೇಮಕ ಮಸೂದೆಗೆ ಒಪ್ಪಿಗೆ 10

ಚಿನಕುರಳಿ

ಪ್ರಕಾಶ್ ಶೆಟ್ಟಿ

ಅಧಿಕಾರ ಸ್ವೀಕರಿಸಲು ಗಡುವು ಅಮಾನತು ಎಚ್ಚರಿಕೆ

ಬೆಂಗಳೂರು: ರಾಜ್ಯದಲ್ಲಿ ಇತ್ತೀಚೆಗೆ ವರ್ಗಾವಣೆ ಆಗಿರುವ 50ಕ್ಕೂ ಹೆಚ್ಚು ಇನ್‌ಸ್ಪೆಕ್ಟರ್‌ಗಳು ಹೊಸ ಹುದ್ದೆಯಲ್ಲಿ ಅಧಿಕಾರ ಸ್ವೀಕರಿಸದಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿ–ಐಜಿಪಿ), ಅಧಿಕಾರ ಸ್ವೀಕರಿಸಲು ವಾರದ ಗಡುವು ನೀಡಿದ್ದಾರೆ.

'ವರ್ಗಾವಣೆ ಆಗಿ ಹಲವು ದಿನವಾದರೂ ಏಕೆ ಅಧಿಕಾರ ಸ್ವೀಕರಿಸಿಲ್ಲ' ಎಂದು ಇನ್‌ಸ್ಪೆಕ್ಟರ್ ಅವರಿಂದ ಕಾರಣ ಕೇಳಿರುವ ಡಿಜಿ–ಐಜಿಪಿ, ಸಮಯಾವಕಾಶದಲ್ಲಿ ಕಾರಣ ನೀಡದಿದ್ದರೆ ಅಮಾನತು ಮಾಡುವುದಾಗಿ ಎಚ್ಚರಿಕೆ ನೀಡಿದ್ದಾರೆಂದು ಗೊತ್ತಾಗಿದೆ.

'ವರ್ಗಾವಣೆ ಆಗಿರುವ ಇನ್‌ಸ್ಪೆಕ್ಟರ್‌ಗಳು ಅಧಿಕಾರ ಸ್ವೀಕರಿಸಿಲ್ಲ. ಕಾಲಹರಣ ಮಾಡುತ್ತಿದ್ದಾರೆ. ಇದರಿಂದಾಗಿ ಇಲಾಖೆ ಕೆಲಸಗಳು ಆಗುತ್ತಿಲ್ಲ' ಎಂದು ಆರೋಪಿಸಿ ಕೆಲವರು, ಡಿಜಿ–ಐಜಿಪಿ ಅವರಿಗೆ ಇತ್ತೀಚೆಗೆ ಪತ್ರ ಬರೆದಿದ್ದರೆಂದು ತಿಳಿದುಬಂದಿದೆ.

ನೈರುತ್ಯ ರೈಲ್ವೆ

[illegible]

ಕಾಮಗಾರಿ) (ಟೆಂಡರ್ ಉಲ್ಲೇಖ ಸಂ. ಎಲ್‌ಡಿ–ವಾಸ್ಕೋ–ಆರ್‌ಒಬಿ–ಎಲ್‌ಸಿ–19)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 29–12–2023 ರಂದು 15:00 ಗಂಟೆಯವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು ಬೆಂಗಳೂರು ದಂಡು

ಪಿಯುಬಿ/555/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2023–24

South Western Railway - SWR | SWRRLY | SWRRLY

ನೋಂದಣಿ ವಿಳಂಬ

ದೊಡ್ಡಬಳ್ಳಾಪುರ: ಬೆಂಬಲ ಬೆಲೆ ಯೋಜನೆಯಡಿ ರಾಗಿ ಖರೀದಿ ನೋಂದಣಿಗೆ ಆಹಾರ ನಿಗಮದ ಜಾಲತಾಣದಲ್ಲಿ ತಾಂತ್ರಿಕ ಅಡಚಣೆ ಎದುರಾಗಿದ್ದು, ನೋಂದಣಿ ಮತ್ತಷ್ಟು ವಿಳಂಬವಾಗುವ ಸಾಧ್ಯತೆ ಹೆಚ್ಚಾಗಿದೆ.

ಈ ಹಿಂದೆ ಬೆಂಬಲ ಬೆಲೆ ಯೋಜನೆಯಡಿ ರಾಗಿ ಖರೀದಿಗೆ ರೈತರು 'ಫ್ರೂಟ್ಸ್' ಐ.ಡಿ ಸಂಖ್ಯೆಯನ್ನು ನೀಡಿ ನೋಂದಣಿ ಮಾಡಿಸಿದ ಸಮಯದಲ್ಲಿ ನೀಡಲಾಗುವ ನಿಗದಿತ ದಿನಾಂಕದಂದು ರಾಗಿ ಖರೀದಿ ಕೇಂದ್ರಕ್ಕೆ ರೈತರು ರಾಗಿ ಸರಬರಾಜು ಮಾಡಬಹುದಾಗಿತ್ತು.

225 ಬಾರಿ ಸಂಚಾರ ನಿಯಮ ಉಲ್ಲಂಘಿಸಿದ್ದ ದ್ವಿಚಕ್ರ ವಾಹನ ಸವಾರ

ಬೈಕ್‌ಗೆ ₹1.34 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: 225 ಬಾರಿ ಸಂಚಾರ ನಿಯಮ ಉಲ್ಲಂಘಿಸಿ ₹ 1.34 ಲಕ್ಷ ದಂಡ ಬಾಕಿ ಉಳಿಸಿಕೊಂಡಿದ್ದ ದ್ವಿಚಕ್ರ ವಾಹನ ಸವಾರ ಏಳುಮಲೈ ಅವರನ್ನು ಜಯನಗರ ಸಂಚಾರ ಠಾಣೆ ಪೊಲೀಸರು ಪತ್ತೆ ಮಾಡಿದ್ದಾರೆ.

'ಸ್ಥಳೀಯ ನಿವಾಸಿ ಏಳುಮಲೈ, ಕೂಲಿ ಕಾರ್ಮಿಕ. ಎರಡು ವರ್ಷಗಳಲ್ಲಿ 225 ಬಾರಿ ನಿಯಮ ಉಲ್ಲಂಘಿಸಿದ್ದರು. ದ್ವಿಚಕ್ರ ವಾಹನದ ಮೇಲೆ ₹ 1.34 ಲಕ್ಷ ದಂಡ ಪಾವತಿ ಬಾಕಿ ಇತ್ತು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಠಾಣೆ ವ್ಯಾಪ್ತಿಯಲ್ಲಿ ಅತೀ ಹೆಚ್ಚು ಬಾರಿ ನಿಯಮ ಉಲ್ಲಂಘಿಸಿದ್ದವರ ಪಟ್ಟಿಯಲ್ಲಿ ಏಳುಮಲೈ ಹೆಸರು ಮೊದಲಿತ್ತು. ಹೀಗಾಗಿ, ಅವರ ವಿಳಾಸಕ್ಕೆ ನೋಟಿಸ್ ಕಳುಹಿಸಲಾಗಿತ್ತು. ಅಷ್ಟಾದರೂ ಅವರು ದಂಡ ಪಾವತಿ ಮಾಡಿರಲಿಲ್ಲ. ವಿಶೇಷ ಕಾರ್ಯಾಚರಣೆ ನಡೆಸಿ, ಇತ್ತೀಚೆಗೆ ಅವರನ್ನು ಪತ್ತೆ ಮಾಡಲಾಯಿತು' ಎಂದರು.

'ದ್ವಿಚಕ್ರ ವಾಹನ ಜಪ್ತಿ ಮಾಡಿ, ಠಾಣೆಗೆ ತರಲಾಗಿದೆ. ಜೊತೆಗೆ, ಏಳುಮಲೈ ಅವರಿಂದ 20 ನಿಯಮಗಳ ಉಲ್ಲಂಘನೆಗೆ ₹ 10 ಸಾವಿರ ದಂಡ ಪಾವತಿ ಮಾಡಿಸಿಕೊಳ್ಳಲಾಗಿದೆ. ಉಳಿದ ದಂಡದ ಮೊತ್ತ ಪಾವತಿ ಮಾಡುವಂತೆ ನೋಟಿಸ್ ನೀಡಲಾಗಿದೆ. ಸದ್ಯಕ್ಕೆ ಬೈಕ್ ಠಾಣೆ ಸುಪರ್ದಿಯಲ್ಲಿದೆ' ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

ದ್ವಿಚಕ್ರ ವಾಹನ ಸವಾರ ಏಳುಮಲೈ ಅವರಿಗೆ ದಂಡ ಪಾವತಿ ರಶೀದಿ ನೀಡಿದ ಜಯನಗರ ಸಂಚಾರ ಠಾಣೆ ಪೊಲೀಸರು

ನಿಯಮ ಉಲ್ಲಂಘನೆ ಅರಿವಿಲ್ಲ: 'ಏಳುಮಲೈ ಮನೆ ಸಮೀಪದ ರಸ್ತೆಯಲ್ಲಿ ನಿಯಮ ಉಲ್ಲಂಘನೆ ಪತ್ತೆಗಾಗಿ ಕ್ಯಾಮೆರಾ ಅಳವಡಿಸಲಾಗಿದೆ. ನಿತ್ಯವೂ ದ್ವಿಚಕ್ರ ವಾಹನದಲ್ಲಿ ಏಳುಮಲೈ ಕೆಲಸಕ್ಕೆ ಹೋಗಿ ಬರುತ್ತಿದ್ದರು. ಹೆಲ್ಮೆಟ್ ಧರಿಸದ, ಸಿಗ್ನಲ್ ಜಂಪ್ ಸೇರಿದಂತೆ ಹಲವು ನಿಯಮ ಉಲ್ಲಂಘನೆಗಳ ಫೋಟೊಗಳು ಕ್ಯಾಮೆರಾದಲ್ಲಿ ಸೆರೆಯಾಗಿವೆ' ಎಂದು ಪೊಲೀಸರು ಹೇಳಿದರು.

'ನಿಯಮ ಉಲ್ಲಂಘನೆ ಬಗ್ಗೆ ಅರಿವಿರಲಿಲ್ಲವೆಂದು ಹೇಳಿರುವ ಏಳುಮಲೈ, 'ನನ್ನ ದ್ವಿಚಕ್ರ ವಾಹನದ ಬೆಲೆ ₹ 25 ಸಾವಿರ ಮಾತ್ರ. ನಾನು ಹೇಗೆ ₹ 1.34 ಲಕ್ಷ ದಂಡ ಪಾವತಿಸಲಿ' ಎಂದು ಪ್ರಶ್ನಿಸಿದರು. ನ್ಯಾಯಾಲಯದಲ್ಲಿ ದಂಡ ಪಾವತಿಸುವಂತೆ ಹೇಳಿ ನೋಟಿಸ್ ನೀಡಲಾಗಿದೆ. ದಂಡ ಪಾವತಿ ಮಾಡದಿದ್ದರೆ, ವಾರಂಟ್ ಜಾರಿಯಾಗುವ ಸಾಧ್ಯತೆ ಇದೆ' ಎಂದು ತಿಳಿಸಿದರು.

ಸುದ್ದಿ 2 ನಿಮಿಷ

ಜಿಂಕೆ ಕೊಂಬು ಮಾರಾಟ: ಬಂಧನ

ಬೆಂಗಳೂರು: ಮಹದೇವಪುರ ಠಾಣೆ ವ್ಯಾಪ್ತಿಯಲ್ಲಿ ಜಿಂಕೆ ಚರ್ಮ ಹಾಗೂ ಕೊಂಬುಗಳನ್ನು ಮಾರುತ್ತಿದ್ದ ಆರೋಪಿ ಚಂದ್ರಶೇಖರಪ್ಪ (43) ಅವರನ್ನು ಪೊಲೀಸರು ಬಂಧಿಸಿದ್ದಾರೆ.

'ಸಾಗರ ತಾಲ್ಲೂಕಿನ ಬರದವಳ್ಳಿಯ ಚಂದ್ರಶೇಖರಪ್ಪ, ಇತ್ತೀಚೆಗೆ ನಗರಕ್ಕೆ ಬಂದಿದ್ದ. ಈತನಿಂದ ಜಿಂಕೆಯ ಚರ್ಮ, 12 ಕೊಂಬುಗಳು ಹಾಗೂ ಕಾಡೆಮ್ಮೆಯ ಎರಡು ಕೊಂಬುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ನಗರದ ವ್ಯಕ್ತಿಯೊಬ್ಬರಿಗೆ ಚರ್ಮ, ಹಾಗೂ ಕೊಂಬುಗಳನ್ನು ಮಾರಲು ಚಂದ್ರಶೇಖರಪ್ಪ ಬಂದಿದ್ದರು. ಆ ವ್ಯಕ್ತಿ ಯಾರು? ಎಂಬುದನ್ನು ಪತ್ತೆ ಮಾಡಲಾಗುತ್ತಿದೆ. ಚರ್ಮ ಹಾಗೂ ಕೊಂಬುಗಳನ್ನು ಎಲ್ಲಿಂದ ತರಲಾಗಿತ್ತು ಎಂಬುದು ತನಿಖೆಯಿಂದ ತಿಳಿಯಬೇಕಿದೆ' ಎಂದು ತಿಳಿಸಿದರು.

ರಾಜಭವನಕ್ಕೆ ಬಾಂಬ್ ಬೆದರಿಕೆ ಪದವೀಧರನ ಬಂಧನ

ಬೆಂಗಳೂರು: ರಾಜಭವನದಲ್ಲಿ ಬಾಂಬ್ ಇರಿಸಿರುವುದಾಗಿ ಬೆದರಿಕೆ ಕರೆ ಮಾಡಿದ್ದ ಆರೋಪಿ ಎಸ್. ಭಾಸ್ಕರ್ ಅವರನ್ನು ಕೇಂದ್ರ ವಿಭಾಗದ ಪೊಲೀಸರು ಮಂಗಳವಾರ ರಾತ್ರಿ ಬಂಧಿಸಿದ್ದಾರೆ.

'ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ವಡ್ಡಹಳ್ಳಿ ನಿವಾಸಿ ಭಾಸ್ಕರ್, ಪದವೀಧರ. ಸೋಮವಾರ ಬೆಂಗಳೂರಿಗೆ ಬಂದಿದ್ದ ಈತ, ರಾಜಭವನ ರಸ್ತೆಯಲ್ಲಿ ರಾತ್ರಿ ಹೊರಟಿದ್ದ. ರಾಜಭವನ ಸಮೀಪವೇ ನಿಂತುಕೊಂಡು ಎನ್‌ಐಎ ದೊಮ್ಮಲೂರಿನ ನಿಯಂತ್ರಣ ಕೊಠಡಿಗೆ ರಾತ್ರಿ 11.30ರ ಸುಮಾರಿಗೆ ಕರೆ ಮಾಡಿದ್ದ. 'ರಾಜಭವನದಲ್ಲಿ ಬಾಂಬ್ ಇರಿಸಲಾಗಿದೆ. ಸದ್ಯದಲ್ಲೇ ಸ್ಫೋಟಗೊಳ್ಳಲಿದೆ' ಎಂಬುದಾಗಿ ಹೇಳಿ ಕರೆ ಕಡಿತಗೊಳಿಸಿದ್ದ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ನಗರದ ಪೊಲೀಸರು, ಬಾಂಬ್ ನಿಷ್ಕ್ರಿಯ ಹಾಗೂ ಶ್ವಾನ ದಳದ ಸಮೇತ ರಾಜಭವನಕ್ಕೆ ಭೇಟಿ ನೀಡಿ ನಸುಕಿನವರೆಗೂ ಶೋಧ ನಡೆಸಿದ್ದರು. ಯಾವುದೇ ಅನುಮಾನಾಸ್ಪದ ವಸ್ತುಗಳು ಸಿಗದಿದ್ದರಿಂದ, ಇದೊಂದು ಹುಸಿ ಕರೆಯೆಂದು ಘೋಷಿಸಿದ್ದರು' ಎಂದು ತಿಳಿಸಿದರು.

ಏನಾಗುತ್ತದೆಂದು ನೋಡಲು ಕರೆ: 'ಬೆದರಿಕೆ ಕರೆ ಬಂದಿದ್ದ ಸಂಖ್ಯೆ ಆಧರಿಸಿ ತನಿಖೆ ಕೈಗೊಂಡಾಗ ಆರೋಪಿ ಸುಳಿವು ಸಿಕ್ಕಿತ್ತು. ವಡ್ಡಹಳ್ಳಿಗೆ ಹೋಗಿದ್ದ ವಿಶೇಷ ತಂಡ, ಆರೋಪಿಯನ್ನು ಬಂಧಿಸಿ ನಗರಕ್ಕೆ ಕರೆತಂದಿದೆ. ನ್ಯಾಯಾಲಯಕ್ಕೆ ಹಾಜರುಪಡಿಸಿ ಕಸ್ಟಡಿಗೆ ನೀಡುವಂತೆ ಕೋರಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ರಾಜಭವನ ಬಳಿಯೇ ಕೆಲ ನಿಮಿಷ ನಿಂತುಕೊಂಡಿದ್ದೆ. ಬಾಂಬ್ ಬೆದರಿಕೆ ಕರೆ ಮಾಡಿದರೆ ಏನಾಗುತ್ತದೆ ಎಂಬುದನ್ನು ನೋಡಬೇಕಿತ್ತು. ಹೀಗಾಗಿ, ಎನ್‌ಐಎ ನಿಯಂತ್ರಣ ಕೊಠಡಿಗೆ ಕರೆ ಮಾಡಿದ್ದೆ. ಕೆಲ ನಿಮಿಷಗಳಲ್ಲಿ ಪೊಲೀಸರು ಬಂದಿದ್ದರು. ನಂತರ, ನಾನು ಊರಿಗೆ ಬಂದೆ' ಎಂಬುದಾಗಿ ಆರೋಪಿ ಹೇಳಿಕೆ ನೀಡಿದ್ದಾನೆ' ಎಂದು ಮೂಲಗಳು ತಿಳಿಸಿವೆ.

ಎಸಿಪಿ ವರದಿ ಮುಚ್ಚಿಟ್ಟು ಇನ್‌ಸ್ಪೆಕ್ಟರ್ ವರ್ಗಾವಣೆ

ಶಂಕರ್ ನಾಯಕ್ ವಿರುದ್ಧ 2 ಪ್ರತ್ಯೇಕ ದೂರು • ಶಿಸ್ತುಕ್ರಮ ಜರುಗಿಸಲು ಹಿಂದೇಟು ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳ್ಳತನ ಬಗ್ಗೆ ಸುಳ್ಳು ಪ್ರಕರಣ ಸೃಷ್ಟಿಸಿ ₹ 75 ಲಕ್ಷ ದೋಚಲು ಸಂಚು ರೂಪಿಸಿದ್ದ ಹಾಗೂ ₹ 20 ಲಕ್ಷ ಲಂಚಕ್ಕೆ ಬೇಡಿಕೆ ಇರಿಸಿದ್ದ ಆರೋಪ ಎದುರಿಸುತ್ತಿರುವ ಬಿಡದಿ ಠಾಣೆ ಪೊಲೀಸ್ ಇನ್‌ಸ್ಪೆಕ್ಟರ್ ಜಿ.ಕೆ. ಶಂಕರ್ ನಾಯಕ್ ವಿರುದ್ಧ ಮತ್ತೆರಡು ದೂರುಗಳು ಸಲ್ಲಿಕೆಯಾಗಿರುವುದು ಗೊತ್ತಾಗಿದೆ.

ಇನ್‌ಸ್ಪೆಕ್ಟರ್ ಶಂಕರ್ ನಾಯಕ್

ಬ್ಯಾಟರಾಯನಪುರ ನಿವಾಸಿ ಸಂಧ್ಯಾ ರಮೇಶ್ ಹಾಗೂ ಕೆ.ಆರ್. ಪುರ- ಟಿ.ಸಿ.ಪಾಳ್ಯದ ವಸಂತಾ ಅವರು ಶಂಕರ್ ನಾಯಕ್ ವಿರುದ್ಧ ಪ್ರತ್ಯೇಕ ದೂರು ನೀಡಿದ್ದರು. ದೂರಿನ ವಿಚಾರಣೆ ನಡೆಸಿದ್ದ ಅಂದಿನ ಕೆಂಗೇರಿ ಗೇಟ್ ಎಸಿಪಿ, 'ಶಂಕರ್ ನಾಯಕ್ ಮೇಲಿನ ಆರೋಪಗಳು ಸಾಬೀತಾಗಿವೆ. ಶಿಸ್ತುಕ್ರಮ ಕೈಗೊಳ್ಳಬೇಕು' ಎಂದು ಕೋರಿ ಏಪ್ರಿಲ್‌ನಲ್ಲಿ ಡಿಸಿಪಿ ಅವರಿಗೆ ವರದಿ ಸಲ್ಲಿಸಿದ್ದರು.

ಅದೇ ವರದಿಯನ್ನು ಕಮಿಷನರ್ ಮೂಲಕ ರಾಜ್ಯ ಪೊಲೀಸ್ ಮಹಾನಿರ್ದೇಶಕರ (ಡಿಜಿ–ಐಜಿಪಿ) ಕಚೇರಿಗೆ ಕಳುಹಿಸಲಾಗಿತ್ತು. ಶಂಕರ್ ನಾಯಕ್ ಮೇಲಿನ ಆರೋಪಕ್ಕೆ ಸಂಬಂಧಪಟ್ಟಂತೆ ವರದಿಯಲ್ಲಿ ಪುರಾವೆಗಳನ್ನು ಎಸಿಪಿ ಅವರು ಲಗತ್ತಿಸಿದ್ದರು. ವರದಿ ಆಧರಿಸಿ ಡಿಜಿ–ಐಜಿಪಿ ಕಚೇರಿ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ. ಬದಲಿಗೆ ವರದಿಯನ್ನು ಮುಚ್ಚಿಟ್ಟು ಶಂಕರ್ ನಾಯಕ್ ಅವರು ಬಿಡದಿ ಠಾಣೆಗೆ ವರ್ಗಾವಣೆ ಆಗಲು ಅನುಕೂಲ ಮಾಡಿಕೊಟ್ಟಿದ್ದಾರೆಂಬ ಆರೋಪ ಕೇಳಿಬಂದಿದೆ.

₹ 75 ಲಕ್ಷ ದೋಚಲು ಸಂಚು ರೂಪಿಸಿದ್ದ ಹಾಗೂ ₹ 20 ಲಕ್ಷ ಲಂಚಕ್ಕೆ ಬೇಡಿಕೆ ಇರಿಸಿದ್ದ ಆರೋಪದಡಿ ಶಂಕರ್ ನಾಯಕ್ ವಿರುದ್ಧ ಈಗಾಗಲೇ ಬ್ಯಾಟರಾಯನಪುರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಈ ಪ್ರಕರಣದ ತನಿಖೆಯನ್ನು ಸಿಸಿಬಿ ನಡೆಸುತ್ತಿದೆ. ಸಂಧ್ಯಾ ರಮೇಶ್ ಹಾಗೂ ವಸಂತಾ ನೀಡಿದ್ದ ದೂರಿನ ತನಿಖೆಯನ್ನೂ ನಡೆಸುವಂತೆ ದೂರುದಾರರ ಕಡೆಯವರು ಸಿಸಿಬಿಯನ್ನು ಒತ್ತಾಯಿಸಿ ದ್ದಾರೆ.

ಮಗನ ಅಕ್ರಮ ಬಂಧನ: 'ಮಗ ಸುಮಿತ್ ಅವರನ್ನು ಇನ್‌ಸ್ಪೆಕ್ಟರ್ ಶಂಕರ್ ನಾಯಕ್ ಅವರು ಅಕ್ರಮವಾಗಿ ಬಂಧಿಸಿ 2022ರ ಆಗಸ್ಟ್ 19ರಿಂದ 25ರವರೆಗೆ ಠಾಣೆಯಲ್ಲಿ ಇರಿಸಿಕೊಂಡಿದ್ದರು. ಇದೇ ಸಂದರ್ಭದಲ್ಲಿ ಮನೆಯಲ್ಲಿದ್ದ ಕಂಪ್ಯೂಟರ್, ಲ್ಯಾಪ್‌ಟಾಪ್ ಹಾಗೂ ಪೆನ್‌ಡ್ರೈವ್ ಅಕ್ರಮವಾಗಿ ಜಪ್ತಿ ಮಾಡಿದ್ದರು. ಮಗನನ್ನು ಬಿಟ್ಟು ಕಳುಹಿಸಿದ ನಂತರ, ಕಂಪ್ಯೂಟರ್, ಲ್ಯಾಪ್‌ಟಾಪ್ ಹಾಗೂ ಪೆನ್‌ಡ್ರೈವ್ ವಾಪಸು ಕೊಟ್ಟಿಲ್ಲ' ಎಂದು ಸಂಧ್ಯಾ ರಮೇಶ್ ಫೆ.1ರಂದು ಹೆಚ್ಚುವರಿ ಪೊಲೀಸ್ ಕಮಿಷನರ್ ಅವರಿಗೆ ಸಲ್ಲಿಸಿದ್ದ ದೂರಿನಲ್ಲಿ ತಿಳಿಸಿದ್ದರು.

₹ 8.85 ಲಕ್ಷ ನೀಡದ ಇನ್‌ಸ್ಪೆಕ್ಟರ್: 'ಹಣ ದೋಚಿದ್ದ ಸಂಬಂಧ ಬ್ಯಾಟರಾಯನಪುರ ಠಾಣೆಗೆ 2022ರಲ್ಲಿ ದೂರು ನೀಡಿದ್ದೆ. ಆರೋಪಿಗಳನ್ನು ಬಂಧಿಸಿದ್ದ ಇನ್‌ಸ್ಪೆಕ್ಟರ್ ಶಂಕರ್ ನಾಯಕ್, ₹ 8.85 ಲಕ್ಷ ಜಪ್ತಿ ಮಾಡಿದ್ದರು. ಈ ಹಣ ಬಿಡುಗಡೆ ಮಾಡುವಂತೆ ತನಿಖಾಧಿಕಾರಿಗೆ ಆದೇಶಿಸಿತ್ತು. ಆದರೆ, ಶಂಕರ್ ನಾಯಕ್ ಹಣ ನೀಡಿಲ್ಲ' ಎಂದು ವಸಂತಾ ಅವರು ಡಿಸಿಪಿ ಅವರಿಗೆ ಜ.27ರಂದು ನೀಡಿದ್ದ ದೂರಿನಲ್ಲಿ ಉಲ್ಲೇಖಿಸಿದ್ದರು.

'ನ್ಯಾಯಾಲಯದ ಆದೇಶಕ್ಕೆ ಅಗೌರವ ತೋರಿದ್ದ ಇನ್‌ಸ್ಪೆಕ್ಟರ್, ಬಿಳಿ ಹಾಳೆ ಮೇಲೆ ಸಹಿ ಮಾಡುವಂತೆ ಪೀಡಿಸಿದ್ದರು. ಅದನ್ನು ಒಪ್ಪದಿದ್ದಾಗ, ಪ್ರಕರಣ ದಾಖಲಿಸುವುದಾಗಿ ಬೆದರಿಕೆಯೊಡ್ಡಿದ್ದರು' ಎಂದು ಹೇಳಿದ್ದರು.

₹ 20 ಲಕ್ಷ ಪ್ರಕರಣ: ಎರಡು ದೂರಿನ ತನಿಖೆ ನಡೆಸುವಾಗ, ಮತ್ತೊಂದು ಪ್ರಕರಣದಲ್ಲಿ ಇನ್‌ಸ್ಪೆಕ್ಟರ್ ಅವರು ₹ 20 ಲಕ್ಷವನ್ನು ಖಜಾನೆಗೆ ನೀಡಿಲ್ಲವೆಂಬುದು ಎಸಿಪಿ ತನಿಖೆಯಿಂದ ಗೊತ್ತಾಗಿತ್ತು. ಈ ಬಗ್ಗೆಯೂ ವರದಿಯಲ್ಲಿ ಉಲ್ಲೇಖವಿದೆ.

PUBLIC NOTICE

My client intends to purchase the immovable property mentioned in the Schedule herebelow from its owner **Smt. Rathnamma** alias **Rathna**, wife of Late S. Maheshwarappa. The Owner represents that she is the absolute owner of the Schedule Property and she has good marketable, right, title and interest therein. The Owner further represents that apart from her there are no other person/s having any right, title or interest in the Schedule Property and she has neither conveyed nor have entered into any agreement of sale/ memorandum of understanding nor have entered into any sort of arrangement with any person/s for sale/ transfer/development of the Schedule Property and that she has not encumbered, mortgaged, created any charge or lien on the Schedule Property in any manner. Any person/s having objection/s or claim/s shall with documentary evidence, lodge their objection(s)/claim(s) **within Fifteen (15) days** from the date of publication of this Notice with the Undersigned failing which, my client shall proceed with the above-mentioned transactions.

SCHEDULE

All that piece and parcel of the residentially converted land bearing **Survey No.154** (earlier bearing Survey No. 3/214), measuring **38 guntas** (converted vide Official Memorandum in No.B.Dis.ALN:SR(NA):92/1997-98 dated 10-07-1997, issued by the Special Deputy Commissioner, Bengaluru District, Bengaluru) situated at **Navarathna Agrahara Village, Jala Hobli, Yelahanka** (earlier Bengaluru North) **Taluk**, **Bengaluru Rural District** and the is bounded on the:

East by : Property bearing Survey No. 205
West by : NAM Estate
North by : Property bearing Survey No. 94
South by : Road.

Vinay K. S. Advocate,
Jayanth Pattanshetti Associates LLP
102, Ground Floor,
"Rams Infantry Manor",
No. 70, Infantry Road,
Bengaluru-560 001.
Ph: 25593195 / 25581469

Bengaluru
Date: 12-12-2023

ಹಣ ಕದ್ದು ಪರಾರಿ ಬೆನ್ನಟ್ಟಿ ಮಹಿಳೆಯ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಟಿಸಿ ಬಸ್‌ಗಾಗಿ ಕಾಯುತ್ತ ನಿಂತಿದ್ದ ಮಹಿಳಾ ಪ್ರಯಾಣಿಕರೊಬ್ಬರ ₹ 11 ಸಾವಿರ ಕಿತ್ತುಕೊಂಡು ಪರಾರಿಯಾಗುತ್ತಿದ್ದ ಆರೋಪಿ ಕವಿತಾ (33) ಅವರನ್ನು ಆಟೊ ಚಾಲಕನ ಸಹಾಯದೊಂದಿಗೆ ಬೆನ್ನಟ್ಟಿ ಹಿಡಿದು ಬೊಮ್ಮನಹಳ್ಳಿ ಠಾಣೆ ಪೊಲೀಸರಿಗೆ ಒಪ್ಪಿಸಿದ್ದಾರೆ.

'ಡಿ. 9ರಂದು ಬೆಳಿಗ್ಗೆ ನಡೆದಿರುವ ಘಟನೆ ಸಂಬಂಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆರೋಪಿ ಕವಿತಾರನ್ನು ಸೆರೆ ಹಿಡಿಯಲಾಗಿದೆ. ಸದ್ಯ ಅವರು ನ್ಯಾಯಾಂಗ ಬಂಧನದಲ್ಲಿದ್ದಾರೆ' ಎಂದು ಹೇಳಿವೆ.

'ಮಹಿಳಾ ಪ್ರಯಾಣಿಕರೊಬ್ಬರು ಸಿಲ್ಕ್ ಬೋರ್ಡ್ ಜಂಕ್ಷನ್‌ನಲ್ಲಿ ಬಸ್ಸಿಗಾಗಿ ಕಾಯುತ್ತಿದ್ದರು. ₹ 11 ಸಾವಿರ ಹಣವಿದ್ದ ಬ್ಯಾಗ್ ಅವರ ಬಳಿ ಇತ್ತು. ಮುಖಕ್ಕೆ ಸ್ಕಾರ್ಫ್ ಹಾಕಿಕೊಂಡಿದ್ದ ಆರೋಪಿ ಕವಿತಾ ಸ್ಥಳಕ್ಕೆ ಬಂದಿದ್ದರು. ಕೆಲ ನಿಮಿಷ ಸ್ಥಳದಲ್ಲಿ ನಿಂತಿದ್ದರು. ಏಕಾಏಕಿ ಬ್ಯಾಗ್ ಕಿತ್ತುಕೊಂಡು ಸ್ಥಳದಿಂದ ಓಡಲಾರಂಭಿಸಿದ್ದರು'.

'ಆರೋಪಿ ಹಿಂದೆಯೇ ಓಡಲಾರಂಭಿಸಿದ್ದ ಮಹಿಳೆ, ರಸ್ತೆಯಲ್ಲಿ ಆಟೊ ಸಮೇತ ನಿಂತಿದ್ದ ಚಾಲಕ ಯೂಸೂಫ್ ಅವರ ಸಹಾಯ ಕೋರಿದ್ದರು. ನಂತರ, ಇಬ್ಬರು ಆರೋಪಿಯನ್ನು ಬೆನ್ನಟ್ಟಿದ್ದರು. ರೂಪೇನ ಅಗ್ರಹಾರದ ರಸ್ತೆಯಲ್ಲಿ ಆರೋಪಿ ಕವಿತಾ ಸಿಕ್ಕಿಬಿದ್ದಿದ್ದರು. ಬ್ಯಾಗ್ ತನ್ನದೆಂದು ಆರೋಪಿ ವಾದಿಸಿದ್ದರು. ಸ್ಥಳದಲ್ಲಿ ಸೇರಿದ್ದ ಜನ ಸಹ ಆರೋಪಿ ಪರ ಮಾತನಾಡಿದ್ದರು.'

'ಮಹಿಳಾ ಪ್ರಯಾಣಿಕರು ಘಟನೆ ಬಗ್ಗೆ ವಿವರಿಸಿ, ಬ್ಯಾಗ್‌ನಲ್ಲಿರುವ ವಸ್ತುಗಳ ಗುರುತು ಹೇಳಿದ್ದರು. ಆರೋಪಿ ಯಾವುದೇ ಗುರುತು ಹೇಳಿರಲಿಲ್ಲ. ಚಾಲಕ ಹಾಗೂ ಸ್ಥಳೀಯರು, ಕವಿತಾ ಅವರನ್ನು ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ಸುಪರ್ದಿಗೆ ಒಪ್ಪಿಸಿದ್ದರು. ಇದೇ ಮೊದಲ ಬಾರಿಗೆ ಆರೋಪಿ ಕೃತ್ಯ ಎಸಗಲು ಯತ್ನಿಸಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ರೈತರು, ಎನ್‌ಜಿಒಗಳಿಗೆ ವಂಚಿಸಿದ್ದ ಆರೋಪಿ

₹50 ಲಕ್ಷ ವಂಚನೆ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲ್ಯಾಪ್‌ಟಾಪ್ ಉಚಿತವಾಗಿ ಕೊಡಿಸುವ ಹಾಗೂ ಕೃಷಿ ಉತ್ಪನ್ನಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡಿಕೊಡುವುದಾಗಿ ಹೇಳಿ ಹಣ ಪಡೆದು ವಂಚಿಸುತ್ತಿದ್ದ ಆರೋಪಿ ಪ್ರತಾಪ್ ಸಿಂಹನನ್ನು (39) ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಪ್ರತಾಪ್ ಸಿಂಹ

'ಬೆಂಗಳೂರು ಉತ್ತರ ತಾಲ್ಲೂಕಿನ ಕಮ್ಮಸಂದ್ರ ಲಕ್ಷ್ಮಿಪುರದ ನಿವಾಸಿ ಪ್ರತಾಪ್ ಸಿಂಹ, 9 ವರ್ಷಗಳಿಂದ ಕೃತ್ಯ ಎಸಗುತ್ತಿದ್ದ. 3 ವರ್ಷಗಳಿಂದ ತಲೆಮರೆಸಿಕೊಂಡಿದ್ದ. ಇತ್ತೀಚೆಗೆ ಈತನನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಕಮಿಷನರ್ ಬಿ. ದಯಾನಂದ್ ಹೇಳಿದರು.

ಸಿಎಸ್‌ಆರ್ ಫಂಡ್ ಆಮಿಷ: 'ರಾಜ್ಯದ ಪ್ರತಿಷ್ಠಿತ ಕಂಪನಿಗಳಿಂದ ಸಿಎಸ್‌ಆರ್ ಫಂಡ್ ಕೊಡಿಸುವುದಾಗಿ ಸರ್ಕಾರೇತರ ಸಂಸ್ಥೆಗಳಿಗೆ ಆರೋಪಿ ಆಮಿಷವೊಡ್ಡುತ್ತಿದ್ದ. ಕಮಿಷನ್‌ಗೆ ಬೇಡಿಕೆ ಇರಿಸುತ್ತಿದ್ದ. ಈತನ ಮಾತು ನಂಬಿ 18 ಸಂಸ್ಥೆಯವರು, ಹಣ ನೀಡಿದ್ದರು' ಎಂದು ತಿಳಿಸಿದರು.

'ಕಂಪನಿಗಳಿಂದ ಕಡಿಮೆ ಬೆಲೆಗೆ ಲ್ಯಾಪ್‌ಟಾಪ್ ಕೊಡಿಸುವುದಾಗಿಯೂ ಆರೋಪಿ ಹಲವರಿಂದ ಹಣ ಪಡೆದುಕೊಂಡಿದ್ದ' ಎಂದರು.

ರೈತರಿಗೂ ವಂಚನೆ: 'ಮಂಡ್ಯ, ತುಮಕೂರು ಹಾಗೂ ಮೈಸೂರು ಜಿಲ್ಲೆಗಳಲ್ಲಿ ಸುತ್ತಾಡುತ್ತಿದ್ದ ಆರೋಪಿ, ಅಲ್ಲಿಯ ರೈತರನ್ನು ಪರಿಚಯ ಮಾಡಿಕೊಳ್ಳುತ್ತಿದ್ದ. ಎಳನೀರು, ತೆಂಗಿನ ಕಾಯಿ ಹಾಗೂ ಇತರೆ ಕೃಷಿ ಉತ್ಪನ್ನಗಳನ್ನು ಹೊರ ರಾಜ್ಯಗಳಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಿಕೊಡುವುದಾಗಿ ಹೇಳುತ್ತಿದ್ದ. ಪಾಲುದಾರಿಕೆ ಹೆಸರಿನಲ್ಲಿ ರೈತರಿಂದ ಹಣ ಪಡೆದು ಪರಾರಿಯಾಗುತ್ತಿದ್ದ' ಎಂದು ಪೊಲೀಸರು ಹೇಳಿದರು.

'9 ವರ್ಷಗಳಲ್ಲಿ 50ಕ್ಕೂ ಹೆಚ್ಚು ಜನರನ್ನು ಆರೋಪಿ ವಂಚಿಸಿದ್ದಾನೆ. ಈತನ ವಿರುದ್ಧ ಹಲಸೂರು ಹಾಗೂ ಪೀಣ್ಯ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿದ್ದವು. ಅವುಗಳ ತನಿಖೆ ಹೊಣೆಯನ್ನು ಸಿಸಿಬಿಗೆ ವಹಿಸಲಾಗಿತ್ತು' ಎಂದರು.

ಹಸುಗಳಿಗೆ ಆ್ಯಸಿಡ್ ಎರಚಿದ್ದ ಮಹಿಳೆ ಬಂಧನ

ಹೆಸರಘಟ್ಟ: ಮನೆ ಬಳಿಯ ಖಾಲಿ ಜಾಗದಲ್ಲಿ ಮೇಯುತ್ತಿದ್ದ 9 ಹಸುಗಳ ಮೇಲೆ ಆ್ಯಸಿಡ್ ಎರಚಿ ಗಾಯ ಮಾಡಿದ್ದ ಆರೋಪದಡಿ ಜೋಸೆಫ್ ಗ್ರೇಸ್ (76) ಅವರನ್ನು ಸೋಲದೇವನಹಳ್ಳಿ ಠಾಣೆ ಪೊಲೀಸರು ಸೋಮವಾರ ಬಂಧಿಸಿದ್ದು, ಠಾಣೆ ಜಾಮೀನು ಮೇಲೆ ಬಿಡುಗಡೆ ಮಾಡಿದ್ದಾರೆ.

ಬೆಂಗಳೂರು ಉತ್ತರ ತಾಲ್ಲೂಕಿನ ಗುಣಿ ಅಗ್ರಹಾರ ಗ್ರಾಮದಲ್ಲಿ ನಡೆದಿದ್ದ ಘಟನೆ ಬಗ್ಗೆ ಸೋಲದೇವನಹಳ್ಳಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಮಹಿಳೆಯು ಹಸುಗಳ ಮೇಲೆ ಶೌಚಾಲಯ ಸ್ವಚ್ಛಗೊಳಿಸಲು ಬಳಸುವ ಆ್ಯಸಿಡ್ ಎರಚಿದ್ದರು. 15 ದಿನದ ಹಿಂದೆ ನಡೆದಿದ್ದ ಘಟನೆ ಸಂಬಂಧ ಹಸುಗಳ ಮಾಲೀಕರು ಹೇಳಿಕೆ ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು, ಮಹಿಳೆಯನ್ನು ಬಂಧಿಸಲಾಗಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಜಾಮೀನು ಸಹಿತ ಪ್ರಕರಣ ಇದಾಗಿದೆ. ಜೊತೆಗೆ, ಮಹಿಳೆಗೂ ಹೆಚ್ಚು ವಯಸ್ಸಾಗಿದೆ. ಹೀಗಾಗಿ, ಠಾಣೆ ಜಾಮೀನು ಮೇಲೆ ಬಿಟ್ಟು ಕಳುಹಿಸಲಾಗಿದೆ. ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಸಹ ನೀಡಲಾಗಿದೆ' ಎಂದು ತಿಳಿಸಿವೆ.

ರೋಗವೆಂದು ಸುಮ್ಮನಾಗಿದ್ದ ಮಾಲೀಕರು: '9 ಹಸುಗಳ ಮೇಲೆ ಗಾಯಗಳಾಗಿದ್ದವು. ಕೆಲ ಹಸುಗಳು ಹಾಲು ಸಹ ಕೊಡುತ್ತಿರಲಿಲ್ಲ. ರೋಗವೆಂದು ತಿಳಿದಿದ್ದ ಮಾಲೀಕರು, ಕೆಲ ಔಷಧಿ ಹಚ್ಚಿದ್ದರು. ಆದರೆ, ಆ್ಯಸಿಡ್ ಎರಚಿದ್ದ ಸಂಗತಿ ಮಾಲೀಕರಿಗೆ ಗೊತ್ತಿರಲಿಲ್ಲ' ಎಂದು ಮೂಲಗಳು ಹೇಳಿವೆ.

'ಆ್ಯಸಿಡ್ ಎರಚಿದ್ದ ಬಗ್ಗೆ ಇತ್ತೀಚೆಗಷ್ಟೇ ಮಾಲೀಕರಿಗೆ ಗೊತ್ತಾಗಿದೆ. ಇದನ್ನು ಪ್ರಶ್ನಿಸಿದ್ದಕ್ಕೆ ಮಾಲೀಕರ ಮೇಲೆಯೇ ಮಹಿಳೆ ಹರಿಹಾಯ್ದಿದ್ದರು' ಎಂದು ತಿಳಿಸಿವೆ.

ಫೇಸ್‌ಬುಕ್, ಇನ್‌ಸ್ಟಾಗ್ರಾಂ ಯುವತಿಯರ ಫೋಟೊ ಮಾರ್ಫ್

ಬೆಂಗಳೂರು: ಸಹೋದ್ಯೋಗಿ ಯುವತಿ ಜೊತೆಗಿನ ಖಾಸಗಿ ಕ್ಷಣಗಳ ಫೋಟೊ ಸೆರೆ ಹಿಡಿದು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಆರೋಪದಡಿ ಇತ್ತೀಚೆಗೆ ಬಂಧಿಸಲಾಗಿದ್ದ ಮಂಗಳೂರಿನ ಆದಿತ್ಯ (28), ಫೇಸ್‌ಬುಕ್ ಹಾಗೂ ಇನ್‌ಸ್ಟಾಗ್ರಾಂನಲ್ಲಿ ಯುವತಿಯರ 12,000 ಫೋಟೊ ಕದ್ದು ನಗ್ನ ರೀತಿಯಲ್ಲಿ ಮಾರ್ಫ್ ಮಾಡಿದ್ದನೆಂಬ ಸಂಗತಿ ತನಿಖೆಯಿಂದ ಗೊತ್ತಾಗಿದೆ.

'ನಗರದ ಕಂಪನಿಯೊಂದರಲ್ಲಿ ಆದಿತ್ಯ ಕೆಲಸ ಮಾಡುತ್ತಿದ್ದ. ಈತನ ಕೃತ್ಯದ ಬಗ್ಗೆ ಕಂಪನಿಯ ಕಾನೂನು ವಿಭಾಗದ ಪ್ರತಿನಿಧಿ ದೂರು ನೀಡಿದ್ದರು. ತನಿಖೆ ಕೈಗೊಂಡು ಆರೋಪಿ ಆದಿತ್ಯನನ್ನು ಸೆರೆ ಹಿಡಿಯಲಾಗಿತ್ತು. ಇದೀಗ, ಆತನ ಬಳಿ ಯುವತಿಯರ 12,000 ಫೋಟೊಗಳು ಪತ್ತೆಯಾಗಿವೆ' ಎಂದು ಪೊಲೀಸ್ ಕಮಿಷನರ್ ಬಿ. ದಯಾನಂದ್ ಹೇಳಿದರು.

ಆ್ಯಪ್ ಮೂಲಕ ಮಾರ್ಫ್: 'ಫೇಸ್‌ಬುಕ್, ಇನ್‌ಸ್ಟಾಗ್ರಾಂ ಹಾಗೂ ಇತರೆ ಸಾಮಾಜಿಕ ಮಾಧ್ಯಮಗಳ ಖಾತೆಗಳಲ್ಲಿ ಯುವತಿಯರು ತಮ್ಮ ಫೋಟೊ ಅಪ್‌ಲೋಡ್ ಮಾಡಿದ್ದರು. ಅದೇ ಫೋಟೊಗಳನ್ನು ಡೌನ್‌ಲೋಡ್ ಹಾಗೂ ಸ್ಕ್ರೀನ್ ಶಾರ್ಟ್ ಮಾಡಿಕೊಳ್ಳುತ್ತಿದ್ದ ಆರೋಪಿ, ಆ್ಯಪ್ ಬಳಸಿ ನಗ್ನ ರೀತಿಯಲ್ಲಿ ಮಾರ್ಫ್ ಮಾಡುತ್ತಿದ್ದ' ಎಂದು ಪೊಲೀಸರು ತಿಳಿಸಿದರು.

'ಸಹೋದ್ಯೋಗಿ ಯುವತಿ ಜೊತೆ ಸಲುಗೆ ಇಟ್ಟುಕೊಂಡಿದ್ದ ಆದಿತ್ಯ, ಅವರ ಫೋಟೊಗಳನ್ನು ಸೆರೆ ಹಿಡಿದು ಮಾರ್ಫ್ ಮಾಡಿದ್ದ. ಅನುಮಾನಗೊಂಡ ಯುವತಿ, ಆದಿತ್ಯನ ಮೊಬೈಲ್ ಪರಿಶೀಲಿಸಿದ್ದರು. ಅವಾಗಲೇ ಹಲವರು ಯುವತಿಯರ ಫೋಟೊಗಳನ್ನು ನೋಡಿದ್ದರು. ಈ ಬಗ್ಗೆ ಕಂಪನಿಯ ಅಧಿಕಾರಿಗಳಿಗೆ ವಿಷಯ ತಿಳಿಸಿದ್ದರು. ನಂತರವೇ ಕಾನೂನು ವಿಭಾಗದ ಪ್ರತಿನಿಧಿ ಠಾಣೆಗೆ ದೂರು ನೀಡಿದ್ದರು' ಎಂದು ಹೇಳಿದರು.

ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಮಾಹಿತಿ: 'ಮಾರ್ಫ್ ಮಾಡುತ್ತಿದ್ದ ಫೋಟೊಗಳನ್ನು ಯುವತಿಯರಿಗೆ ಕಳುಹಿಸುತ್ತಿದ್ದ ಆರೋಪಿ, ಹಣಕ್ಕೆ ಬೇಡಿಕೆ ಇರಿಸುತ್ತಿದ್ದ. ಹಣ ನೀಡದಿದ್ದರೆ, ಸಾಮಾಜಿಕ ಮಾಧ್ಯಮಗಳಲ್ಲಿ ಫೋಟೊ ಅಪ್‌ಲೋಡ್ ಮಾಡುವುದಾಗಿ ಬೆದರಿಸುತ್ತಿದ್ದನೆಂಬ ಮಾಹಿತಿ ಇದೆ' ಎಂದು ಪೊಲೀಸರು ತಿಳಿಸಿದರು.

'ಫೋಟೊ ಬಳಸಿಕೊಂಡು ಕೆಲ ಯುವತಿಯರ ಜೊತೆ ಆರೋಪಿ ಸಲುಗೆ ಸಹ ಇಟ್ಟುಕೊಂಡಿದ್ದ. ಸದ್ಯ ಒಬ್ಬ ಯುವತಿ ಮಾತ್ರ ದೂರು ನೀಡಿದ್ದಾರೆ' ಎಂದರು.

ವಿದ್ಯುತ್ ಮಾರ್ಗಗಳ ಬಗ್ಗೆ ನಾಗರಿಕರು ಎಚ್ಚರಿಕೆ ವಹಿಸಬೇಕೆಂದು ಬೆಸ್ಕಾಂ ವತಿಯಿಂದ ಜೆ.ಪಿ ನಗರದಲ್ಲಿ 'ವಿದ್ಯುತ್ ಸುರಕ್ಷತಾ ಜಾಗೃತಿ ಜಾಥಾ' ಆಯೋಜಿಸಲಾಗಿತ್ತು

ಅಭಿವೃದ್ಧಿ ಆಯುಕ್ತರ (ಕರಕುಶಲ) ಕಚೇರಿ
ಜವಳಿ ಸಚಿವಾಲಯ
ವೆಸ್ಟ್ ಬ್ಲಾಕ್ ನಂ.7, ಆರ್.ಕೆ.ಪುರಂ,
ನವದೆಹಲಿ –110066

ಕೇಂದ್ರ ಸರ್ಕಾರದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳಲ್ಲಿ ಡೆಪ್ಯುಟೇಶನ್ ವಿಧಾನದ ಮೂಲಕ ಹಂತ 7 ರಲ್ಲಿನ ವೇತನ ಶ್ರೇಣಿಯಲ್ಲಿನ (ರೂ. 44900–142400) 01 (ಒಂದು) ಅಕೌಂಟ್ಸ್ ಆಫೀಸರ್ [ಗ್ರೂಪ್ 'ಬಿ' ಗೆಜೆಟೆಡ್] ಹುದ್ದೆಯನ್ನು ಭರ್ತಿ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಈ ಅಕೌಂಟ್ಸ್ ಆಫೀಸರ್ ಹುದ್ದೆಗೆ ಆಯ್ಕೆಗೊಳ್ಳುವ ಅಭ್ಯರ್ಥಿಯು ದೇಶದ ಯಾವುದೇ ಭಾಗದಲ್ಲಿ ಕಾರ್ಯನಿರ್ವಹಿಸಲು ಸಿದ್ಧವಾಗಿರಬೇಕು.

ಅಕೌಂಟ್ಸ್ ಆಫೀಸರ್ ಹುದ್ದೆಗೆ ಅರ್ಜಿ ಸಲ್ಲಿಸಲು ಅಗತ್ಯವಿರುವ ಅರ್ಹತೆ, ವಿದ್ಯಾರ್ಹತೆ, ಅನುಭವ, ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಇತ್ಯಾದಿ ವಿವರಗಳು ಕಚೇರಿಯ www.handicrafts.nic.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತವೆ.

(ಆಸ್ಥಾ ಅಗರವಾಲ್)
ಸಹಾಯಕ ನಿರ್ದೇಶಕರು (ಆಡಳಿತ)
ಡಿಸಿ (ಕರಕುಶಲ) ಕಚೇರಿ

CBC 41103/11/0010/2324

ದೊಡ್ಡತೋಗೂರು ಪಟ್ಟಣ ಪಂಚಾಯಿತಿ ಕಾರ್ಯಾಲಯ

ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ – 560 100
ಫೋನ್: 080–22111177, E-Mail:ka.doddathoguru.tp@gmail.com

ಸಂ: ದೊಪಂಪ/ತಾ.ಶಾ/ಟೆಂ/ಸಿ.ಆರ್1/2023–24 | ದಿನಾಂಕ:11.12.2023

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
(ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ KW-1 &2ರ ನಿಬಂಧನೆಗಳಂತೆ ಅರ್ಜಿ ಆಹ್ವಾನಿಸಲಾಗಿದೆ)

ಪಟ್ಟಣ ಪಂಚಾಯಿತಿ ದೊಡ್ಡತೋಗೂರು ವ್ಯಾಪ್ತಿಯಲ್ಲಿ 2023–24ನೇ ಸಾಲಿನ ಪಟ್ಟಣ ಪಂಚಾಯಿತಿ ಸಾಮಾನ್ಯ ಅನುದಾನದಡಿ ಒಟ್ಟು ಮೊತ್ತ ರೂ. 61.12 ಲಕ್ಷದ 04 (ನಾಲ್ಕು) ಕಾಮಗಾರಿಗಳನ್ನು (ವಾರ್ಷಿಕ ನಿರ್ವಹಣೆ) ಐಟಂವಾರು ಮತ್ತು ಇ–ಪ್ರೊಕ್ಯೂರ್‌ಮೆಂಟ್ ದ್ವಿ–ಲಕೋಟೆ ಪದ್ಧತಿಯಲ್ಲಿ ಕಾಮಗಾರಿಗಳಿಗೆ (ಕನಿಷ್ಠ 5.66 ಲಕ್ಷಗಳಿಂದ 20.30 ಲಕ್ಷಗಳ) ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ 3 ಮತ್ತು ಮೇಲ್ದರ್ಜೆ ಗುತ್ತಿಗೆದಾರರಿಂದ ಮತ್ತು ಅರ್ಹ ಟ್ರಾವೆಲ್ ಏಜೆನ್ಸಿರವರಿಂದ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://kppp.karnataka.gov.in ಮೂಲಕ ಟೆಂಡರ್ ಫಾರಂಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು. ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಫಾರಂಗಳನ್ನು ಸಲ್ಲಿಸಲು ಪ್ರಾರಂಭ ದಿನಾಂಕ : **14.12.2023** ಆಗಿದ್ದು, ಟೆಂಡರ್‌ಗಳನ್ನು ಸಲ್ಲಿಸುವ ಅಂತಿಮ ದಿನಾಂಕ: **28.12.2023ರ ಸಂಜೆ 5.30 ಗಂಟೆಗಳಾಗಿದ್ದು**, ಟೆಂಡರ್‌ಗಳನ್ನು ತೆರೆಯುವ ದಿನಾಂಕ: **30.12.2023**. ಹೆಚ್ಚಿನ ವಿವರಗಳಿಗೆ ಪಟ್ಟಣ ಪಂಚಾಯಿತಿಯ ತಾಂತ್ರಿಕ ಶಾಖೆಯಲ್ಲಿ ಮಾಹಿತಿ ಪಡೆಯಬಹುದಾಗಿರುತ್ತದೆ.

ಸಹಿ/– ಆಡಳಿತಾಧಿಕಾರಿಗಳು, ದೊಡ್ಡತೋಗೂರು ಪಟ್ಟಣ ಪಂಚಾಯಿತಿ | ವಾಸಾಸಂಇ/ವಾಪ್ರ/ಜಿವ/2516/2023–24 | ಸಹಿ/– ಮುಖ್ಯಾಧಿಕಾರಿ, ದೊಡ್ಡತೋಗೂರು ಪಟ್ಟಣ ಪಂಚಾಯಿತಿ

(ಲೋಕೋಪಯೋಗಿ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ
ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ಅಲ್ಪಾವಧಿ ಟೆಂಡರ್‌ಗಳಿಗಾಗಿ ಆಹ್ವಾನ (ಐ.ಎಫ್.ಟಿ)
ಸಂಖ್ಯೆ:05/2023–24 ದಿನಾಂಕ:08.12.2023

(ರಸ್ತೆ/ಸೇತುವೆ ನಿರ್ಮಾಣ ಕಾಮಗಾರಿಗಳಿಗಾಗಿ – ಸ್ಟಾಂಡರ್ಡ್ ಬಿಡ್ಡಿಂಗ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ–4 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ)

ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ **ಕೆ.ಪಿ.ಪಿ ಪೋರ್ಟಲ್ ಮೂಲಕ ದ್ವಿ–ಲಕೋಟೆ** ಪದ್ಧತಿಯಲ್ಲಿ ಕಾಮಗಾರಿಗಳ ಟೆಂಡರ್‌ಗಳನ್ನು ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000 ರ ಅನ್ವಯ ಈ ಕೆಳಗೆ ಸಹಿ ಮಾಡಿದವರು ಆಹ್ವಾನಿಸಿರುತ್ತಾರೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು **16.12.2023 ರ ಸಂಜೆ 4.00 ಘಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ.** (1) ಪ್ರೀಬಿಡ್ ಮೀಟಿಂಗ್ **ದಿನಾಂಕ: 14.12.2023 (ಸಂಜೆ 3.00 ಘಂಟೆಗೆ ಕಚೇರಿ ವೇಳೆಯಲ್ಲಿ).** (2) ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕಡೆಯ **ದಿನಾಂಕ: 15.12.2023(ಸಂಜೆ 3.00 ಘಂಟೆಗೆ ಕಚೇರಿ ವೇಳೆಯಲ್ಲಿ).** (3) ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ **ದಿನಾಂಕ: 16.12.2023 (ಸಂಜೆ 4.00 ಘಂಟೆಯವರೆಗೆ).** (4) ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ : 18.12.2023 (ಬೆಳಿಗ್ಗೆ 11.00 ಘಂಟೆ).** (5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ : ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ **https://kppp.karnataka.gov.in** ವೆಬ್‌ಸೈಟ್‌ನ್ನು ಸಂಪರ್ಕಿಸಬಹುದು ಅಥವಾ ಕಚೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋ.ಇ. ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:166/ಕೆಎಸ್‌ಎಂ.ಸಿ.ಎ/2023–24

ಸಾರ್ವಜನಿಕ ಪ್ರಕಟಣೆ

ಈ ಸೂಚನಾ ಪತ್ರದ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನಮ್ಮ ಕಕ್ಷೀದಾರರು ಕೆಳಕಂಡ ಷೆಡ್ಯೂಲಿನಲ್ಲಿ ವಿವರಿಸಿರುವ ಷೆಡ್ಯುಲ್ ಸ್ವತ್ತನ್ನು ಮಾಲೀಕರಾದ ಶ್ರೀ. ಸಜ್ಜನ್ ಕುಮಾರ್ ಜುಂಜುನ್ವಾಲಾ ರವರ ಹೆಂಡತಿ ಶ್ರೀಮತಿ. ಆಶಾ ಜುಂಜುನ್ವಾಲಾ ಮತ್ತು ಶ್ರೀ. ಸಜ್ಜನ್ ಕುಮಾರ್ ಜುಂಜುನ್ವಾಲಾ ರವರ ಮಗ ಶ್ರೀ. ವಿಶಾಲ್ ಜುಂಜುನ್ವಾಲಾ ("ಮಾಲೀಕರು") ರವರಿಂದ ಖರೀದಿಸಲು ಇಚ್ಛಿಸಿರುತ್ತಾರೆ. ಷೆಡ್ಯುಲ್ ಸ್ವತ್ತು ಸದರಿ ಮಾಲೀಕರ ಮಾಲೀಕತ್ವಕ್ಕೆ ಒಳಪಟ್ಟಿರುವುದಲ್ಲದೆ, ಅವರು ಅನಿರ್ಬಂಧಿತ ಮಾರಾಟದ ಹಕ್ಕನ್ನು ಸಹ ಹೊಂದಿರುತ್ತಾರೆಂದು ಸದರಿಯವರು ತಿಳಿಸಿರುತ್ತಾರೆ.

ಸದರಿ ಷೆಡ್ಯುಲ್ ಸ್ವತ್ತಿನಲ್ಲಿ ಯಾವುದೇ ವ್ಯಕ್ತಿಯು ಯವುದೇ ತರಹದ ಹಕ್ಕುಗಳು ಅಥವಾ ಕ್ಲೇಮುಗಳೇನಾದರು ಹೊಂದಿದ್ದಲ್ಲಿ ಅಂತಹ ಕ್ಲೇಮುಗಳನ್ನು ಮತ್ತು ಹಕ್ಕುಗಳಿಗೆ ಸಂಬಂಧಪಟ್ಟ ದಾಖಲೆಪತ್ರಗಳೊಂದಿಗೆ ಈ ಕೆಳಗೆ ಸಹಿ ಮಾಡಲ್ಪಟ್ಟಿರುವ ವಿಳಾಸಕ್ಕೆ ಇಂದಿನಿಂದ 14 ದಿನಗಳೊಳಗಾಗಿ ತಲುಪಿಸತಕ್ಕದ್ದು. ಸದರಿ ಸೂಚಿತ ಮತ್ತು ನಿಗದಿತ ಅವಧಿಯ ತರುವಾಯ ನಮ್ಮ ಕಕ್ಷೀದಾರರು, ಸದರಿಯವರ ಮಾಲೀಕತ್ವಕ್ಕೆ ಮತ್ತು ಸದರಿ ಖರೀದಿಗೆ ಯಾವುದೇ ತಂಟೆ ತಕರಾರುಗಳಿಲ್ಲವೆಂದು ಪರಿಗಣಿಸಿ, ಸದರಿ ಷೆಡ್ಯುಲು ಸ್ವತ್ತನು ಖರೀದಿಸಲು ಮುಂದಾಗುವರು.

ಷೆಡ್ಯುಲು ಸ್ವತ್ತಿನ ವಿವರ

ಬೆಂಗಳೂರು ನಗರ, ಇಂದಿರಾನಗರ, ಎಚ್‌ಎಎಲ್ 2ನೇ ಹಂತ, 13ನೇ ಮುಖ್ಯ ರಸ್ತೆ, 4ನೇ ಅಡ್ಡ ರಸ್ತೆ, ಯಲ್ಲಿರುವ ಪೂರ್ವ–ಪಶ್ಚಿಮ 74.15 ಅಡಿ, ಉತ್ತರ–ದಕ್ಷಿಣ 60.70 ಅಡಿ ಒಟ್ಟು ವಿಸ್ತೀರ್ಣ 4500 ಚದರ ಅಡಿಉಳ್ಳ ಸ್ವತ್ತಿನ ಸಂಖ್ಯೆ. 1189, ಮುನ್ಸಿಪಲ್ ನಂ. 1189, ಪಿಐಡಿ ನಂ. 74–1–1189 ಉಳ್ಳ ಸ್ವತ್ತು ಮತ್ತು ಸದರಿ ಸ್ವತ್ತಿನಲ್ಲಿ ಕಟ್ಟಿರುವ ನೆಲ ಮತ್ತು ಎರಡು ಹಂತಸ್ತುಗಳುಳ್ಳ ಮನೆಯ ಕಟ್ಟಡದ ವಿಸ್ತೀರ್ಣ 5050 ಚದರ ಅಡಿ ಉಳ್ಳ ಸ್ವತ್ತಿಗೆ ಚಕ್ಕುಬಂದಿ: **ಪೂರ್ವಕ್ಕೆ** : ರಸ್ತೆ; **ಪಶ್ಚಿಮಕ್ಕೆ** : ಸ್ವತ್ತಿನ ಸಂಖ್ಯೆ. 1190; **ಉತ್ತರಕ್ಕೆ** : ಸ್ವತ್ತಿನ ಸಂಖ್ಯೆ. 1188; **ದಕ್ಷಿಣಕ್ಕೆ** : ರಸ್ತೆ.

ಸ್ಥಳ : ಬೆಂಗಳೂರು | **ದಿನಾಂಕ : 13/12/2023**

ಸಹಿ./– ಎ. ಸುಪ್ರೀತ್, ವಕೀಲರು, ಕ್ರೆಸ್ಟ್ ಲಾ ಪಾರ್ಟ್ನರ್ಸ್,
33, ಝುವಿಯರ್ ಲೇಔಟ್, 1 ನೇ ಅಡ್ಡ ರಸ್ತೆ, ವಿಕ್ಟೋರಿಯಾ ರಸ್ತೆ, ಬೆಂಗಳೂರು – 560 047
ದೂ: 41473535 / 41473536

ನಗರದಲ್ಲಿ ಇಂದು

ವಿಜಯಲಕ್ಷ್ಮಿ ಬಾಳೇಕುಂದ್ರಿ

'ಸುವರ್ಣ ಕರ್ನಾಟಕ ಸಂಭ್ರಮ' ಟ್ರಸ್ಟ್ ಉದ್ಘಾಟನೆ, 'ಕರುನಾಡ ಸಿರಿ ಸೇವಾ' ಪ್ರಶಸ್ತಿ ಪ್ರದಾನ: ಎಚ್.ಎಲ್. ಪುಷ್ಪ, ಅಧ್ಯಕ್ಷತೆ: ಸಾವಿತ್ರಿ ಆರ್., ಅತಿಥಿಗಳು: ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ, ಎಂ.ಡಿ. ಲಕ್ಷ್ಮೀನಾರಾಯಣ, ಮಂಜುನಾಥ್, ಸಂಗಮೇಶ ಉಪಾಸೆ, ಆಗುಂಬೆ ನಟರಾಜ್, ಆಯೋಜನೆ: ಜ್ಞಾನ ಸ್ಪಂದನ ಚಾರಿಟಬಲ್ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಮಧ್ಯಾಹ್ನ 2.30

ಆಚಾರ್ಯ ಪುಣ್ಯಾರಾಧನೆ: ಅಧ್ಯಕ್ಷತೆ: ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ, 'ಬನ್ನಂಜೆ' ಪ್ರಶಸ್ತಿ ಪುರಸ್ಕೃತರು: ಬಿ.ಎನ್. ಶಶಿಕಿರಣ್, 'ಸನಾತನ ಧರ್ಮ'ದ ಕುರಿತ ಉಪನ್ಯಾಸ: ಹಾರಿಕಾ ಮಂಜುನಾಥ, ಗಾಯನ: ಅರುಂಧತಿ ವಸಿಷ್ಠ, ಆಯೋಜನೆ: ಬನ್ನಂಜೆ ಗೋವಿಂದಾಚಾರ್ಯ ಪ್ರತಿಷ್ಠಾನ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಭಾಂಗಣ, ಬಿ.ಪಿ ವಾಡಿಯಾ ರಸ್ತೆ ಬಸವನಗುಡಿ, ಸಂಜೆ 5

'ಕನ್ನಡ ಸಾಹಿತ್ಯಕ್ಕೆ ವಿ.ಸೀ. ಅವರ ಕೊಡುಗೆ' ಕುರಿತ ಉಪನ್ಯಾಸ: ಪ್ರೇಮ ಸಿದ್ದರಾಜು, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನದ ಸಭಾಂಗಣ, ಎನ್.ಆರ್. ಕಾಲೊನಿ, ಸಂಜೆ 5

ಸಮುದಾಯ ಕ್ಯಾಂಟೀನ್‌ಗಳ ಕುರಿತು ಸಂವಾದ: ರಿತಿಕಾ ಖೇರ್, ಆಯೋಜನೆ ಮತ್ತು ಸ್ಥಳ: ಆಲ್ಟರ್‌ನೇಟಿವ್ ಲಾ ಫೋರಂ, ಇನ್ಫೆಂಟ್ರಿ ರಸ್ತೆ, ಸಂಜೆ 6

ಎಂ.ಎಸ್. ರಾಮಯ್ಯ ಆತ್ಮಕಥೆ ಬಿಡುಗಡೆ ಕಾರ್ಯಕ್ರಮ: ನಿತಿನ್ ಗಡ್ಕರಿ ಅಭಿಮತ

‘ದೇಶದ ಅಭಿವೃದ್ಧಿಗೆ ಜ್ಞಾನವೇ ಶಕ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದ ಅಭಿವೃದ್ಧಿಗೆ ಜ್ಞಾನವೇ ಪ್ರಮುಖ ಶಕ್ತಿ. ಭಾರತವು ಶಿಕ್ಷಣ ಕ್ಷೇತ್ರದಲ್ಲಿ ಅದ್ಭುತ ಸಾಧನೆ ಮಾಡುತ್ತಿದೆ’ ಎಂದು ಕೇಂದ್ರ ರಸ್ತೆ ಸಾರಿಗೆ ಹಾಗೂ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಬಣ್ಣಿಸಿದರು.

ನಗರದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಎಂ.ಎಸ್. ರಾಮಯ್ಯ ಅವರ ಚಿತ್ರಸಹಿತ ಇಂಗ್ಲಿಷ್ ಆತ್ಮಕಥೆ ‘ರಾಮಯ್ಯಾನಮ್’ ಕೃತಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

‘ಅಮೆರಿಕದ ಆಸ್ಪತ್ರೆಗಳಲ್ಲಿ ಭಾರತದವರೇ ಹೆಚ್ಚಿನ ಸಂಖ್ಯೆಯಲ್ಲಿ ವೈದ್ಯರಾಗಿ ಕೆಲಸ ಮಾಡುತ್ತಿದ್ದಾರೆ. ವಿದೇಶದ ದೊಡ್ಡ ಕಂಪನಿಗಳಲ್ಲಿ ಭಾರತದವರೇ ಸಿಇಒಗಳು. ಭಾರತದ ಶಿಕ್ಷಣ ಕ್ಷೇತ್ರದ ಶಕ್ತಿಯೇ ಅಂತಹದ್ದು’ ಎಂದು ಹೇಳಿದರು.

‘ಶಿಕ್ಷಣದ ಜೊತೆಗೆ ನಮ್ಮ ಸಂಸ್ಕೃತಿ, ಪರಂಪರೆ ಮತ್ತು ಸಂಸ್ಕಾರವು ದೊರೆತರೆ ಮಾತ್ರ ಉತ್ತಮ ಪ್ರಜೆಗಳಾಗಿ ರೂಪುಗೊಳ್ಳಲು ಸಾಧ್ಯ’ ಎಂದು ಹೇಳಿದರು.

‘ಬೆಂಗಳೂರು ಜ್ಞಾನದ ರಾಜಧಾನಿಯಾಗಿ ರೂಪುಗೊಳ್ಳುವಲ್ಲಿ ಎಂ.ಎಸ್. ರಾಮಯ್ಯ ಅವರ ಕೊಡುಗೆ ಅಪಾರ. ರಾಮಯ್ಯ ಅವರು ದೇಶಕ್ಕೆ ವಿಶಿಷ್ಟ ಕೊಡುಗೆಗಳನ್ನು ನೀಡಿದ ವಿಶೇಷ ವ್ಯಕ್ತಿ. ರಾಮಯ್ಯ ಅವರು ಸಂಸ್ಕಾರ ಪಾಲಿಸುವ ಜೊತೆಗೆ ಶಿಕ್ಷಣದ ಮೌಲ್ಯಗಳನ್ನು ಬೆಸೆಯುವ ಕೆಲಸ ಮಾಡಿದ್ದರು’ ಎಂದು ಹೇಳಿದರು.

‘ದೇಶದಲ್ಲಿ ನೀರು ಮತ್ತು ಹಣಕ್ಕೆ ಕೊರತೆಯಿಲ್ಲ. ಆದರೆ, ದೂರದೃಷ್ಟಿ, ಪ್ರಾಮಾಣಿಕತೆ ಕೊರತೆಯಿದೆ’ ಎಂದು ಬೇಸರ ಹೊರಹಾಕಿದರು.

ನಿವೃತ್ತ ಲೋಕಾಯುಕ್ತ ಸಂತೋಷ್ ಹೆಗ್ಡೆ ಮಾತನಾಡಿ, ‘ಶಿಕ್ಷಣ ಕ್ಷೇತ್ರಕ್ಕೆ ಎಂ.ಎಸ್. ರಾಮಯ್ಯ ಅವರ ಕೊಡುಗೆ ಅಪಾರ. ರಾಮಯ್ಯ ಅವರ ಜೀವನ ಚರಿತ್ರೆಯನ್ನು ಶಾಲಾ ಹಾಗೂ ಕಾಲೇಜು ಹಂತದಲ್ಲಿ ವಿದ್ಯಾರ್ಥಿಗಳು ಪಠ್ಯವಾಗಿ ಕಲಿಯುವಂತೆ ಆಗಬೇಕು. ರಾಮಯ್ಯ ಅವರು ಸ್ವಂತ ಪರಿಶ್ರಮ ಹಾಗೂ ನ್ಯಾಯಯುತ ಮಾರ್ಗದಲ್ಲಿ ದುಡಿಮೆ ಮಾಡಿ, ಶ್ರೀಮಂತರಾದವರು. ಅವರ ಜೀವನ, ಗಳಿಕೆಯ ಹಾದಿ ಮಾದರಿ ಹಾಗೂ ಅನುಕರಣೀಯ’ ಎಂದು ಹೇಳಿದರು.

ದೇಶದಲ್ಲಿ ಸಾವಿರಾರು ಕೋಟಿ ರೂಪಾಯಿಯ ಹಲವು ಹಗರಣಗಳು ನಡೆದಿವೆ. ಹಗರಣದಲ್ಲಿ ಭಾಗಿಯಾದವರಿಗೂ ಶಿಕ್ಷೆ ಆಗುತ್ತಿಲ್ಲ. ಸರ್ಕಾರದಿಂದ ಬಿಡುಗಡೆಯಾದ ಅನುದಾನ ಗ್ರಾಮೀಣ ಪ್ರದೇಶಕ್ಕೆ ಇನ್ನೂ ತಲುಪುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಗೋಕುಲ ಎಜುಕೇಷನ್ ಫೌಂಡೇಷನ್‌ನ ಟ್ರಸ್ಟಿ ಕೋದಂಡ ರಾಮಯ್ಯ ಮಾತನಾಡಿ, ‘ತಂದೆಯವರ ಸಾಧನೆ ಹಾದಿಯನ್ನು ಪುಸ್ತಕ ರೂಪದಲ್ಲಿ ಹೊರತರಲಾಗಿದೆ. ತಂದೆಯವರು ಸಣ್ಣ ವಯಸ್ಸಿನಲ್ಲಿ ರೈಲ್ವೆ ಇಲಾಖೆ, ಇಟ್ಟಿಗೆ ಭಟ್ಟಿಯಲ್ಲಿ ಆರಂಭಿಕ ದಿನಗಳಲ್ಲಿ ಕೆಲಸ ಮಾಡಿದ್ದರು. ಮತ್ತಿಕೆರೆಯಲ್ಲಿ ಜಮೀನು ಖರೀದಿಸಿ, ಎಂಜಿನಿಯರಿಂಗ್ ಹಾಗೂ ವೈದ್ಯಕೀಯ ಕಾಲೇಜು ನಿರ್ಮಿಸಿದ್ದರು. ಇಲ್ಲೀಗ ದೇಶದ ನಾನಾ ಭಾಗದ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ’ ಎಂದರು.

ಕೃತಿ ಬರೆದ ರಾಮಕೃಷ್ಣ ಉಪಾಧ್ಯ ಮಾತನಾಡಿ, ‘ಕೃತಿಯಲ್ಲಿ 7 ಅಧ್ಯಾಯಗಳಿವೆ. 53 ಲೇಖನಗಳಿವೆ. ಕೃತಿಯಲ್ಲಿರುವ ಛಾಯಾಚಿತ್ರಗಳು ಅವರ ಸಾಧನೆ ಹೇಳುತ್ತಿವೆ’ ಎಂದರು.

ಬೆಂಗಳೂರಿನಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಎಂ.ಎಸ್.ರಾಮಯ್ಯ ಅವರ ಆತ್ಮಕಥೆ ‘ರಾಮಯ್ಯಾನಮ್’ ಕೃತಿಯನ್ನು ಕೇಂದ್ರದ ರಸ್ತೆ ಸಾರಿಗೆ ಹಾಗೂ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ಬಿಡುಗಡೆ ಮಾಡಿದರು (ಎಡದಿಂದ ಮೂರನೆಯವರು). (ಎಡದಿಂದ) ಲೇಖಕ ರಾಮಕೃಷ್ಣ ಉಪಾಧ್ಯ, ಗೋಕುಲ ಎಜುಕೇಷನ್ ಫೌಂಡೇಷನ್‌ನ ಟ್ರಸ್ಟಿ ಕೋದಂಡರಾಮಯ್ಯ, ನಿವೃತ್ತ ಲೋಕಾಯುಕ್ತ ಸಂತೋಷ್ ಹೆಗ್ಡೆ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

‘ಪರಿಹಾರ ಕಾಣದ ಕಾವೇರಿ ವಿವಾದ’

‘ನಾನು ಜಲಸಂಪನ್ಮೂಲ ಸಚಿವನಾಗಿದ್ದ ವೇಳೆ 23 ಅಂತರರಾಜ್ಯ ಜಲ ಸಮಸ್ಯೆಗಳಲ್ಲಿ 18 ಸಮಸ್ಯೆಗಳನ್ನು ಪರಿಹರಿಸಿದ್ದೆ. ಆದರೆ, ಕರ್ನಾಟಕ ಮತ್ತು ತಮಿಳುನಾಡಿನ ಮಧ್ಯೆಯಿದ್ದ ಕಾವೇರಿ ವಿವಾದ ಪರಿಹರಿಸಲು ಸಾಧ್ಯವಾಗಲಿಲ್ಲ’ ಎಂದು ನಿತಿನ್ ಗಡ್ಕರಿ ಬೇಸರ ವ್ಯಕ್ತಪಡಿಸಿದರು.

‘ಜಲ ವಿವಾದಗಳಲ್ಲಿ ಭಾಗಿಯಾಗಿದ್ದ ರಾಜ್ಯಗಳ ಮುಖ್ಯಮಂತ್ರಿಗಳನ್ನು ಕರೆಸಿಕೊಂಡು ಕೊಠಡಿಯಲ್ಲಿ ಚರ್ಚಿಸುತ್ತಿದ್ದೆ. ಸಮಸ್ಯೆ ಇತ್ಯರ್ಥವಾಗುವ ತನಕ ಹೊರಗೆ ಕಳುಹಿಸುತ್ತಿರಲಿಲ್ಲ’ ಎಂದರು.

‘ಗೋದಾವರಿ ನದಿಯಿಂದ 1,300 ಟಿಎಂಸಿ ನೀರು ವ್ಯರ್ಥವಾಗಿ ಸಮುದ್ರಕ್ಕೆ ಸೇರುತ್ತಿರುವುದು ನನ್ನ ಅರಿವಿಗೆ ಬಂದಿತ್ತು. ಈ ನೀರನ್ನು ಬಳಸುವ ಚಿಂತನೆ ನಡೆಸಿದೆ. ಇದೇ ನಿಟ್ಟಿನಲ್ಲಿ ಪೊಲವರಂ ಯೋಜನೆ ಜಾರಿಗೊಳಿಸಲಾಯಿತು ಎಂದು ಹೇಳಿದರು.

ಕನ್ನಡ ಶಾಲೆ ಉಳಿಸಲು ಚಿಂತನಾ ಸಭೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಶಾಲೆಗಳನ್ನು ಉಳಿಸಿ, ಬೆಳೆಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಬುಧವಾರ ಮಧ್ಯಾಹ್ನ 3 ಗಂಟೆಗೆ ಚಾಮರಾಜಪೇಟೆಯಲ್ಲಿರುವ ತನ್ನ ಕಚೇರಿಯಲ್ಲಿ ಉನ್ನತ ಮಟ್ಟದ ಚಿಂತನಾ ಸಭೆ ಹಮ್ಮಿಕೊಂಡಿದೆ.

ಕಸಾಪ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದಲ್ಲಿ ಈ ಸಭೆ ನಡೆಯಲಿದೆ. ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿಗಳಾದ ಅರಳಿ ನಾಗರಾಜ್, ಎಚ್.ಎನ್. ನಾಗಮೋಹನದಾಸ್, ಬೇಲಿಮಠದ ಪೀಠಾಧ್ಯಕ್ಷ ಶಿವರುದ್ರ ಸ್ವಾಮೀಜಿ, ಸಾಹಿತಿಗಳಾದ ಹಂ.ಪ. ನಾಗರಾಜಯ್ಯ, ಚಂದ್ರಶೇಖರ ಕಂಬಾರ, ವಕೀಲ ಅಶೋಕ ಹಾರನಹಳ್ಳಿ, ಕಲಾವಿದ ‘ಮುಖ್ಯಮಂತ್ರಿ’ ಚಂದ್ರು ಸೇರಿ ವಿವಿಧ ಕ್ಷೇತ್ರಗಳ 80ಕ್ಕೂ ಅಧಿಕ ಮಂದಿ ಭಾಗವಹಿಸಲಿದ್ದಾರೆ ಎಂದು ಪರಿಷತ್ತು ತಿಳಿಸಿದೆ.

‘ಈ ಸಭೆಯು ಪರಿಷತ್ತಿನ ‘ಕನ್ನಡ ಶಾಲೆ ಉಳಿಸಿ-ಕನ್ನಡ ಬೆಳೆಸಿ’ ಎಂಬ ಉದ್ದೇಶದಡಿ ನಡೆಯಲಿದೆ. ಮಕ್ಕಳನ್ನು ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳಿಗೆ ಆಕರ್ಷಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸೂಕ್ತ ಸಲಹೆ ಪಡೆಯಲಾಗುತ್ತದೆ. ಅದರಂತೆ ಮುಂದಿನ ಕ್ರಮವನ್ನು ವಹಿಸಲಾಗುವುದು’ ಎಂದು ಪ್ರಕಟಣೆಯಲ್ಲಿ ಹೇಳಿದೆ.

ಕೋ–ಆಪರೇಟಿವ್ ಸೊಸೈಟಿಗೆ ಆಯ್ಕೆ

ಬೆಂಗಳೂರು: ಮಂಜುನಾಥನಗರದ ದಿ ಫ್ರೆಂಡ್ಸ್ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ ಅಧ್ಯಕ್ಷರಾಗಿ ಉಮಾಶಂಕರ್, ಉಪಾಧ್ಯಕ್ಷರಾಗಿ ಶಂಕರ್ ಪಾಗೋಜಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಕಚೇರಿಯಲ್ಲಿ ಈಚೆಗೆ ನಡೆದ ಚುನಾವಣಾ ಪ್ರಕ್ರಿಯೆಯಲ್ಲಿ ಎಲ್ಲ ಪದಾಧಿಕಾರಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಸಂಘದ ನಿರ್ದೇಶಕರಾಗಿ ಸೂರ್ಯಪ್ರಕಾಶ್, ಸುದರ್ಶನ, ದಿನೇಶ್, ಬಕ್ಷೀದ್, ವೈ.ಆರ್. ಪಾಟೀಲ್, ಗಿರೀಶ್, ಮಹಾಂತೇಶ ಹಂಪನ್ನವರ್, ಛಾಯಾ, ಬೃಂದಾ ಟಿ., ಸಿದ್ಧಲಿಂಗೇಶ್ವರ ತಳವಾರ, ಬಿ.ವಿ. ಲಿಂಗನಗೌಡ ಆಯ್ಕೆ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಕೆನರಾ ಬ್ಯಾಂಕ್ केनरा बैंक Canara Bank
ಭಾರತ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ | भारत सरकार का उपक्रम | A Government of India Undertaking
Syndicate
भारत सरकार का उपक्रम (A Govt. Of India undertaking)
Security Cell, P & E Section, G A Wing, Head Office, No. 112, J C Road, Bangalore – 560002

NOTICE FOR SUPPLY, INSTALLATION & CAMC OF ACCESS CONTROL SYSTEM

Fresh tenders are invited for “Supply and installation of New (Additional) Access Control System-Flap Barrier Gates, at HO: JC Road, Bengaluru and its CAMC for 3 years after Warranty period of 2 years”

For further details and other terms and conditions, please visit **Bank's website https://canarabank.com/tenders.aspx**. For any clarifications **contact 080-22221581 extn 245. Last date for submission of tender form is 10/01/2024, 15:30 Hrs.**

Further, all addendum/corrigendum including modification if any, will be hosted at the Bank's website only.

Place: Bengaluru
Date : 13.12.2023

Sd/-
DIVISIONAL MANAGER

UPCOMING PARISHRAMA PU COLLEGE
WITH INTEGRATED NEET, JEE MAINS & KCET TRAINING
Presents
ಪ್ರಜಾವಾಣಿ QUIZ CHAMPIONSHIP
Powered by BHIMA JEWELLERS GOLD • DIAMONDS • SILVER • PLATINUM SINCE 1925

ಬೆಂಗಳೂರಿನ ವಿದ್ಯಾರ್ಥಿಗಳೇ, ಸ್ಪರ್ಧೆಗೆ ಸಿದ್ಧರಾಗಿ!

ಪ್ರಜಾವಾಣಿಯು ಅತ್ಯುತ್ಸಾಹದಿಂದ ನಿಮ್ಮ ನಗರಕ್ಕೆ ಪ್ರಜಾವಾಣಿ ಕ್ವಿಜ್ ಚಾಂಪಿಯನ್‌ಶಿಪ್‌ಗೆ ಕರೆಯನ್ನು ನೀಡುತ್ತಲಿದೆ.

ಬೆಂಗಳೂರಿನ 8 ರಿಂದ 10 ನೇ ತರಗತಿಯ ವಿದ್ಯಾರ್ಥಿಗಳೇ ಇದು ನಿಮ್ಮ ಸಮಯ.

ನಿಮ್ಮ ವಲಯದ ಅತ್ಯುತ್ತಮ ಪ್ರತಿಭೆಗಳೊಂದಿಗೆ ಸ್ಪರ್ಧಿಸಿ ನಗದು ಬಹುಮಾನವನ್ನು ಗೆಲ್ಲುವುದರ ಜೊತೆಗೆ ಗ್ರ್ಯಾಂಡ್ ಫಿನಾಲೆಗೆ ಆಯ್ಕೆಯಾಗಿ ಅತ್ಯಾಕರ್ಷಕ ಬಹುಮಾನಗಳನ್ನು ನಿಮ್ಮದಾಗಿಸಿಕೊಳ್ಳಿ.

ಬೆಂಗಳೂರು ವಲಯದ ಸುತ್ತಿನ ವಿವರಗಳು

ದಿನಾಂಕ	16.12.2023
ಸ್ಥಳ	ವಿವೇಕ ಸಭಾಂಗಣ (ಯುವಕ ಸಂಘ) ಯುವಪಥ, #4, 31ನೇ ಅಡ್ಡ ರಸ್ತೆ, 4ನೇ T ಬ್ಲಾಕ್ ಪೂರ್ವ, 4ನೇ ಬ್ಲಾಕ್, ಜಯನಗರ, ಬೆಂಗಳೂರು, ಕರ್ನಾಟಕ 560011
ಸಮಯ	ಬೆಳಿಗ್ಗೆ 9 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ

ತಕ್ಷಣವೇ ನೋಂದಾಯಿಸಿಕೊಳ್ಳಿ!

QR ಕೋಡನ್ನು ಸ್ಕ್ಯಾನ್ ಮಾಡಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ. ಅಥವಾ www.Prajavani.netಗೆ ಭೇಟಿ ಕೊಡಿ ಇಲ್ಲವೇ, 7338018541 ಈ ನಂಬರ್‌ಗೆ ಸಂಪರ್ಕಿಸಿ.

ಪ್ರವೇಶ ಉಚಿತ

Associate Sponsors: ಸ್ಥಾಪನೆ : 1907 ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್ | Dukes Waffy
TV Partner: asianet ಸುವರ್ಣ ನ್ಯೂಸ್ ನೇರ, ದಿಟ್ಟ, ನಿರಂತರ
Knowledge Partner: QURIOSITY Knowledge Solutions

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರ | ರಾಷ್ಟ್ರೀಯ ಆರೋಗ್ಯ ಅಭಿಯಾನ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

SAANS
ಉಸಿರಾಟ
ನ್ಯುಮೋನಿಯಾ ತೊಲಗಿಸಿ,ಆರೋಗ್ಯವಂತ ಬಾಲ್ಯ ಒದಗಿಸಿ

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಸಾಮಾಜಿಕ ಜಾಗೃತಿ ಅಭಿಯಾನ ಹಾಗೂ ತಾಯಂದಿರ ಹಾಲಿನ ಬ್ಯಾಂಕ್ ಉದ್ಘಾಟನೆ

ಸ್ಥಳ: ಬೆಳಗಾವಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ | **ದಿ:** 13.12.2023 | **ಸಮಯ:** ಬೆಳಿಗ್ಗೆ 10.00

ನ್ಯುಮೋನಿಯಾವು ಬ್ಯಾಕ್ಟೀರಿಯಾ, ವೈರಲ್ ಅಥವಾ ಫಂಗಲ್ ಸೂಕ್ಷ್ಮಜೀವಿಗಳಿಂದ ಉಂಟಾಗುವ ಶ್ವಾಸಕೋಶದ ಸೋಂಕು, ಅದರಿಂದ ಶ್ವಾಸಕೋಶ ಘನೀಕೃತಗೊಂಡು ದುರ್ಬಲವಾಗುತ್ತದೆ.

SAANS ಅಭಿಯಾನದ ಚಟುವಟಿಕೆಗಳು

- 5 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಆರಂಭದಲ್ಲೇ ನ್ಯುಮೋನಿಯಾ ಗುರುತಿಸುವಿಕೆ ಮತ್ತು ವೈದ್ಯಕೀಯ ನಿರ್ವಹಣೆ
- ಆರೋಗ್ಯ ಕಾರ್ಯಕರ್ತರ ಸಾಮರ್ಥ್ಯ ವೃದ್ಧಿ ಮತ್ತು ಆರೋಗ್ಯ ರಕ್ಷಣೆಗೆ ಕೌಶಲ್ಯ ಆಧಾರಿತ ತರಬೇತಿ
- ಆರೋಗ್ಯ ಸಂಸ್ಥೆಗಳಲ್ಲಿ ತೀವ್ರ ನ್ಯುಮೋನಿಯಾ ಪ್ರಕರಣಗಳ ಗುಣಮಟ್ಟದ ನಿರ್ವಹಣೆ
- 5 ವರ್ಷದೊಳಗಿನ ಮಕ್ಕಳಿಗೆ ನ್ಯುಮೋಕೊಕಲ್ ಕಾಂಜುಗೇಟ್ ಲಸಿಕೆ ಪಡೆಯಲು ಪ್ರೋತ್ಸಾಹ

ನ್ಯುಮೋನಿಯಾ ತಡೆಗಟ್ಟುವಿಕೆ

- ಚಳಿಗಾಲದಲ್ಲಿ ಮಕ್ಕಳನ್ನು ಉಣ್ಣೆ ಬಟ್ಟೆಗಳಿಂದ ಬೆಚ್ಚಗಿಡಿ, ಬರಿಗಾಲಿನಲ್ಲಿ ನೆಲದಮೇಲೆ ನಡೆಸಬೇಡಿ
- ನವಜಾತ ಶಿಶುವನ್ನು ಬರಿಮೈನಲ್ಲಿ ಬಿಡಬೇಡಿ
- ಹೊಗೆ ರಹಿತ/ಗ್ಯಾಸ್ ಸ್ಟೌವ್ ನಿಂದ ಅಡುಗೆ ಮಾಡಿ

ನ್ಯುಮೋನಿಯಾ ಗುರುತಿಸುವಿಕೆ

ಉಲ್ಬಣಿಸಿದ ಕೆಮ್ಮು | ಜ್ವರ | ಪಕ್ಕೆ ಸೆಳೆತ | ವೇಗದ ಉಸಿರಾಟ

ಸನ್ಮಾನ್ಯ ಮುಖ್ಯಮಂತ್ರಿಗಳು **ಶ್ರೀ ಸಿದ್ಧರಾಮಯ್ಯ** ರವರ ಜೊತೆ ಮಾನ್ಯ ಆರೋಗ್ಯ ಸಚಿವರಾದ **ಶ್ರೀ ದಿನೇಶ್‌ಗುಂಡೂರಾವ್** ರವರು ಇಲಾಖಾ ಸಭೆಯಲ್ಲಿ ಚರ್ಚಿಸುತ್ತಿರುವುದು

ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ

‘ಅರಣ್ಯ ಪ್ರೇರಕರ ಕಾಯಂಗೊಳಿಸಿ’

ಬೆಂಗಳೂರು: ಅರಣ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅರಣ್ಯ ಪ್ರೇರಕರನ್ನು ಕಾಯಂಗೊಳಿಸಬೇಕೆಂದು ಕರ್ನಾಟಕ ರಾಜ್ಯ ಅರಣ್ಯ ಪ್ರೇರಕರ ಸಂಘ ಆಗ್ರಹಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಸಂಘದ ರಾಜ್ಯ ಘಟಕದ ಅಧ್ಯಕ್ಷ ರಾಜಣ್ಣ ಜಿ., ‘ವಿಶ್ವಬ್ಯಾಂಕ್ ನೆರವಿನ ಸಾಮಾಜಿಕ ಅರಣ್ಯೀಕರಣ ಯೋಜನೆ ಅಡಿ1984–85ರಲ್ಲಿ 2 ವರ್ಷಗಳ ಅವಧಿಗೆ 1,200 ಅರಣ್ಯ ಪ್ರೇರಕರನ್ನು ನೇಮಿಸಿಕೊಳ್ಳಲಾಗಿತ್ತು. 38 ವರ್ಷಗಳಿಂದ ಇಲಾಖೆಯ ವಿವಿಧ ಕೆಲಸಗಳಿಗೆ ಬಳಸಿಕೊಳ್ಳಲಾಗಿದ್ದು, ಯಾವುದೇ ಸರ್ಕಾರಿ ಸೌಲಭ್ಯಗಳನ್ನು ನೀಡಿಲ್ಲ. ಸದ್ಯ ಇಲಾಖೆಯಲ್ಲಿ 450 ಜನ ಅರಣ್ಯ ಪ್ರೇರಕರು ಸಸ್ಯಕೇತ್ರ ನಿರ್ವಹಣೆ, ಕಚೇರಿ ಕೆಲಸ, ಕಂಪ್ಯೂಟರ್ ಆಪರೇಟರ್, ವಾಹನ ಚಾಲನೆ, ಆನೆಗಳ ಓಡಿಸುವುದು, ಗ್ರಾಮ ಅರಣ್ಯ ಸಮಿತಿಗಳ ನಿರ್ವಹಣೆ ಮತ್ತು ನರೇಗಾ ಯೋಜನೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಆದರೆ, ಇವರಿಗೆ ಯಾವುದೇ ರೀತಿಯ ಸೇವಾ ಭದ್ರತೆ, ನಿವೃತ್ತಿಯ ನಂತರ ಪಿಂಚಣಿ, ಇಡುಗಂಟು ಸಹ ನೀಡುತ್ತಿಲ್ಲ’ ಎಂದು ಹೇಳಿದರು.

‘ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳಂತೆ ರಾಜ್ಯದ ಅರಣ್ಯ ಪ್ರೇರಕರನ್ನು ಕಾಯಂಗೊಳಿಸಿ’ ಎಂದು ಆಗ್ರಹಿಸಿದರು.

ಬಿಬಿಎಂಪಿ ಮತ್ತು ಜಲಮಂಡಳಿ ಜಂಟಿಯಾಗಿ ಪರಿಶೀಲನೆ ನಡೆಸಿದರೂ ಕಾರಣ ಗೊತ್ತಾಗಿಲ್ಲ

ವೈಟ್ ಟಾಪಿಂಗ್ ರಸ್ತೆ ಏಳು ಅಡಿ ಕುಸಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವೈಟ್ ಟಾಪಿಂಗ್ ಮಾಡಿದ್ದ ರಸ್ತೆ ಕುಸಿತವಾಗಿದ್ದು, ಇದಕ್ಕೆ ಕಾರಣವನ್ನು ಜಲಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ) ಜೊತೆ ಸೇರಿ ಪರಿಶೀಲಿಸಿದರೂ ಸಮಸ್ಯೆಯ ಕಾರಣ ತಿಳಿದುಬಂದಿಲ್ಲ.

ನಗರದ ಹಲಸೂರು ಕೆರೆ ಬಳಿಯ ಕೆನ್ಸಿಂಗ್ಟನ್ ಜಂಕ್ಷನ್ ಸಮೀಪದ ವೈಟ್‌ಟಾಪಿಂಗ್ ರಸ್ತೆಯಲ್ಲಿ ಶನಿವಾರ ರಾತ್ರಿ ಸಣ್ಣದಾಗಿ ಗುಂಡಿ ಕಾಣಿಸಿಕೊಂಡಿದೆ. ಮಂಗಳವಾರ ಬೆಳಿಗ್ಗೆ ವೇಳೆಗೆ ಸುಮಾರು ಏಳು ಅಡಿ ಆಳಕ್ಕೆ ಮಣ್ಣು ಕುಸಿತವಾಗಿದೆ.

ರಸ್ತೆಯಲ್ಲಿ ಮಣ್ಣು ಕುಸಿತ ಕಂಡ ಸಂಚಾರ ಪೊಲೀಸರು ವಾಹನ ಸಂಚಾರದ ಮಾರ್ಗ ಬದಲಿಸಿ, ಬ್ಯಾರಿಕೇಡ್ ಅಳವಡಿಸಿದ್ದರು.

ಬಿಬಿಎಂಪಿ ಎಂಜಿನಿಯರ್‌ಗಳು ಪರಿಶೀಲನೆ ನಡೆಸಿ, ಜಲಮಂಡಳಿಯ ಪೈಪ್ ಸೋರಿಕೆಯಾಗಿ ಭೂ ಕುಸಿತವಾಗಿದೆ. ಅವರು ದುರಸ್ತಿ ಮಾಡಬೇಕು ಎಂದಿದ್ದಾರೆ. ನಂತರ ಜಲಮಂಡಳಿ ಎಂಜಿನಿಯರ್‌ಗಳು ಸ್ಥಳಕ್ಕೆ ಬಂದು ಪರಿಶೀಲಿಸಿ, ಒಳಚರಂಡಿ ಹಾಗೂ ಕುಡಿಯುವ ನೀರಿನ ಪೈಪ್‌ಗಳಲ್ಲಿ ಸೋರಿಕೆಯಾಗಿಲ್ಲ ಎಂಬುದನ್ನು ಖಚಿತ ಪಡಿಸಿಕೊಂಡರು. ಜೆಸಿಬಿ ಯಂತ್ರದಿಂದ ರಸ್ತೆಯನ್ನು ಅಗೆದು, ಹಳ್ಳವನ್ನು ಮಣ್ಣು, ಕಲ್ಲುಗಳಿಂದ ತುಂಬಿದ್ದಾರೆ. ಬಿಬಿಎಂಪಿ ಎಂಜಿನಿಯರ್‌ಗಳು ಇದರ ಮೇಲೆ ಕಾಂಕ್ರೀಟ್ ಹಾಕುವ ಭರವಸೆ ನೀಡಿದ್ದಾರೆ.

‘ನಗರದ ರಸ್ತೆಗಳು ಯಾವ ಕಾರಣಕ್ಕೆ ಏಕಾಏಕಿ ಕುಸಿಯುತ್ತಿವೆ. ರಸ್ತೆ ಕುಸಿಯಲು ಏನು ಕಾರಣ ಎಂಬುದು ಮಾತ್ರ ನಿಗೂಢವಾಗಿದೆ. ಒಂದು ವರ್ಷದ ಹಿಂದೆಯೇ ಇಲ್ಲಿನ ರಸ್ತೆಗೆ ವೈಟ್ ಟಾಪಿಂಗ್ ಮಾಡಲಾಗಿತ್ತು. ಮಂಗಳವಾರ ರಸ್ತೆ ಕುಸಿದಿದೆ. ಆ ಸಂದರ್ಭದಲ್ಲಿ ವಾಹನಗಳು ಸಂಚಾರ ವಿರಳವಾಗಿತ್ತು. ಆದ್ದರಿಂದ ಯಾವುದೇ ಅನಾಹುತಗಳು ಸಂಭವಿಸಿಲ್ಲ’ ಎಂದು ಸ್ಥಳೀಯರು ತಿಳಿಸಿದರು.

‘ಕೆನ್ಸಿಂಗ್ಟನ್ ರಸ್ತೆಯಲ್ಲಿ ಬಿದ್ದಿರುವ ಗುಂಡಿಯನ್ನು ಬುಧವಾರ ಸಂಜೆಯೊಳಗೆ ಮುಚ್ಚಲಾಗುವುದು. ನಮ್ಮ ಪೈಪ್‌ಗಳಿಂದ ಯಾವುದೇ ರೀತಿಯ ಸೋರಿಕೆಯಾಗಿಲ್ಲ. ಯಾವ ಕಾರಣಕ್ಕೆ ರಸ್ತೆ ಕುಸಿದಿದೆ ಎಂಬುದರ ಬಗ್ಗೆ ಪರಿಶೀಲಿಸಲಾಗುತ್ತಿದೆ’ ಎಂದು ಬಿಡಬ್ಲ್ಯುಎಸ್‌ಎಸ್‌ಬಿ ಮುಖ್ಯ ಎಂಜಿನಿಯರ್ ಗಂಗಾಧರ್ ತಿಳಿಸಿದರು.

‘ಜಲಮಂಡಳಿಯ ಪೈಪಿನ ಸೋರಿಕೆಯಿಂದ ಮಣ್ಣು ಕುಸಿದಿದೆ. ಸುಮಾರು ಏಳು ಅಡಿ ಆಳವಾಗಿದ್ದು, ಜಲಮಂಡಳಿಯವರು ಇದನ್ನು ದುರಸ್ತಿ ಪಡಿಸಬೇಕು. ಮಣ್ಣು ಸವಕಳಿ ಹಾಗೂ ಮಣ್ಣು ಸರಿದಿರುವುದರಿಂದ ಈ ಹಳ್ಳ ಆಗಿರಬೇಕು. ನಿಖರವಾದ ಕಾರಣ ಗೊತ್ತಿಲ್ಲ. ಜಲಮಂಡಳಿಯವರು ಅದನ್ನು ದುರಸ್ತಿ ಪಡಿಸಿದ ಮೇಲೆ ಕಾಂಕ್ರೀಟ್ ಹಾಕಲಾಗುತ್ತದೆ’ ಎಂದು ಬಿಬಿಎಂಪಿ ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ತಿಳಿಸಿದರು.

ಹಲಸೂರು ಕೆರೆ ಬಳಿಯ ಕೆನ್ಸಿಂಗ್ಟನ್ ಜಂಕ್ಷನ್ ಸಮೀಪದ ರಸ್ತೆ ದುರಸ್ತಿ ಮಾಡುತ್ತಿರುವ ಬಿಡಬ್ಲ್ಯುಎಸ್‌ಎಸ್‌ಬಿ ಸಿಬ್ಬಂದಿ –ಪ್ರಜಾವಾಣಿ ಚಿತ್ರ

ವೈಟ್‌ಟಾಪಿಂಗ್ ರಸ್ತೆಯಲ್ಲಿ ಕಂಡಿದ್ದ ಗುಂಡಿ

‘ಶನಿವಾರವೇ ಗುಂಡಿ ಬಿದ್ದಿತ್ತು!’

‘ಕೆನ್ಸಿಂಗ್ಟನ್ ಜಂಕ್ಷನ್ ಸಮೀಪದ ರಸ್ತೆಯಲ್ಲಿ ಶನಿವಾರ ತಡರಾತ್ರಿ ಚಿಕ್ಕ ಗುಂಡಿ ಬಿದ್ದಿತ್ತು. ಸೋಮವಾರದಿಂದ ಗುಂಡಿ ದೊಡ್ಡದಾಗುತ್ತಾ ಹೋಯಿತು. ಈ ಬಗ್ಗೆ ಸ್ಥಳೀಯ ಬಿಬಿಎಂಪಿ ಮತ್ತು ಬಿಡಬ್ಲ್ಯುಎಸ್‌ಎಸ್‌ಬಿ ಅಧಿಕಾರಿಗಳಿಗೆ ಸೋಮವಾರವೇ ಮಾಹಿತಿ ನೀಡಲಾಗಿತ್ತು’ ಎಂದು ಹಲಸೂರು ವಾರ್ಡ್ ಕಮಿಟಿ ಸದಸ್ಯ ಮೋಹನ್ ರಾಜ್ ಸುಬ್ಬಯ್ಯ ತಿಳಿಸಿದರು.

ಸುದ್ದಿ 2 ನಿಮಿಷ

ನಾಯಿ ಕಚ್ಚಿದ್ದ ಪ್ರಕರಣ: ದರ್ಶನ್ ಹೆಸರು ಕೈಬಿಟ್ಟ ಪೊಲೀಸರು

ಬೆಂಗಳೂರು: ಮಹಿಳಾ ವಕೀಲರೊಬ್ಬರಿಗೆ ನಾಯಿ ಕಚ್ಚಿದ್ದ ಪ್ರಕರಣದಲ್ಲಿ ನಟ ದರ್ಶನ್ ಹೆಸರನ್ನು ಆರೋಪಿ ಪಟ್ಟಿಯಿಂದ ಕೈಬಿಟ್ಟಿರುವುದು ಗೊತ್ತಾಗಿದೆ.

ನಟ ದರ್ಶನ್ ಹಾಗೂ ಇತರರ ವಿರುದ್ಧ ರಾಜ ರಾಜೇಶ್ವರಿನಗರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆ ಅಂತಿಮ ಹಂತದಲ್ಲಿದ್ದು, ಪೊಲೀಸರು ನ್ಯಾಯಾಲಯಕ್ಕೆ ಸದ್ಯದಲ್ಲೇ ದೋಷಾರೋಪ ಪಟ್ಟಿ ಸಲ್ಲಿಸಲಿದ್ದಾರೆ.

ನಟ ದರ್ಶನ್ ಮನೆಯ ಸಾಕು ನಾಯಿ, ಬಿಇಎಂಎಲ್ 5ನೇ ಹಂತದ ನಿವಾಸಿಯಾದ ಅಮಿತಾ ಜಿಂದಾಲ್ ಅವರಿಗೆ ಕಚ್ಚಿತ್ತು. ದರ್ಶನ್ ಹಾಗೂ ಇತರರ ವಿರುದ್ಧ ಅಮಿತಾ ಅ. 28ರಂದು ದೂರು ನೀಡಿದ್ದರು.ಘಟನೆ ಸಂಬಂಧ ನಟ ದರ್ಶನ್ ಸೇರಿದಂತೆ ಹಲವರನ್ನು ವಿಚಾರಣೆ ನಡೆಸಿದ್ದ ಪೊಲೀಸರು, ಎಲ್ಲರ ಹೇಳಿಕೆ ದಾಖಲಿಸಿಕೊಂಡಿದ್ದಾರೆ. ನಟ ದರ್ಶನ್ ಹೆಸರನ್ನು ಆರೋಪಿ ಪಟ್ಟಿಯಿಂದ ಕೈಬಿಟ್ಟು ಇತರರ ವಿರುದ್ಧ ಆರೋಪ ಪಟ್ಟಿ ಸಿದ್ಧಪಡಿಸಿರುವುದಾಗಿ ಗೊತ್ತಾಗಿದೆ.

‘ಘಟನೆ ವೇಳೆ ದರ್ಶನ್ ಮನೆಯಲ್ಲಿ ಇರಲಿಲ್ಲ. ನಾಯಿ ದಾಳಿಗೂ ಅವರಿಗೂ ಯಾವುದೇ ಸಂಬಂಧವಿಲ್ಲವೆಂಬುದು ಪುರಾವೆಗಳಿಂದ ಗೊತ್ತಾಗಿದೆ. ಹೀಗಾಗಿ, ಅವರನ್ನು ಪ್ರಕರಣದಿಂದ ಕೈಬಿಡಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಬೇಡಿಕೆ ಈಡೇರಿಸದಿದ್ದರೆ ಮುಷ್ಕರ ಎನ್‌ಎಚ್‌ಎಂ ನೌಕರರ ಎಚ್ಚರಿಕೆ

ಬೆಂಗಳೂರು: ಸೇವಾ ಭದ್ರತೆ ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸದಿದ್ದರೆ ಮುಷ್ಕರ ಕೈಗೊಳ್ಳಲಾಗುವುದು ಎಂದು ಎನ್‌ಎಚ್‌ಎಂ (ರಾಷ್ಟ್ರೀಯ ಆರೋಗ್ಯ ಅಭಿಯಾನ) ನೌಕರರು ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರ ಸಂಘ ಪತ್ರ ಬರೆದಿದೆ.

‘ಸರ್ಕಾರವು ಎನ್‌ಎಚ್‌ಎಂ ನೌಕರರಿಗೆ 2023ರ ಏಪ್ರಿಲ್ ತಿಂಗಳಿಂದ ಶೇ 15ರಷ್ಟು ವೇತನ ಹೆಚ್ಚಳ ಮಾಡಿ, ಆದೇಶ ಹೊರಡಿಸಿದೆ. ಆರ್ಥಿಕ ಇಲಾಖೆಯೂ ಸೆಪ್ಟೆಂಬರ್ ತಿಂಗಳಲ್ಲಿ ಆರೋಗ್ಯ ಇಲಾಖೆಗೆ ಅನುದಾನವನ್ನು ಬಿಡುಗಡೆ ಮಾಡಿತ್ತು. ಆದರೆ, ಈವರೆಗೂ ಅನುದಾನವನ್ನು ಇಲಾಖೆ ಹಾಗೂ ಎನ್‌ಎಚ್‌ಎಂ ಜಿಲ್ಲೆಗಳಿಗೆ ಬಿಡುಗಡೆ ಮಾಡಿಲ್ಲ. ಕೂಡಲೇ ಈ ಬಗ್ಗೆ ಕ್ರಮ ಕೈಗೊಳ್ಳಬೇಕು’ ಎಂದು ಸಂಘದ ಅಧ್ಯಕ್ಷ ಶ್ರೀಕಾಂತ ಸ್ವಾಮಿ ಆಗ್ರಹಿಸಿದ್ದಾರೆ.

‘ಜಿಲ್ಲೆಯಿಂದ ಜಿಲ್ಲೆಗೆ ವರ್ಗಾವಣೆ, ಹೊರಗುತ್ತಿಗೆ ನೌಕರರನ್ನು ಗುತ್ತಿಗೆ ನೌಕರರನ್ನಾಗಿ ನೇಮಕ ಮಾಡಿಕೊಳ್ಳುವುದು, ವೈದ್ಯಕೀಯ ವಿಮೆ ಜಾರಿ ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು. ಕೇಂದ್ರ ಸರ್ಕಾರದಿಂದ ಎನ್‌ಎಚ್‌ಎಂ ನೌಕರರ ಕ್ಷೇಮಾಭಿವೃದ್ಧಿಗೆ ಪ್ರತಿ ವರ್ಷ ₹ 7 ಕೋಟಿ ಅನುದಾನ ಬಿಡುಗಡೆ ಯಾಗುತ್ತಿದೆ. ಈ ಯೋಜನೆಗೂ ಸಹ ಯಾವುದೇ ನೀತಿ ನಿಯಮಗಳನ್ನು ರೂಪಿಸದೆ ಅನುದಾನವನ್ನು ಹಾಗೇ ಉಳಿಸಿಕೊಳ್ಳಲಾಗಿದೆ’ ಎಂದು ಪ್ರಕಟಣೆಯಲ್ಲಿ ಆರೋಪಿಸಿದ್ದಾರೆ.

ಪ್ರಜಾವಾಣಿ

ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ

(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)

ಸಂಪರ್ಕಕ್ಕೆ

8147623791

080 45557204

readerservicecell@deccanherald.co.in

ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ bit.ly/40dPCqy

‘ಮರಗಳ ತೆರವು: ಮಾರ್ಗಸೂಚಿ ಪಾಲನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿರುವ ಅಪಾಯಕಾರಿ ಮರಗಳನ್ನು ತೆರವುಗೊಳಿಸಲು ಪ್ರಮಾಣಿತ ಕಾರ್ಯಾಚರಣೆ ವಿಧಾನ ದಡಿಯಲ್ಲಿ(ಎಸ್‌ಒಪಿ) ಮಾರ್ಗಸೂಚಿಗಳನ್ನು ರೂಪಿಸಲಾಗಿದ್ದು, ಅಧಿಕಾರಿಗಳು ಅವುಗಳನ್ನು ಪಾಲನೆ ಮಾಡುತ್ತಿದ್ದಾರೆ’ ಎಂದು ಬಿಬಿಎಂಪಿ ಹೈಕೋರ್ಟ್‌ಗೆ ತಿಳಿಸಿದೆ.

‘ನಮ್ಮ ಮನೆಯ ಬಳಿ ಇರುವ ಮರ ಯಾವುದೇ ಸಮಯದಲ್ಲಾದರೂ ಬೀಳುವಂತಹ ಸ್ಥಿತಿಯಲ್ಲಿದೆ. ಆದರೂ, ಅಧಿಕಾರಿಗಳು ಅದನ್ನು ತೆರವುಗೊಳಿಸುತ್ತಿಲ್ಲ’ ಎಂದು ಆಕ್ಷೇಪಿಸಿ ನಗರದ ಡಾ.ವಿ.ಎಲ್. ನಂದೀಶ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬಿಬಿಎಂಪಿ ಪರ ವಕೀಲರು, ‘ಎಲ್ಲಾ ವೃಕ್ಷ ಅಧಿಕಾರಿಗಳು ಮತ್ತು ಡಿಸಿಎಫ್‌ಗಳು ಈ ಮಾರ್ಗ ಸೂಚಿ ಪಾಲನೆ ಮಾಡುತ್ತಿದ್ದಾರೆ. ಸ್ಥಳ ಪರಿಶೀಲನೆ ನಡೆಸಿ, ಮರವನ್ನು ತೆರವುಗೊಳಿಸಲಾಗಿದೆ. ತೆರವು ಕಾರ್ಯಾಚರಣೆಗೆ ತಗುಲಿದ್ದ ವೆಚ್ಚವನ್ನು ಮರ ಇದ್ದ ನಿವೇಶನದ ಮಾಲೀಕರಿಂದ ವಸೂಲು ಮಾಡಲಾಗಿದೆ’ ಎಂದು ನ್ಯಾಯಪೀಠಕ್ಕೆ ತಿಳಿಸಿದರು.

ಇದನ್ನು ದಾಖಲಿಸಿಕೊಂಡ ನ್ಯಾಯಪೀಠ ‘ಈ ವ್ಯಾಜ್ಯದ ಮೂಲ ಕಾರಣ ಅಪಾಯಕಾರಿ ಮರ. ಈಗಾಗಲೇ ಪಾಲಿಕೆ ನ್ಯಾಯಾಲಯದ ಸೂಚನೆಯಂತೆ ಆ ಮರವನ್ನು ತೆರವುಗೊಳಿಸಿದೆ. ಆದ್ದರಿಂದ, ಅರ್ಜಿ ವಿಚಾರಣೆ ಮುಂದುವರಿಸುವ ಅಗತ್ಯವಿಲ್ಲ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿ ವಿಲೇವಾರಿ ಮಾಡಿತು.

ಅರ್ಜಿಯಲ್ಲಿ ಏನಿತ್ತು?: ‘ನಮ್ಮ ನೆರೆ ಮನೆಯ ನಿವೇಶನದಲ್ಲಿ ಮರವೊಂದಿದೆ. ಅದು ಅಪಾಯಕಾರಿ ಸ್ಥಿತಿಯಲ್ಲಿದ್ದು, ಅದನ್ನು ತೆರವುಗೊಳಿಸಬೇಕಾಗಿದೆ. ಈ ಬಗ್ಗೆ ನಿವೇಶನದ ಮಾಲೀಕರಿಗೆ ಮನವಿ ಸಲ್ಲಿಸಿದ್ದರೂ ಏನೂ ಪ್ರಯೋಜನವಾಗಿಲ್ಲ. ಮರದಿಂದ ಜೀವ ಹಾನಿಯಾಗುವ ಸಾಧ್ಯತೆ ಇದೆ. ಹಾಗಾಗಿ, ಮರವನ್ನು ತೆರವುಗೊಳಿಸಲು ಅನುಮತಿ ನೀಡಬೇಕು. ಇಲ್ಲವೇ ಮರವನ್ನು ತೆರವುಗೊಳಿಸಲು ನೆರೆ ಮನೆಯವರಿಗೆ ನಿರ್ದೇಶಿಸಬೇಕು’ ಎಂದು ಕೋರಿದ್ದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Engg/ Production Technical

WANTED at BSK II STAGE, BANGALORE
PURCHASE EXECUTIVES
B.Com/ B.Sc/ BE- Freshers- Female only
PPC EXECUTIVES
B.Sc/ Diploma/ BE- EEE/ EC- Female only
PRODUCTION SUPERVISOR
GTTC/ NTTF- 1 - 5 Years Exp.
Vertical Injection Moulding, Cable Harness- Male only
QUALITY EXECUTIVES
BE/ Diploma- EEE/ ECE 1 - 2 Years Exp.
SENIOR QUALITY EXECUTIVE
BE/ Diploma- EEE/ ECE 3 - 5 Years Exp.
Send resume to careers@protectron.in
For details please visit www.protrectron.in

LOOKING FOR AutoCAD &3D Modelling Design Engineer, Site Engineers, Production Manager, Marketing Executives and Account Assistant with Tally, Exp.2-3yrs. M/s.Sugam Met Tech Pvt.Ltd. Near Rajarajeshwari Arch Mysore Road Bangalore 9590112141 9901983100 9590502161 sugamengrs@gmail.com

Hospital & Medical Jobs

IK HOSPITAL (Alipur-Gauribidanur) is Recruiting Gynaecologist, Duty Doctors (Female), OT & Staff Nurses. For details contact: 9036064018.

Graphic Designers

WANTED GRAPHIC Designer Expireinced in Corel Draw in and around Rajajinagar Contact: 9108458798/ 080 -23384085

Multiple Vacancy

OGLAS ADVERTISING SERVICES
REQUIRED
Assistant Marketing Manager - 3 Post.
Qualifi: any Degree, MBA.
Digital Marketing 2 Post.
Qualifi: any Degree in Digital Marketing
Languages: Kannada, English & Hindi.
Experience: 0-3 years
Walk-Interview on 14/12/2023 (Thursday) at 11am to 5pm
Call:8088821239
oglasadvertisingservices@gmail.com

Part-Time Jobs

RETIRED/ VRS Persons Age Above 45 Years Earn 2nd Income 35K To 40K PM. Their Life Here No Retirement: 9886641282/ 7019215243

Accounts & Finance

WANTED ACCOUNTANTS Female, B.Com with 2-3 years Experience in Tally with GST-Knowledge at Peenya Contact: 8151890999. Email:- hr.shrishmotors@gmail.com

SESHADRIPURAM INSTITUTIONS
27, Nagappa Street, Seshadripuram Bengaluru-560 020. Phone: 22955350
Website: www.set.edu.in E-mail : info@set.edu.in
Require
Assistant Manager (Audit)
B. Com., with minimum 10 years experience in Auditing of Accounts in reputed Educational Institutions / Banks / Company with computer knowledge and Tally
Accountant
B. Com., with minimum 2 years experience with computer knowledge and Tally
WALK-IN-INTERVIEW ON
Tuesday, the 19th December 2023 @ 2.30 p. m.
Venue: Seshadripuram Educational Trust Office, No. 27, Nagappa Street, Seshadripuram, Bengaluru-560 020.
Eligible candidates should bring handwritten application along with resume, photos & copies of testimonials at the time of Interview
N. R. Pandith Aradhya, President
Dr. Wooday P. Krishna, Honorary General Secretary

WANTED EXPERIENCED Accountant & Accounts Assistant with Tally, GST filing knowledge. Apply inperson SRIRAM DISTRIBUTOR, No. 729, 10 th Main, Jayanagar 4th Block, Bangalore-11. Mob. 9880343344

WANTED ACCOUNTS Assistant with Tally Knowledge B.Com Below 40 years Known Kannada, English, Hindi in and around Rajajinagar Contact: 9108458798/ 080 -23384085

General

BEST JOBS in best organisations with best Salary. All categories. bengaluru jobs. Quickest ever Placement system. Just Misscall 24/7: 99000-54468

"WANTED BRANCH MANAGERS Female Telecallers Sales-Managers Sales Executives Freelancers Salary: ₹15k to-1Lakh Plus Incentives. 9071615300, 7829956789. Work Location: M.G.Road, RT.Nagar, Vasanthnagar, Mysore Road, Nagawara, Shivajinagar &.Yelahanka. hrjp365@gmail.com

A Leading Real Estate developer is looking for Experienced / Retired / Senior / Independent capacity & 100% Dedicated Revenue/Liaison candidates for Bangalore Office. Mail resumes to developersdirector@gmail.com

WANTED FOR Reputed company Graduates age-30-70, Bangalore only. Earn: 30,000- 50,000. Contact: 9008305194/ 9880441530.

WANTED IMMEDIATELY BUSINESS and Travels EXECUTIVE. Very Good Salary. Ladies Pick/ Drop Contact: 99000-54461/62

COUNTER SALESMAN (Male) 2/3 years experience. For The Raymond Shop Jayanagar Call 22454458 / 26656934

WANTED CIVIL Engineers or Supervisor for Construction Company Contact For Marathahalli: 9916434972. For Hoskote: 9019031288

Creating Job Creators®
I Create, a not- for-profit organization in existence for 23 years, is engaged in training Entrepreneurship skills to retiring Army Veterans. We are looking for Facilitators cum Coordinators for our Business Incubation Centres.
Location: Bangalore & Belgaum
We are looking for people who
- Have Experience in Planning/Managing/ Organizing/Coordinating and Executing the Training Workshops.
- Have Good communication skills in Hindi, English and local language
- Minimum 2 years of experience in the NGO sector.
- Have a Degree and are Computer literate
Selected candidates will be trained in using the unique I Create Methodology and Content. After joining, the candidate will have to conduct training as per I Create norms. Interested candidates may send their CV to info@icreateindia.org within a week.

Teachers/ Professors

SRI KK EDUCATION CENTRE
(Affiliated to CBSE, Aff. No. 830256)
Kadabagere, Magadi Road, Bangalore
RECRUITMENT OF STAFF
PRE-PRIMARY PROGRAMME
Early Childhood Education / NTT/ MTT
PRIMARY & SECONDARY PROGRAMME
◆English ◆Maths◆ Hindi ◆ Social Studies◆Science ◆ Computer Science ◆ Physical Educator
Qualification: B.Ed., M.Ed., B.Sc., BCA, with minimum 3 years of experience.
Submit your application in pdf with a photo to
Email: srikkec@gmail.com | Ph: 9886535292

WANTED TRAINED Post Graduate Teachers for Kannada, English,Physical education,Hindi, Chemistry,Physics, Social Studies, Computer,Science Walk-in Interview on Wednesday 13th December 2023 With The Secretary, Srikrishna International School, ITI-Layout, BSK 3rd Stage Bangalore-85, Phone:26690799.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

Marketing & Sales

KAVI LOGISTICS Wanted Marketing Executive with 5 years Experience & Office Staffs (Male) To work in Cubbonpet and Peenya. Contact: 9738421001/ 9886683188

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

REAL ESTATE SELLING

Commercial Building

Banashankari

OM saravana bhava. Commercial building sale. 15000 sqft over 5 floors. bsk 6th stage. opp omkar Integrated Township Projects land 80 ×60 BDA southfaces 80' rd northfaces 30' rd. 9880296163 BROKERS EXCUSE

Flat

Basavanagudi

SALE 3 BHK FLATS 1550 SQFT (DUPLEX) 1450 SQFT REGULAR FURNISHED PRIME LOCATIONS 9886019240/ 7353330197

House

Mysore

40X60, 3 BHK duplex House for sale Opp Lalitha Mahal, KC Layout, Mysuru, contact: 9448040401

Sites

Bannerghatta Road

SALE INDUSTRIAL Converted Vacant Land Suitable for Commercial & Residential 5220sft/ 7240sft/ 19700sft. Just 600mtrs from Hulimavu Metro Station. VernaDevelopers.com, M.G Road. 9353128035/ 9916310226

REAL ESTATE BUYING

Farm House/ Land/ Resorts

Devanahalli

WANTED LAND in Bangalore North DEVANAHALLI. We are looking for 2 to 5 acres of top-notch property for school with atleast 40-feet wide attractive access road and frontage of 300 feet. Clear Titles & Real Owners. Contact: Sumanth Narayan of Eduweft Services Pvt Ltd. Mobile: 9606353036. Email: info@eduweft.com

RENTAL PROPERTIES

Accommodation Available

Industrial And Factory

SINGASANDRA, HOSUR Road 12,500 sqft new Puff Sheet Warehouse for Rent. 9845223726/ 9901029444/ 9980999336

RENT, PEENYA, 1,10,000 sqft building, E/f, each floor 20000 sqft suitable; Software/ Pharma/ Garments: 9141326819

OTHERS

For Sale

SCHOOL BUS FOR SALE: 1.Make: Swaraj Mazda, Seating Capacity: 24+1, Mfg: 2008 2. Make: Swaraj Mazda, Seating Capacity: 24+1 Mfg: 2010 3. Make: Swaraj Mazda -JCBL, Seating Capacity: 32+1 Mfg: 2011. Genuine buyers contact 8310724356 for inspection.

PUBLIC NOTICE

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರಾದ ಶ್ರೀ ನಾರಾಯಣಸ್ವಾಮಿ . ಎಸ್ ಬಿನ್ ಚನ್ನರಾಯಪ್ಪ, ವಯಸ್ಸು 49 ವರ್ಷ, ವಾಸ : ನಂ. 24, ಗಲಿಬಿಲಿಕೋಟೆ, ಬೆಂಗಳೂರು ಗ್ರಾಮಾಂತರ–561203, ರವರು ದಿನಾಂಕ:30.10.2023ರಂದು ಬೆಂಗಳೂರು ಬಸವೇಶ್ವರ ನಗರ ನೇತಾಜಿ ಗೌಂಡ್ (ಆಟದ ಮೈದಾನ) ಹತ್ತಿರ ಸಂಚರಿಸುತ್ತಿದ್ದಾಗ ದಾಖಲಾತಿಯನ್ನು ಕಳೆದುಕೊಂಡಿದ್ದು ತದನಂತರ ಹುಡುಕಲಾಗಿ ಸಿಗದಿದ್ದಕ್ಕೆ ದಿನಾಂಕ:15.11.2023 ರಂದು ಬೆಂಗಳೂರು ಸಿಟಿ ಯುನಿಟ್ ಪೊಲೀಸ್ ಠಾಣೆಗೆ ಆನ್‌ಲೈನ್ ಮೂಲಕ ದೂರು ಸಲ್ಲಿಸಿದ್ದು. ದೂರಿನ ಸಂಖ್ಯೆ:808614 ಆಗಿರುತ್ತದೆ. ಸದರಿ ಈ ಕೆಳಕಂಡ ವಿಳಾಸಕ್ಕಾಗಲೀ ಹಾಗೂ ಮೇಲ್ಕಂಡ ನನ್ನ ಕಕ್ಷಿದಾರರ ವಿಳಾಸಕ್ಕೆ ತಿಳಿಸತಕ್ಕದ್ದು ಅಥವಾ ಮೊಬೈಲ್ ನಂಬರ್ 9844555119ಗೆ ಸಂಪರ್ಕಿಸತಕ್ಕದ್ದು ಎಂದು ತಮ್ಮಲ್ಲಿ ವಿನಂತಿ.

ಕಳೆದು ಹೋಗಿರುವ ಮೂಲ ದಾಖಲಾತಿಗಳ ವಿವರ

1) ಕ್ರಯಪತ್ರದ ಸಂಖ್ಯೆ: ಬಿಎಲ್‌ಎನ್–1–25005/2004–05 ಕ್ರಯಪತ್ರದ ದಿನಾಂಕ:02.09.2004, 1ನೇ ಪುಸ್ತಕ ಸಿಡಿ ನಂ.ಬಿಎಲ್‌ಎನ್‌ಡಿ 52ನೇದ್ದರಲ್ಲಿ ದಿನಾಂಕ:02.09.2004 ರಂದು ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ಹಿರಿಯ ಉಪನೋಂದಣಾಧಿಕಾರಿಯವರ ಕಛೇರಿಯಲ್ಲಿ ನೋಂದಣಿಯಾಗಿರುವ ಶುದ್ಧ ಕ್ರಯಪತ್ರ, ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಹುಲ್ಲಾಳು ಗ್ರಾಮದ ಸರ್ವೆನಂ.205/1 (ಹಳೆ ಸರ್ವೆನಂ.205) ರಲ್ಲಿ ವಿಂಗಡಿಸಿರುವ ಖಾತಾ ನಂ.156, ಸೈಟ್ ನಂ. 31.

2) ಕ್ರಯಪತ್ರದ ಸಂಖ್ಯೆ:ಎನ್‌ಜಿಬಿ–1–02199/2011–12 ಕ್ರಯಪತ್ರದ ದಿನಾಂಕ: 25.06.2011, 1ನೇ ಪುಸ್ತಕ ಸಿಡಿ ನಂ.ಎನ್‌ಜಿಬಿಡಿ 101ನೇದ್ದರಲ್ಲಿ ದಿನಾಂಕ:25.06.2011ರಂದು ಬೆಂಗಳೂರು ನಾಗರಬಾವಿ ಹಿರಿಯ ಉಪನೋಂದಣಾಧಿಕಾರಿಯವರ ಕಛೇರಿಯಲ್ಲಿ ನೋಂದಣಿಯಾಗಿರುವ ಶುದ್ಧ ಕ್ರಯಪತ್ರ. ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಹುಲ್ಲಾಳು ಗ್ರಾಮದ ಸರ್ವೆನಂ.205/1 (ಹಳೆ ಸರ್ವೆನಂ.205) ರಲ್ಲಿ ವಿಂಗಡಿಸಿರುವ, ಖಾತಾ ನಂ.156, ಸೈಟ್ ನಂ. 31.

ಟಿ.ಆರ್. ಮಂಜಪ್ಪ, ವಕೀಲರು,
ನಂ.654, ಎಫ್1, 1ನೇ ಮಹಡಿ, ರಮಣಿಶ್ರೀ ಕಾಂಪ್ಲೆಕ್ಸ್, 46ನೇ ಅಡ್ಡರಸ್ತೆ, 3ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010. ಮೊಬೈಲ್: 9845331253.
ದಿನಾಂಕ: 12.12.2023. ಸ್ಥಳ : ಬೆಂಗಳೂರು

PERSONAL

Change of Name

CHANGE OF NAME
I, GANESH VASANTH KINI, R/at # 307, KPT SLV Durga Apartments, 8th Cross, Near Jodidar Club, Nanjappa Layout Main Road, Vidyaranyapura Post, Bengaluru-97, have changed my name to GANESH VASANT KINI KULAI vide affidavit dt:11-12-2023, before Notary H. Sridhar Rao, Bengaluru. Henceforth I shall be called GANESH VASANT KINI KULAI only.

VALSALA KUMARY P, Mother/o 6497936H SEP, SUDHEESH KUMAR S, Vill- Mylom, Thamarakudy, Kottarakara, Kollam, Kerala changed name VALSALA KUMARY P to VALSALA KUMARI P, 11/12/2023, Notary K.V. Mani, Bangalore

I, ABHISHEK Muralikrishnan S/o. Muralikrishnan, residing at No. 303 3rd Floor, Aadhisakthi Krupah, Sri Krishna Residence, 7th Cross Kerekodi Main Road, Hosakerehalli, Banashankari 3rd Stage Bangalore- 560085 have changed my name as MIHEEK MORRAHITH S/o. Muralikrishnan vide affidavit dated 11.12.2023 sworn before Notary S. Jayanna, Bangalore.

CHANGE OF NAME
I, KUMUDINI PAPANNA, W/o S. Bheemaraj, R/at/# 366, 2nd Main, 8th Cross, Kodigehalli, Tata Nagar, Bangalore-92, have changed my name to KUMUDINI P vide affidavit dt:23-07-2019, before Notary B.R. Shashikala, Bangalore. Henceforth I shall be called KUMUDINI P only.

I, ANJANAMMA M, R/a #10, M.S. Building, Pattery Road, Frazer Town, Bangalore-05, declare that my name is wrongly mentioned as ANJALI M in some documents, my D.O.B is wrongly mentioned as 06.05.1988 instead of 17.06.1986, vide affidavit dated 08.12.2022 before Notary G.B. Turamari, Bangalore.

CHANGE OF NAME
I, Vijay Kumar, S/o Late Dr V K Pillay, R/o 5092, Sobha Forest View, Vajrahalli Road, Bengaluru 560109, aged 71 years alias K. Vijay Kumar alias Vijay Kumar Krishna alias K. V. Kumar alias Krishna Vijay Kumar have changed my name to Vijay Kumar and are of the same person that is myself. An affidavit to the said effect has been executed by me on 11/12/23 beffore notary G R Rajanna in Bengaluru.

I, PRAKASH CHAND TUKLIYA resident of 290/1, 2nd Cross, Changaiah Layout, 2nd Block, Thyagaraja Nagar, Bengaluru-560028 have changed my name to PRAKASH CHAND vide affidavit dated 08/12/2023 sworn before notary H.Sridhar Rao, Bangalore

AUTOMOTIVE

Four Wheelers Selling

Benz

SINGLE OWNER DOCTORS CAR 9722 KMS ONLY IMMACULATE CONDITION GLA 200 SUV 200D BENZ REGISTRATION 2019. BROKERS EXCUSE. GENUINE BUYERS ONLY CONTACT: 9342819739.

DH DECCAN HERALD ಪ್ರಜಾವಾಣಿ
Classifieds
More value, more impact
JOB HUNT
Get your HIRING NEEDS answered
Get the right people for your company...
Book your Ad with us now !
www.dhclassifieds.com
BOOK NOW
For more details contact:
+91 9900428036
+91 9731810277
080 - 45557163/164

ರಾಷ್ಟ್ರೀಯ ಲೋಕ ಅದಾಲತ್: ಕಕ್ಷಿದಾರರಿಗೆ ಒಟ್ಟು ₹ 1,569 ಕೋಟಿ ಮೊತ್ತದ ಪರಿಹಾರ

25 ಲಕ್ಷಕ್ಕೂ ಹೆಚ್ಚು ಪ್ರಕರಣ ಇತ್ಯರ್ಥ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಾದ್ಯಂತ ಇದೇ 9ರಂದು ನಡೆಸಲಾದ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ 25 ಲಕ್ಷಕ್ಕೂ ಅಧಿಕ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಲಾಗಿದ್ದು, ಒಟ್ಟು ₹ 1,569 ಕೋಟಿ ಮೊತ್ತವನ್ನು ಪರಿಹಾರ ರೂಪದಲ್ಲಿ ಕಕ್ಷಿದಾರರಿಗೆ ನೀಡಲಾಗಿದೆ' ಎಂದು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯ ನಿರ್ವಾಹಕ ಅಧ್ಯಕ್ಷರೂ ಆದ ಹೈಕೋರ್ಟ್ ನ್ಯಾಯಮೂರ್ತಿ ಪಿ.ಎಸ್.ದಿನೇಶ್ ಕುಮಾರ್ ತಿಳಿಸಿದರು.

ಮಂಗಳವಾರ ಮಾಧ್ಯಮಗೋಷ್ಠಿಯಲ್ಲಿ ವಿವರ ನೀಡಿದ ಅವರು, 'ಹೈಕೋರ್ಟ್‌ನ ಮೂರೂ ಪೀಠಗಳು ಸೇರಿದಂತೆ ರಾಜ್ಯದಾದ್ಯಂತ ಒಟ್ಟು 1,022 ಪೀಠಗಳು ಅದಾಲತ್ ನಡೆಸಿವೆ. ಬಾಕಿ ಇದ್ದ 2,24,080 ಪ್ರಕರಣಗಳು ಹಾಗೂ 22,90,263 ವ್ಯಾಜ್ಯಪೂರ್ವ ಪ್ರಕರಣಗಳೂ ಸೇರಿದಂತೆ ಒಟ್ಟು 25,14,343 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ' ಎಂದರು.

'ಹೈಕೋರ್ಟ್ ಕಾನೂನು ಸೇವೆಗಳ ಸಮಿತಿ ಅಧ್ಯಕ್ಷ ನ್ಯಾಯಮೂರ್ತಿ ಎಚ್.ಬಿ.ಪ್ರಭಾಕರ ಶಾಸ್ತ್ರಿ ಅವರು ಬೆಂಗಳೂರು ಪೀಠದಲ್ಲಿ ಲೋಕ್ ಅದಾಲತ್‌ನ ನೇತೃತ್ವ ವಹಿಸಿ 1,087 ಪ್ರಕರಣಗಳನ್ನು ಇತ್ಯರ್ಥಪಡಿಸಿದ್ದಾರೆ. ನ್ಯಾಯಮೂರ್ತಿ ಎಸ್.ಸುನೀಲ್ ದತ್ ಯಾದವ್ ಮತ್ತು ನ್ಯಾಯಾಂಗೇತರ ಸಂಧಾನಕಾರ ಶ್ರೀವತ್ಸ ಹೆಗ್ಡೆ ಅವರನ್ನು ಒಳಗೊಂಡ ಪೀಠವು, 22 ತಕರಾರು ಅರ್ಜಿಗಳನ್ನು ವಿಲೇವಾರಿ ಮಾಡಿದೆ' ಎಂದು ವಿವರಿಸಿದರು.

ಮುಖ್ಯಾಂಶಗಳು

- 1,358 ವೈವಾಹಿಕ ಪ್ರಕರಣ ಇತ್ಯರ್ಥ
- ಮತ್ತೆ ಒಂದಾದ 262 ದಂಪತಿಗಳು

ವಿಶೇಷ ಪ್ರಕರಣಗಳು

- ಬೆಂಗಳೂರಿನ 13 ಮತ್ತು 16ನೇ ಲಘು ವ್ಯಾಜ್ಯಗಳ ನ್ಯಾಯಾಲಯಗಳಲ್ಲಿದ್ದ ಎರಡು ಪ್ರತ್ಯೇಕ ಎಂವಿಸಿ (ಮೋಟಾರು ವಾಹನ ಅಪಘಾತ ಕ್ಲೇಮು) ಪ್ರಕರಣಗಳನ್ನು ಇತ್ಯರ್ಥಪಡಿಸಿ ಕ್ರಮವಾಗಿ ₹ 55 ಲಕ್ಷ ಹಾಗೂ ₹ 49.65 ಲಕ್ಷಕ್ಕೆ ಇತ್ಯರ್ಥಪಡಿಸಲಾಗಿದೆ.
- ಬೆಂಗಳೂರು ಲಘು ವ್ಯಾಜ್ಯಗಳ ಕೋರ್ಟ್‌ನಲ್ಲಿ ಎರಡು ಪ್ರತ್ಯೇಕ ಚೆಕ್ ಬೌನ್ಸ್ ಪ್ರಕರಣಗಳನ್ನು ಇತ್ಯರ್ಥಪಡಿಸಿ ಕ್ರಮವಾಗಿ ₹ 1.18 ಕೋಟಿ ಮತ್ತು ₹ 1.09 ಕೋಟಿ ಪರಿಹಾರ ನೀಡಲಾಗಿದೆ.
- ಚಿತ್ರದುರ್ಗ ಜಿಲ್ಲೆ ಹಿರಿಯೂರಿನ ಹಿರಿಯ ನ್ಯಾಯಾಲಯದಲ್ಲಿದ್ದ ಪಾಲು ವಿಭಾಗ ಪ್ರಕರಣವೊಂದನ್ನು ₹ 57.10 ಲಕ್ಷ, ದಕ್ಷಿಣ ಕನ್ನಡ ಜಿಲ್ಲೆಯ 1ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯದಲ್ಲಿದ್ದ ವಾಣಿಜ್ಯ ಅಮಲ್ಜಾರಿ ಪ್ರಕರಣವನ್ನು ವಿಲೇವಾರಿ ಮಾಡಿ, ₹ 63.07 ಲಕ್ಷ ಪರಿಹಾರ ಕೊಡಿಸಲಾಗಿದೆ.
- ಮಂಡ್ಯ ಜಿಲ್ಲೆಯ ಪ್ರಧಾನ ಸಿವಿಲ್ ನ್ಯಾಯಾಲಯದ ಮುಂದಿದ್ದ 18 ವರ್ಷಗಳ ಹಳೆಯ ಪಾಲು ವಿಭಾಗ ಪ್ರಕರಣ ಮತ್ತು ಚಾಮರಾಜನಗರದ ಹೆಚ್ಚುವರಿ ಸಿವಿಲ್ ಕೋರ್ಟ್‌ನಲ್ಲಿ 11 ವರ್ಷಗಳಿಂದ ಬಾಕಿ ಉಳಿದಿದ್ದ ಪಾಲು ವಿಭಾಗ ಪ್ರಕರಣವನ್ನು ಇತ್ಯರ್ಥಪಡಿಸಲಾಗಿದೆ.

10 ಸಾವಿರ ಚೆಕ್ ಬೌನ್ಸ್ ಕೇಸ್ ವಿಲೇವಾರಿ: 'ಮೋಟಾರು ವಾಹನ ಅಪಘಾತ ಪರಿಹಾರ ಪ್ರಕರಣಗಳಲ್ಲಿ 4,031 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದ್ದು, ಒಟ್ಟು ₹ 209 ಕೋಟಿ ಮೊತ್ತವನ್ನು ಸಂತ್ರಸ್ತರಿಗೆ ಪರಿಹಾರದ ರೂಪದಲ್ಲಿ ಕೊಡಿಸಲಾಗಿದೆ. 10,513 ಚೆಕ್ ಬೌನ್ಸ್, 3,125 ವಿಭಾಗ ದಾವೆ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. 522 ಭೂ ಸ್ವಾಧೀನ ಅಮಲ್ಜಾರಿ (ಎಲ್‌ಎಸಿ ಎಕ್ಸಿಕ್ಯೂಷನ್) ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದ್ದು, ₹ 120 ಕೋಟಿ ಪರಿಹಾರ ವಿತರಣೆ ಮಾಡಲಾಗಿದೆ' ಎಂದು ನ್ಯಾಯಮೂರ್ತಿ ದಿನೇಶ್ ಕುಮಾರ್ ತಿಳಿಸಿದರು.

'839 ಮೋಟಾರು ವಾಹನ ಅಮಲ್ಜಾರಿ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದ್ದು, ₹ 51 ಕೋಟಿ ಪರಿಹಾರ ವಿತರಿಸಲಾಗಿದೆ. ಇತರೆ 3,290 ಅಮಲ್ಜಾರಿ ಪ್ರಕರಣಗಳು ಇತ್ಯರ್ಥವಾಗಿದ್ದು, ₹ 124 ಕೋಟಿ ಪರಿಹಾರ ವಿತರಣೆ ಮಾಡಲಾಗಿದೆ. 28 ರೇರಾ ಪ್ರಕರಣಗಳಲ್ಲಿ ₹ 32 ಲಕ್ಷ ಪರಿಹಾರ, 88 ಗ್ರಾಹಕರ ವ್ಯಾಜ್ಯಗಳ ಪ್ರಕರಣಗಳಲ್ಲಿ ₹ 2.47 ಕೋಟಿ ಪರಿಹಾರ ನೀಡಲಾಗಿದೆ' ಎಂದು ವಿವರಿಸಿದರು.

69 ಶಾಲೆ ಸ್ಥಿತಿ ಅತೃಪ್ತಿದಾಯಕ ಹೈಕೋರ್ಟ್ ಪೀಠಕ್ಕೆ ಮಾಹಿತಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಶೌಚಾಲಯ ಮತ್ತು ಕುಡಿಯುವ ನೀರಿನ ಕೊರತೆ ಎದುರಿಸುತ್ತಿರುವ ರಾಜ್ಯದ 551 ಶಾಲೆಗಳ ಸಮೀಕ್ಷೆ ನಡೆಸಲಾಗಿದ್ದು, ಅವುಗಳಲ್ಲಿ 482 ಶಾಲೆಗಳ ಸ್ಥಿತಿ ತೃಪ್ತಿಕರವಾಗಿದೆ ಮತ್ತು 69 ಶಾಲೆಗಳ ಸ್ಥಿತಿ ತೃಪ್ತಿಕರವಾಗಿಲ್ಲ' ಎಂದು ಶಾಲಾ ಶಿಕ್ಷಣ ಇಲಾಖೆ ಹೈಕೋರ್ಟ್‌ಗೆ ತಿಳಿಸಿದೆ.

ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮರಳಿ ಶಾಲೆಗೆ ಕರೆ ತರುವ ಸಂಬಂಧ ಹೈಕೋರ್ಟ್ ದಾಖಲಿಸಿಕೊಂಡಿರುವ ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು, 'ನ್ಯಾಯಾಲಯದ ನಿರ್ದೇಶನದಂತೆ ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರದ ಪ್ರತಿನಿಧಿಗಳ ಸಮಕ್ಷಮದಲ್ಲಿ ಶಾಲೆಗಳ ಸಮೀಕ್ಷೆ ನಡೆಸಲಾಗಿದೆ. ಎಲ್ಲೆಲ್ಲಿ ಅತೃಪ್ತಿ ವ್ಯಕ್ತಪಡಿಸಲಾಗಿದೆಯೋ ಅಂತಹ ಕಡೆ ಮೂಲಸೌಕರ್ಯ ವೃದ್ಧಿಗೆ ಕ್ರಮ ಕೈಗೊಳ್ಳಲಾಗುತ್ತಿದೆ' ಎಂದು ತಿಳಿಸಿ, ಶಿಕ್ಷಣ ಇಲಾಖೆ ಆಯುಕ್ತರ ವರದಿಯನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು.

ಪ್ರಕರಣದಲ್ಲಿನ ಅಮಿಕಸ್ ಕ್ಯೂರಿಯಾಗಿರುವ (ನ್ಯಾಯಾಲಯಕ್ಕೆ ಸಹಕರಿಸುವ ವಕೀಲ) ಹಿರಿಯ ವಕೀಲ ಕೆ.ಎನ್.ಫಣೀಂದ್ರ, 'ಕಳೆದ ವಿಚಾರಣೆ ವೇಳೆ ನ್ಯಾಯಾಲಯ ಬಿಬಿಎಂಪಿ ವ್ಯಾಪ್ತಿಯಲ್ಲೂ ಶಾಲೆಗಳಲ್ಲಿನ ಮೂಲ ಸೌಕರ್ಯಗಳ ಬಗ್ಗೆ ಸಮೀಕ್ಷೆ ನಡೆಸಲು ಆದೇಶಿಸಿತ್ತು. ಆದರೆ, ಪಾಲಿಕೆಯಿಂದ ಈವರೆವಿಗೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ' ಎಂದರು.

ನಾಗರಿಕ ಸಂಘಟನೆಯ ಮುಖ್ಯಸ್ಥೆ ಕಾತ್ಯಾಯಿನಿ ಚಾಮರಾಜ್, 'ನಮ್ಮ ಸಂಘಟನೆಯ ಕಾರ್ಯಕರ್ತರು ನಗರದ ಚಾಮರಾಜಪೇಟೆಯಲ್ಲಿ ಆರ್‌ಟಿಇ ಕಾಯ್ದೆ ಜಾರಿಯ ಬಗ್ಗೆ ಸಮೀಕ್ಷೆ ನಡೆಸಿದೆ' ಎಂದು ತಿಳಿಸಿ ಅದರ ವಿವರಗಳನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು.

'ಶಿಕ್ಷಣ ಇಲಾಖೆ ಕೇವಲ ಎರಡು ಸಾವಿರ ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ ಎಂದು ಹೇಳುತ್ತಿದೆ. ಆದರೆ, ವಾಸ್ತವದಲ್ಲಿ 15 ಸಾವಿರಕ್ಕೂ ಹೆಚ್ಚು ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ' ಎಂದು ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಶಾಲೆ ಬಿಟ್ಟ ಮಕ್ಕಳ ಅಂಕಿ–ಅಂಶಗಳೂ ಸೇರಿದಂತೆ ಅಗತ್ಯ ಮಾಹಿತಿಗಳನ್ನು ಅಮಿಕಸ್ ಕ್ಯೂರಿ ಅವರಿಗೆ ನೀಡಿ' ಎಂದು ಬಿಬಿಎಂಪಿಗೆ ನಿರ್ದೇಶಿಸಿ ವಿಚಾರಣೆ ಮುಂದೂಡಿತು.

ವಿ. ಸೋಮಣ್ಣ ಪ್ರತಿಷ್ಠಾನದ ವತಿಯಿಂದ ಆಯೋಜಿಸಲಾಗಿದ್ದ ಮಾಜಿ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರ 23ನೇ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಶೈಲಜ ಸೋಮಣ್ಣ ಪುಷ್ಪನಮನ ಸಲ್ಲಿಸಿದರು. ಕನ್ನಡ ಪರ ಹೋರಾಟಗಾರ ಪಾಲನೇತ್ರ, ಮಂಡಲ ಅಧ್ಯಕ್ಷ ವಿಶ್ವನಾಥಗೌಡ, ಮುಖಂಡರಾದ ಚನ್ನಪ್ಪ, ದಾಸೇಗೌಡ, ರೂಪಲಿಂಗೇಶ್ವರ್, ಜಯರತ್ನ, ರತ್ನಮ್ಮ, ಸಿದ್ದಾರ್ಥ, ಕೃಷ್ಣಮೂರ್ತಿ, ಶ್ರೀಧರ್ ಕ್ರಾಂತಿರಾಜು ಭಾಗವಹಿಸಿದ್ದರು

ಗೂಂಡಾ ಕಾಯ್ದೆ: ಆರೋಪಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗೂಂಡಾ ಕಾಯ್ದೆಯಡಿ ಬಂಧಿತನಾಗಿದ್ದ ಆರೋಪಿಗೆ ಆತನಿಗೆ ತಿಳಿದಿರುವ ಭಾಷೆಯಲ್ಲಿ ಬಂಧನ ಆದೇಶದ ದಾಖಲೆಗಳನ್ನು ಒದಗಿಸಿಲ್ಲ' ಎಂಬ ಕಾರಣಕ್ಕೆ ಆತನನ್ನು ಬಿಡುಗಡೆ ಮಾಡುವಂತೆ ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ಬಂಧಿತ, ರೋಷನ್ ಜಮೀರ್ ಅವರ ತಂದೆ ಮೊಹಮ್ಮದ್ ಶಫೀವುಲ್ಲಾ ಸಲ್ಲಿಸಿದ್ದ ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ನ್ಯಾಯಮೂರ್ತಿ ಕೆ.ಸೋಮಶೇಖರ್ ಮತ್ತು ನ್ಯಾಯಮೂರ್ತಿ ಕೆ.ರಾಜೇಶ್ ರೈ ಅವರಿದ್ದ ವಿಭಾಗೀಯ ನ್ಯಾಯಪೀಠ ಮಾನ್ಯ ಮಾಡಿದೆ.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು, 'ಆರೋಪಿಗೆ ಇಂಗ್ಲಿಷ್ ಮತ್ತು ಕನ್ನಡ ಭಾಷೆ ಗೊತ್ತಿದೆ. ಆತ ಕಳ್ಳತನ ಹಾಗೂ ಅಪರಾಧ ಕೃತ್ಯ ಎಸಗುವುದನ್ನೇ ವೃತ್ತಿಯನ್ನಾಗಿ ಮಾಡಿಕೊಂಡಿದ್ದು, 2013ರಿಂದಲೂ ಹಲವು ಅಪರಾಧ ಕೃತ್ಯಗಳನ್ನು ಎಸಗಿದ್ದಾನೆ. ಈತನ ವಿರುದ್ಧ 15 ಪ್ರಕರಣಗಳು ವಿಚಾರಣೆಗೆ ಬಾಕಿ ಇವೆ. ಹಾಗಾಗಿ, ಸಾರ್ವಜನಿಕ ಹಿತದೃಷ್ಟಿಯಿಂದ ಗೂಂಡಾ ಕಾಯ್ದೆ ಅಡಿಯಲ್ಲಿ ಬಂಧಿಸಲಾಗಿದೆ' ಎಂದು ವಾದ ಮಂಡಿಸಿದ್ದರು.

ಈ ವಾದವನ್ನು ಅಲ್ಲಗಳೆದಿದ್ದ ಅರ್ಜಿದಾರರ ಪರ ವಕೀಲರು, 'ಆರೋಪಿಯು ಅರೇಬಿಕ್ ಶಾಲೆಯಲ್ಲಿ ಎರಡನೇ ತರಗತಿವರೆಗೆ ಓದಿದ್ದು ಅರೇಬಿಕ್ ಮತ್ತು ಉರ್ದು ಕಲಿತಿದ್ದಾನೆ. ಇತರೆ ಭಾಷೆಗಳು ತಿಳಿದಿಲ್ಲ. ಅಂತೆಯೇ, ಆತ ಓದಿರುವುದು ಕೇವಲ 3 ವರ್ಷ ಮಾತ್ರ. ಸಂವಿಧಾನದ 22(5)ನೇ ವಿಧಿಯ ಪ್ರಕಾರ ಅಧಿಕಾರಿಗಳು ಯಾವುದೇ ಬಂಧಿತ ಆರೋಪಿಗೆ ಆತನಿಗೆ ತಿಳಿದಿರುವ ಭಾಷೆಯಲ್ಲಿ ಬಂಧನದ ಆದೇಶದ ದಾಖಲೆಗಳನ್ನು ಒದಗಿಸಬೇಕು. ಆದರೆ, ಈ ಪ್ರಕರಣದಲ್ಲಿ ಅವರು ವಿಫಲವಾಗಿದ್ದಾರೆ' ಎಂದು ಪ್ರತಿವಾದ ಮಂಡಿಸಿದ್ದರು.

ಅರ್ಜಿದಾರರ ಪರ ವಕೀಲರ ವಾದ ಮಾನ್ಯ ಮಾಡಿರುವ ನ್ಯಾಯಪೀಠ ಬಂಧಿತನ ಬಿಡುಗಡೆಗೆ ಆದೇಶಿಸಿದೆ.

ದೀಪೋತ್ಸವ ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಯಡೆಯೂರಿನಲ್ಲಿ 38ನೇ ವರ್ಷದ ಲಕ್ಷದೀಪೋತ್ಸವ ಮಂಗಳವಾರ ವಿಜೃಂಭಣೆಯಿಂದ ಜರುಗಿತು. ರಾಜ್ಯದ ವಿವಿಧೆಡೆಯಿಂದ ಬಂದಿದ್ದ ಸಾವಿರಾರು ಭಕ್ತರು ಸಂಭ್ರಮದಲ್ಲಿ ಭಾಗಿಯಾದರು

'ಪ್ರಜಾವಾಣಿ' ಕ್ಯಾಲೆಂಡರ್ ಬಿಡುಗಡೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಶುಭ ಸಮಾರಂಭಗಳಲ್ಲಿ ಒಳ್ಳೆಯ ಪುಸ್ತಕಗಳನ್ನು ಉಡುಗೊರೆಯಾಗಿ ನೀಡಿ ಪುಸ್ತಕ ಸಂಸ್ಕೃತಿ ಬೆಳೆಸಲು ಪ್ರೋತ್ಸಾಹಿಸಬೇಕು. ಇದರಿಂದ ಓದುವ ಹವ್ಯಾಸ ಬೆಳೆಸುವ ಆದರ್ಶ ಕಾರ್ಯ ಎಂದು ಶಾಸಕ ಎಸ್. ಮುನಿರಾಜು ತಿಳಿಸಿದರು.

ಬಾಗಲಗುಂಟೆಯಲ್ಲಿ ನಡೆದ 'ಅಭಿಮಾನೋತ್ಸವ'ದಲ್ಲಿ ನೂತನ ವರ್ಷ 2024ರ 'ಪ್ರಜಾವಾಣಿ' ಕ್ಯಾಲೆಂಡರ್ ಬಿಡುಗಡೆ ಮಾಡಿ ಮಾತನಾಡಿದರು.

'ಸಂಘ–ಸಂಸ್ಥೆಗಳು, ಗಣ್ಯರು, ಸಾಹಿತಿಗಳು, ಅಭಿಮಾನಿಗಳು ಪುಸ್ತಕಗಳನ್ನು ನೀಡಿ ಶುಭ ಕೋರಿದ್ದಾರೆ. ಇವುಗಳನ್ನು ನಾನು ಸರ್ಕಾರಿ ಶಾಲಾ-ಕಾಲೇಜುಗಳಿಗೆ ನೀಡುತ್ತೇನೆ' ಎಂದರು.

ಸಾಹಿತಿ ವೈ.ಬಿ.ಎಚ್. ಜಯದೇವ್ ಮಾತನಾಡಿ, 'ಇದೊಂದು ಸ್ವಾಗತಾರ್ಹ ಬದಲಾವಣೆ. ನಮ್ಮ ಕ್ಷೇತ್ರದ ಶಾಸಕರು ತಮ್ಮ ಹುಟ್ಟಿದ ಹಬ್ಬದ ಆಚರಣೆಯ ಸಂದರ್ಭದಲ್ಲಿ ಪುಸ್ತಕಗಳನ್ನು ಉಡುಗೊರೆಯಾಗಿ ಪಡೆಯುವ ಈ ವಿನೂತನ ಸಂಪ್ರದಾಯವು ನಿಜಕ್ಕೂ ಸ್ತುತ್ಯಾರ್ಹ' ಎಂದರು.

ಕತೆಗಾರ ಕಂನಾಡಿಗಾ ನಾರಾಯಣ ಮಾತನಾಡಿ, 'ಜನಪ್ರತಿನಿಧಿಗಳು ತಮ್ಮ ಜನುಮದಿನ, ಶುಭ ಸಮಾರಂಭಗಳಲ್ಲಿ ಈ ರೀತಿ ಪುಸ್ತಕ ಉಡುಗೊರೆಯಾಗಿ ಪಡೆದರೆ ಸಾಹಿತಿಗಳು ಮತ್ತು ಪ್ರಕಾಶಕರಿಗೆ ಪ್ರೋತ್ಸಾಹಿದಂತಾಗುತ್ತದೆ' ಎಂದರು.

ಕ್ಷೇತ್ರದ ಬಿಜೆಪಿ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ವಿಜಯಕುಮಾರ್, ಭರತ್ ಸೌಂದರ್ಯ ನೇತೃತ್ವದಲ್ಲಿ ಸಪ್ತಗಿರಿ ಆಸ್ಪತ್ರೆಯಲ್ಲಿ ಶಾಸಕ ಮುನಿರಾಜು ಅವರು ಹಣ್ಣು ಹಂಪಲು ವಿತರಣೆ ಮಾಡಿದರು.

ಶಾಸಕ ಎಸ್. ಮುನಿರಾಜು ಅವರ ಅಭಿಮಾನೋತ್ಸವದಲ್ಲಿ 'ಪ್ರಜಾವಾಣಿ' ಕ್ಯಾಲೆಂಡರ್ ಅನ್ನು ಗಣ್ಯರು ಬಿಡುಗಡೆ ಮಾಡಿದರು. ಶಾಸಕ ಎಸ್. ಮುನಿರಾಜು, ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಜಿ.ಮರಿಸ್ವಾಮಿ, ಸಾಹಿತಿ ವೈಬಿಯ ಜಯದೇವ್, ಕತೆಗಾರ ಕಂನಾಡಿಗಾ ನಾರಾಯಣ, ವೀರಶೈವ ಮುಖಂಡ ಬಸವರಾಜಣ್ಣ, ಮೂರ್ತಿ ಪಾಲ್ಗೊಂಡಿದ್ದರು

'ಬುಲ್ಡೋಜರ್' ಕಾರ್ಯಾಚರಣೆಗೆ ಆಗ್ರಹ

ವಿಧಾನಸಭೆ: ಬೆಳಗಾವಿ ತಾಲ್ಲೂಕಿನಲ್ಲಿ ಮಹಿಳೆಯನ್ನು ವಿವಸ್ತ್ರಗೊಳಿಸಿ ಹಲ್ಲೆ ನಡೆಸಿದ ಆರೋಪಿಗಳ ವಿರುದ್ಧ ಉತ್ತರ ಪ್ರದೇಶದ ಮಾದರಿಯಲ್ಲಿ 'ಬುಲ್ಡೋಜರ್' ಕಾರ್ಯಾಚರಣೆ ನಡೆಸಬೇಕು ಎಂದು ಬಿಜೆಪಿಯ ವಿ. ಸುನಿಲ್ ಕುಮಾರ್ ಆಗ್ರಹಿಸಿದರು.

ಮಂಗಳವಾರ ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, 'ಈ ಕೃತ್ಯ ಅಮಾನವೀಯ. ಆರೋಪಿಗಳ ಮನೆಗಳನ್ನು ಬುಲ್ಡೋಜರ್‌ಗಳಿಂದ ನೆಲಸಮಗೊಳಿಸಿ. ಆಗ ಮಾತ್ರ ಜನರಲ್ಲಿ ಕಾನೂನಿನ ಭಯ ಇರುತ್ತದೆ' ಎಂದರು.

ಏಳು ಮಂದಿ ಬಂಧನ: ಉತ್ತರ ನೀಡಿದ ಗೃಹ ಸಚಿವ ಜಿ. ಪರಮೇಶ್ವರ, 'ಘಟನೆ ನಡೆದ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದೇನೆ. ಸಂತ್ರಸ್ತ ಮಹಿಳೆಯನ್ನೂ ಭೇಟಿಮಾಡಿ ಧೈರ್ಯ ತುಂಬುವ ಯತ್ನ ಮಾಡಿದ್ದೇನೆ. ಪ್ರಕರಣ ಸಂಬಂಧ ಏಳು ಆರೋಪಿಗಳನ್ನು ಈಗಾಗಲೇ ಬಂಧಿಸಲಾಗಿದೆ' ಎಂದರು.

ಕೆರೆಗೆ ಕೊಳಚೆ ನೀರು: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಯಲಹಂಕ: ವಾಣಿಜ್ಯ ಕಟ್ಟಡಗಳ ಕೊಳಚೆ ನೀರನ್ನು ಸಂಸ್ಕರಣೆ ಮಾಡದೆ ಚಿಕ್ಕಜಾಲ ಕೆರೆಗೆ ಹರಿಸಲಾಗುತ್ತಿದೆ. ಇದಕ್ಕೆ ಅನುಮತಿ ನೀಡಿರುವ ಚಿಕ್ಕಜಾಲ ಪಿಡಿಒ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಕೊಳಚೆ ನೀರು ಸಂಸ್ಕರಣಾ ಘಟಕದ ಎದುರು ಸ್ಥಳೀಯರು ಪ್ರತಿಭಟನೆ ನಡೆಸಿದರು.

ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಉದಯ ಶಂಕರ್ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು.

'ಚಿಕ್ಕಜಾಲ ಪಂಚಾಯಿತಿ ವ್ಯಾಪ್ತಿಯಲ್ಲಿರುವ ವಾಣಿಜ್ಯ ಕಟ್ಟಡದಿಂದ ಹೊರಬರುವ ಕೊಳಚೆನೀರನ್ನು ಸಂಸ್ಕರಣೆ ಮಾಡದೇ ಅನಧಿಕೃತವಾಗಿ ಕೆರೆಗೆ ಹರಿಸಲಾಗುತ್ತಿದೆ. ಪಂಚಾಯಿತಿ ಅಧ್ಯಕ್ಷರು ಹಾಗೂ ಸದಸ್ಯರ ಗಮನಕ್ಕೂ ತಾರದೆ, ಹಣ ಪಡೆದು ವಾಣಿಜ್ಯ ಉದ್ದೇಶಕ್ಕೆ ಅನುಮತಿ ನೀಡುವ ಮೂಲಕ ಭ್ರಷ್ಟಾಚಾರ ನಡೆಸಲಾಗುತ್ತಿದೆ. ಈ ಅಕ್ರಮದಲ್ಲಿ ಪಿಡಿಒ ಶಾಮೀಲಾಗಿದ್ದಾರೆ' ಎಂದು ಉದಯಶಂಕರ್ ಆರೋಪಿಸಿದರು.

ಸ್ಥಳೀಯ ನಿವಾಸಿ ಜಾಲ ಕಿಟ್ಟಿ ಮಾತನಾಡಿ, ಶುದ್ಧೀಕರಿಸದೆ ಬಿಡುತ್ತಿರುವ ಕೊಳಚೆನೀರು ಮುಂದಿನ ಕೆರೆಗಳಿಗೂ ಹರಿಯುತ್ತಿದ್ದು, ಸುತ್ತಮುತ್ತ ಪ್ರದೇಶಗಳಲ್ಲಿ ದುರ್ವಾಸನೆ ಹರಡುತ್ತಿದೆ ಎಂದು ಹೇಳಿದರು.

ಪ್ರಜಾ ವಿಮೋಚನಾ ಚಳವಳಿ(–ಸ್ವಾಭಿಮಾನ) ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷ ಮುನಿಆಂಜಿನಪ್ಪ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ರವಿಕುಮಾರ್, ಮುಖಂಡರಾದ ರಾಮಕೃಷ್ಣ, ಪ್ರೇಮ್‌ಕುಮಾರ್ ಉಪಸ್ಥಿತರಿದ್ದರು.

ಚಿಕ್ಕಜಾಲ ಕೆರೆಗೆ ಹರಿಯುತ್ತಿರುವ ಕೊಳಚೆ ನೀರು ತಡೆಯುವಂತೆ ಆಗ್ರಹಿಸಿ ನಾಗರಿಕರು ಪ್ರತಿಭಟನೆ ನಡೆಸಿದರು

3 ಬಾರಿ ನೋಟಿಸ್

ತ್ಯಾಜ್ಯದ ನೀರು ಸಂಸ್ಕರಣಾ ಘಟಕವನ್ನು ತಗ್ಗುಪ್ರದೇಶದಲ್ಲಿ ನಿರ್ಮಿಸಿರುವುದರಿಂದ ಹೆಚ್ಚಿನ ಮಳೆ ಸುರಿದ ಸಂದರ್ಭದಲ್ಲಿ ಈ ಪ್ರದೇಶದಲ್ಲಿ ನೀರು ತುಂಬಿಕೊಂಡು ಸಮಸ್ಯೆಯಾಗುತ್ತಿದೆ. ಉಳಿದಂತೆ ತ್ಯಾಜ್ಯ ನೀರು ಸಂಸ್ಕರಣೆಯಾಗಿ ಹೋಗುತ್ತಿದ್ದು, ಪಂಚಾಯಿತಿಯಿಂದ ಘಟಕದ ನಿರ್ವಹಣೆ ಮಾಡಲಾಗುತ್ತಿದೆ. ತ್ಯಾಜ್ಯನೀರು ಕೆರೆಗೆ ಹರಿಸದಂತೆ ವಾಣಿಜ್ಯ ಕಟ್ಟಡ ನಡೆಸುತ್ತಿರುವವರಿಗೆ 3 ಬಾರಿ ನೋಟಿಸ್ ನೀಡಲಾಗಿದೆ. ಅವರು ನ್ಯಾಯಾಲಯದ ಮೊರೆ ಹೋಗಿದ್ದಾರೆ ಎಂದು ಪಿಡಿಒ ವೆಂಕಟೇಶ್ ತಿಳಿಸಿದ್ದಾರೆ.

ಧರಣಿ ಹಿಂಪಡೆದ ಬಿಜೆಪಿ

ವಿಧಾನ ಮಂಡಲದಲ್ಲಿ

ವಿಧಾನಸಭೆ: ಸಭಾಧ್ಯಕ್ಷರ ಪೀಠ ಕುರಿತು ತೆಲಂಗಾಣ ವಿಧಾನಸಭಾ ಚುನಾವಣಾ ಪ್ರಚಾರದಲ್ಲಿ ಮಾತನಾಡಿದ್ದ ವಸತಿ ಸಚಿವ ಬಿ.ಜೆಡ್. ಜಮೀರ್ ಅಹಮದ್ ಖಾನ್ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಸೋಮವಾರ ಬೆಳಿಗ್ಗೆಯಿಂದ ಧರಣಿ ನಡೆಸುತ್ತಿದ್ದ ಬಿಜೆಪಿ ಸದಸ್ಯರು ಮಂಗಳವಾರ ಕಲಾಪ ಆರಂಭವಾಗುತ್ತಿದ್ದಂತೆಯೇ ಪ್ರತಿಭಟನೆ ಹಿಂಪಡೆದರು.

ಬೆಳಿಗ್ಗೆ 9.40ಕ್ಕೆ ಕಲಾಪ ಆರಂಭವಾಯಿತು. ಆಗ, ಬಿಜೆಪಿ ಸದಸ್ಯರು ಸಭಾಧ್ಯಕ್ಷರ ಪೀಠದ ಎದುರು ಧರಣಿ ಮುಂದುವರಿಸಿದ್ದರು. ಮಧ್ಯ ಪ್ರವೇಶಿಸಿದ ಗೃಹ ಸಚಿವ ಜಿ. ಪರಮೇಶ್ವರ, 'ದೇಶದ ಜನರು ನಮ್ಮನ್ನು ಗಮನಿಸುತ್ತಿದ್ದಾರೆ. ಧರಣಿ ಹಿಂಪಡೆಯಿರಿ. ಚರ್ಚೆಗೆ ಅವಕಾಶವಿದೆ. ಸದನದ ಕಲಾಪವನ್ನು ಸುಗಮವಾಗಿ ನಡೆಸಲು ಅವಕಾಶ ಮಾಡಿಕೊಡಿ' ಎಂದು ಮನವಿ ಮಾಡಿದರು.

ವಿರೋಧ ಪಕ್ಷದ ನಾಯಕ ಆರ್. ಅಶೋಕ ಮಾತನಾಡಿ, 'ಗೃಹ ಸಚಿವರು ಬಹಳ ತಡವಾಗಿ ಮನವಿ ಮಾಡಿದ್ದಾರೆ. ಸೋಮವಾರ ಇಡೀ ದಿನ ಸರ್ಕಾರ ಹಟಕ್ಕೆ ಬಿದ್ದು ನಮ್ಮನ್ನು ಸತಾಯಿಸಿತು. ಯಾವುದಕ್ಕೂ ನಮಗೆ ಬೇಸರವಿಲ್ಲ. ಎಲ್ಲದಕ್ಕಿಂತಲೂ ಮುಖ್ಯವಾಗಿ ಸಭಾಧ್ಯಕ್ಷರ ಪೀಠಕ್ಕೆ ಕಳಂಕ ಅಂಟಬಾರದು ಎಂಬುದು ನಮ್ಮ ಕಾಳಜಿ. ಸ್ಪೀಕರ್ ಅವರು ಈ ಪ್ರಕರಣದಲ್ಲಿ ತಮ್ಮ ನಿಲುವು ಪ್ರಕಟಿಸಲಿ' ಎಂದು ಆಗ್ರಹಿಸಿದರು.

'ನಾನು ಈ ಹಿಂದೆಯೇ ನನ್ನ ನಿಲುವನ್ನು ಬಹಿರಂಗಪಡಿಸಿದ್ದೇನೆ. ಈಗ ಧರಣಿ ಮುಕ್ತಾಯಗೊಳಿಸಿ. ನಿಯಮ 69ರ ಅಡಿಯಲ್ಲಿ ಚರ್ಚೆಗೆ ಅವಕಾಶ ನೀಡಲಾಗುವುದು' ಎಂದು ಸ್ಪೀಕರ್ ಹೇಳಿದರು. ಬಳಿಕ ಬಿಜೆಪಿ ಸದಸ್ಯರು ಧರಣಿ ಅಂತ್ಯಗೊಳಿಸಿದರು.

ಗೃಹರಕ್ಷಕರ ಭತ್ಯೆ ಪರಿಷ್ಕರಣೆಗೆ ಚಿಂತನೆ

ಪ್ರಜಾವಾಣಿ ವಾರ್ತೆ

ವಿಧಾನಸಭೆ: ಗೃಹ ರಕ್ಷಕ ದಳದ ಸಿಬ್ಬಂದಿಗೆ ನೀಡುತ್ತಿರುವ ಕರ್ತವ್ಯ ಭತ್ಯೆಯನ್ನು ಪರಿಷ್ಕರಿಸಲು ಚಿಂತನೆ ನಡೆದಿದೆ ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಬಿಜೆಪಿಯ ಶಶಿಕಲಾ ಜೊಲ್ಲೆ ಅವರ ಪ್ರಶ್ನೆಗೆ ಮಂಗಳವಾರ ಉತ್ತರಿಸಿದ ಸಚಿವರು, 'ರಾಜ್ಯದಲ್ಲಿ 21,327 ಪುರುಷರು ಮತ್ತು 4,555 ಮಹಿಳೆಯರು ಗೃಹ ರಕ್ಷಕ ಸಿಬ್ಬಂದಿಯಾಗಿ ಕಾರ್ಯನಿರ್ವಹಿಸಲು ನೋಂದಣಿ ಮಾಡಿಸಿಕೊಂಡಿದ್ದಾರೆ. ಈ ಎಲ್ಲ 25,882 ಮಂದಿಗೂ ಸಮಾನವಾಗಿ ಕರ್ತವ್ಯ ಭತ್ಯೆ ನಿಗದಿಪಡಿಸಲು ಯೋಚಿಸಲಾಗಿದೆ' ಎಂದರು.

ಈಗ ಪೊಲೀಸ್ ಇಲಾಖೆಯಲ್ಲಿ ಸೇವೆ ಒದಗಿಸುವ ಗೃಹ ರಕ್ಷಕರಿಗೆ ದಿನವೊಂದಕ್ಕೆ ₹ 750 ಮತ್ತು ಇತರ ಇಲಾಖೆಗಳಲ್ಲಿ ₹ 600 ನೀಡಲಾಗುತ್ತಿದೆ. ಪಹರೆ ಕರ್ತವ್ಯಕ್ಕೆ ನಿಯೋಜಿಸುವವರಿಗೆ ಬೆಂಗಳೂರಿನಲ್ಲಿ ₹ 455 ಮತ್ತು ಇತರೆ ಸ್ಥಳಗಳಲ್ಲಿ ₹ 380 ನೀಡಲಾಗುತ್ತಿದೆ. ಎಲ್ಲ ಗೃಹ ರಕ್ಷಕ ಸಿಬ್ಬಂದಿಗೂ ಸಮಾನವಾಗಿ ₹ 750 ನೀಡಲಾಗುವುದು. ನಂತರ ಇತರ ರಾಜ್ಯಗಳಲ್ಲಿ ನೀಡುತ್ತಿರುವ ಕರ್ತವ್ಯ ಭತ್ಯೆಯನ್ನು ಪರಿಶೀಲಿಸಿ ರಾಜ್ಯದಲ್ಲೂ ಪರಿಷ್ಕರಣೆ ಮಾಡಲಾಗುವುದು ಎಂದು ತಿಳಿಸಿದರು.

ಶೇ 80 ರಷ್ಟು ವಸತಿ ಗುರಿ: ಪೊಲೀಸ್ ಇಲಾಖೆ ಸಿಬ್ಬಂದಿಯಲ್ಲಿ ಶೇಕಡ 40 ರಷ್ಟು ಮಂದಿಗೆ ವಸತಿ ಸೌಕರ್ಯ ಕಲ್ಪಿಸಲಾಗಿದೆ. ಪೊಲೀಸ್ ವಸತಿಗೃಹ ಯೋಜನೆಯಡಿ 2025ರ ವೇಳೆಗೆ ಶೇ 80ರಷ್ಟು ಪೊಲೀಸರಿಗೆ ವಸತಿ ಸೌಕರ್ಯ ಕಲ್ಪಿಸುವ ಗುರಿ ಇದೆ ಎಂದು ಕಾಂಗ್ರೆಸ್‌ನ ಡಿ.ಜಿ. ಶಾಂತನಗೌಡ ಪ್ರಶ್ನೆಗೆ ಉತ್ತರಿಸಿದರು.

ಬಿಜೆಪಿಯ ಬಾಲಚಂದ್ರ ಜಾರಕಿಹೊಳಿ ಪ್ರಶ್ನೆಗೆ ಉತ್ತರಿಸಿದ ಪರಮೇಶ್ವರ, 'ರಾಜ್ಯದ ಹಲವು ತಾಲ್ಲೂಕುಗಳಲ್ಲಿ ಅಗ್ನಿಶಾಮಕ ಠಾಣೆಗಳನ್ನು ಆರಂಭಿಸಬೇಕೆಂಬ ಬೇಡಿಕೆಗಳು ಬಂದಿವೆ. ಮುಂದಿನ ವರ್ಷದ ಬಜೆಟ್‌ನಲ್ಲಿ ಅನುದಾನ ಒದಗಿಸುವಂತೆ ಮುಖ್ಯಮಂತ್ರಿಯವರಿಗೆ ಪ್ರಸ್ತಾವ ಸಲ್ಲಿಸಲಾಗುವುದು' ಎಂದರು.

ಉದ್ಯಾನ ಜಮೀನು ಒತ್ತುವರಿ ತೆರವಿಗೆ ಆಗ್ರಹ

ವಿಧಾನಸಭೆ: ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪ್ರಭಾವಿ ವ್ಯಕ್ತಿಗಳ ಹೆಸರು ಬಳಸಿಕೊಂಡು ಉದ್ಯಾನಗಳ ಜಮೀನುಗಳನ್ನು ಕಬಳಿಸುತ್ತಿದ್ದು, ತಕ್ಷಣ ಒತ್ತುವರಿ ತೆರವು ಮಾಡಬೇಕು ಎಂದು ಬಿಜೆಪಿಯ ಮುನಿರತ್ನ ಆಗ್ರಹಿಸಿದರು.

ಕ್ಷೇತ್ರದ ವ್ಯಾಪ್ತಿಯ ಉದ್ಯಾನಗಳ ನಿರ್ವಹಣೆ ಮತ್ತು ಉದ್ಯಾನಗಳಿಗೆ ಮೀಸಲಿಟ್ಟ ಜಮೀನಿನ ವಿವರ ಕುರಿತ ಪ್ರಶ್ನೆಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಂಗಳವಾರ ಉತ್ತರಿಸಿದರು. ಆಗ, ಒತ್ತುವರಿ ವಿಷಯ ಪ್ರಸ್ತಾಪಿಸಿದ ಮುನಿರತ್ನ, 'ನನ್ನ ಕ್ಷೇತ್ರದ ವಾರ್ಡ್ ಸಂಖ್ಯೆ 72ರ ವ್ಯಾಪ್ತಿಯ ಪ್ರಮೋದ್ ಬಡಾವಣೆಯಲ್ಲಿ 2 ಎಕರೆ ಉದ್ಯಾನ ಜಮೀನನ್ನು ಕೆಲವರು ಕಬಳಿಸಿದ್ದಾರೆ. ತೆರವು ಕಾರ್ಯಾಚರಣೆಗೆ ಹೋದರೆ ಪ್ರಭಾವಿ ವ್ಯಕ್ತಿಯ ಫೋಟೊ ತೋರಿಸುತ್ತಿದ್ದಾರೆ' ಎಂದರು.

ಎರಡು ಎಕರೆ ಜಮೀನಿನಲ್ಲಿ ಉದ್ಯಾನ ನಿರ್ಮಾಣದ ಕಾಮಗಾರಿಗೆ ಸಿದ್ಧತೆ ನಡೆದಿತ್ತು. ದಿಢೀರನೆ ಕೆಲವರು ನ್ಯಾಯಾಲಯದ ಆದೇಶ ತೋರಿಸಿ ಜಮೀನು ಕಬಳಿಸಿದ್ದಾರೆ. ಇನ್ನೂ ಹಲವು ಉದ್ಯಾನಗಳ ಜಮೀನುಗಳನ್ನೂ ಒತ್ತುವರಿ ಮಾಡಲಾಗಿದೆ. ಕೆಲವು ಕಡೆಗಳಲ್ಲಿ ಉದ್ಯಾನ ಮತ್ತು ಆಟದ ಉಪಕರಣಗಳನ್ನು ಕಿತ್ತೊಗೆದು ಶೆಡ್ ಹಾಕಲಾಗಿದೆ ಎಂದರು.

ಉತ್ತರ ನೀಡಿದ ಶಿವಕುಮಾರ್, 'ಉದ್ಯಾನಗಳು ಸೇರಿದಂತೆ ಯಾವುದೇ ವಿಧದ ಸರ್ಕಾರಿ ಜಮೀನುಗಳ ಒತ್ತುವರಿಗೆ ಅವಕಾಶ ನೀಡುವುದಿಲ್ಲ. ಪ್ರಕರಣದ ಸಮಗ್ರ ಮಾಹಿತಿಯನ್ನು ಹಂಚಿಕೊಂಡರೆ ಒತ್ತುವರಿದಾರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ತಿಳಿಸಿದರು.

ಮೈಸೂರು ರೇಸ್

ಜರ್ಕಾವಿ ಗೆಲ್ಲುವ ನಿರೀಕ್ಷೆ

ಡಾ. ಡಿ.ವಿ.ವಿಶ್ವನಾಥ್ ಮೆಮೋರಿಯಲ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಜರ್ಕಾವಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2 ಗಂಟೆಗೆ ಆರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಕ್ಯಾಲಿಫೋರ್ನಿಯಾ ಗೋಲ್ಡ್ 12, ಡಿ ಅಡ್ಮಿರಲ್ 7, ಫ್ಲೀಟ್ ಟ್ಯಾಕ್ಟಿಕಲ್ 11
2ನೇ ರೇಸ್: ಕೋಡ್ ಆಫ್ ಹಾನರ್ 7, ನ್ಯಾಚುರಲ್ ಸ್ಪೀಡ್ 6, ಐರಾನಿಕ್ ಹ್ಯೂಮರ್ 12
3ನೇ ರೇಸ್: ವಿಂಡ್ ಪವರ್ 6, ಪಿಟೈಟ್ಸ್ ಚಾಯ್ಸ್ 12, ಕ್ರಿಮ್‌ಸನ್ ಫೈರ್ 5
4ನೇ ರೇಸ್: ಜನ್ಯೆರೊ 3, ಎಗೈನ್ಸ್ಟ್ ಆಲ್ ಆಡ್ಸ್ 5, ಎಲಿವಾಡೊ 4
5ನೇ ರೇಸ್: ಜರ್ಕಾವಿ 4, ರೇರ್ ಸಿಲ್ಕ್ 8, ರೋಡ್ ರನ್ನರ್ 9
6ನೇ ರೇಸ್: ಕುಶಾಖ್ 7, ಬೆಂಗಾಜಿ 11, ಹಿಸ್ ಎಮಿನೆನ್ಸ್ 1
7ನೇ ರೇಸ್: ಸಿಲ್ವರ್ ಡೇಸ್ ಎಗೈನ್ 12, ಫ್ಯೂರಿಯಸ್ ಫನ್ 8, ಶೀಬಾ 1

ಉತ್ತಮ ಬೆಟ್: ಜನ್ಯೆರೊ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಸ್ಪೀಕರ್ ಅವಹೇಳನ: ಎಫ್‌ಐಆರ್

ಮಂಗಳೂರು: ಫೇಸ್‌ಬುಕ್‌ನಲ್ಲಿ ಮಹಮ್ಮದ್ ರಿಯಾಜ್ ಹಾಗೂ ಮೊಹಮ್ಮದ್ ಮುಸ್ತಾಫಾ ಎಂಬ ಹೆಸರಿನಲ್ಲಿ ಖಾತೆಗಳನ್ನು ತೆರೆದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರ ವಿರುದ್ಧ ಅವಹೇಳನಕಾರಿ ಬರಹವನ್ನು ಪ್ರಕಟಿಸಿದ ಬಗ್ಗೆ ಸೆನ್ ಕ್ರೈಂ ಠಾಣೆಯಲ್ಲಿ ದೂರು ದಾಖಲಾಗಿದೆ.

ಸಿ.ಕೆ. ರಾಮಮೂರ್ತಿ ಪ್ರಶ್ನೆಗೆ ಗೃಹ ಸಚಿವ ಜಿ. ಪರಮೇಶ್ವರ ಉತ್ತರ

'ಹುಕ್ಕಾ ಬಾರ್ ನಿಯಂತ್ರಣಕ್ಕೆ ಕಾನೂನು'

ಪ್ರಜಾವಾಣಿ ವಾರ್ತೆ

ವಿಧಾನಸಭೆ: ರಾಜ್ಯದಲ್ಲಿ ಹುಕ್ಕಾ ಬಾರ್‌ಗಳ ನಿಯಂತ್ರಣಕ್ಕೆ ಹೊಸ ಕಾನೂನು ರಚಿಸಲಾಗುವುದು ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಬಿಜೆಪಿಯ ಸಿ.ಕೆ. ರಾಮಮೂರ್ತಿ ಅವರ ಪ್ರಶ್ನೆಗೆ ಮಂಗಳವಾರ ಉತ್ತರಿಸಿದ ಸಚಿವರು, 'ಹುಕ್ಕಾ ಬಾರ್‌ಗಳ ಆರಂಭಕ್ಕೆ ಬಿಬಿಎಂಪಿಯಿಂದ ಯಾವುದೇ ರೀತಿಯ ಪರವಾನಗಿ ನೀಡುತ್ತಿಲ್ಲ. ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದಿಂದ ಪರವಾನಗಿ ಪಡೆದು ಹುಕ್ಕಾ ಬಾರ್‌ಗಳನ್ನು ನಡೆಸಲಾಗುತ್ತಿದೆ. ಈಗ ಇರುವ ಕಾನೂನುಗಳಲ್ಲಿ ಅವುಗಳ ನಿಯಂತ್ರಣಕ್ಕೆ ರಾಜ್ಯ ಸರ್ಕಾರಕ್ಕೆ ಅಧಿಕಾರವಿಲ್ಲ. ಆದ್ದರಿಂದ ಹೊಸ ಕಾನೂನು ತರಲು ಯೋಚಿಸಲಾಗಿದೆ' ಎಂದರು.

ಹುಕ್ಕಾ ಬಾರ್‌ಗಳ ನಿಯಂತ್ರಣಕ್ಕೆ ಸರ್ಕಾರಕ್ಕೆ ಅಧಿಕಾರವಿಲ್ಲ ಎಂದು ಹೈಕೋರ್ಟ್ ಪ್ರಕರಣವೊಂದರಲ್ಲಿ ಹೇಳಿದೆ. ಈಗ ಹೊಸ ಕಾನೂನು ರೂಪಿಸದಿದ್ದರೆ ಬಿಗಿ ಕ್ರಮ ಕೈಗೊಳ್ಳುವುದು ಅಸಾಧ್ಯ ಎಂದು ತಿಳಿಸಿದರು.

ಕೋರಮಂಗಲದ ಹುಕ್ಕಾ ಬಾರ್ ಒಂದರಲ್ಲಿ ಅಕ್ಟೋಬರ್ 19ರಂದು ಅಗ್ನಿ ಅವಘಡ ಸಂಭವಿಸಿತ್ತು. ಅಲ್ಲಿ ಎಲ್‌ಪಿಜಿ ಸಿಲಿಂಡರ್ ಸಂಗ್ರಹ ಸೇರಿದಂತೆ ಕಾನೂನು ಉಲ್ಲಂಘನೆ ಕಂಡುಬಂದಿತ್ತು. ಈ ರೀತಿಯ ಅವಘಡಗಳನ್ನು ತಪ್ಪಿಸಲು ನಿಯಂತ್ರಣ ಕ್ರಮ ಅಗತ್ಯ ಎಂದರು.

ಬಿಜೆಪಿಯ ಎಸ್. ಸುರೇಶ್ ಕುಮಾರ್ ಮಾತನಾಡಿ, 'ಹುಕ್ಕಾ ಸೇದುವುದು ಸಿಗರೇಟು ಸೇದುವುದಕ್ಕಿಂತ 200 ಪಟ್ಟು ಹೆಚ್ಚು ಹಾನಿಕಾರಕ ಎಂಬುದು ಅಧ್ಯಯನಗಳಲ್ಲಿ ಸಾಬೀತಾಗಿದೆ. ಪಂಜಾಬ್, ರಾಜಸ್ಥಾನ, ತಮಿಳುನಾಡು ಸೇರಿದಂತೆ ಹತ್ತಕ್ಕೂ ಹೆಚ್ಚು ರಾಜ್ಯಗಳಲ್ಲಿ ಹುಕ್ಕಾ ಸೇವನೆ ನಿಷೇಧಿಸಲಾಗಿದೆ. ರಾಜ್ಯದಲ್ಲೂ ಅಂತಹ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರೂ ಹುಕ್ಕಾ ಬಾರ್ ನಿಷೇಧದ ಬೇಡಿಕೆಗೆ ಸಹಮತ ವ್ಯಕ್ತಪಡಿಸಿದರು.

ಶಿಕ್ಷಕರ ಹೊರಗುತ್ತಿಗೆ: ಆದೇಶ ವಾಪಸ್‌ಗೆ ಆಗ್ರಹ

ವಿಧಾನಸಭೆ: ಬಿಬಿಎಂಪಿಯ ಶಾಲೆಗಳಿಗೆ ಅಪ್ಪು ಡಿಟೆಕ್ಟಿವ್ ಏಜೆನ್ಸಿ ಎಂಬ ಸಂಸ್ಥೆಯಿಂದ 400 ಶಿಕ್ಷಕರ ಸೇವೆಯನ್ನು ಹೊರ ಗುತ್ತಿಗೆ ಆಧಾರದಲ್ಲಿ ಪಡೆಯಲು ನೀಡಿರುವ ಕಾರ್ಯಾದೇಶವನ್ನು ವಾಪಸ್ ಪಡೆಯಬೇಕು ಎಂದು ಬಿಜೆಪಿಯ ಎಸ್. ಸುರೇಶ್ ಕುಮಾರ್ ಅವರು ಆಗ್ರಹಿಸಿದರು.

ಮಂಗಳವಾರ ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, 'ಅಪ್ಪು ಡಿಟೆಕ್ಟಿವ್ ಆ್ಯಂಡ್ ಸೆಕ್ಯುರಿಟಿ ಏಜೆನ್ಸಿಗೆ ರಾಜರಾಜೇಶ್ವರಿನಗರ ಮತ್ತು ದಕ್ಷಿಣ ವಲಯದ ಶಾಲೆಗಳಿಗೆ ಶಿಕ್ಷಕರ ಪೂರೈಕೆ ಗುತ್ತಿಗೆ ನೀಡಲಾಗಿದೆ. ಕಾಮಗಾರಿ ಎಂಬ ಹೆಸರಿನಲ್ಲಿ ಕಾರ್ಯನಿರ್ವಾಹಕ ಎಂಜಿನಿಯರ್ ಕಾರ್ಯಾದೇಶ ನೀಡಿದ್ದಾರೆ. ಇದು ಯಾವ ಕಾಮಗಾರಿ' ಎಂದು ಪ್ರಶ್ನಿಸಿದರು.

'ಶೈಕ್ಷಣಿಕ ವರ್ಷದ ಅರ್ಧ ಭಾಗ ಮುಗಿದಿದೆ. ಈಗ ಶಿಕ್ಷಕರ ಬದಲಾವಣೆ ಸರಿಯಲ್ಲ. ಸೆಕ್ಯೂರಿಟಿ ಏಜೆನ್ಸಿಯಿಂದ ಶಿಕ್ಷಕರ ಹೊರ ಗುತ್ತಿಗೆ ಸೇವೆ ಪಡೆಯುವುದೂ ಒಳ್ಳೆಯ ನಿರ್ಧಾರವಲ್ಲ. ಆದ್ದರಿಂದ ತಕ್ಷಣವೇ ಈ ಆದೇಶವನ್ನು ಹಿಂಪಡೆಯಬೇಕು' ಎಂದರು.

ಶಾಸಕರ ಗೈರಿನ ಮಧ್ಯೆ ಒಗ್ಗಟ್ಟಿನ ಮಂತ್ರ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಚಳಿಗಾಲದ ಅಧಿವೇಶನದಲ್ಲಿ ಒಗ್ಗಟ್ಟಿನ ಕೊರತೆಯಿಂದ ಸರ್ಕಾರದ ವಿರುದ್ಧ ಪರಿಣಾಮಕಾರಿಯಾಗಿ ಹೋರಾಟ ನಡೆಸುವಲ್ಲಿ ಹಿನ್ನಡೆ ಸಾಧಿಸಿರುವ ಬಿಜೆಪಿ; ಮಂಗಳವಾರ ರಾತ್ರಿ ನಡೆದ ಶಾಸಕಾಂಗ ಪಕ್ಷದ ಸಭೆಯಲ್ಲಿ ಒಗ್ಗಟ್ಟಿನ ಮಂತ್ರ ಜಪಿಸಿದರೂ, ಕೆಲವು ಶಾಸಕರು ಸಭೆಗೆ ಗೈರಾಗುವ ಮೂಲಕ ತಮ್ಮ ಅಸಮಾಧಾನವನ್ನು ಮತ್ತೊಮ್ಮೆ ಪ್ರದರ್ಶಿಸಿದ್ದಾರೆ.

ವೇದಿಕೆಯ ಮೇಲೆ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ವಿರೋಧ ಪಕ್ಷದ ನಾಯಕ ಆರ್. ಅಶೋಕ ವಿಧಾನಪರಿಷತ್ ಸದಸ್ಯ ಕೋಟ ಶ್ರೀನಿವಾಸ ಪೂಜಾರಿ ಇದ್ದರು. ನಿರೀಕ್ಷೆಯಂತೆ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ, ರಮೇಶ ಜಾರಕಿಹೊಳಿ, ಎಸ್.ಟಿ. ಸೋಮಶೇಖರ್ ಭಾಗವಹಿಸಿರಲಿಲ್ಲ.

ಇಲ್ಲಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಬಿ.ಎಸ್.ಯಡಿಯೂರಪ್ಪ ಅವರು, ಎಲ್ಲ ಶಾಸಕರೂ ಒಗ್ಗಟ್ಟಿನಿಂದ ಕೆಲಸ ಮಾಡಿ ಲೋಕಸಭಾ ಚುನಾವಣೆಯಲ್ಲಿ 28 ಸ್ಥಾನಗಳನ್ನು ಗೆಲ್ಲಿಸಬೇಕಾಗಿದೆ. ರಾಜ್ಯ ಸರ್ಕಾರದ ವಿರುದ್ಧ ಹೋರಾಟಕ್ಕೆ ಯಾವುದೇ ಸಂದರ್ಭದಲ್ಲಿ ಕರೆದರೂ ಬರಲು ಸಿದ್ಧನಿದ್ದೇನೆ. ಬುಧವಾರ ಸಂಜೆ ಹಮ್ಮಿಕೊಂಡಿರುವ ಹೋರಾಟದಲ್ಲಿ ಎಲ್ಲ ಶಾಸಕರೂ ಭಾಗವಹಿಸಿ ಹೋರಾಟ ಯಶಸ್ವಿಗೊಳಿಸಬೇಕಾಗಿದೆ ಎಂದು ಯಡಿಯೂರಪ್ಪ ಹೇಳಿದರು.

ವಿಧಾನಮಂಡಲದಲ್ಲಿ ಹೋರಾಟ ಮಾಡುವಾಗ ಹಿರಿಯ ಶಾಸಕರ ಜತೆ ಚರ್ಚಿಸಿ ಒಮ್ಮತದ ನಿರ್ಣಯ ತೆಗೆದುಕೊಂಡು ಅಖಾಡಕ್ಕಿಳಿಯಬೇಕು ಎಂದು ಅವರು ಸಲಹೆ ನೀಡಿದರು.

ಬಿ.ವೈ.ವಿಜಯೇಂದ್ರ ಮಾತನಾಡಿ, ಏನೇ ಭಿನ್ನ ಅಭಿಪ್ರಾಯಗಳಿದ್ದರೂ ಪಕ್ಷದ ವೇದಿಕೆಯಲ್ಲಿ ಚರ್ಚಿಸೋಣ. ಬಹಿರಂಗ ಮಾತು ಬೇಡ. ಸಣ್ಣಪುಟ್ಟ ಭಿನ್ನಾಭಿಪ್ರಾಯಗಳನ್ನು ಬದಿಗೆ ಸರಿಸಿ ಮುಂಬರುವ ಲೋಕಸಭೆ ಚುನಾವಣೆಯಲ್ಲಿ 28 ಸ್ಥಾನಗಳನ್ನು ಗೆಲ್ಲಿಸಬೇಕಾಗಿದೆ ಎಂದರು.

ವಿರೋಧಪಕ್ಷದ ನಾಯಕ ಆರ್.ಅಶೋಕ ಮಾತನಾಡಿ, '3 ರಾಜ್ಯಗಳಲ್ಲಿ ಬಿಜೆಪಿ ಅಧಿಕಾರ ಹಿಡಿದಿರುವುದರಿಂದ ಮತ್ತಷ್ಟು ಶಕ್ತಿ ಬಂದಿದೆ. ಕೆಲವು ಮಂತ್ರಿಗಳು ಕೊಬ್ಬಿದ್ದಾರೆ. ಅಧಿವೇಶನ ಮುಗಿದ ಬಳಿಕ ಅವರ ವಿರುದ್ಧ ಹೋರಾಟ ನಡೆಸಬೇಕಾಗಿದೆ' ಎಂದರು. ಸಭೆಯಲ್ಲಿ ಶಾಸಕರಿಗೆ ಮಾತನಾಡಲು ಅವಕಾಶ ಇರಲಿಲ್ಲ ಎಂದು ಮೂಲಗಳು ಹೇಳಿವೆ.

ತಂತ್ರಜ್ಞಾನ



ನಕ್ಷತ್ರಕ್ಕೂ ಇದೆ ಉಂಗುರ!

ನೇಸರ ಕಾಡನಕುಪ್ಪೆ

ನಮ್ಮ ಸೌರವ್ಯೂಹದಲ್ಲಿ ಭೂಮಿ ಎಷ್ಟು ಸುಂದರವಾದ ಗ್ರಹವೋ ಅಂತೆಯೇ ಶನಿ ಗ್ರಹವೂ ಅಷ್ಟೇ ಅದ್ಭುತವಾಗಿದೆ. ಭೂಮಿಯು ತನ್ನ ನೀಲಿ ಬಣ್ಣದಿಂದ ಸೆಳೆದರೆ ಶನಿ ಗ್ರಹವೂ ಅದರ ಸುತ್ತಲೂ ಇರುವ ಉಂಗುರಗಳಿಂದ ಮನಸೆಳೆಯುತ್ತದೆ. ನಮ್ಮ ಸೌರವ್ಯೂಹದಲ್ಲಿ ಇಂಥ ಉಂಗುರಗಳಿರುವ ಕೆಲವು ಗ್ರಹಗಳನ್ನು ಬಾಹ್ಯಾಕಾಶ ವಿಜ್ಞಾನಿಗಳು ಶೋಧಿಸಿದ್ದಾರೆ. ಆದರೆ, ಇದೇ ಮೊದಲ ಬಾರಿಗೆ ನಮ್ಮ 'ಮಿಲ್ಕೀ ವೇ' ನಕ್ಷತ್ರಪುಂಜದ ಆಚೆ, ನಕ್ಷತ್ರವೊಂದರ ಸುತ್ತಲೂ ಶನಿ ಗ್ರಹದ ಮಾದರಿಯ ಉಂಗುರ ಇರುವ ಅಚ್ಚರಿಯ ಸಂಗತಿಯನ್ನು ಶೋಧಿಸಿದ್ದಾರೆ.

ಇಂಗ್ಲೆಂಡ್‌ನ ಡ್ಯುರಾಮ್ ವಿಶ್ವವಿದ್ಯಾಲಯದ ಭೌತವಿಜ್ಞಾನ ಸಹ ಪ್ರಾಧ್ಯಾಪಕಿ ಡಾ. ಅನ್ನಾ ಮ್ಯಾಕ್‌ಲಿಯಾಡ್ ಅವರು ಚಿಲಿಯಲ್ಲಿನ 'ಅಟಕಾಮ ಲಾರ್ಜ್ ಮಿಲಿಮೀಟರ್/ ಸಬ್ ಮಿಲಿಮೀಟರ್ ಅರೇ' ದೂರದರ್ಶಕ ಯಂತ್ರದ ಮೂಲಕ 'ಎಚ್‌ಎಚ್ 1177' ನಕ್ಷತ್ರಪುಂಜದಲ್ಲಿ ಉಂಗುರ ಇರುವ ನಕ್ಷತ್ರವೊಂದನ್ನು ವೀಕ್ಷಿಸಿದ್ದಾರೆ. 'ಎಚ್‌ಎಚ್ 1177' ಎನ್ನುವುದು ನಕ್ಷತ್ರಪುಂಜವಲ್ಲ. ಇದು ನಮ್ಮ 'ಮಿಲ್ಕೀ ವೇ' ನಕ್ಷತ್ರಪುಂಜದ ಸಾಮಂತ ನಕ್ಷತ್ರಪುಂಜ. ವಿಶೇಷವಾದ ಯಾವುದೇ ಆಕಾರವಿಲ್ಲದೇ ಮೋಡದ ರೀತಿಯ ರಚನೆಯನ್ನು ಇದು ಹೊಂದಿದ್ದು, 3 ಸಾವಿರ ಕೋಟಿ ನಕ್ಷತ್ರಗಳು ಈ ಸಾಮಂತ ನಕ್ಷತ್ರಪುಂಜದೊಳಗಿವೆ ಎಂದು ಅಂದಾಜಿಸಲಾಗಿದೆ. 'ಮಿಲ್ಕಿ ವೇ' ನಕತ್ರಪುಂಜದಲ್ಲಿ ಸುಮಾರು 10 ಸಾವಿರದಿಂದ 40 ಸಾವಿರ ಕೋಟಿ ನಕ್ಷತ್ರಗಳಿವೆ ಎಂದು ಊಹಿಸಲಾಗಿದೆ. ಈ ಅಂಕಿ ಅಂಶವನ್ನು ನೀಡಿರುವುದು 'ಮಿಲ್ಕೀ ವೇ' ಹಾಗೂ 'ಎಚ್‌ಎಚ್ 1177' ನಡುವಿನ ಗಾತ್ರದ ವ್ಯತ್ಯಾಸ ಅಂದಾಜು ನಿಮಗಾಗಲಿ ಎಂದು. ಈ ಸಂಶೋಧನೆ ಏಕೆ ಮಹತ್ವವನ್ನು ಪಡೆದುಕೊಳ್ಳುತ್ತದೆ ಎಂದರೆ 3 ಸಾವಿರ ಕೋಟಿ ನಕ್ಷತ್ರಗಳಿರುವ 'ಎಚ್‌ಎಚ್ 1177' ನಕ್ಷತ್ರಪುಂಜದಲ್ಲಿ ಉಂಗುರಗಳಿರುವ ಒಂದು ನಕ್ಷತ್ರವನ್ನು ಹುಡುಕಿ ವೀಕ್ಷಿಸುವುದು ಸಾಮಾನ್ಯವಾದ ವಿಚಾರವಲ್ಲ; ಭೂಮಿಯ ಮೇಲಿನ ಸಮುದ್ರದ ಮರಳಿನಲ್ಲಿ ಒಂದು ಮರಳಿನ ಕಣವನ್ನು ಸೋಸಿ ತೆಗೆದಂತೆ ಅದು.

ಸೌರಮಂಡಲದ ಹುಟ್ಟು – ಬೆಳವಣಿಗೆ ಅಧ್ಯಯನಕ್ಕೆ ಸಹಾಯ

ಸೂರ್ಯನಿಗಿರುವ 8 ಗ್ರಹಗಳು ಈಗಿನ ಸ್ಥಿತಿಯಲ್ಲೇ ಅವುಗಳ ಆರಂಭದ ದಿನಗಳಲ್ಲಿ ಇರಲಿಲ್ಲ. ಕಾಲಾಂತರದಲ್ಲಿ ಅವು ರೂಪಾಂತರಗೊಳ್ಳುತ್ತಾ ಈಗಿನ ಸ್ಥಿತಿಯನ್ನು ತಲುಪಿವೆ. ಭೂಮಿಯ ಮೇಲೆ ಜೀವ ಉತ್ಪತ್ತಿಯಾಗಿದ್ದು ಭೂಮಿಯ ಒಟ್ಟಾರೆ ಜೀವನದ ಕೊನೆಯ ದಿನಗಳಲ್ಲಿ. ಗ್ರಹವೊಂದರ ಮೇಲೆ ಜೀವದ ಉತ್ಪತ್ತಿ ಆಗುವ ಪ್ರಕ್ರಿಯೆಯ ಬಗ್ಗೆ ಮಾನವನಿಗೆ ಮೊದಲಿನಿಂದಲೂ ಅತೀವ ಕುತೂಹಲವಿದೆ. ಅದೇ ಕಾರಣಕ್ಕೆ ನಮ್ಮ ಸೌರಮಂಡಲದ ಅಧ್ಯಯನ, ರಾಕೆಟ್‌ಗಳ ಸಂಶೋಧನೆ, ಗ್ರಹ, ಉಪಗ್ರಹಗಳಿಗೆ ಪ್ರಯಾಣ ಮುಂತಾದ ಸಂಶೋಧನೆಗಳಲ್ಲಿ ತೊಡಗಿದ್ದಾನೆ. ಆದರೆ, ನಮ್ಮ ಸೌರವ್ಯೂಹ ಈಗಾಗಲೇ ಬೆಳೆದು ಕಾಲದಲ್ಲಿ ಮುಂದೆ ಬಂದಿರುವ ಕಾರಣ, ಅದರ ಬೆಳವಣಿಗೆಯನ್ನು ಕಾಲದಲ್ಲಿ ಹಿಮ್ಮುಖವಾಗಿ ಚಲಿಸಿ ತಿಳಿದುಕೊಳ್ಳುವ ಸಾಮರ್ಥ್ಯ ನಮಗಿಲ್ಲ. ಹಾಗಾಗಿ, ಡಾ. ಅನ್ನಾ ಮ್ಯಾಕ್‌ಲಿಯಾಡ್ ಅವರ ಸಂಶೋಧನೆಯನ್ನು 'ಸೌರಮಂಡಲದ ಬೆಳವಣಿಗೆಯ ಪಾಠಶಾಲೆ' ಎಂದೇ ವಿಜ್ಞಾನಿಗಳು ವ್ಯಾಖ್ಯಾನಿದ್ದಾರೆ.

ಎಚ್‌ಎಚ್ 1177

ಪಾಠಶಾಲೆ ಹೇಗೆ?

'ಎಚ್‌ಎಚ್ 1177' ನಲ್ಲಿ ಇರುವ ನಕ್ಷತ್ರದ ಸುತ್ತಲಿನ ಉಂಗುರವು ಅತಿ ವೇಗದಲ್ಲಿ ಸುತ್ತುತ್ತಾ ಇರುವುದನ್ನು ಡಾ. ಅನ್ನಾ ಹಾಗೂ ಅವರ ತಂಡ ಗಮನಿಸಿದೆ. ಅಲ್ಲದೇ, ಈ ಉಂಗುರದಲ್ಲಿರುವ ಅನಿಲ ಹಾಗೂ ಘನರೂಪದಲ್ಲಿರುವ ವಸ್ತುಗಳು ಅತಿ ವೇಗವಾಗಿ ನಕ್ಷತ್ರದ ಕಡೆಗೆ ಸೆಳೆಯುತ್ತಿರುವುದನ್ನೂ ವಿಜ್ಞಾನಿಗಳು ಕಂಡುಹಿಡಿದಿದ್ದಾರೆ. ಡಾ. ಅನ್ನಾ ಅವರ ಪ್ರಕಾರ ಉಂಗುರದ ಈ ಚಲನೆ ಹಾಗೂ ಲಕ್ಷಣವು ಈ ನಕ್ಷತ್ರದ ಸುತ್ತಲೂ ಗ್ರಹ, ಉಪಗ್ರಹ, ಕ್ಷುದ್ರಗ್ರಹ, ಉಲ್ಕೆಗಳಂತ ಆಕಾಶಕಾಯಗಳು ರೂಪುಗೊಳ್ಳುವ ಪ್ರಕ್ರಿಯೆಗೆ ಮುನ್ನುಡಿ. ಒಂದು ಕಾಲದಲ್ಲಿ ನಮ್ಮ ಸೂರ್ಯನ ಸುತ್ತಲೂ ಇದೇ ಮಾದರಿಯಲ್ಲಿ ಉಂಗುರಗಳಿದ್ದವು ಎಂದು ವಿಜ್ಞಾನಿಗಳು ಅಂದಾಜಿಸಿದ್ದಾರೆ.

ವಿಜ್ಞಾನಿಗಳ ಪ್ರಕಾರ ನಮ್ಮ ಸೂರ್ಯನಿಗೆ 450 ಕೋಟಿ ವರ್ಷಗಳಾಗಿವೆ. 'ಎಚ್‌ಎಚ್ 1177' ನಕ್ಷತ್ರಪುಂಜಕ್ಕೆ ಸುಮಾರು 150 ಕೋಟಿ ವರ್ಷಗಳಾಗಿವೆ. ಅದರಲ್ಲೂ ಈಗ ಶೋಧಿಸಿರುವ ಉಂಗುರವಿರುವ ನಕ್ಷತ್ರಕ್ಕೆ ಸುಮಾರು 100 ಕೋಟಿ ವರ್ಷ ವಯಸ್ಸಾಗಿರಬಹುದು ಎಂದು ಅಂದಾಜಿದ್ದಾರೆ. 'ಈ ನಕ್ಷತ್ರವು ಅತಿ ವೇಗವಾಗಿ ಬದಲಾಗುತ್ತಿದ್ದು, ಉಂಗುರವು ಅತಿ ವೇಗದಲ್ಲಿ ಸುತ್ತುತ್ತಾ ಇರುವುದು ಅಚ್ಚರಿ ಮೂಡಿಸಿದೆ. ನಮ್ಮ ಜೀವಿತಾವಧಿಯಲ್ಲೇ, ಈ ಉಂಗುರವು ಬೇರೆ ಸ್ವರೂಪವನ್ನೇನಾದರೂ ಪಡೆದುಕೊಳ್ಳಬಹುದೇ ಎಂಬುದು ನಮ್ಮ ಪ್ರಮುಖ ಪ್ರಶ್ನೆಯಾಗಿದೆ' ಎಂದು ಡಾ. ಅನ್ನಾ ಹೇಳಿದ್ದಾರೆ.

ನಮ್ಮ ಸೂರ್ಯನಿಗೆ ಹತ್ತಿರವಿರುವ 'ಮಿಲ್ಕೀ ವೇ'ನ ನಕ್ಷತ್ರಗಳಲ್ಲಿ ಕೆಲವು ನಕ್ಷತ್ರಗಳಿಗೆ ಇದೇ ಮಾದರಿಯ ಉಂಗುರಗಳಿರುವುದನ್ನು ವಿಜ್ಞಾನಿಗಳು ಈಗಾಗಲೇ ಕಂಡುಹಿಡಿದಿದ್ದಾರೆ. ಆದರೆ, ಅವೆಲ್ಲಾ ಬೆರಳೆಣಿಕೆ ಸಂಖ್ಯೆಯಲ್ಲಿವೆ. ಜೊತೆಗೆ, 'ಮಿಲ್ಕೀ ವೇ' ಅತಿ ಬೃಹದಾಕಾರದ ನಕ್ಷತ್ರಪುಂಜವಾಗಿರುವ ಕಾರಣ, ಈ ನಕ್ಷತ್ರಗಳೆಲ್ಲಾ ತೀರಾ ದೂರದಲ್ಲಿವೆ. ಹಾಗಾಗಿ, ವೀಕ್ಷಣೆ ಕಷ್ಟ. 'ಎಚ್‌ಎಚ್ 1177' ನಕ್ಷತ್ರಪುಂಜದ ನಕ್ಷತ್ರವು ವೀಕ್ಷಣೆ ಹಾಗೂ ಸಂಶೋಧನೆಗೆ ಹೇಳಿ ಮಾಡಿಸಿದ ದೂರದಲ್ಲಿದೆ ಎಂದು ಡಾ. ಅನ್ನಾ ಅವರ ತಂಡ ಅಭಿಪ್ರಾಯಪಟ್ಟಿದೆ.

'ನಕ್ಷತ್ರವೊಂದರ ಸುತ್ತಲಿನ ಉಂಗುರಗಳು ಸುತ್ತುತ್ತಾ ಬೇರೆ ಬೇರೆ ಆಕಾರಗಳನ್ನು ಪಡೆದುಕೊಂಡು ಗ್ರಹಗಳಂತಹ ಆಕಾಶ ಕಾಯಗಳಾಗುತ್ತವೆ. ಈ ಪ್ರಕ್ರಿಯೆಯನ್ನು ವೀಕ್ಷಿಸುವ ಅವಕಾಶ ನಮ್ಮ ಹಾಲಿ ಹಾಗೂ ಭವಿಷ್ಯದ ಬಾಹ್ಯಾಕಾಶ ವಿಜ್ಞಾನಿಗಳ ಪಾಲಿಗೆ ಸಿಕ್ಕಿರುವುದು ಅದೃಷ್ಟ' ಎಂದು ಡಾ.ಅನ್ನಾ ತಮ್ಮ ಸಂಶೋಧನೆಯನ್ನು ವಿಶ್ಲೇಷಿಸಿದ್ದಾರೆ. ❖

ಎಐ ಮೂಲಕ ಸೃಷ್ಟಿಸಿದ 'ಸುಂದರ ಪರಿಸರದ ಮಧ್ಯ ಹಂಪಿ ಕಲ್ಲಿನ ರಥ' ದ ಚಿತ್ರ

ಎಐ ತಂತ್ರಜ್ಞಾನದ ಪ್ರಭಾವ

ಪಠ್ಯದಿಂದ ಚಿತ್ರ ತಯಾರಿಸುವುದು ಹೇಗೆ?

ಅವಿನಾಶ್ ಬಿ.

ಸ್ಮಾರ್ಟ್‌ಫೋನ್ ಇರುವವರೆಲ್ಲರೂ ಈಗ ಫೋಟೊಗ್ರಾಫರುಗಳೇ ಆಗಿಬಿಟ್ಟಿದ್ದಾರೆ ಎಂಬುದು ಈ ಕಾಲದ ವಾಸ್ತವವಾದರೆ, ಇತ್ತೀಚಿನ ಎರಡು ವಾರಗಳಲ್ಲಿ ಫೇಸ್‌ಬುಕ್ ಸಹಿತ ಸಾಮಾಜಿಕ ಮಾಧ್ಯಮಗಳಲ್ಲಿ ಸುಂದರವಾದ, ಆಕರ್ಷಕವಾದ ದೃಶ್ಯಗಳು, ದೇವಾನುದೇವತೆಗಳ ಚಿತ್ರಗಳ ಹಂಚುವಿಕೆ ಹೆಚ್ಚಾಗುತ್ತಿರುವುದನ್ನು ಗಮನಿಸಿರಬಹುದು. ಅತ್ಯಂತ ಇಷ್ಟದ ಕಾರ್ಟೂನು ಪಾತ್ರಗಳಾದ ಟಾಮ್ ಮತ್ತು ಜೆರ್ರಿ ಮೈಸೂರು ಅರಮನೆಗೆ ಭೇಟಿ ನೀಡಿರುವುದು, ಭಾರತಕ್ಕೆ ಬಂದು ಭಾರತೀಯ ಉಡುಗೆಯಲ್ಲಿ ದೇವರಿಗೆ ಕೈ ಮುಗಿಯುವ ಟಾಮ್ ಮತ್ತು ಜೆರ್ರಿ, ತುಂಟ ಬಾಲಕೃಷ್ಣ, ಬಾಲಕ ಶಿವ, ದೇವ-ದೇವಿಯರು - ಹೀಗೆ ರಾಶಿ ರಾಶಿ ಚಿತ್ರಗಳು ಕಾಣಿಸಲಾರಂಭಿಸಿವೆ.

ಆಹಾ, ಎಷ್ಟೊಂದು ಚೆನ್ನಾಗಿವೆ ಇವು ಅಂತ ಖುಷಿಪಟ್ಟವರು ಇದನ್ನು ಪುನಃ ಶೇರ್ ಮಾಡುತ್ತಿರುತ್ತಾರೆ. ಆದರೆ, ಕೊಂಚ ಕುತೂಹಲ ಇದ್ದವರು, ಇದರ ಹಿಂದೆ ಏನೋ ತಂತ್ರಜ್ಞಾನವಿರಬೇಕು ಎಂದು ಆಲೋಚಿಸಿದ್ದಾರೆ. ಇತ್ತೀಚೆಗೆ ಹೆಚ್ಚು ಹೆಚ್ಚು ಸದ್ದು ಮಾಡುತ್ತಿರುವ ಕೃತಕ ಬುದ್ಧಿಮತ್ತೆ (ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ - ಎಐ) ಎಂಬ ತಂತ್ರಜ್ಞಾನದ ಫಲವಿದು. ಮತ್ತು ಈ ತಂತ್ರಜ್ಞಾನವೀಗ ಜನ ಸಾಮಾನ್ಯರ ಕೈಗೆ ಕೂಡ ದೊರೆಯುತ್ತಿದೆ ಎಂಬುದು ಹೊಸ ವಿದ್ಯಮಾನ.

ಎಐ ಇಮೇಜ್ ಜನರೇಟರ್‌ಗಳು

ನಮ್ಮ ಕಲ್ಪನೆಯನ್ನು ಎಐ ಎಂಜಿನ್‌ಗೆ ಟೆಕ್ಸ್ಟ್ (ಪಠ್ಯ) ಮೂಲಕ ಊಡಿಸಿದರೆ ಸಾಕು, ಕ್ಷಣ ಮಾತ್ರದಲ್ಲಿ ನೀವಂದುಕೊಂಡ ಚಿತ್ರವೊಂದು ಅಲ್ಲಿ ಸಿದ್ಧವಾಗಿರುತ್ತದೆ. ಇದುವೇ ಈ ಕಾಲದ ಎಐ ಜನರೇಟರ್ ತಂತ್ರಜ್ಞಾನದ ಕೊಡುಗೆ.

ಈ ಅತ್ಯಾಧುನಿಕ ತಂತ್ರಜ್ಞಾನವು ಜನ ಸಾಮಾನ್ಯರ ಕೈಗೂ ಸುಲಭವಾಗಿ ಸಿಗುತ್ತಿದೆ. ಹೇಗೂ ಅಂತರ್ಜಾಲ ಸಂಪರ್ಕವಷ್ಟೇ ಅಲ್ಲದೆ ಸ್ಮಾರ್ಟ್ ಮೊಬೈಲ್ ಫೋನ್‌ಗಳು ಕೂಡ ಕೈಗೆಟಕುತ್ತಿವೆ. ಅಂಗೈಯಲ್ಲೇ ಪ್ರಪಂಚ ದಕ್ಕಿರುವಾಗ, ಸುತ್ತಮುತ್ತಲಿನ ಪರಿವೆಯೇ ಇಲ್ಲದೆ ಕಾಲ ಕಳೆಯುವವರಿಗೇನೂ ಕೊರತೆಯಿಲ್ಲ.

ನಾವೂ ಮಾಡಬಹುದು

ಜನಸಾಮಾನ್ಯರೂ ಇದನ್ನು ರಚಿಸಬಹುದು. ಕಲಾವಿದನೊಬ್ಬ ರಚಿಸಿದ ವರ್ಣ ಚಿತ್ರಕ್ಕಿಂತಲೂ ಹೆಚ್ಚು ಸುಂದರವಾಗಿ, ಆಕರ್ಷಕವಾಗಿ ಈ ಚಿತ್ರಗಳು ಕಾಣಿಸುತ್ತವೆ. ಅಷ್ಟೇ ಅಲ್ಲ, 'ನಾನೇ ತೆಗೆದಿರುವ ಫೋಟೊ ಇದು' ಅಂತೆಲ್ಲ ಕೆಲವರು ಸಾಮಾಜಿಕ ಮಾಧ್ಯಮಗಳಲ್ಲಿ ಈ ಎಂಜಿನ್‌ಗಳು ರಚಿಸಿದ ಚಿತ್ರಗಳನ್ನೇ ಹಂಚಿಕೊಳ್ಳುತ್ತಿದ್ದಾರೆ. ಅಷ್ಟು ನೈಜತೆಯಿದೆ ಈ ಫೋಟೊ ಸೃಷ್ಟಿಗೆ. ಉದಾಹರಣೆಗೆ, ತಾಜ್‌ಮಹಲ್ ಎದುರು ಮಗು ಆಟವಾಡುತ್ತಿರುವುದು, ಮುಂಬಯಿಯ ಗೇಟ್ ವೇ ಆಫ್ ಇಂಡಿಯಾದ ಎದುರು ಬಾಲಕನೊಬ್ಬ ಭಿಕ್ಷೆ ಬೇಡುತ್ತಿರುವುದು, ವಿಧಾನಸೌಧದೆದುರು ಅರ್ಜುನ ಆನೆ, ಹಂಪಿಯ ಕಲ್ಲಿನ ರಥ... ಹೀಗೆ ನೋಡಲು ಇದು ನೈಜ ಛಾಯಾಚಿತ್ರದಂತೆಯೇ ಇರುತ್ತದೆ. ಇದು ಅಸಲಿ ಛಾಯಾಚಿತ್ರವೋ ಅಥವಾ ಎಐ ಸೃಷ್ಟಿಸಿದ ನಕಲಿ ಚಿತ್ರವೋ ಎಂಬ ವ್ಯತ್ಯಾಸವು ಥಕ್ಕನೇ ತಿಳಿಯುವುದು ಕಷ್ಟ.



ಎಐ ಸೃಷ್ಟಿಸಿದ ವಿಧಾನಸೌಧ ಹಾಗೂ 'ಅರ್ಜುನ' ಆನೆಯನ್ನು ವೀಕ್ಷಿಸುತ್ತಿರುವ ಟಾಮ್ ಮತ್ತು ಜೆರ್ರಿ ಚಿತ್ರ

> ನಮ್ಮ ಕಲ್ಪನೆಯನ್ನು ಎಐ ಎಂಜಿನ್‌ಗೆ ಟೆಕ್ಸ್ಟ (ಪಠ್ಯ) ಮೂಲಕ ಊಡಿಸಿದರೆ ಸಾಕು, ಕ್ಷಣ ಮಾತ್ರದಲ್ಲಿ ನೀವಂದುಕೊಂಡ ಚಿತ್ರವೊಂದು ಅಲ್ಲಿ ಸಿದ್ಧವಾಗಿರುತ್ತದೆ. ಇದುವೇ ಈ ಕಾಲದ ಎಐ ಜನರೇಟರ್ ತಂತ್ರಜ್ಞಾನದ ಕೊಡುಗೆ.

ಎಚ್ಚರಿಕೆ ಅಗತ್ಯ

ಇದಕ್ಕೆ ಅಂತರ್ಜಾಲದಲ್ಲಿ ಸಾಕಷ್ಟು ವೆಬ್ ತಾಣಗಳು, ಆ್ಯಪ್‌ಗಳು ದೊರೆಯುತ್ತವೆ. ಆದರೆ, ಹೆಚ್ಚಿನವುಗಳು ಲಾಗಿನ್ ಆಗಬೇಕೆಂದು (ಇಮೇಲ್ ಮೂಲಕ ನೋಂದಾಯಿಸಿಕೊಳ್ಳಬೇಕೆಂದು) ಕೇಳುತ್ತವೆ. ಇಂಥ ತಾಣಗಳಲ್ಲೆಲ್ಲ ನಮ್ಮ ಮಾಹಿತಿಯನ್ನು ಕೊಟ್ಟು ಕೈಸುಟ್ಟುಕೊಂಡ ಅದೆಷ್ಟೋ ಪ್ರಕರಣಗಳು ನಮ್ಮ ಮುಂದಿರುವಾಗ, ಯಾವ್ಯಾವುದೋ ವೆಬ್‌ಸೈಟ್ ಅಥವಾ ಆ್ಯಪ್‌ಗಳಲ್ಲಿ ವೈಯಕ್ತಿಕ ಮಾಹಿತಿ ನೀಡುವಾಗ ಎಚ್ಚರಿಕೆ ವಹಿಸದಿದ್ದರೆ, ಬ್ಯಾಂಕ್ ಖಾತೆಯಿಂದ ಹಣ ಹೋಗಬಹುದು ಅಥವಾ ನಮ್ಮ ಮೊಬೈಲ್ ಸಾಧನ, ಇಮೇಲ್ ಹ್ಯಾಕ್ ಆಗಬಹುದು.

ಈ ಎಚ್ಚರಿಕೆಯೊಂದಿಗೆ, ನಾವೇ ಈ ರೀತಿಯ ಚಿತ್ರಗಳನ್ನು ತಯಾರಿಸಬಹುದಾದ, ಹೆಚ್ಚು ಪ್ರಚಲಿತದಲ್ಲಿರುವ ಎಐ ಚಿತ್ರ ಜನರೇಟ್ ಮಾಡಿಕೊಡುವ ಎಂಜಿನ್‌ಗಳಲ್ಲಿ ಹೆಚ್ಚು ಇಷ್ಟವಾಗಿದ್ದು, ಮೈಕ್ರೋಸಾಫ್ಟ್‌ನವರು ರೂಪಿಸಿದ ಬಿಂಗ್ ಎಐ ಎಂಜಿನ್. ಇದರೊಂದಿಗೆ ಗೂಗಲ್‌ನ ಎಐ ಇಮೇಜ್ ಜನರೇಷನ್ ಎಂಬುದು ಸದ್ಯಕ್ಕೆ ಕೆಲವು ಅದೃಷ್ಟಶಾಲಿಗಳಿಗಷ್ಟೇ ಲಭ್ಯವಿದೆ. ಉಳಿದಂತೆ ಕ್ಯಾನ್ವ, ವಿ-ಪಿಕ್, ಗೆಟ್‌ಐಎಂಜಿ ಮುಂತಾದವು ಇವೆ.

ಹೇಗೆ ರಚಿಸುವುದು?

ಈ ತಾಣಗಳಲ್ಲಿ ನಮ್ಮ ಕಲ್ಪನೆಯಲ್ಲಿ ಒಂದು ವಾಕ್ಯ ರಚಿಸಬೇಕು. ಉದಾಹರಣೆಗೆ, ಚಳಿಗಾಲದ ಸುಂದರ ಪ್ರಕೃತಿಯ ಮಧ್ಯೆ ಶಿರಾಡಿ ಘಾಟಿಯಲ್ಲಿ ರೈಲು ಪ್ರಯಾಣ - ಅಂತ ಬರೆದು ಅದರಿಂದ ಛಾಯಾಚಿತ್ರ, ಕಾರ್ಟೂನ್, ಕ್ಯಾನ್ವಾಸ್ (ವರ್ಣಚಿತ್ರ) ಮುಂತಾದವುಗಳನ್ನು ರಚಿಸಬೇಕಿದ್ದರೆ ಅದನ್ನೂ ಉಲ್ಲೇಖಿಸಬಹುದು. ಎಂಟರ್ ಕೊಟ್ಟ ತಕ್ಷಣ ಕೆಲವೇ ಕ್ಷಣಗಳಲ್ಲಿ ಇಂತಹ ಚಿತ್ರವೊಂದು ನಮ್ಮೆದುರು ಸಿದ್ಧವಾಗಿರುತ್ತದೆ. ಚಿತ್ರದಲ್ಲಿ ಏನಿರಬೇಕೆಂದು ನಾವು ಅಲ್ಲಿ ನೀಡುವ ಪ್ರಾಂಪ್ಟ್ ಹೆಸರಿನ ವಾಕ್ಯದಲ್ಲಿ ಪ್ರಮುಖ ಪದಗಳನ್ನು (ಕೀವರ್ಡ್ಸ್) ಅಳವಡಿಸುವ ಜಾಣ್ಮೆ ಇದ್ದರಾಯಿತು. ನಾವು ಕೊಡುವ ಪ್ರಾಂಪ್ಟ್‌ಗಳ ಆಧಾರದಲ್ಲಿ ನಮಗೆ ಚಿತ್ರ ದೊರೆಯುತ್ತದೆ. ಪೇಂಟಿಂಗ್ ರೂಪದಲ್ಲಿಯೋ, ಕ್ಯಾರಿಕೇಚರ್ ರೂಪದಲ್ಲಿಯೋ ಈ ಚಿತ್ರಗಳನ್ನು ಪಡೆಯುವ ಆಯ್ಕೆಯೂ ಇರುತ್ತದೆ. ಬಿಂಗ್ ತಾಣದಲ್ಲಿ, 'ಕಸ್ಟಮೈಸ್' ಎಂಬ ಬಟನ್ ಮೂಲಕ ಅಥವಾ ನಮಗೆ ತಿಳಿದಿರುವ ಫೋಟೊ ಎಡಿಟಿಂಗ್ ತಂತ್ರಾಂಶಗಳ ಮೂಲಕ ಅದನ್ನು ನಮಗೆ ಬೇಕಾದಂತೆ ತಿದ್ದುಪಡಿ ಮಾಡಬಹುದು. ಹಾಗಂತ, ಕನ್ನಡ ವಾಕ್ಯಗಳಿಗೆ ಅಷ್ಟೊಂದು ಸರಿಯಾದ ಚಿತ್ರ ದೊರೆಯಲಾರದು. ಕನ್ನಡ ಅಥವಾ ಬೇರಾವುದೇ ಪ್ರಾದೇಶಿಕ ಭಾಷೆಯನ್ನು ಎಐ ಇನ್ನಷ್ಟೇ ಸರಿಯಾಗಿ ಅರ್ಥ ಮಾಡಿಕೊಳ್ಳಬೇಕಿದೆ ಎಂಬುದು ಇದಕ್ಕೆ ಕಾರಣ (ಅನುವಾದದ ಎಂಜಿನ್ ಇನ್ನೂ ಪರಿಪೂರ್ಣವಲ್ಲ). ಸದ್ಯಕ್ಕೆ ಆಂಗ್ಲ ಭಾಷೆಯ ವಾಕ್ಯವನ್ನು ಅದು ಸರಿಯಾಗಿ ಅರ್ಥೈಸಿಕೊಳ್ಳುತ್ತದೆ.

ಎಲ್ಲರಿಗೂ ಕೈಗೆಟುಕುತ್ತಿರುವ ಈ ಆಧುನಿಕ ತಂತ್ರಜ್ಞಾನದ ಸಕಾರಾತ್ಮಕ ಬಳಕೆಯಿದು ಎನ್ನಬಹುದಾದರೂ, ಅದನ್ನು ಬಳಸಿಯೇ ಹ್ಯಾಕರ್‌ಗಳು ತಮ್ಮ ಕೈಚಳಕ ತೋರಿಸುತ್ತಿದ್ದಾರೆ. ಹೀಗಾಗಿ, ಅಂತರ್ಜಾಲದಲ್ಲಿರುವ ಎಲ್ಲ ಚಿತ್ರಗಳೂ ಅಸಲಿ ಆಗಿರಲಾರದು. ನಮ್ಮದೇ ಪ್ರೊಫೈಲ್ ಚಿತ್ರ, ನಮ್ಮ ಧ್ವನಿ, ನಮ್ಮ ವಿಡಿಯೊವನ್ನೂ ನಕಲಿಯಾಗಿ ತಯಾರಿಸಿ, ನಮ್ಮನ್ನೇ ವಂಚಿಸಬಹುದು ಅಂತರ್ಜಾಲದಲ್ಲಿರುವ ಎಲ್ಲವನ್ನೂ ನಂಬಬಾರದು ಎಂಬುದು ಈ ಕಾಲದ ಅರಿವು. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ನಿಯಂತ್ರಣ ಮತ್ತು ಸಹಭಾಗಿತ್ವ

1) ನಡಿಗೆ ಮತ್ತು ಪರಾವರ್ತಿತ ಪ್ರತಿಕ್ರಿಯೆ ಇವುಗಳ ನಡುವಿನ ವ್ಯತ್ಯಾಸವೇನು?

ಉತ್ತರ:– ನಡಿಗೆ ಐಚ್ಛಿಕ ಕ್ರಿಯೆಯಾಗಿದ್ದು ನಮ್ಮ ಆಲೋಚನೆಗೆ ಒಳಪಟ್ಟು ಕಾರ್ಯನಿರ್ವಹಿಸುದು.

ಪರಾವರ್ತಿತ ಪ್ರತಿಕ್ರಿಯೆಯು ಆಲೋಚನೆಗಿಂತ ಮುಂಚೆ ತಾನೇ ತಾನಾಗಿ ಉಂಟಾಗುವ ತಕ್ಷಣದ ಕ್ರಿಯೆಯಾಗಿದೆ, ಇದು ನಮ್ಮ ಆಲೋಚನೆಗೆ ಬರದೇ ನಡೆಯುವ ಕ್ರಿಯೆ. ಉದಾ:– ಬೆಂಕಿ ಜ್ವಾಲೆಯನ್ನು ಮುಟ್ಟಿದಾಗ ಕೈಯನ್ನು ತಕ್ಷಣ ಹಿಂದಕ್ಕೆ ತೆಗೆದುಕೊಳ್ಳುವುದು.

2) ಸಂಸರ್ಗದಲ್ಲಿ ಎರಡು ನರಕೋಶಗಳ ಮಧ್ಯೆ ಏನಾಗುತ್ತದೆ?

ಉತ್ತರ:– ಒಂದು ನರಕೋಶದ ಆಕ್ಸಾನ್ ತುದಿಗೂ ಮತ್ತು ಇನ್ನೊಂದು ನರಕೋಶದ ಡೆಂಡ್ರೈಟ್ ತುದಿಗೂ ನಡುವೆ ಇರುವ ಸಣ್ಣ ಅವಕಾಶವನ್ನು ಸಂಸರ್ಗ ಎನ್ನುವರು, ಆಕ್ಸಾನ್ ತುದಿಯ ರಾಸಾಯನಿಕಗಳನ್ನು ಬಿಡುಗಡೆ ಮಾಡುವ ಮೂಲಕ ವಿದ್ಯುತ್ ಆವೇಗಗಳು ಸಂಸರ್ಗವನ್ನು ದಾಟಿ ಮುಂದಿನ ನರಕೋಶದ ಡೆಂಡ್ರೈಟ್‌ಗಳಿಗೆ ವರ್ಗವಾಗುವಂತೆ ಮಾಡುವುದು. ಹೀಗೆ ಅನೇಕ ನರಕೋಶಗಳ ಮೂಲಕ ಆವೇಗಗಳು ಅಂತಿಮವಾಗಿ ಸ್ನಾಯುಗಳಿಗೆ ಅಥವಾ ಗ್ರಂಥಿಗಳಿಗೆ ವಿಸ್ತರಿಸುವುದು.

3) ಮಿದುಳಿನ ಯಾವ ಭಾಗವು ದೇಹದ ಭಂಗಿ ಮತ್ತು ಸಮತೋಲನವನ್ನು ನಿರ್ವಹಿಸುತ್ತದೆ?

ಉತ್ತರ:– ಹಿಮ್ಮೆದುಳಿನ ಅನುಮಸ್ತಿಷ್ಕ ಭಾಗವು ದೇಹದ ಭಂಗಿ ಮತ್ತು ಸಮತೋಲನ ಕಾಪಾಡುವುದು.

4) ಪರಿವರ್ತಿತ ಚಾಪ ಕುರಿತ ಚಿತ್ರ ಬರೆದು ಭಾಗಗಳನ್ನು ಹೆಸರಿಸಿ

ಉತ್ತರ:–



5) ಮಿದುಳಿನ ಮೂರು ಪ್ರಮುಖ ಭಾಗಗಳ(ಪ್ರದೇಶಗಳ)ನ್ನು ಹೆಸರಿಸಿ

ಉತ್ತರ:– ಮಿದುಳಿನ ಮೂರು ಪ್ರಮುಖ ಭಾಗಗಳು ಅಥವಾ ಪ್ರದೇಶಗಳೆಂದರೆ, ಮುಮ್ಮೆದುಳು, ಮಧ್ಯಮಿದುಳು ಮತ್ತು ಹಿಮ್ಮೆದುಳು.

6) ಮುಮ್ಮೆದುಳಿನ ಕುರಿತು ಬರೆಯಿರಿ

ಉತ್ತರ:– ಮುಮ್ಮೆದುಳು (fore brain) ಮಿದುಳಿನ ಪ್ರಮುಖ ಆಲೋಚನೆಯ ಭಾಗವಾಗಿದೆ. ಇದು ವಿವಿಧ ಗ್ರಾಹಕ ಜೀವಕೋಶಗಳಿಂದ ಸಂವೇದನಾ ಆವೇಗಗಳನ್ನು ಸ್ವೀಕರಿಸುವ ಪ್ರದೇಶಗಳನ್ನು ಹೊಂದಿದೆ. ಮುಮ್ಮೆದುಳಿನ ಬೇರೆ ಬೇರೆ ಪ್ರದೇಶಗಳು ಶ್ರವಣ, ವಾಸನೆ, ದೃಷ್ಟಿ ಮತ್ತಿತರ ಕಾರ್ಯಗಳನ್ನು ನಿರ್ವಹಿಸಲು ವೈಶಿಷ್ಟ್ಯತೆಯನ್ನು ಪಡೆದಿವೆ. ಮುಮ್ಮೆದುಳಿನಲ್ಲಿ ಕೆಲವು ಸಾಂಘಿಕ ಪ್ರದೇಶಗಳಿದ್ದು ಅಲ್ಲಿ ಈ ಸಂವೇದನಾ ಮಾಹಿತಿಯನ್ನು ಇತರ ಗ್ರಾಹಕಗಳಿಂದ ಪಡೆದ ಮಾಹಿತಿಯೊಂದಿಗೆ ಹಾಗೂ ಈಗಾಗಲೇ ಮಿದುಳಿನಲ್ಲಿ ಸಂಗ್ರಹವಾಗಿರುವ ಮಾಹಿತಿಯೊಂದಿಗೆ ಜೊತೆಯಾಗಿರಿಸಿ ಅರ್ಥೈಸಲಾಗುತ್ತದೆ. ಇವೆಲ್ಲವುಗಳ ಆಧಾರದ ಮೇಲೆ ಹೇಗೆ ಪ್ರತಿಕ್ರಿಯಿಸಬೇಕು ಎಂಬುದನ್ನು ನಿರ್ಣಯಿಸಲಾಗುತ್ತದೆ ಮತ್ತು ಮಾಹಿತಿಯನ್ನು ಕಾರ್ಯನಿರ್ವಾಹಕ ಪ್ರದೇಶಗಳಿಗೆ ರವಾನಿಸಲಾಗುತ್ತದೆ, ಅವು ನಮ್ಮ ಕಾಲಿನ ಸ್ನಾಯುಗಳಂಥ ಐಚ್ಛಿಕ ಸ್ನಾಯುಗಳ ಚಲನೆಯನ್ನು ನಿಯಂತ್ರಿಸುತ್ತವೆ. ಆದಾಗ್ಯೂ ಕೆಲವು ಸಂವೇದನೆಗಳು ದೃಷ್ಟಿ ಹಾಗೂ ಶ್ರವಣಗಳಿಗಿಂತ ವಿಶಿಷ್ಟವಾಗಿವೆ. ಉದಾಹರಣೆಗೆ, ನಾವು ಸಾಕಷ್ಟು ಆಹಾರ ಸೇವಿಸಿದ್ದೇವೆ ಹಾಗೂ ಹೊಟ್ಟೆ ತುಂಬಿದೆ ಎಂಬ ಭಾವನೆಯ ಸಂವೇದನೆಯು ಹಸಿವಿನೊಂದಿಗೆ ಸಂಬಂಧಿಸಿದ ಕೇಂದ್ರದ ಕಾರಣದಿಂದ ತಿಳಿಯುತ್ತದೆ ಅದು ಮುಮ್ಮೆದುಳಿನ ಪ್ರತ್ಯೇಕ ಭಾಗದಲ್ಲಿದೆ.

6) ಮಾನವ ಹಲವು ಆಲೋಚನೆಗಳನ್ನು ಮಾಡುತ್ತಾನೆ, ಈ ಕಾರ್ಯದಲ್ಲಿ ಮೆದುಳು ಬಳ್ಳಿಯ ಪಾತ್ರ ಹೇಗಿದೆ ಎಂಬುದನ್ನು ವಿವರಿಸಿ

ಅಥವಾ

'ನಾವು ಮಾಡುವ ಆಲೋಚನೆ ಮತ್ತು ಕೇಂದ್ರ ನರವ್ಯೂಹ' ಈ ಕುರಿತು ಬರೆಯಿರಿ

ಉತ್ತರ:– ಮಿದುಳುಬಳ್ಳಿಯು ಆಲೋಚನೆ ಮಾಡಲು ಮಾಹಿತಿಯನ್ನು ಪೂರೈಸುವ ನರಗಳಿಂದ ಮಾಡಲ್ಪಟ್ಟಿದೆ. ಆಲೋಚನಾ ಪ್ರಕ್ರಿಯೆಯು ಹೆಚ್ಚು ಸಂಕೀರ್ಣವಾದ ಯಾಂತ್ರಿಕ ವ್ಯವಸ್ಥೆ ಮತ್ತು ನರವ್ಯೂಹ ಜೋಡಣೆಗಳನ್ನು ಒಳಗೊಂಡಿದೆ. ಇವು ದೇಹದ ಸಮನ್ವಯತೆಯ ಮುಖ್ಯ ಕೇಂದ್ರವಾದ ಮಿದುಳಿನಲ್ಲಿ ಕೇಂದ್ರೀಕೃತವಾಗಿವೆ. ಮಿದುಳು ಮತ್ತು ಮಿದುಳುಬಳ್ಳಿ ಒಟ್ಟಾಗಿ ಕೇಂದ್ರ ನರವ್ಯೂಹ ವ್ಯವಸ್ಥೆಯನ್ನು (central nervous system) ರೂಪಿಸುತ್ತವೆ. ಅವು ದೇಹದ ಎಲ್ಲಾ ಭಾಗಗಳಿಂದ ಮಾಹಿತಿಯನ್ನು ಸ್ವೀಕರಿಸುತ್ತವೆ ಮತ್ತು ಅದನ್ನು ಸಂಯೋಜಿಸುತ್ತವೆ. ನಾವು ನಮ್ಮ ಕ್ರಿಯೆಗಳ ಬಗ್ಗೆ ಕೂಡಾ ಆಲೋಚಿಸುತ್ತೇವೆ. ಬರೆಯುವುದು, ಮಾತನಾಡುವುದು, ಒಂದು ಕುರ್ಚಿಯನ್ನು ಜರುಗಿಸುವುದು, ಒಂದು ಕಾರ್ಯಕ್ರಮದ ಕೊನೆಯಲ್ಲಿ ಚಪ್ಪಾಳೆ ತಟ್ಟುವುದು ಇವೆಲ್ಲ ಐಚ್ಛಿಕ ಕ್ರಿಯೆಗಳಿಗೆ ಉದಾಹರಣೆಗಳಾಗಿವೆ. ಈ ಕ್ರಿಯೆಗಳು ಮುಂದೇನು ಮಾಡಬೇಕೆಂಬ ನಿರ್ಧಾರವನ್ನು ಆಧರಿಸಿವೆ. ಅದೇ ರೀತಿ ಮಿದುಳೂ ಕೂಡಾ ಸ್ನಾಯುಗಳಿಗೆ ಸಂದೇಶಗಳನ್ನು ಕಳಿಸಬೇಕಾಗುತ್ತದೆ. ಇದು ನರವ್ಯೂಹವು ಸ್ನಾಯುಗಳೊಂದಿಗೆ ಸಂವಹನ ನಡೆಸುವ ದ್ವಿತೀಯ ವಿಧಾನವಾಗಿದೆ. ಕೇಂದ್ರ ನರವ್ಯೂಹ ಮತ್ತು ದೇಹದ ಇತರ ಭಾಗಗಳ ನಡುವಿನ ಸಂವಹನವನ್ನು ಮಿದುಳಿನಿಂದ ಹೊರಡುವ ಮಿದುಳು ನರಗಳು ಮತ್ತು ಮಿದುಳುಬಳ್ಳಿಯಿಂದ ಹೊರಡುವ ಮಿದುಳುಬಳ್ಳಿ ನರಗಳನ್ನು ಒಳಗೊಂಡ ಪರಿಧಿ ನರವ್ಯೂಹ (peripheral nervous system) ಅನುಕೂಲಿಸುತ್ತವೆ.

7) ರಕ್ತದ ಒತ್ತಡ, ಬಾಯಲ್ಲಿ ನೀರೂರುವಿಕೆ ಮತ್ತು ವಾಂತಿಯಾಗುವಿಕೆಗಳಂಥ ಎಲ್ಲಾ ಅನೈಚ್ಛಿಕ ಕ್ರಿಯೆಗಳನ್ನು ಯಾವುದು ನಿಯಂತ್ರಿಸುತ್ತದೆ?

ಉತ್ತರ:– ಹಿಮ್ಮೆದುಳಿನ ಮೆಡುಲ್ಲ

8) ನೇರ ರೇಖೆಯಲ್ಲಿ ನಡೆಯುವುದು, ಬೈಸಿಕಲ್ ಸವಾರಿ, ಒಂದು ಪೆನ್ಸಿಲ್‌ಅನ್ನು ಎತ್ತಿಕೊಳ್ಳುವುದು ಮುಂತಾದ ಚಟುವಟಿಕೆಗಳನ್ನು ಮಾಡಲು ಯಾರ ಅವಶ್ಯಕತೆ ಇದೆ?

ಉತ್ತರ:– ಹಿಮ್ಮೆದುಳಿನ ಭಾಗವಾದ ಅನುಮಸ್ತಿಷ್ಕ

(ಮುಂದುವರಿಯುವುದು..........)

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

II PUC MATHEMATICS

DETERMINANTS

Applications of simultaneous linear equations

1. The sum of three numbers is 6. If we multiply the third number by 2 and add the first number to the result, we get 7. By adding second and third numbers to three times the first number, we get 12. Using matrices find the numbers.

Soln:- (..........Contd)

$$\begin{bmatrix}1&1&1\\1&0&2\\3&1&1\end{bmatrix}\begin{bmatrix}x\\y\\z\end{bmatrix}=\begin{bmatrix}6\\7\\12\end{bmatrix} \text{ i.e., } AX=B$$

where $A=\begin{bmatrix}1&1&1\\1&0&2\\3&1&1\end{bmatrix}$, $X=\begin{bmatrix}x\\y\\z\end{bmatrix}$ and $B=\begin{bmatrix}6\\7\\12\end{bmatrix}$

$$\text{Now, } |A|=\begin{vmatrix}1&1&1\\1&0&2\\3&1&1\end{vmatrix}$$

$$=1(0-2)-(1-6)+(1-0)$$

$$=-2+5+1=4\neq 0$$

∴ the above system of equations has a unique solution, given by $X=A^{-1}B$.

$$\therefore \text{adj } A=\begin{bmatrix}-2&5&1\\1&-2&2\\-2&-1&-1\end{bmatrix}'=\begin{bmatrix}-2&0&2\\5&-2&-1\\1&2&-1\end{bmatrix}$$

$$\Rightarrow A^{-1}=\frac{1}{|A|}\text{adj } A=\frac{1}{4}\begin{bmatrix}-2&0&2\\5&-2&-1\\1&2&-1\end{bmatrix}$$

Now, $X=A^{-1}B$

$$\Rightarrow X=\frac{1}{4}\begin{bmatrix}-2&0&2\\5&-2&-1\\1&2&-1\end{bmatrix}\begin{bmatrix}6\\7\\12\end{bmatrix}$$

$$\Rightarrow\frac{1}{4}\begin{bmatrix}-12+0+24\\30-14-12\\6+14-12\end{bmatrix}=\begin{bmatrix}3\\1\\2\end{bmatrix}$$

$$\therefore\begin{bmatrix}x\\y\\z\end{bmatrix}=\begin{bmatrix}3\\1\\2\end{bmatrix}.$$

Thus $x=3$, $y=1$ and $z=2$.

Hence, the three numbers are 3, 1 and 2 respectively.

2. An amount of Rs. 5000 is put into three investments at the rate of interest of 6%, 7% and 8% per annum respectively. The total annual income is Rs.358. If the combined income from the first two investments is Rs. 70 more than the income from the third, find the amount of each investment by matrix method.

Soln:- Let x, y and z Rs. be the investments at the rates of interest of 6%, 7% and 8% per annum respectively.

Then, Total investment = Rs 5000 gives $x+y+z=5000$

Now, income from Ist investment of Rs.x

$$=\text{Rs.}\frac{6x}{100}$$

Income from 2nd investment of Rs.y

$$=\text{Rs.}\frac{7y}{100}$$

Income from 3rd investment of Rs.z

$$=\text{Rs.}\frac{8z}{100}$$

Total annual income

$$=\text{Rs.}\left(\frac{6x}{100}+\frac{7y}{100}+\frac{8z}{100}\right)$$

$$\Rightarrow\frac{6x}{100}+\frac{7y}{100}+\frac{8z}{100}=358$$

[∴ total annual income = Rs.35800]

$$\Rightarrow 6x+7y+8z=35800$$

Since the combined income from the first two investments is Rs. 70 more than the income from the third.

$$\therefore\frac{6x}{100}+\frac{7y}{100}=70+\frac{8z}{100}$$

$$\Rightarrow 6x+7y-8z=7000$$

Thus, we have $x+y+z=5000$

$6x+7y+8z=35800$

$6x+7y-8z=7000$

This system of equations can be written in matrix form as follows:

$$\begin{bmatrix}1&1&1\\6&7&8\\6&7&-8\end{bmatrix}\begin{bmatrix}x\\y\\z\end{bmatrix}=\begin{bmatrix}5000\\35800\\7000\end{bmatrix} \text{ (or)}$$

$AX=B$;

where $A=\begin{bmatrix}1&1&1\\6&7&8\\6&7&-8\end{bmatrix}$, $X=\begin{bmatrix}x\\y\\z\end{bmatrix}$ and

$$B=\begin{bmatrix}5000\\35800\\7000\end{bmatrix}$$

$$\text{Now, } |A|=\begin{vmatrix}1&1&1\\6&7&8\\6&7&-8\end{vmatrix}$$

$$=1(-56-56)-(-48-48)+(42-42)$$

$$=-16\neq 0.$$

∴ A^{-1} exists and the solution of the given system of equations is given by $X=A^{-1}B$.

(Contd........)

ಅಭಿವೃದ್ಧಿ, ಅಧಿಕಾರದಲ್ಲಿ ಕಡೆಗಣಿಸಿದರೆ ಅಪಾಯ: ಬಸನಗೌಡ ಪಾಟೀಲ ಯತ್ನಾಳ ಎಚ್ಚರಿಕೆ

ಉತ್ತರ ಕರ್ನಾಟಕ ಸಮಸ್ಯೆ: ಸವಿಸ್ತಾರ ಚರ್ಚೆ

ಪ್ರಜಾವಾಣಿ ವಾರ್ತೆ

ವಿಧಾನಸಭೆ: ಕುಡಿಯುವ ನೀರಿಲ್ಲ, ಶಾಲೆಗಳಲ್ಲಿ ಶಿಕ್ಷಕರಿಲ್ಲ, ಉದ್ಯೋಗವಿಲ್ಲದೇ ಗುಳೆ ಹೋಗಿದ್ದ ಕೆಲವರು ಊರಿಗೆ ಜೀವಂತವಾಗಿ ಮರಳುವುದೇ ಇಲ್ಲ, ಕೆಲವೆಡೆ ಆಸ್ಪತ್ರೆ ಇದ್ದರೂ ವೈದ್ಯರೇ ಇಲ್ಲ...

ಕಿತ್ತೂರು ಹಾಗೂ ಕಲ್ಯಾಣ ಕರ್ನಾಟಕ ಸೇರಿದಂತೆ 'ಉತ್ತರ ಕರ್ನಾಟಕ'ದ ಸಮಸ್ಯೆಗಳ ಮೇಲೆ ಮಂಗಳವಾರ ನಡೆದ ಚರ್ಚೆಯಲ್ಲಿ, ಪಾಲ್ಗೊಂಡ ಸದಸ್ಯರು 'ಇಲ್ಲ'ಗಳ ಸರಣಿಯನ್ನೇ ಸದನದ ಮುಂದಿಟ್ಟರು. ತಮ್ಮ ಭಾಗವನ್ನು ಕಡೆಗಣಿಸುತ್ತಿರುವುದರ ನೋವು ಕೆಲವೊಮ್ಮೆ ಆಕ್ರೋಶವಾಗಿ ಹೊರಹೊಮ್ಮಿತು.

ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ, 'ಅಭಿವೃದ್ಧಿ ಮತ್ತು ರಾಜಕೀಯ ಅಧಿಕಾರ ಹಂಚಿಕೆಯಲ್ಲಿ ಉತ್ತರ ಕರ್ನಾಟಕವನ್ನು ನಿರಂತರವಾಗಿ ಕಡೆಗಣಿಸುತ್ತಾ ಬರಲಾಗಿದೆ. ಇದು ಮುಂದುವರಿದರೆ ಈ ಭಾಗದ ಜನರು ಬಜರಂಗಿಗಳಾಗಿ ಬೀದಿಗಿಳಿಯಬಹುದು. ಇನ್ನು ಮುಂದಾದರೂ ನಿರ್ಲಕ್ಷ್ಯ ಧೋರಣೆ ಕೈಬಿಡಬೇಕು' ಎಂದು ಆಗ್ರಹಿಸಿದರು.

ಆಡಳಿತ ಯಂತ್ರವನ್ನು ಉತ್ತರಕ್ಕೆ ತರುವ ಪ್ರಯತ್ನ ಆಗಬೇಕು. ಸುವರ್ಣ ವಿಧಾನಸೌಧಕ್ಕೆ ಪ್ರಮುಖ ಕಚೇರಿಗಳ ಸ್ಥಳಾಂತರ ಆಗಬೇಕು. ಪ್ರತಿ ಎರಡರಲ್ಲಿ ಒಂದು ಸಂಪುಟ ಸಭೆಯನ್ನು ಸುವರ್ಣ ವಿಧಾನಸೌಧದಲ್ಲಿ ನಡೆಸಬೇಕು. ನೀರಾವರಿ ಯೋಜನೆಗಳಿಗೆ ₹ 25,000 ಕೋಟಿ ಅನುದಾನ ಒದಗಿಸಬೇಕು ಎಂದು ಆಗ್ರಹಿಸಿದರು.

ಉತ್ತರ ಕರ್ನಾಟಕದ ಮೇಲೆ ನಡೆದ ಚರ್ಚೆಯಲ್ಲಿ ಬಿಜೆಪಿಯ ಶರಣು ಸಲಗರ, ಅವಿನಾಶ ಜಾಧವ್, ಕಾಂಗ್ರೆಸ್‌ನ ರಾಜು ಕಾಗೆ, ಜೆ.ಎನ್. ಗಣೇಶ್, ಜೆಡಿಎಸ್‌ನ ಕರೆಮ್ಮ ಜಿ ನಾಯಕ ಮಾತನಾಡಿದರು.

ಯಾರು ಏನೆಂದರು

ಡಾ.ಡಿ.ಎಂ. ನಂಜುಂಡಪ್ಪ ವರದಿಯಲ್ಲಿರುವ ಅತಿ ಹಿಂದುಳಿದ ತಾಲ್ಲೂಕುಗಳ ಪಟ್ಟಿಯಲ್ಲಿ ಕನಕಪುರ ಕೂಡ ಇದೆ. ಅಲ್ಲಿ ಶಾಸಕರ ಸ್ವಂತ ಅಭಿವೃದ್ಧಿಯಷ್ಟೇ ಆಗಿದೆ

ಬಸನಗೌಡ ಪಾಟೀಲ ಯತ್ನಾಳ, ಬಿಜೆಪಿ



ಉತ್ತರ ಕರ್ನಾಟಕದ ಭಾಗದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಆದ್ಯತೆ ದೊರಕಿಲ್ಲ. ಈ ಭಾಗದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ವಿಶೇಷ ಯೋಜನೆ ರೂಪಿಸಿ, ಅನುಷ್ಠಾನಕ್ಕೆ ತರಬೇಕು

ಜೆ.ಟಿ. ಪಾಟೀಲ, ಕಾಂಗ್ರೆಸ್

ಸ್ವಾತಂತ್ರ್ಯ ಬಂದು 75 ವರ್ಷ ಆದರೂ ಶುದ್ಧ ಕುಡಿಯುವ ನೀರಿಗೆ ಗತಿ ಇಲ್ಲದೇ ಜನ ಸಾಯುವ ಪರಿಸ್ಥಿತಿ ಇದೆ ಎಂದರೆ ನಮ್ಮ ದುರಾದೃಷ್ಟ ಯಾರಿಗೆ ಹೇಳೋಣ. ಸಣ್ಣಪುಟ್ಟ ಚಿಕಿತ್ಸೆಗೂ ಹೈದರಾಬಾದ್, ಸೊಲ್ಲಾಪುರಕ್ಕೆ ಹೋಗಬೇಕಿದೆ. ಗುಳೆ ಹೋಗುವುದು ನಿಂತೇ ಇಲ್ಲ. ದುಡಿಯಲು ಹೋದವರು ಹೆಣವಾಗಿ ವಾಪಸ್ ಬರುವುದನ್ನಾದರೂ ತಪ್ಪಿಸಿ.

ಶರಣಗೌಡ ಕಂದಕೂರ, ಜೆಡಿಎಸ್

ಶಿರಹಟ್ಟಿಯಲ್ಲಿ ತಾಲ್ಲೂಕು ಆಸ್ಪತ್ರೆ ಇಲ್ಲ. ಮುಂಡರಗಿ ತಾಲ್ಲೂಕು ಆದರೂ ಸರ್ಕಾರಿ ಪ್ರೌಢಶಾಲೆಯೇ ಇಲ್ಲ. ದಶಕಗಳಿಂದ ನಡೆಯುತ್ತಿರುವ ಏತ ನೀರಾವರಿ ಕಾಮಗಾರಿಗಳ ಪೈಕಿ ಒಂದೇ ಒಂದು ಪೂರ್ಣಗೊಂಡಿಲ್ಲ

ಡಾ. ಚಂದ್ರು ಲಮಾಣಿ, ಬಿಜೆಪಿ

ಪದವಿ ಕಾಲೇಜು ಇದ್ದರೂ 30 ವರ್ಷದಿಂದ ವಿಜ್ಞಾನ ಕೋರ್ಸ್ ಇರಲಿಲ್ಲ. ಈಗ ಶುರು ಮಾಡಿದ್ದೇವೆ. ಕೂಡ್ಲಿಗಿ ಕ್ಷೇತ್ರದಾದ್ಯಂತ ಜನಸಂಖ್ಯೆಗೆ ಅನುಗುಣವಾಗಿ 14 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇರಬೇಕು. ಆದರೆ, 6 ಮಾತ್ರ ಇದೆ

ಎನ್.ಟಿ. ಶ್ರೀನಿವಾಸ್, ಕಾಂಗ್ರೆಸ್



ಉತ್ತರ ಕರ್ನಾಟಕದ ಮೇಲೆ ಚರ್ಚೆ ನಡೆಯುತ್ತದೆ. ಅದಕ್ಕೆ ಸರ್ಕಾರ ಉತ್ತರವನ್ನೂ ನೀಡುತ್ತದೆ. ಚರ್ಚೆಯ ಪರಿಣಾಮ ಏನಾಯಿತು ಎಂದು ಮುಂದಿನ ಅಧಿವೇಶನದಲ್ಲಿ ವರದಿ ಕೊಡಿಸುವ ಕೆಲಸ ಮಾಡಿ. ಸರ್ವಜ್ಞ ಪೀಠಕ್ಕೆ ₹50 ಕೋಟಿ ಕೊಡಿಸಿ

ಯು.ಬಿ.ಬಣಕಾರ, ಕಾಂಗ್ರೆಸ್

ಸರಕು, ಕ್ಯಾಬ್: ತೆರಿಗೆ ಪದ್ಧತಿ ಮತ್ತೆ ತ್ರೈಮಾಸಿಕ

ಪ್ರಜಾವಾಣಿ ವಾರ್ತೆ

ವಿಧಾನಸಭೆ: ₹ 10 ಲಕ್ಷದಿಂದ ₹ 15 ಲಕ್ಷದವರೆಗಿನ ಮೌಲ್ಯ ಹಾಗೂ 1.5 ಟನ್‌ನಿಂದ 12 ಟನ್‌ವರೆಗಿನ ತೂಕದ ಸರಕು ಸಾಗಣೆ ಮತ್ತು ಕ್ಯಾಬ್ ವಾಹನಗಳಿಗೆ ಜೀವಿತಾವಧಿ ತೆರಿಗೆ ವಿಧಿಸುವುದನ್ನು ಹಿಂಪಡೆದು, ಹಿಂದಿನಂತೆಯೇ ತ್ರೈಮಾಸಿಕವಾಗಿ ತೆರಿಗೆ ಸಂಗ್ರಹಿಸಲು ಅವಕಾಶ ಕಲ್ಪಿಸುವ 'ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ಎರಡನೇ ತಿದ್ದುಪಡಿ) ಮಸೂದೆ–2023' ಅನ್ನು ಮಂಗಳವಾರ ಮಂಡಿಸಲಾಯಿತು.

1.5 ಟನ್ ತೂಕದಿಂದ 12 ಟನ್ ಒಟ್ಟು ತೂಕದ ಸರಕು ಸಾಗಣೆ ವಾಹನಗಳ ಪೂರ್ಣಾವಧಿ ತೆರಿಗೆ, ರಾಜ್ಯದ ಹೊರಗೆ ನೋಂದಣಿಯಾಗಿರುವ ಕ್ಯಾಬ್‌ಗಳ ಪೂರ್ಣಾವಧಿ ತೆರಿಗೆ ವಿಧಿಸಲು ಅವಕಾಶ ಕಲ್ಪಿಸುವ ಮಸೂದೆಗೆ ಜುಲೈ ತಿಂಗಳಲ್ಲಿ ನಡೆದ ವಿಧಾನಮಂಡಲದ ಅಧಿವೇಶನದಲ್ಲಿ ಅಂಗೀಕಾರ ನೀಡಲಾಗಿತ್ತು. ಆದರೆ, ಜೀವಿತಾವಧಿ ತೆರಿಗೆ ಪಾವತಿಯಿಂದ ತಮಗೆ ಹೊರೆಯಾಗುತ್ತದೆ ಎಂದು ವಾಹನ ಮಾಲೀಕರು ವಿರೋಧಿಸಿದ್ದರು.

ಈಗ ಇರುವ ವಾಹನಗಳಿಗೆ ಹಿಂದಿನಂತೆಯೇ ತ್ರೈಮಾಸಿಕ ಅವಧಿಗೆ ತೆರಿಗೆ ಪಾವತಿಗೆ ಅವಕಾಶ ಕಲ್ಪಿಸುವ ಅಂಶ ಈ ತಿದ್ದುಪಡಿ ಮಸೂದೆಯಲ್ಲಿದೆ. ಹೊಸ ವಾಹನಗಳಿಗೆ ಮಾತ್ರ ಜೀವಿತಾವಧಿ ತೆರಿಗೆ ಸಂಗ್ರಹಿಸಲು ಮಸೂದೆ ಅವಕಾಶ ಕಲ್ಪಿಸಲಿದೆ. ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಮಸೂದೆಯನ್ನು ಮಂಡಿಸಿದರು.

ನ್ಯಾಯಾಲಯಗಳ ಹೊರೆ ಇಳಿಕೆ: ಒಂದೇ ಪ್ರಕರಣದಲ್ಲಿ ಹಲವು ಸ್ವರೂಪದ ಮೇಲ್ಮನವಿಗಳನ್ನು ಹೈಕೋರ್ಟ್‌ಗೆ ಸಲ್ಲಿಸುವುದನ್ನು ತಡೆದು, ಹೈಕೋರ್ಟ್‌ನಲ್ಲಿ ಪ್ರಕರಣಗಳ ಸಂಖ್ಯೆಯನ್ನು ಇಳಿಕೆ ಮಾಡುವ ಪ್ರಸ್ತಾವವುಳ್ಳ 'ಕರ್ನಾಟಕ ಹೈಕೋರ್ಟ್ (ತಿದ್ದುಪಡಿ) ಮಸೂದೆ–2023' ಅನ್ನು ಕಾನೂನು ಸಚಿವ ಎಚ್.ಕೆ. ಪಾಟೀಲ ಮಂಡಿಸಿದರು.

ಜಾತಿ ಗಣತಿ: ಡಿಕೆಶಿ ವಿರುದ್ಧ ಖರ್ಗೆ ಟೀಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ಜಾತಿ ಜನಗಣತಿ ವಿರೋಧಿಸಿ ಬರೆದ ಪತ್ರಕ್ಕೆ ಸಹಿ ಹಾಕಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಟೀಕಿಸಿದರು.

ಜಮ್ಮು ಮತ್ತು ಕಾಶ್ಮೀರಕ್ಕೆ ಸಂಬಂಧಿಸಿದ ಎರಡು ಮಸೂದೆಗಳ ಚರ್ಚೆ ವೇಳೆ ರಾಜ್ಯಸಭೆಯಲ್ಲಿ ಪ್ರತಿಕ್ರಿಯಿಸಿದ ಅವರು, 'ವರದಿ ಬಿಡುಗಡೆಗೆ ಶಿವಕುಮಾರ್ ವಿರೋಧಿಸುತ್ತಿದ್ದಾರೆ. ನೀವು (ಬಿಜೆಪಿ) ವಿರೋಧಿಸುತ್ತಿದ್ದೀರಿ. ಈ ವಿಷಯದಲ್ಲಿ ಪ್ರಬಲ ಜಾತಿಗಳ ಜನರೆಲ್ಲ ಒಗ್ಗಟ್ಟಾಗಿದ್ದಾರೆ. ಈ ವಿಷಯದಲ್ಲಿ ಪ್ರಬಲ ಜಾತಿಯ ಜನರು ಆಂತರಿಕವಾಗಿ ಒಗ್ಗಟ್ಟಾಗುತ್ತಾರೆ' ಎಂದರು.

ಚರ್ಚೆಯ ಸಂದರ್ಭದಲ್ಲಿ ಬಿಜೆಪಿ ಸದಸ್ಯ ಸುಶೀಲ್ ಕುಮಾರ್ ಮೋದಿ, 'ಇತರ ಹಿಂದುಳಿದ ವರ್ಗಗಳ ಕುರಿತು ಕಾಂಗ್ರೆಸ್ ತೋರಿಸುತ್ತಿರುವ ಪ್ರೀತಿ ಒಂದು ನಾಟಕ' ಎಂದು ವ್ಯಂಗ್ಯವಾಗಿ ಹೇಳಿದರು. ಉದಾಹರಣೆಯಾಗಿ, ಜಾತಿ ಗಣತಿ ವಿಷಯದಲ್ಲಿ ಶಿವಕುಮಾರ್ ತಳೆದ ನಿಲುವನ್ನು ಉಲ್ಲೇಖಿಸಿದರು. 'ಜಾತಿ ಗಣತಿ ವರದಿಯನ್ನು ಕರ್ನಾಟಕ ಸರ್ಕಾರ ಯಾವಾಗ ಬಹಿರಂಗಗೊಳಿಸುತ್ತದೆ ಎಂಬುದನ್ನು ಖರ್ಗೆಯವರೇ ಹೇಳಬೇಕು. ವರದಿ ಬಹಿರಂಗಗೊಳಿಸುವುದನ್ನು ವಿರೋಧಿಸಿ ಒಕ್ಕಲಿಗರ ಸಂಘ ಸಲ್ಲಿಸಿರುವ ಮನವಿಗೆ ಶಿವಕುಮಾರ್ ಸಹಿ ಹಾಕಿದ್ದಾರೆ' ಎಂದರು.

ಆಗ ಮಧ್ಯಪ್ರವೇಶಿಸಿದ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ, 'ಈ ವರದಿಯನ್ನು ಉಪಮುಖ್ಯಮಂತ್ರಿ ಸೇರಿದಂತೆ ಕಾಂಗ್ರೆಸ್ ಶಾಸಕರು ಹಾಗೂ ವೀರಶೈವ ಮಹಾಸಭಾ ಸದಸ್ಯರು ವಿರೋಧಿಸಿದ್ದಾರೆ' ಎಂದರು. ಆಗ ಎದ್ದು ನಿಂತು ಖರ್ಗೆ ಪ್ರತಿಕ್ರಿಯಿಸಿದರು.

ಗಣತಿಗೆ ವಿರೋಧವಿಲ್ಲ ಡಿ.ಕೆ.ಶಿವಕುಮಾರ್



ಬೆಳಗಾವಿ: 'ಜಾತಿ ಗಣತಿಗೆ ಎಲ್ಲಿಯೂ ವಿರೋಧ ವ್ಯಕ್ತಪಡಿಸಿಲ್ಲ. ಜಾತಿ ಗಣತಿಯ ಸಮೀಕ್ಷೆ ವೈಜ್ಞಾನಿಕವಾಗಿ, ವ್ಯವಸ್ಥಿತವಾಗಿ ನಡೆಯಬೇಕು ಎಂಬುದಷ್ಟೇ ನನ್ನ ಅಭಿಮತ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದರು.

ಜಾತಿ ಗಣತಿ ವಿರೋಧಿಸಿ ಬರೆದ ಪತ್ರಕ್ಕೆ ಸಹಿ ಹಾಕಿದ್ದಕ್ಕೆ ಡಿ.ಕೆ. ಶಿವಕುಮಾರ್ ಅವರನ್ನು ರಾಜ್ಯಸಭೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಟೀಕಿಸಿದ್ದರು. ಈ ಬಗ್ಗೆ ಸುದ್ದಿಗಾರರು ಗಮನಸೆಳೆದಾಗ ಪ್ರತಿಕ್ರಿಯಿಸಿದ ಅವರು, 'ಜಾತಿ ಗಣತಿ ಸಮೀಕ್ಷೆ ಸರಿಯಾಗಿ ನಡೆದಿಲ್ಲ ಎಂದು ಅನೇಕ ಶಾಸಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ' ಎಂದರು.

'ಮನೆ, ಮನೆಗೆ ತೆರಳಿ ಸಮೀಕ್ಷೆ ನಡೆಸಿಲ್ಲ ಎಂದು ದೂರುಗಳು ಬಂದಿವೆ. ಎಲ್ಲ ಸಮುದಾಯಗಳು ಜನಸಂಖ್ಯೆಗೆ ಅನುಗುಣವಾಗಿ ತಮ್ಮ ಹಕ್ಕು ಪಡೆಯಬೇಕು. ಅಲ್ಪಸಂಖ್ಯಾತರು, ಪರಿಶಿಷ್ಟರು ಸೇರಿದಂತೆ ಎಲ್ಲರೂ ತಮ್ಮ ಜನಸಂಖ್ಯೆ ಅನುಗುಣವಾಗಿ ಹಕ್ಕು ಹಾಗೂ ಅನುದಾನ ಕೇಳುತ್ತಾರೆ. ಈ ಜಾತಿ ಗಣತಿಯನ್ನು ವೈಜ್ಞಾನಿಕವಾಗಿ ಮಾಡಲಾಗಿದೆಯೇ ಎಂಬ ವಿಚಾರವಾಗಿ ನಾವು ಸ್ಪಷ್ಟೀಕರಣ ಕೇಳಿದ್ದೇವೆ' ಎಂದರು.

'ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆ ಮೇಲೆ ನಾವು ನಂಬಿಕೆ ಇಟ್ಟಿದ್ದೇವೆ. ಸಮಾಜದ ಎಲ್ಲ ವರ್ಗಗಳಿಗೆ ಸಾಮಾಜಿಕ ನ್ಯಾಯ ಒದಗಿಸಿಕೊಡುವ ಕಾಂಗ್ರೆಸ್ ಪಕ್ಷದ ಬದ್ಧತೆಗೆ ನಾನು ಬೆಂಬಲವಾಗಿ ನಿಲ್ಲುತ್ತೇನೆ. ಕೇಂದ್ರ ಸರ್ಕಾರದ ಜಾತಿ ವರ್ಗೀಕರಣದ ಅನ್ವಯ ನಾನು ಕೂಡ ಇತರೆ ಹಿಂದುಳಿದ ವರ್ಗದ ಸಮುದಾಯದ ನಾಯಕ. ಪಕ್ಷದ ಅಧ್ಯಕ್ಷನಾಗಿ ನಾನು ಎಲ್ಲ ವರ್ಗದ ಜನರನ್ನು ಸಮಾನವಾಗಿ ನೋಡಬೇಕು' ಎಂದರು.

ಜಾತಿ ಗಣತಿಯ ಕೆಲವು ದಾಖಲೆಗಳು ಕಾಣೆಯಾಗಿರುವ ಬಗ್ಗೆ ವರದಿಗಳಿವೆ ಎಂದು ಕೇಳಿದಾಗ, 'ಈ ವಿಚಾರ ನನಗೆ ಗೊತ್ತಿಲ್ಲ. ನಾನು ಈ ಬಗ್ಗೆ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಜೊತೆ ಮಾತನಾಡಿದ್ದು, ಈ ವರದಿಗೆ ಕಾರ್ಯದರ್ಶಿಗಳ ಸಹಿ ಇಲ್ಲವೆಂಬ ಮಾಹಿತಿ ಪಡೆದಿದ್ದೇನೆ. ಕಾರ್ಯದರ್ಶಿಗಳ ಸಹಿ ಇಲ್ಲದಿದ್ದರೆ ಹೇಗೆ ಸಿಂಧುವಾಗುತ್ತದೆ ಎಂಬ ಪ್ರಶ್ನೆ ಉದ್ಭವಿಸುತ್ತದೆ' ಎಂದರು.

ಲಕ್ಷ ದೀಪೋತ್ಸವ

ಲಕ್ಷದೀಪೋತ್ಸವದ ಪ್ರಯುಕ್ತ ಧರ್ಮಸ್ಥಳ ಮಂಜುನಾಥ ಸ್ವಾಮಿಯ ಸನ್ನಿಧಾನವು ಬೆಳಕಿನಲ್ಲಿ ಮಿನುಗುತ್ತಿರುವ ನೋಟ ಮಂಗಳವಾರ ಕಂಡುಬಂತು. ಈ ಕ್ಷಣವನ್ನು ಲಕ್ಷಾಂತರ ಭಕ್ತರು ಕಣ್ತುಂಬಿಕೊಂಡರು –ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್.

ಸ್ಟಾಂಪು ಶುಲ್ಕ: ಮಸೂದೆಗೆ ಪರಿಷತ್ ಅಸ್ತು

ವಿಧಾನ ಪರಿಷತ್: ದತ್ತಕ ಪತ್ರ, ಬ್ಯಾಂಕ್ ಗ್ಯಾರಂಟಿ, ದೃಢೀಕರಣ ಪತ್ರ, ಒಪ್ಪಂದ ಪತ್ರ, ಲಿಖಿತಗಳ ರದ್ಧತಿ, ಒಡಂಬಡಿಕೆ ಪತ್ರ, ಹೀಗೆ 54 ವಿಷಯಗಳಿಗೆ ಸಂಬಂಧಿಸಿದಂತೆ ಮುದ್ರಾಂಕ ಶುಲ್ಕವನ್ನು ಹೆಚ್ಚಿಸಲು ಅವಕಾಶ ಕಲ್ಪಿಸುವ 'ಕರ್ನಾಟಕ ಸ್ಟಾಂಪು(ತಿದ್ದುಪಡಿ) ಮಸೂದೆ- 2023' ಮಂಗಳವಾರ ಅಂಗೀಕಾರಗೊಂಡಿತು.

ಮಸೂದೆ ಮಂಡಿಸಿದ ಕಂದಾಯ ಸಚಿವ ಕೃಷ್ಣ ಬೈರೇಗೌಡ ವಿವರಣೆ ನೀಡಿದರು. ಮಸೂದೆಗೆ ಸಂಬಂಧಿಸಿದಂತೆ ಜೆಡಿಎಸ್‌ನ ಕೆ.ಎ. ತಿಪ್ಪೇಸ್ವಾಮಿ, ಟಿ.ಎ. ಶರವಣ, ಬಿಜೆಪಿಯ ತೇಜಸ್ವಿನಿ ಗೌಡ, ಕೆ.ಎಸ್. ನವೀನ್, ಕೇಶವ ಪ್ರಸಾದ್, ಪ್ರತಾಪ್‌ಸಿಂಹ ನಾಯಕ, ಎನ್. ರವಿಕುಮಾರ್ ಅವರ ಪ್ರಶ್ನೆಗಳಿಗೆ ಸ್ಪಷ್ಟನೆ ನೀಡಿದ ಸಚಿವರು, 'ಹೆಚ್ಚಿಸಿರುವ ಶುಲ್ಕ ಭಾರ ಎನಿಸಿದರೆ ಮರುಪರಿಶೀಲಿಸಿ, ಜನವರಿಯಲ್ಲಿ ಮತ್ತೆ ತಿದ್ದುಪಡಿ ಮಾಡಲಾಗುವುದು. ಈ ವಿಷಯದಲ್ಲಿ ಯಾವುದೇ ಪ್ರತಿಷ್ಠೆ ಇಲ್ಲ' ಎಂದರು.

'ಮುದ್ರಾಂಕ ಶುಲ್ಕ ಹೆಚ್ಚಿಸುವ ಮೂಲಕ ಗ್ಯಾರಂಟಿ ಯೋಜನೆಗಳಿಗೆ ಸಂಪನ್ಮೂಲ ಕ್ರೋಡೀಕರಿಸುವುದು ಸರ್ಕಾರ ಉದ್ದೇಶವಾಗಿದೆ' ಎಂಬ ಬಿಜೆಪಿ ಸದಸ್ಯರ ಆರೋಪಕ್ಕೆ, 'ಶುಲ್ಕ ಹೆಚ್ಚಳದಿಂದ ವಾರ್ಷಿಕ ₹ 100 ಕೋಟಿಯಿಂದ ₹ 200 ಕೋಟಿ ಆದಾಯ ನಿರೀಕ್ಷೆಯಿದೆ' ಎಂದು ತಿಳಿಸಿದರು.

'ಜನವರಿಯಲ್ಲಿ ಮತ್ತೊಂದು ಸಮಾವೇಶ'

ಪ್ರಜಾವಾಣಿ ವಾರ್ತೆ



ಹರಿಪ್ರಸಾದ್

ಬೆಳಗಾವಿ: 'ಬಿಲ್ಲವ, ಈಡಿಗ ಸಮುದಾಯದ ಮತ್ತೊಂದು ಸಮಾವೇಶವನ್ನು ಜನವರಿಯಲ್ಲಿ ಮಾಡಬೇಕು ಎಂದು ಸಮಾಜದವರು ಹೇಳುತ್ತಿದ್ದಾರೆ. ಆ ಬಗ್ಗೆ ಬೆಂಗಳೂರಿನಲ್ಲಿ ತೀರ್ಮಾನ ಕೈಗೊಳ್ಳುತ್ತೇವೆ' ಎಂದು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ನಾನು ಸಮಾವೇಶ ಮಾಡಿದ ನಂತರ ಬೆಂಗಳೂರಿನಲ್ಲಿ ಮತ್ತೊಂದು ಸಮಾವೇಶ ಆಗಿದೆ. ಸರದಿ ಲೆಕ್ಕದಲ್ಲಿ ಸಮಾವೇಶ ನಡೆಯುತ್ತಿದೆ. ಅದು ಒಳ್ಳೆಯದು. ನನ್ನ ಸಮಾವೇಶಕ್ಕೆ ಪರ್ಯಾಯ ಎಂದು ಹೇಳಲ್ಲ' ಎಂದರು.

ಬೆಂಗಳೂರಿನಲ್ಲಿ ನಡೆದ ಬಿಲ್ಲವ, ಈಡಿಗರ ಸಮಾವೇಶ ಕುರಿತು ಪ್ರತಿಕ್ರಿಯಿಸಿದ ಅವರು, 'ತುಳಿತಕ್ಕೆ ಒಳಗಾದವರನ್ನು ಒಡೆಯುವ ಕೆಲಸ ಆಗಬಾರದು. ಸಮುದಾಯ ಒಡೆಯಲು ಈ ಸಮಾವೇಶ ನಡೆದಿದೆ ಎಂಬ ಧಾಟಿಯಲ್ಲಿ ನಾನು ಹೇಳುತ್ತಿಲ್ಲ' ಎಂದರು.

'ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹಿಂದುಳಿದ ವರ್ಗಗಳ ಜಾತಿ ಗಣತಿ ಆಗಬೇಕು ಎಂದಿದ್ದಾರೆ. ಯಾವುದೇ ಸಮುದಾಯ ಒಡೆಯುವ ಕೆಲಸ ಆಗಬಾರದು. ಸಮಾವೇಶದಲ್ಲಿ ಸಮಾಜದ ಎಲ್ಲ ಸ್ವಾಮೀಜಿಗಳು ಬಂದರೆ ಒಗ್ಗಟ್ಟು ಸಾಧ್ಯ. ಆದರೆ, ಎಲ್ಲ ಸ್ವಾಮೀಜಿಗಳು ಇರಲಿಲ್ಲ. ಇದು ತಪ್ಪು ಎಂಬ ಅಭಿಪ್ರಾಯವನ್ನು ಸ್ವಾಮೀಜಿಗಳು ವ್ಯಕ್ತಪಡಿಸಿದ್ದರು. ಅವರ ಕೋರಿಕೆಯ ಮೇರೆಗೆ ನಾನು ಸಮಾವೇಶಕ್ಕೆ ಹೋಗಿಲ್ಲ' ಎಂದರು.

'ಭ್ರೂಣ ಹತ್ಯೆ ತಡೆಗೆ ರಾಜ್ಯಮಟ್ಟದ ಕಾರ್ಯಪಡೆ'

ಪ್ರಜಾವಾಣಿ ವಾರ್ತೆ

ವಿಧಾನ ಪರಿಷತ್: 'ಭ್ರೂಣ ಹತ್ಯೆ ಪ್ರಕರಣಗಳನ್ನು ತಡೆಯಲು ರಾಜ್ಯಮಟ್ಟದ ಕಾರ್ಯಪಡೆ ರಚಿಸಲಾಗುವುದು' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಕೆ.ಎ. ತಿಪ್ಪೇಸ್ವಾಮಿ, ಉಮಾಶ್ರೀ, ಭಾರತಿ ಶೆಟ್ಟಿ, ಟಿ.ಎ. ಶರವಣ ಅವರು, 'ಭ್ರೂಣ ಹತ್ಯೆ ಪ್ರಕರಣಗಳ ಕುರಿತು ಗಮನ ಸೆಳೆಯುವ ಸೂಚನೆ ಮಂಡಿಸಿದ್ದರು. ಇದಕ್ಕೆ ಉತ್ತರಿಸಿದ ಸಚಿವರು, 'ಅವ್ಯಾಹತವಾಗಿ ಭ್ರೂಣ ಹತ್ಯೆ ನಡೆಯುತ್ತಿದೆ. ಇದನ್ನು ತಡೆಯಲು ಸ್ಪಷ್ಟ ಕ್ರಮಗಳನ್ನು ತೆಗೆದುಕೊಳ್ಳಲೇಬೇಕಿದೆ' ಎಂದರು.

'ಕೊಲೆಗಿಂತ ಕಡಿಮೆ ಅಲ್ಲ ಭ್ರೂಣ ಹತ್ಯೆ ಎನ್ನುವ ಭಾವನೆಯನ್ನು ಇಡೀ ಸದನ ವ್ಯಕ್ತಪಡಿಸಿದೆ. ಈ ಪ್ರಕರಣದಲ್ಲಿ ಯಾವ ಸೆಕ್ಷನ್ ಅಡಿ ಪ್ರಕರಣ ದಾಖಲಿಸಬೇಕು, ಕಾನೂನಾತ್ಮಕವಾಗಿ ಹೇಗೆ ಎದುರಿಸಬೇಕು ಎಂಬುದರ ಬಗ್ಗೆಯೂ ಗಂಭೀರವಾಗಿ ಚಿಂತನೆ ಮಾಡುತ್ತೇವೆ' ಎಂದರು.

'ಹೆಣ್ಣು ಭ್ರೂಣ ಹತ್ಯೆ ಕಾಯ್ದೆಗೆ ತಿದ್ದುಪಡಿ ತರುವ ಅಗತ್ಯದ ಬಗ್ಗೆ ಮತ್ತು ವಿಶೇಷ ನೀತಿ ರೂಪಿಸುವ ಬಗ್ಗೆಯೂ ಸಮಾಲೋಚನೆ ನಡೆಸಿದ್ದೇವೆ. ಸ್ಕ್ಯಾನಿಂಗ್ ಮೆಷಿನ್‌ಗಳ ಪರವಾನಗಿಯನ್ನು ಪ್ರತಿವರ್ಷ ನವೀಕರಿಸುವಂತೆ ಮಾಡಲಾಗುವುದು. ಒಮ್ಮೆ ಬಳಕೆ ಮಾಡಿದ ಅಲ್ಟ್ರಾ ಸೌಂಡ್ ಮಿಷನ್ ಖರೀದಿಸಿ ಬಳಕೆ ಮಾಡುವುದಕ್ಕೆ ಸಂಬಂಧಿಸಿದಂತೆ ನಿಯಮ ರೂಪಿಸಲಾಗುವುದು' ಎಂದರು.

'ಸ್ಥಗಿತಗೊಂಡಿರುವ ಸಹಾಯವಾಣಿ 104 ಅನ್ನು ಮತ್ತೆ ಆರಂಭಿಸಲು ಅನುಮೋದನೆ ಸಿಕ್ಕಿದೆ. ಅದು ಆರಂಭವಾಗುವವರೆಗೆ ಪರ್ಯಾಯ ಸಹಾಯವಾಣಿ ಸಂಖ್ಯೆಯನ್ನು ಶೀಘ್ರದಲ್ಲೆ ನೀಡಲಾಗುವುದು. ಭ್ರೂಣ ಹತ್ಯೆ ನಡೆಯುತ್ತಿರುವ ಮಾಹಿತಿ ನೀಡುವವರಿಗೆ ನೀಡುತ್ತಿರುವ ಪ್ರೋತ್ಸಾಹಧನವನ್ನು ₹ 50 ಸಾವಿರದಿಂದ ₹ 1 ಲಕ್ಷಕ್ಕೆ ಹೆಚ್ಚಿಸುವ ಉದ್ದೇಶವಿದೆ. ಎಲ್ಲ 56 ಉಪ ವಿಭಾಗಗಳ ವ್ಯಾಪ್ತಿಯಲ್ಲಿ ಸ್ಕ್ಯಾನಿಂಗ್ ಕೇಂದ್ರಗಳ ಮೇಲ್ವಿಚಾರಣೆಗೆ ತಂಡ ರಚಿಸಲಾಗುವುದು' ಎಂದರು.

ಬಿಜೆಪಿಯ ತೇಜಸ್ವಿನಿ ಗೌಡ, ಹೇಮಲತಾ ನಾಯಕ್, ವೈ.ಎಂ. ಸತೀಶ್, ಕೆ.ಎಸ್. ನವೀನ್, ಜೆಡಿಎಸ್‌ನ ಕೆ.ಎ. ತಿಪ್ಪೇಸ್ವಾಮಿ, ಕಾಂಗ್ರೆಸ್ಸಿನ ಡಾ. ಡಿ. ತಿಮ್ಮಯ್ಯ ಅವರು, 'ಭ್ರೂಣ ಹತ್ಯೆ ತಡೆಗೆ ಕಠಿಣ ಕಾನೂನು ಜಾರಿಯ ಜೊತೆಗೆ ಸಾಮಾಜಿಕ ಕ್ರಾಂತಿಯ ಅಗತ್ಯವೂ ಇದೆ' ಎಂದರು.

'ರೈತರ ಕತ್ತುಕೊಯ್ಯುವ ಕೇಂದ್ರದ ಎಥೆನಾಲ್ ನೀತಿ'

ವಿಧಾನಸಭೆ: 'ಕೇಂದ್ರ ಸರ್ಕಾರ ಎಥೆನಾಲ್ ನೀತಿಯಲ್ಲಿ ಇತ್ತೀಚಿಗೆ ಬದಲಾವಣೆ ಮಾಡಿದೆ. ಅದರಿಂದ ರೈತರಿಗೆ ತೊಂದರೆಯಾಗಲಿದೆ' ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಎಂದು ಹೇಳದಿದ್ದರೂ ಕೇಂದ್ರದ ನಿಲುವನ್ನು ಟೀಕಿಸಿದರು.

'ರೈತರ ಕತ್ತು ಕೊಯ್ಯುವ ಕೆಲಸ ಮಾಡಬಾರದು. ತಕ್ಷಣವೇ ಹೊಸ ನೀತಿಯನ್ನು ಹಿಂಪಡೆಯಬೇಕು' ಅವರು ಆಗ್ರಹಿಸಿದರು.

89,119 ಟನ್ ವಿದೇಶಿ ಮರಳು ವ್ಯರ್ಥ

ವಿಧಾನ ಪರಿಷತ್: ವಿದೇಶದಿಂದ ಐದು ವರ್ಷಗಳ ಹಿಂದೆ ಆಮದು ಮಾಡಿಕೊಂಡಿದ್ದ 89,119 ಟನ್‌ನಷ್ಟು ಮರಳು ದಾಸ್ತಾನು ಇದ್ದು, ಮಾರಾಟ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಬಿಜೆಪಿಯ ಛಲವಾದಿ ನಾರಾಯಣಸ್ವಾಮಿ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 2017ರ ನಂತರ ಕರ್ನಾಟಕದಲ್ಲಿ ಮರಳಿನ ಸಮಸ್ಯೆ ಎದುರಾಗಿತ್ತು. ಜಾಗತಿಕ ಟೆಂಡರ್ ಮೂಲಕ ಎಂಎಸ್‌ಐಎಲ್ ಮೂಲಕ ವಿದೇಶದಿಂದ 1.03 ಲಕ್ಷ ಟನ್ ಮರಳು ತರಿಸಲಾಗಿತ್ತು. ಮರಳು ಮಾರಾಟದಿಂದ ಸಂಸ್ಥೆಗೆ ₹40 ಕೋಟಿ ಬಂದಿದೆ. ₹10.80 ಕೋಟಿ ಬಾಕಿ ಬರಬೇಕಿದೆ. ಮರಳು ಸರಬರಾಜು ಮಾಡಿದ ಗುತ್ತಿಗೆ ಕಂಪನಿಗೆ ₹14.81 ಕೋಟಿ ನೀಡಲಾಗಿದೆ ಎಂದರು.

ಬೇರೆ ಪಕ್ಷಕ್ಕೆ ಹೋಗಲು ನಾನು ಹುಚ್ಚನಲ್ಲ: ಡಿಸಿಎಂ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ನಾನು ಹುಟ್ಟುತ್ತಲೇ ಕಾಂಗ್ರೆಸಿಗ. ಬೇರೆ ಪಕ್ಷಕ್ಕೆ ಹೋಗಲು ನಾನು ಹುಚ್ಚನಲ್ಲ' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ಲೋಕಸಭೆ ಚುನಾವಣೆ ನಂತರ ಪ್ರಭಾವಿ ಸಚಿವರು 50-60 ಶಾಸಕರ ಸಮೇತ ಬಿಜೆಪಿ ಸೇರುತ್ತಾರೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಕುಮಾರಸ್ವಾಮಿ ಹೇಳಿರುವುದು ನಿಮ್ಮನ್ನೇ ಗುರಿ ಮಾಡಿರುವಂತಿದೆ' ಎಂದು ಸುದ್ದಿಗಾರರು ಹೇಳಿದಾಗ, 'ನನಗೆ ನನ್ನದೇ ಆದ ಮೂಲ ಆದರ್ಶಗಳಿವೆ. ನನಗೆ ಗಾಂಧಿ ಕುಟುಂಬ ಹಾಗೂ ಕಾಂಗ್ರೆಸ್ ಪಕ್ಷದ ಮೇಲೆ ಅಪಾರವಾದ ನಂಬಿಕೆ ಇದೆ' ಎಂದರು.

'ಅವರು (ಕುಮಾರಸ್ವಾಮಿ) ಮಾತನಾಡಿದ್ದಕ್ಕೆಲ್ಲ ನಾನು ಬಾಧ್ಯಸ್ಥನಲ್ಲ. ಅವರು ಏನಾದರೂ ಹೇಳಿಕೊಂಡು ತಿರುಗಲಿ. ಆ ಬಗ್ಗೆ ನಾನು ತಲೆಕೆಡಿಸಿಕೊಳ್ಳುವುದಿಲ್ಲ' ಎಂದರು.

ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ಸಚಿವ ಸತೀಶ ಜಾರಕಿಹೊಳಿ, 'ನಮ್ಮಲ್ಲಿ ಯಾರು ಏಕನಾಥ್ ಶಿಂಧೆ, ಪವಾರ್ ಇಲ್ಲ' ಎಂದು ತಿರುಗೇಟು ನೀಡಿದರು.

'ನಾನೇನೂ ದೆಹಲಿಗೆ ಹೋಗಿಲ್ಲವಲ್ಲ. ದೆಹಲಿಗೆ ಹೋದವರನ್ನು ಕೇಳಬೇಕು. ಆ ಪ್ರಭಾವಿ ಸಚಿವ ಯಾರು ಎಂದು ಕುಮಾರಸ್ವಾಮಿ ಹೇಳಿದರೆ ಮುಗಿದು ಹೋಗುತ್ತದೆ' ಎಂದರು.

₹21 ಕೋಟಿಯ ಡ್ರಗ್ಸ್ ಜಪ್ತಿ

ಒಂದನೇ ಪುಟದಿಂದ...

'ಡ್ರಗ್ಸ್ ಸಾಗಣೆ ಹಾಗೂ ಮಾರಾಟದ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಲಾಗುತ್ತಿದೆ. ಇದರ ಭಾಗವಾಗಿ ಸಿಸಿಬಿ ಪೊಲೀಸರು, ಹಲವು ದಿನ ಆರೋಪಿ ಮೇಲೆ ನಿಗಾ ಇಟ್ಟು ಡ್ರಗ್ಸ್ ಮಾರಾಟ ಪತ್ತೆ ಮಾಡಿದ್ದಾರೆ' ಎಂದು ಹೇಳಿದರು.

'ಡ್ರಗ್ಸ್ ಪೆಡ್ಲರ್ ಆಗಿರುವ ಲಿಯೋನಾರ್ಡ್, ವರ್ಷದ ಹಿಂದೆಯಷ್ಟೇ ವ್ಯಾಪಾರ ವೀಸಾದಡಿ ನಗರಕ್ಕೆ ಬಂದಿದ್ದ. ಎರಡು ಪ್ರತ್ಯೇಕ ಬಾಡಿಗೆ ಮನೆ ಮಾಡಿದ್ದ. ಒಂದು ಮನೆಯಲ್ಲಿ ಆರೋಪಿ ವಾಸವಿದ್ದ. ರಾಮಮೂರ್ತಿನಗರದಲ್ಲಿರುವ ಇನ್ನೊಂದು ಮನೆಯಲ್ಲಿ ಡ್ರಗ್ಸ್ ಸಂಗ್ರಹಿಸಿಟ್ಟು ಮಾರುತ್ತಿದ್ದ' ಎಂದು ತಿಳಿಸಿದರು.

ಚೂಡಿದಾರ್, ಸೋಪ್ ಬಾಕ್ಸ್‌ಗಳಲ್ಲಿ ಸಾಗಣೆ: 'ದೆಹಲಿಯಲ್ಲಿರುವ ಪ್ರಮುಖ ಪೆಡ್ಲರ್‌ಗಳ ಜೊತೆ ಲಿಯೋನಾರ್ಡ್ ಒಡನಾಟ ಹೊಂದಿದ್ದ. ಅವರ ಮೂಲಕ ನಗರಕ್ಕೆ ಡ್ರಗ್ಸ್ ತರಿಸುತ್ತಿದ್ದ. ನಗರದಲ್ಲಿರುವ ಉಪ ಪೆಡ್ಲರ್‌ಗಳ ಮೂಲಕ ಗ್ರಾಹಕರಿಗೆ ಡ್ರಗ್ಸ್ ತಲುಪಿಸಿ ಹಣ ಸಂಪಾದಿಸುತ್ತಿದ್ದ' ಎಂದು ಪೊಲೀಸರು ಹೇಳಿದರು.

'ಚೂಡಿದಾರ್, ಚಾಕೊಲೇಟ್, ಸೋಪ್, ಬಿಸ್ಕೆಟ್ ಹಾಗೂ ಇತರೆ ವಸ್ತುಗಳ ಬಾಕ್ಸ್‌ಗಳಲ್ಲಿ ಡ್ರಗ್ಸ್ ಬಚ್ಚಿಟ್ಟು ಬೆಂಗಳೂರಿಗೆ ಸಾಗಿಸಲಾಗುತ್ತಿತ್ತು' ಎಂದು ತಿಳಿಸಿದರು.

ಅನುಮಾನ ಬಾರದಂತೆ ಕೃತ್ಯ: 'ತಾನು ವಾಸವಿದ್ದ ಮನೆಯಲ್ಲಿ ಆರೋಪಿ ಯಾವುದೇ ಡ್ರಗ್ಸ್ ಇಟ್ಟುಕೊಂಡಿರಲಿಲ್ಲ. ಆತ ಡ್ರಗ್ಸ್ ಮಾರುತ್ತಿದ್ದ ಬಗ್ಗೆ ಮಾಹಿತಿ ಬರುತ್ತಿದ್ದಂತೆ, ಮನೆ ಬಳಿ ನಿಗಾ ವಹಿಸಲಾಗಿತ್ತು. ಆದರೆ, ಯಾವುದೇ ಸುಳಿವು ಸಿಕ್ಕಿರಲಿಲ್ಲ' ಎಂದು ಪೊಲೀಸರು ಹೇಳಿದರು.

'ವಾರಕ್ಕೆ ಒಂದು ದಿನ ರಾಮಮೂರ್ತಿನಗರದ ಮನೆಗೆ ಆರೋಪಿ ಹೋಗಿ ಬರುತ್ತಿದ್ದ. ಈ ಬಗ್ಗೆ ಗೊತ್ತಾಗುತ್ತಿದ್ದಂತೆ ಆತನನ್ನು ಹಿಂಬಾಲಿಸಿ ಮಾಹಿತಿ ಕಲೆಹಾಕಲಾಯಿತು. ಪೊಲೀಸರ ದಿಕ್ಕು ತಪ್ಪಿಸಲು ಆರೋಪಿ, ಪ್ರತ್ಯೇಕ ಮನೆಯಲ್ಲಿ ಡ್ರಗ್ಸ್ ಸಂಗ್ರಹಿಸಿಟ್ಟಿದ್ದು ತನಿಖೆಯಿಂದ ತಿಳಿಯಿತು' ಎಂದು ಪೊಲೀಸರು ಮಾಹಿತಿ ನೀಡಿದರು.

'ಆರೋಪಿ ನೇರವಾಗಿ ಗ್ರಾಹಕರಿಗೆ ಡ್ರಗ್ಸ್ ಮಾರುತ್ತಿರಲಿಲ್ಲ. ತನ್ನದೇ ತಂಡ ಕಟ್ಟಿಕೊಂಡು ಸಹಚರರ ಮೂಲಕ ದೊಡ್ಡ ಪಾರ್ಟಿಗಳು ಹಾಗೂ ಗ್ರಾಹಕರಿಗೆ ಡ್ರಗ್ಸ್ ನೀಡುತ್ತಿದ್ದ. ಈತನ ಜೊತೆ ಮತ್ತಷ್ಟು ಮಂದಿ ಕೃತ್ಯದಲ್ಲಿ ಭಾಗಿಯಾಗಿರುವ ಮಾಹಿತಿ ಇದೆ' ಎಂದು ಹೇಳಿದರು.

ಪಂಚಮಸಾಲಿ ಸಮುದಾಯದ ಮುಖಂಡರ ಜತೆ ಮುಖ್ಯಮಂತ್ರಿ ಸಭೆ

'ಕೋರ್ಟ್ ತೀರ್ಪು ನಂತರ ಮೀಸಲಾತಿಗೆ ಕ್ರಮ'

ಪ್ರಜಾವಾಣಿ ವಾರ್ತೆ

ಕೂಡಲಸಂಗಮ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ನೇತೃತ್ವದ ಪಂಚಮಸಾಲಿ ಸಮುದಾಯದ ನಿಯೋಗ ಮಂಗಳವಾರ ಬೆಳಗಾವಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮೀಸಲಾತಿ ಕುರಿತು ಚರ್ಚೆ ನಡೆಸಿತು. (ಎಡದಿಂದ) ಗೋವಿಂದರಾಜು, ಸಚಿವೆ ಲಕ್ಷ್ಮಿ ಹೆಬ್ಬಾಳಕರ, ಶಾಸಕರಾದ ವಿಜಯಾನಂದ ಕಾಶಪ್ಪನವರ, ಎಂ.ವೈ. ಪಾಟೀಲ ಉಪಸ್ಥಿತರಿದ್ದರು

ಬೆಳಗಾವಿ: 'ಪಂಚಮಸಾಲಿ ಸಮುದಾಯಕ್ಕೆ ಹಿಂದಿನ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ನೀಡಿದ್ದ '2ಡಿ' ಮೀಸಲಾತಿ ಕುರಿತು ನ್ಯಾಯಾಲಯದ ತೀರ್ಪು ನೋಡಿಕೊಂಡು ಮುಂದಿನ ನಿರ್ಧಾರ ತೆಗೆದುಕೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದ ನಿಯೋಗದ ಜತೆ ಮಂಗಳವಾರ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

'ಅಧಿವೇಶನ ಮುಗಿದ ಬಳಿಕ ಪಂಚಮಸಾಲಿ ಸಮುದಾಯದ '2ಎ' ಮೀಸಲಾತಿ ಬೇಡಿಕೆ ಕುರಿತು ಕಾನೂನು ತಜ್ಞರು, ಹಿಂದುಳಿದ ವರ್ಗಗಳ ಆಯೋಗ, ಅಡ್ವೊಕೇಟ್ ಜನರಲ್ ಅವರಿಂದ ಅಭಿಪ್ರಾಯ ಪಡೆದ ಬಳಿಕ ಪಂಚಮಸಾಲಿ ಮುಖಂಡರ ಸಭೆ ಕರೆಯಲಾಗುವುದು' ಎಂದರು.

'ಹಿಂದಿನ ಸರ್ಕಾರ ಪಂಚಮಸಾಲಿ ಸೇರಿದಂತೆ ಲಿಂಗಾಯತ ಉಪ ಜಾತಿಗಳನ್ನು '2ಡಿ'ಗೆ ಸೇರಿಸಿದ್ದು, ಪ್ರಕರಣ ನ್ಯಾಯಾಲಯದಲ್ಲಿದೆ. ಒಂದು ವೇಳೆ ಮೀಸಲಾತಿ ತಿರಸ್ಕೃತವಾದರೆ ಯಾವ ರೀತಿ ಅನುಕೂಲ ಮಾಡಬಹುದು ಎಂದು ಚರ್ಚಿಸಿ, ನಿರ್ಧರಿಸಲಾಗುವುದು' ಎಂದು ಹೇಳಿದರು.

ಬಿಜೆಪಿ ಸರ್ಕಾರ ಇದೇ ವರ್ಷದ ಆರಂಭದಲ್ಲಿ ಹಿಂದುಳಿದ ವರ್ಗಗಳ 'ಪ್ರವರ್ಗ 2ಬಿ'ಗೆ (ಮುಸ್ಲಿಂ ಮತ್ತು ಅದರಲ್ಲಿರುವ ಉಪ ಜಾತಿಗಳು) ನೀಡಿದ್ದ ಮೀಸಲಾತಿಯನ್ನು ತೆಗೆದು, ಒಕ್ಕಲಿಗರಿರುವ 'ಪ್ರವರ್ಗ 3ಎ' ಮತ್ತು ಪಂಚಮಸಾಲಿ ಲಿಂಗಾಯತರಿರುವ 'ಪ್ರವರ್ಗ 3ಬಿ'ಗೆ ತಲಾ ಶೇ 2ರಂತೆ ಹಂಚಿತ್ತು.

ಮುಖ್ಯಮಂತ್ರಿ ಜತೆ ನಡೆದ ಸಭೆಯಲ್ಲಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ, ಶಾಸಕರಾದ ಬಿ.ಆರ್ .ಪಾಟೀಲ, ವಿಜಯಾನಂದ ಕಾಶಪ್ಪನವರ, ಬಸನಗೌಡ ಪಾಟೀಲ ಯತ್ನಾಳ್, ವಿನಯ್ ಕುಲಕರ್ಣಿ, ಸಿ.ಸಿ. ಪಾಟೀಲ, ಅರವಿಂದ ಬೆಲ್ಲದ, ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಮತ್ತು ಪಂಚಮಸಾಲಿ ಸಮುದಾಯದ ಹಲವು ಮುಖಂಡರು ಭಾಗವಹಿಸಿದ್ದರು.

ಕ್ಲ್ಯಾಟ್ ಪರೀಕ್ಷೆ: ಗುರು–ಶಿಷ್ಯರಿಗೆ ಟಾಪ್ ರ್‍ಯಾಂಕ್

ಪ್ರದ್ಯುತ್ ಶಾ

ರಾಹುಲ್

ಬೆಂಗಳೂರು: ರಾಷ್ಟ್ರೀಯ ಕಾನೂನು ಶಾಲೆಗಳಿಗೆ ಸಾಮಾನ್ಯ ಪ್ರವೇಶ ಪರೀಕ್ಷೆ (ಕಾಮನ್ ಲಾ ಅಡ್ಮಿಷನ್ ಟೆಸ್ಟ್ –ಕ್ಲ್ಯಾಟ್ ಪರೀಕ್ಷೆಯಲ್ಲಿ ಗುರು ಶಿಷ್ಯರಿಬ್ಬರೂ ಟಾಪ್ ರ್‍ಯಾಂಕ್ ಪಡೆದಿದ್ದಾರೆ.

ಭಾನುವಾರ ಪ್ರಕಟಗೊಂಡ ಫಲಿತಾಂಶದಲ್ಲಿ ಬೆಂಗಳೂರಿನ ಮಲ್ಯ ಆದಿತಿ ಅಂತರ ರಾಷ್ಟ್ರೀಯ ಶಾಲೆಯಲ್ಲಿ 12 ತರಗತಿಯಲ್ಲಿ ಓದುತ್ತಿರುವ ಪ್ರದ್ಯುತ್ ಶಾ ಅಖಿಲ ಭಾರತ ಮಟ್ಟದ ರ್‍ಯಾಂಕ್‌ನಲ್ಲಿ ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾರೆ. ಇಂದಿರಾ ನಗರದ ಖಾಸಗಿ ತರಬೇತಿ ಸಂಸ್ಥೆಯಲ್ಲಿ ಪ್ರದ್ಯುತ್ ಅವರಿಗೆ ತರಬೇತಿ ನೀಡುತ್ತಿದ್ದ ಶಿಕ್ಷಕ ರಾಹುಲ್ ಫಲಕುರ್ತಿ ತೃತೀಯ ರ್‍ಯಾಂಕ್ ಪಡೆದುಕೊಂಡಿದ್ದಾರೆ.

ಉದ್ಯೋಗ ವಾಣಿ

GSSS | GEETHA SHISHU SHIKSHANA SANGHA (R)
INSTITUTE OF ENGINEERING AND TECHNOLOGY FOR WOMEN
KRS Road, Metagalli, Mysuru – 570016

APPOINTMENT NOTIFICATION

Position	Department	Qual. & Exp.
Professor	CSE | MBA (HoD)	As per AICTE Norms
Associate Professor	CSE | ISE | AI & ML | AI & DS	
Assistant Professor	AI & ML | AI & DS | MBA	

- Salary: Based on credentials & experience.
- Accommodation will be provided for the post of Professor & Associate Professor.
- Apply with color photo and copy of all certificates to The Hon. Secretary on or before 27-12-2023.

Dr. M. Jagannatha Shenoi, President, GSSS (R) | www.geethashishu.in | Smt. Vanaja B. Pandit, Hon. Secretary, GSSS (R)

ಕೃಷಿಕ್ ಸರ್ವೋದಯ ಫೌಂಡೇಷನ್ (ರಿ)
ಕೆಎಸ್‌ಎಫ್ ಸ್ಪರ್ಧಾತ್ಮಕ ಪರೀಕ್ಷೆಗಳ ಸಂಸ್ಥೆ (ಕೆಎಸ್‌ಎಫ್‌ಐಸಿಇ)
ನಂ.15 ಗಾಲ್ಫ್ ಅವೆನ್ಯೂ ರಸ್ತೆ, ಆಫ್: ಹೆಚ್‌ಎಎಲ್ ವಿಮಾನ ನಿಲ್ದಾಣ ರಸ್ತೆ, ಕೋಡಿಹಳ್ಳಿ, ಬೆಂಗಳೂರು–560008.
ಇ–ಮೇಲ್: ksfbangalore@gmail.com | ದೂರವಾಣಿ : 080–2520 2299

ದಿನಾಂಕ: 08–12–2023

ಶೈಕ್ಷಣಿಕ ಸಂಯೋಜಕರು ಹಾಗೂ ಸ್ಟೆನೋಗ್ರಾಫರ್ ಬೇಕಾಗಿದ್ದಾರೆ

1. ಕೃಷಿಕ್ ಸರ್ವೋದಯ ಫೌಂಡೇಷನ್ (ರಿ) ಬೆಂಗಳೂರಿನ ಕೇಂದ್ರ ಕಛೇರಿಗೆ ಶೈಕ್ಷಣಿಕ ಸಂಯೋಜಕರ ಅಗತ್ಯವಿದ್ದು ಸ್ನಾತಕೋತ್ತರ ಪದವೀಧರರಾಗಿರಬೇಕು. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಕನಿಷ್ಠ 5 ವರ್ಷಗಳ ಬೋಧನೆ/ ತರಬೇತಿ ನೀಡಿದ ಅನುಭವವಿರಬೇಕು. 30 ರಿಂದ 50 ವರ್ಷ ವಯಸ್ಸಿನವರಾಗಿದ್ದು ಕಂಪ್ಯೂಟರ್ ಜ್ಞಾನವಿರಬೇಕು.
2. ಸಂಸ್ಥೆಗೆ ಪದವಿ ಹೊಂದಿರುವ ಇಂಗ್ಲೀಷ್ ಮತ್ತು ಕನ್ನಡ ಶೀಘ್ರಲಿಪಿ ಮತ್ತು ಬೆರಳಚ್ಚು ಪರಿಣಿತರ ಅಗತ್ಯವಿದೆ.

ಇವರುಗಳ ವಿದ್ಯಾರ್ಹತೆ ಮತ್ತು ಅನುಭವದ ಆಧಾರದ ಮೇಲೆ ಸೂಕ್ತ ಸಂಭಾವನೆ ನೀಡಲಾಗುವುದು. ಅರ್ಜಿಗಳನ್ನು ಈ ಮೇಲ್ಕಂಡ ವಿಳಾಸಕ್ಕೆ ದಿನಾಂಕ: 30–12–2023 ರ ಒಳಗೆ ತಲುಪಿಸಬೇಕು.

ಸಹಿ/– ಅಧ್ಯಕ್ಷರು

National Health Mission
Karnataka State Health & Family Welfare Society
Arogya Soudha, 1st Floor, Magadi Road, Bengaluru-560023

No: NHM/SPMU/HR/Recruitment-State/Notification/50/2022-23(E-1127145) Date: 12.12.2023

WALK -IN- INTERVIEW
FOR THE VARIOUS POSTS UNDER NHM

The Karnataka State Health & Family Welfare Society invites eligible candidates for Walk In interview for the various vacant posts under National Health Mission. The posts are temporary and purely on contract basis. www.hfwcom.karnataka.gov.in & nhm.karnataka.gov.in Walk -In-Interview has been scheduled on 20.12.2023 @ 11.00 AM, In the office of Chief Administrative Officer, National Health Mission, 1st Floor West Wing, Arogya Soudha, Magadi Road, 1st Cross, Bengaluru - 560023.

Sl. No.	Programme Name	Name of the Posts	No of Posts	Reservation Category
1	E-Health	IT Consultant	1	UR
2		Programmer / Operational Manager	2	GM-1 Women-1
3		Hardware / Network Engineer	1	UR

Sd/-
Mission Director
National Health Mission

DIPR/CP/BCPL/2523/2023-24

ಪ್ರಜಾವಾಣಿ ಕ್ವಿಜ್ ವಲಯಮಟ್ಟದ ಸ್ಪರ್ಧೆ ವಿಜೇತರು...

'ಪ್ರಜಾವಾಣಿ' ದಿನಪತ್ರಿಕೆಯು ಪರಿಶ್ರಮ ಪಿ.ಯು ಕಾಲೇಜು, ಭೀಮ ಜ್ಯುವೆಲ್ಲರ್ಸ್ ಜಂಟಿ ಆಶ್ರಯದಲ್ಲಿ ಮಂಗಳೂರಿನ ಡೊಂಗರಕೇರಿಯ ಕೆನರಾ ಪ್ರೌಢಶಾಲೆಯ ಸುಧೀಂದ್ರ ಸಭಾಂಗಣದಲ್ಲಿ ಮಂಗಳವಾರ ಏರ್ಪಡಿಸಿದ್ದ 'ಪ್ರಜಾವಾಣಿ' ಕ್ವಿಜ್ ಚಾಂಪಿಯನ್‌ಷಿಪ್‌ನ ಮಂಗಳೂರು ವಲಯಮಟ್ಟದ ಸ್ಪರ್ಧೆಯಲ್ಲಿ ಮೊದಲ ಸ್ಥಾನ ಪಡೆದು ರಾಜ್ಯಮಟ್ಟದ ಸ್ಪರ್ಧೆಗೆ ಆಯ್ಕೆಯಾದ ಉಡುಪಿ ಜಿಲ್ಲೆ ಬ್ರಹ್ಮಾವರ ಲಿಟ್ಲ್ ರಾಕ್ ಇಂಡಿಯನ್ ಶಾಲೆಯ ತಂಡದ ಅನುರಾಗ್ ಶಿರಸಾಟ್, ಮತ್ತು ಲಿಖಿತ್ ಶೆಟ್ಟಿಗಾರ್ ಅವರಿಗೆ ಅಕ್ಷರ ಸಂತ ಹರೇಕಳ ಹಾಜಬ್ಬ ಅವರು ಬಹುಮಾನ ವಿತರಿಸಿದರು. ಕ್ವಿಜ್ ಮಾಸ್ಟರ್ ಮೇಘವಿ ಮಂಜುನಾಥ್ ಜೊತೆಗಿದ್ದರು

ಪ್ರಜಾವಾಣಿ ಚಿತ್ರ

ಮೈಸೂರಿನ ಕಲಾಮಂದಿರದಲ್ಲಿ ಸೋಮವಾರ ಆಯೋಜಿಸಿದ್ದ 'ಪ್ರಜಾವಾಣಿ ಕ್ವಿಜ್ ಚಾಂಪಿಯನ್‌ಷಿಪ್'ನ ಮೈಸೂರು ವಲಯಮಟ್ಟದ ಸ್ಪರ್ಧೆಯಲ್ಲಿ ವಿಜೇತರಾದ ಎಕ್ಸೆಲ್ ಪಬ್ಲಿಕ್ ಶಾಲೆಯ ಶ್ರೀನಂದಿನಿ– ಭುವನ್

ಸುಧಾ ಓದಿರಿ...

ಬ್ಲ್ಯಾಕ್‌ಮೇಲ್ ಮಾಡಿ ಅಧ್ಯಕ್ಷರಾದ ವಿಜಯೇಂದ್ರ: ಯತ್ನಾಳ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬಿ.ಎಸ್.ಯಡಿಯೂರಪ್ಪ ಮತ್ತು ಅವರ ಪುತ್ರ ಬಿ.ವೈ.ವಿಜಯೇಂದ್ರ ವಿರುದ್ಧ ಶಾಸಕ ಬಸನಗೌಡ ಪಾಟೀಲ ಯತ್ನಾಳ, ಕೂಡಲಸಂಗಮದ ಪಂಚಮಸಾಲಿ ಪೀಠಾಧ್ಯಕ್ಷ ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರ ಎದುರು ತೀವ್ರ ವಾಗ್ದಾಳಿ ನಡೆಸಿದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

'ತಮ್ಮ ಮಗನನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಮಾಡದಿದ್ದರೆ ಮುಂದಿನ ಚುನಾವಣೆಯಲ್ಲಿ ಪ್ರಚಾರಕ್ಕೆ ಬರುವುದಿಲ್ಲ ಎಂದು ಯಡಿಯೂರಪ್ಪ ಮುಖಂಡರನ್ನು 'ಬ್ಲ್ಯಾಕ್‌ಮೇಲ್' ಮಾಡಿದ್ದಾರೆ. ಅದೇ ಕಾರಣಕ್ಕೆ ವಿಜಯೇಂದ್ರಗೆ ರಾಜ್ಯ ಘಟಕದ ಅಧ್ಯಕ್ಷ ಸ್ಥಾನ ಸಿಕ್ಕಿದೆ' ಎಂದು ಯತ್ನಾಳ ಆರೋಪಿಸಿದ್ದಾರೆ.

'ವಿಜಯೇಂದ್ರ, ಯಡಿಯೂರಪ್ಪ ಅವರನ್ನು ನಮ್ಮ ಸಮಾಜ ಯಾವತ್ತೂ ಒಪ್ಪುವುದಿಲ್ಲ. ಇದು ಸ್ಪಷ್ಟ. ಏಕೆಂದರೆ, ಉತ್ತರ ಕರ್ನಾಟಕದ ಲಿಂಗಾಯತರಿಗೆ ಇವರ ಕೊಡುಗೆ ಏನೂ ಇಲ್ಲ' ಎಂದೂ ಅವರು ಹೇಳಿದ್ದಾರೆ.

'ಯಡಿಯೂರಪ್ಪ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಲು, ಮುಖ್ಯಮಂತ್ರಿ ಆಗಲು ನಾನೇ ಕಾರಣ. ಅರುಣ್ ಜೇಟ್ಲಿ ಅವರು ನನ್ನನ್ನು ಪಕ್ಷಕ್ಕೆ ಆಹ್ವಾನಿಸಿದ ಸಂದರ್ಭದಲ್ಲಿ ನಾನೇ ಈ 'ಕಂಡಿಷನ್' ಹಾಕಿದ್ದೆ. ಯಡಿಯೂರಪ್ಪ ಅವರನ್ನು ರಾಜ್ಯ ನಾಯಕ ಮಾಡಿದರೆ ಮಾತ್ರ ಪಕ್ಷಕ್ಕೆ ಬರುತ್ತೇನೆ ಎಂದಿದ್ದೆ. ಆದರೆ, ಅಪ್ಪ– ಮಗ ಸೇರಿಕೊಂಡು ನನ್ನ ವಿರುದ್ಧವೇ ಮಸಲತ್ತು ಮಾಡಿದರು' ಎಂದೂ ಯತ್ನಾಳ ದೂರಿದ್ದಾರೆ.

'ಈ ಹಿಂದಿನ ವಿಧಾನಸಭೆ ಚುನಾವಣೆಯಲ್ಲಿ ನನ್ನನ್ನೂ ಸೇರಿ ಕೆಲವು ಹಿರಿಯ ನಾಯಕರನ್ನು ಸೋಲಿಸಲು ವಿಜಯೇಂದ್ರ ಕುತಂತ್ರ ಮಾಡಿದ್ದರು. ಆಶ್ಚರ್ಯವೆಂದರೆ ಬಸವರಾಜ ಬೊಮ್ಮಾಯಿ ಅವರನ್ನು ಸೋಲಿಸಲು ವಿಜಯೇಂದ್ರನೇ ಹಣ ಕಳಿಸಿದ್ದರು. ಇದನ್ನು ಬೊಮ್ಮಾಯಿ ಅವರೇ ನನಗೆ ಹೇಳಿದ್ದಾರೆ. ಇದು ಸುಳ್ಳು ಎನ್ನುವುದಾದರೇ ಬೊಮ್ಮಾಯಿ ಯಾವುದಾದರೂ ದೇವಸ್ಥಾನಕ್ಕೆ ಬರಲಿ, ನಾನೂ ಬರುತ್ತೇನೆ' ಎಂದೂ ಹೇಳಿದ್ದಾರೆ.

'ಸೋಮಣ್ಣ ಅವರನ್ನು ಬಲಿ ಕೊಟ್ಟಿದ್ದು ಇವರೇ. ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿಗಾಗಿ ನಾನು ರ‍್ಯಾಲಿ ನಡೆಸಿದ ಸಂದರ್ಭದಲ್ಲಿ, ನನ್ನನ್ನು ಬಂಧಿಸುವಂತೆ ಲಿಂಗಾಯತ ಸಮಾಜಕ್ಕೆ ಸೇರಿದ ಸಂದೀಪ ಪಾಟೀಲ ಎಂಬ ಪೊಲೀಸ್ ಅಧಿಕಾರಿಯನ್ನು ಇವರೇ ಕಳುಹಿಸಿದ್ದರು' ಎಂದೂ ಅವರು ಆರೋಪಿಸಿದ್ದು ವಿಡಿಯೊದಲ್ಲಿದೆ.

'ಹಿಂದೆ ಕನಿಷ್ಠ ಎಂಟು ಮಂದಿ ಪಂಚಮಸಾಲಿ ಸಮಾಜದ ಸಂಸದರು ಇರುತ್ತಿದ್ದರು. ಈಗ ಕರಡಿ ಸಂಗಣ್ಣ ಒಬ್ಬರೇ ಇದ್ದಾರೆ. ಯಡಿಯೂರಪ್ಪ ಅವರು ಪಂಚಮಸಾಲಿ ಸಮಾಜಕ್ಕೆ ಸಂಸದ ಸ್ಥಾನ ತಪ್ಪಿಸುತ್ತಿದ್ದಾರೆ. ವಿಜಯೇಂದ್ರಗೆ ಯಾರು ಅಡ್ಡಗಾಲು ಆಗುತ್ತಾರೋ ಅವರನ್ನೆಲ್ಲ ತುಳಿಯುವ ಹುನ್ನಾರ ಮಾಡುತ್ತಿದ್ದಾರೆ. ಶಾಸಕ ವಿನಯ ಕುಲಕರ್ಣಿ ಅವರ ಪ್ರಕರಣ ಮತ್ತೆ ಮುನ್ನೆಲೆಗೆ ಬರುವಲ್ಲಿಯೂ ಇವರ ಕೈವಾಡ ಇದೆ' ಎಂದೂ ಅವರು ಆರೋಪಿಸಿದ್ದಾರೆ.

'ಅಪ್ಪ– ಮಕ್ಕಳು ಏನು ನಡೆಸಿದ್ದಾರೆ ಎಂಬುದು ಜನರಿಗೆ ಗೊತ್ತಾಗಬೇಕು. ವಿಧಾನಸಭೆ ಚುನಾವಣೆಯಲ್ಲಿ ತಮ್ಮ ವಿರುದ್ಧ ಡಮ್ಮಿ ಅಭ್ಯರ್ಥಿ ಹಾಕಿಸಿಕೊಂಡರು. ಅದಕ್ಕೆ ಪ್ರತಿಯಾಗಿ ಸಿದ್ದರಾಮಯ್ಯ ಅವರಿಗೆ ವರುಣಾದಲ್ಲಿ ಪರೋಕ್ಷ ಬೆಂಬಲ ನೀಡಿದರು. ಕನಕಪುರದಲ್ಲಿಯೂ ಇವರ ಹೊಂದಾಣಿಕೆ ಇದೆ' ಎಂದೂ ಕಿಡಿಕಾರಿದ್ದಾರೆ.

ಲಕ್ಷ್ಮೀ ಹೆಬ್ಬಾಳಕರ ವಿರುದ್ಧವೂ ಮಾತು: 'ಪಂಚಮಸಾಲಿ ಸಮಾಜದ 2ಎ ಮೀಸಲಾತಿಗಾಗಿ ಬಿಜೆಪಿ ಸರ್ಕಾರ ಇದ್ದಾಗ ನಾನು ಹೋರಾಟದ ನಾಯಕತ್ವ ವಹಿಸಿದ್ದೆ. ಅದೇ ರೀತಿ ಈಗ ನೀವು ವಹಿಸಿಕೊಳ್ಳಿ ಎಂದು ಶಾಸಕ ವಿನಯ ಕುಲಕರ್ಣಿ ಅವರಿಗೆ ಹೇಳಿದ್ದೆ. ಅದಕ್ಕೆ ವಿನಯ ಒಪ್ಪಿದರು. ಇದೇ ಮಾತನ್ನು ಸಚಿವೆ ಲಕ್ಷ್ಮೀ ಹೆಬ್ಬಾಳಕರಗೆ ಹೇಳಿದೆ. ಆದರೆ, ಕಾಂಗ್ರೆಸ್‌ನವರು ನಮಗೆ ಯಾವ ಕಾರಣಕ್ಕೂ ಮೀಸಲಾತಿ ಕೊಡುವುದಿಲ್ಲ ಎಂದು ನೇರವಾಗಿ ಹೇಳಿದರು' ಎಂದೂ ಯತ್ನಾಳ ಮಾತಾಡಿದ್ದಾರೆ.

ಯತ್ನಾಳ ಅವರ ಎದುರಿಗೆ ಕುಳಿತ ಬಸವಜಯ ಮೃತ್ಯುಂಜಯ ಸ್ವಾಮೀಜಿ ಎಲ್ಲ ಮಾತುಗಳನ್ನು ಆಲಿಸಿದ್ದಾರೆ.

'ಯತ್ನಾಳ ಸ್ವಯಂಘೋಷಿತ ನಾಯಕ'

ನವದೆಹಲಿ: 'ಬಸನಗೌಡ ಪಾಟೀಲ ಯತ್ನಾಳ ಸ್ವಯಂಘೋಷಿತ ನಾಯಕ. ಯಡಿಯೂರಪ್ಪ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ವಿಜಯೇಂದ್ರ ವಿರುದ್ಧ ದುರುದ್ದೇಶದಿಂದ ಟೀಕೆ ಮಾಡುತ್ತಿರುವ ಅವರಿಗೆ ಸಮಾಜ ಹಾಗೂ ಪಕ್ಷ ತಕ್ಕ ಪಾಠ ಕಲಿಸಲಿದೆ' ಎಂದು ಬಿಜೆಪಿ ಮುಖಂಡ ಮುರುಗೇಶ ನಿರಾಣಿ ಹೇಳಿದರು.

ಮಂಗಳವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ತಮ್ಮನ್ನು ಪಕ್ಷದ ಅಧ್ಯಕ್ಷ ಹಾಗೂ ವಿರೋಧ ಪಕ್ಷದ ನಾಯಕ ಮಾಡಬೇಕು ಎಂದು ಯತ್ನಾಳ ಹೇಳಿಕೊಂಡು ಓಡಾಡುತ್ತಿದ್ದಾರೆ. ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಅವರನ್ನು ತಾರಾ ಪ್ರಚಾರಕರನ್ನಾಗಿ ಮಾಡಲಾಯಿತು. ಅವರ ಓಡಾಟಕ್ಕೆ ಹೆಲಿಕಾಪ್ಟರ್ ವ್ಯವಸ್ಥೆ ಕಲ್ಪಿಸಲಾಯಿತು. ಅವರು ಪ್ರಚಾರ ಮಾಡಿದ 40 ಕ್ಷೇತ್ರಗಳಲ್ಲಿ ಬಿಜೆಪಿ ಗೆಲ್ಲಲೇ ಇಲ್ಲ' ಎಂದು ವ್ಯಂಗ್ಯವಾಡಿದರು.

'ವಿಜಯಪುರ ಜಿಲ್ಲೆಯಲ್ಲೇ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಂಡು ಬರಲು ಯತ್ನಾಳಗೆ ಆಗಲಿಲ್ಲ. ಈ ಹಿಂದೆ ಪ್ರಲ್ಹಾದ ಜೋಶಿ, ಜಗದೀಶ ಶೆಟ್ಟರ್, ಶೋಭಾ ಕರಂದ್ಲಾಜೆ, ವಿ.ಸೋಮಣ್ಣ, ವಿಜಯ ಸಂಕೇಶ್ವರ ವಿರುದ್ಧ ಮಾತನಾಡಿದರು. ದೀಪ ಆರುವ ಮುನ್ನ ಜೋರಾಗಿ ಉರಿಯುತ್ತದೆ. ಅದೇ ರೀತಿ ಯತ್ನಾಳ ಕಥೆಯೂ ಆಗಲಿದೆ' ಎಂದು ಅವರು ಎಚ್ಚರಿಸಿದರು.

ಸಂಕ್ಷಿಪ್ತ ಸುದ್ದಿ

₹ 1.50 ಕೋಟಿ ದರೋಡೆ

ಚಿತ್ರದುರ್ಗ: ಅಡಿಕೆ ವ್ಯಾಪಾರಿಯೊಬ್ಬರಿಗೆ ಸೇರಿದ ಹಣದೊಂದಿಗೆ ದ್ವಿಚಕ್ರ ವಾಹನದಲ್ಲಿ ಹೊರಟಿದ್ದ ವ್ಯಕ್ತಿಯೊಬ್ಬರನ್ನು ಮಾರಕಾಸ್ತ್ರಗಳಿಂದ ಬೆದರಿಸಿ ₹ 1.50 ಕೋಟಿ ನಗದನ್ನು ದರೋಡೆ ಮಾಡಿದ ಘಟನೆ ತಾಲ್ಲೂಕಿನ ಈಚಲ ನಾಗೇನಹಳ್ಳಿಯಲ್ಲಿ ನಡೆದಿದೆ.

ಮೊಹಮ್ಮದ್ ಇರ್ಷಾನುಲ್ಲಾ ಹಣ ಕಳೆದುಕೊಂಡವರು. ಅಡಿಕೆ ವ್ಯಾಪಾರಿ ಮೊಹಮ್ಮದ್ ಸಮಿವುಲ್ಲಾಗೆ ಸೇರಿದ ಹಣವನ್ನು ಹೈದರಾಬಾದ್‌ನಲ್ಲಿ ಸಂಗ್ರಹಿಸಿ ಹೊಸಹಳ್ಳಿಗೆ ಕೊಂಡೊಯ್ಯುವಾಗ ಈ ಕೃತ್ಯ ನಡೆದಿದೆ.

ಇರ್ಷಾನುಲ್ಲಾ ಡಿ.4ರಂದು ನಸುಕಿನಲ್ಲಿ ಹೈದರಾಬಾದ್‌ನಿಂದ ಹಣ ತಂದಿದ್ದರು. ಬೈಕ್‌ನಲ್ಲಿ ಹೊಸಹಳ್ಳಿಗೆ ತೆರಳುತ್ತಿದ್ದಾಗ ಈಚಲ ನಾಗೇನಹಳ್ಳಿಯ ಸಮೀಪ ಗುಂಪೊಂದು ದಾಳಿ ನಡೆಸಿ, ಹಣದ ಬ್ಯಾಗ್ ಕಿತ್ತು ಪರಾರಿಯಾಗಿದ್ದಾರೆ ಎಂದು ಗ್ರಾಮಾಂತರ ಠಾಣೆಯಲ್ಲಿ ದೂರು ನೀಡಲಾಗಿದೆ.

ಬಂಡೀಪುರ: ಹುಲಿ ದಾಳಿ, ವ್ಯಕ್ತಿ ಸಾವು?

ಗುಂಡ್ಲುಪೇಟೆ (ಚಾಮರಾಜನಗರ): ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಬಂಡೀಪುರ ವಲಯದ ಆಡಿನ ಕಣಿವೆ ಕಾಲೊನಿ ಸಮೀಪದ ಅರಣ್ಯದಲ್ಲಿ ವನ್ಯಪ್ರಾಣಿಯ ದಾಳಿಗೆ ಸಿಲುಕಿ ಗ್ರಾಮಸ್ಥ ಬಸವ (54) ಸಾವಿಗೀಡಾಗಿದ್ದಾರೆ.

ಬಸವ

ಮಂಗಳವಾರ ಬೆಳಿಗ್ಗೆ ಅವರ ಎದೆಯ ಮೇಲ್ಭಾಗವಷ್ಟೇ ಪತ್ತೆಯಾಗಿದ್ದು, ಉಳಿದದ್ದನ್ನು ಪ್ರಾಣಿ ತಿಂದಿರುವ ಸಾಧ್ಯತೆ ಇದೆ. ದಾಳಿ ಮಾಡಿರುವುದು ಹುಲಿ ಅಥವಾ ಚಿರತೆಯೋ ಎಂಬುದು ದೃಢಪಟ್ಟಿಲ್ಲ. ಸ್ಥಳೀಯರು, 'ಹುಲಿ' ಎಂದು ಹೇಳುತ್ತಿದ್ದಾರೆ.

ಬುಡಕಟ್ಟು ಸಮುದಾಯಕ್ಕೆ ಸೇರಿದ ಬಸವ, ಸೋಮವಾರ ಬೆಳಿಗ್ಗೆ ಕುರಿಗಳಿಗೆ ಮೇವು ತರಲು ಕಾಲೊನಿ ಸಮೀಪದಲ್ಲಿರುವ ಕಾಡಿಗೆ ತೆರಳಿದ್ದರು. ವಾಪಸ್ ಬಂದಿರಲಿಲ್ಲ. ಕುಟುಂಬಸ್ಥರು ಸಂಜೆಯಿಂದ ಹುಡುಕಾಟ ನಡೆಸಿದ್ದರು. ದೇಹ ಪತ್ತೆಯಾಗುತ್ತಿದ್ದಂತೆಯೇ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ. ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಬಂಡೀಪುರ ಹುಲಿ ಯೋಜನೆ ನಿರ್ದೇಶಕ ಪಿ.ರಮೇಶ್ ಕುಮಾರ್, 'ಶನಿವಾರ ಘಟನೆ ನಡೆದಿದ್ದು, ಕೊಂದಿರುವುದು ಹುಲಿಯೋ ಅಥವಾ ಚಿರತೆಯೋ ಎಂದು ಸ್ಪಷ್ಟವಾಗಿಲ್ಲ. ದೇಹದ ಅಂಗಗಳ ಮಾದರಿಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ' ಎಂದರು.

ಅಕ್ಕಿ ನಾಪತ್ತೆ: ಮತ್ತೆ ಇಬ್ಬರ ಸೆರೆ

ಶಹಾಪುರ (ಯಾದಗಿರಿ ಜಿಲ್ಲೆ): ತಾಲ್ಲೂಕಿನ ಟಿಎಪಿಸಿಎಂಎಸ್ ಆಹಾರ ಧಾನ್ಯ ಉಗ್ರಾಣ ಕೇಂದ್ರದಲ್ಲಿ ಸುಮಾರು ₹ 2.6 ಕೋಟಿ ಮೌಲ್ಯದ 6 ಸಾವಿರ ಕ್ವಿಂಟಲ್ ಅಕ್ಕಿ ನಾಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಂಗಳವಾರ ಮತ್ತೆ ಇಬ್ಬರನ್ನು ಶಹಾಪುರ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಇದರೊಂದಿಗೆ ಬಂಧಿತರ ಸಂಖ್ಯೆ 6ಕ್ಕೆ ಏರಿಕೆಯಾಗಿದೆ.

ಶಹಾಪುರ ನ್ಯಾಯಬೆಲೆ ಅಂಗಡಿಯ ಮಾಲೀಕ ಮಹಿಬೂಬ್ ಸೋಫಿಸಾಬ್ ಹಾಗೂ ನಗರದ ಗುತ್ತಿಪೇಟ ಬಡಾವಣೆಯ ವೆಂಕಟೇಶ ರಂಗಯ್ಯ ನಾಶಿ ಬಂಧಿತರು.

ಅತ್ಯಾಚಾರ: 25 ವರ್ಷ ಶಿಕ್ಷೆ

ಮೈಸೂರು: ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಪ್ರಕರಣದಲ್ಲಿ ರಾಜಪ್ಪ ಎಂಬ ಅಪರಾಧಿಗೆ ಎಫ್‌ಟಿಎಸ್‌ಸಿ ನ್ಯಾಯಾಲಯವು 25 ವರ್ಷ 6 ತಿಂಗಳು ಕಠಿಣ ಶಿಕ್ಷೆ ಹಾಗೂ ₹1.01 ಲಕ್ಷ ದಂಡವನ್ನು ವಿಧಿಸಿ ಮಂಗಳವಾರ ತೀರ್ಪು ನೀಡಿದೆ.

ತಾಲ್ಲೂಕಿನ ವರುಣ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 2022ರ ಮಾರ್ಚ್‌ನಲ್ಲಿ ಪ್ರಕರಣ ನಡೆದಿತ್ತು. 'ಪತ್ನಿಯ ಸಹೋದರಿಯಾದ ಬಾಲಕಿಯ ಮೇಲೆ, ಮನೆಯಲ್ಲಿ ಯಾರೂ ಇಲ್ಲದ ವೇಳೆ ಅತ್ಯಾಚಾರ ಎಸಗಿದ್ದು, ಯಾರಿಗಾದರೂ ಹೇಳಿದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದ. ನಂತರವೂ ಹಲವು ಬಾರಿ ಕೃತ್ಯ ನಡೆಸಿದ್ದು, ಬಾಲಕಿ ಗರ್ಭಿಣಿಯಾಗಿದ್ದಳು' ಎಂದು ಪೊಲೀಸರು ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಬಾಲಕಿಯ ತಾಯಿ ನೀಡಿದ ದೂರಿನ ಮೇಲೆ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು. ನ್ಯಾಯಾಧೀಶರಾದ ಶ್ಯಾಮ ಜಿ ಪ್ರಕರಣದ ವಿಚಾರಣೆ ನಡೆಸಿ, ಅಪರಾಧಿಗೆ ಶಿಕ್ಷೆ ವಿಧಿಸಿದ್ದಾರೆ. ದಂಡದ ಮೊತ್ತದಲ್ಲಿ ಸಂತ್ರಸ್ತ ಬಾಲಕಿಗೆ ₹ 75 ಸಾವಿರ ನೀಡಬೇಕು, ಸರ್ಕಾರದಿಂದ ₹ 5 ಲಕ್ಷ ಪರಿಹಾರಧನಕ್ಕೆ ಆಕೆ ಅರ್ಹಳು ಎಂದು ತೀರ್ಪಿನಲ್ಲಿ ತಿಳಿಸಲಾಗಿದೆ. ಸರ್ಕಾರಿ ಅಭಿಯೋಜಕಿ ಕೆ.ಬಿ.ಜಯಂತಿ ವಾದಿಸಿದ್ದರು.

150 ಚೀಲ ಬೆಳ್ಳುಳ್ಳಿ ಕಳವು

ಚಿತ್ರದುರ್ಗ: ತಾಲ್ಲೂಕಿನ ದಂಡಿನ ಕುರುಬರಹಟ್ಟಿಯ ಗೋದಾಮೊಂದರಲ್ಲಿ ಉದ್ಯಮಿಯೊಬ್ಬರು ಸಂಗ್ರಹಿಸಿ ಇರಿಸಿದ್ದ ₹ 6 ಲಕ್ಷ ಮೌಲ್ಯದ 150 ಚೀಲ ಬೆಳ್ಳುಳ್ಳಿ ಕಳವಾಗಿದೆ.

ಉದ್ಯಮಿ ಜಿ.ಎಂ. ಬಸವರಾಜ್ ಎಂಬುವವರಿಗೆ ಸೇರಿದ ಬೆಳ್ಳುಳ್ಳಿಯನ್ನು, ಗೋದಾಮಿನ ಷಟರ್ ಮುರಿದು ಕಳವು ಮಾಡಲಾಗಿದೆ. ಬೆಳ್ಳುಳ್ಳಿಗೆ ಭಾರಿ ಬೆಲೆ ದೊರೆಯುತ್ತಿರುವ ಹಿನ್ನೆಲೆಯಲ್ಲಿ ಕಳವು ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಸವರಾಜ್ ಅವರು 50 ಕೆ.ಜಿ. ತೂಕದ 1,100 ಚೀಲ ಬೆಳ್ಳುಳ್ಳಿಯನ್ನು ಮಧ್ಯಪ್ರದೇಶದಲ್ಲಿ ಖರೀದಿಸಿ ಚಿತ್ರದುರ್ಗಕ್ಕೆ ತಂದಿದ್ದರು. ದಂಡಿನ ಕುರುಬರಹಟ್ಟಿಯ ಜಯಶೀಲರೆಡ್ಡಿ ಎಂಬುವವರ ಗೋದಾಮಿನಲ್ಲಿ 5 ತಿಂಗಳಿಂದ ಸಂಗ್ರಹಿಸಿಟ್ಟಿದ್ದರು. ಗೋದಾಮಿಗೆ ಭೇಟಿ ನೀಡಿದಾಗ ಷಟರ್ ಮುರಿದಿದ್ದು ಗೊತ್ತಾಗಿದೆ. ಎಲ್ಲ ಚೀಲಗಳನ್ನು ಪರಿಶೀಲಿಸಿದಾಗ 150 ಚೀಲ ಬೆಳ್ಳುಳ್ಳಿ ಕಳವಾಗಿರುವುದು ಬೆಳಕಿಗೆ ಬಂದಿದ್ದರಿಂದ ದೂರು ನೀಡಿದ್ದಾರೆ ಎಂದು ಗ್ರಾಮಾಂತರ ಠಾಣೆಯ ಪೊಲೀಸರು ತಿಳಿಸಿದ್ದಾರೆ.

ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ

ಶ್ರೀರಂಗಪಟ್ಟಣ: ಇಲ್ಲಿನ ಕೆಆರ್‌ಎಸ್ ಪೊಲೀಸ್ ಠಾಣೆ ವ್ಯಾಪ್ತಿಯ ಗ್ರಾಮವೊಂದರಲ್ಲಿ ಸೋಮವಾರ 3 ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪಿ 60 ವರ್ಷದ ವೃದ್ಧನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಮನೆ ಬಳಿ ಆಡುತ್ತಿದ್ದ ಮಗುವಿಗೆ ಆರೋಪಿಯು ಚಾಕೊಲೇಟ್ ಆಮಿಷವೊಡ್ಡಿ ದೌರ್ಜನ್ಯ ಎಸಗಿದ್ದ. ಬಾಲಕಿಯನ್ನು ಮೈಸೂರಿನ ಸರ್ಕಾರಿ ಆಸ್ಪತ್ರೆಯೊಂದಕ್ಕೆ ದಾಖಲಿಸಲಾಗಿದೆ. ತಾಯಿ ಪೊಲೀಸರಿಗೆ ದೂರು ನೀಡಿದ್ದಾರೆ.

ಥಳಿತ: ಮತ್ತೊಬ್ಬ ಆರೋಪಿ ಬಂಧನ

ಬೆಳಗಾವಿ: ತಾಲ್ಲೂಕಿನ ಗ್ರಾಮವೊಂದರಲ್ಲಿ ಮಹಿಳೆಯೊಬ್ಬರನ್ನು ಬೆತ್ತಲೆಗೊಳಿಸಿ, ಬೀದಿಯಲ್ಲಿ ಓಡಾಡಿಸಿ, ಕಂಬಕ್ಕೆ ಕಟ್ಟಿ ಥಳಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮಂಗಳವಾರ ಮತ್ತೊಬ್ಬ ಆರೋಪಿಯನ್ನು ಬಂಧಿಸಲಾಗಿದೆ. ಬಂಧಿತರ ಸಂಖ್ಯೆ 8ಕ್ಕೆ ಏರಿದೆ.

ಆರೋಪಿಗಳಾದ ಯುವತಿಯ ತಾಯಿ, ಅಜ್ಜಿ ಹಾಗೂ ಸಂಬಂಧಿಕರಾದ ಇಬ್ಬರು ಮಹಿಳೆಯರನ್ನು ಸೋಮವಾರ ರಾತ್ರಿ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು. ಯುವತಿಯ ತಂದೆ ಮತ್ತು ಮೂವರು ಸಂಬಂಧಿಕರನ್ನು ಮಂಗಳವಾರ ಬೆಳಿಗ್ಗೆ ಗ್ರಾಮಕ್ಕೆ ಕರೆದೊಯ್ದು ಮಹಜರು ಮಾಡಲಾಯಿತು. ನಂತರ ಎಲ್ಲರನ್ನೂ 4ನೇ ಜೆಎಂಎಫ್‌ಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು.

ನ್ಯಾಯಾಲಯವು ಎಲ್ಲ ಆರೋಪಿಗಳನ್ನು 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಚಿಕಿತ್ಸೆ ಪಡೆಯುತ್ತಿರುವ ಸಂತ್ರಸ್ತ ಮಹಿಳೆ ಆರೋಗ್ಯ ಸುಧಾರಿಸುತ್ತಿದೆ ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ. ಸಚಿವ ಸತೀಶ ಜಾರಕಿಹೊಳಿ ಹಾಗೂ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಆಸ್ಪತ್ರೆಗೆ ಭೇಟಿ ನೀಡಿ ಮಹಿಳೆಗೆ ಧೈರ್ಯ ಹೇಳಿದರು.

ರಕ್ಷಣೆ ಕೋರಿ ಬಂದ ಜೋಡಿ: ಭಾನುವಾರ ತಡರಾತ್ರಿ ಮನೆ ಬಿಟ್ಟು ಹೋಗಿದ್ದ ಹೊಸ ವಂಟಮೂರಿಯ ಪ್ರೇಮಿಗಳು ಮಂಗಳವಾರ ಸಂಜೆ ಬೆಳಗಾವಿ ಪೊಲೀಸ್ ಆಯುಕ್ತರ ಕಚೇರಿಗೆ ಬಂದು ರಕ್ಷಣೆ ಕೋರಿದರು. 'ನಮಗೆ ಪ್ರಾಣ ಬೆದರಿಕೆ ಇದೆ. ರಕ್ಷಣೆ ಕೊಡಿ' ಎಂದು ಪ್ರೇಮಿಗಳು ಪೊಲೀಸರ ಮೊರೆ ಹೋದರು.

ವರಿಷ್ಠರ ಜತೆ ಚರ್ಚಿಸಿದ ನಂತರ ಮುಂದಿನ ನಿರ್ಧಾರ: ಸೋಮಣ್ಣ

ಪ್ರಜಾವಾಣಿ ವಾರ್ತೆ

ತುಮಕೂರು: 'ಹೆಚ್ಚು ಮಾತನಾಡಬಾರದು ಎಂದು ದೊಡ್ಡವರ ಸೂಚನೆ ಇದೆ. ಹಾಗಾಗಿ ಈಗ ಏನೂ ಹೇಳುವುದಿಲ್ಲ. ಪ್ರಸ್ತುತ ಪರಿಸ್ಥಿತಿಯಲ್ಲಿ ಯಾವುದೇ ರಾಜಕೀಯ ನಿರ್ಧಾರ ತೆಗೆದುಕೊಂಡಿಲ್ಲ. ಮುಂದೆ ಏನಾಗುತ್ತದೆ ಎಂಬುದು ಗೊತ್ತಿಲ್ಲ' ಎಂದು ಬಿಜೆಪಿ ಮುಖಂಡ ವಿ.ಸೋಮಣ್ಣ ಹೇಳಿದ್ದಾರೆ.

'ದೊಡ್ಡವರ (ವರಿಷ್ಠರು) ಜತೆ ಚರ್ಚಿಸಿದ ನಂತರ ನನ್ನ ಮುಂದಿನ ರಾಜಕೀಯ ನಿರ್ಧಾರ ಹೇಳುತ್ತೇನೆ' ಎಂದು ನಗರದಲ್ಲಿ ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

'ದೆಹಲಿಗೆ ಬರುವಂತೆ ಬಿಜೆಪಿ ಹೈಕಮಾಂಡ್ ಕಡೆಯಿಂದ ಸೋಮವಾರ ಕರೆ ಬಂದಿತ್ತು. ನಾನು ಬೇರೆ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರಿಂದ ಹೋಗಲು ಸಾಧ್ಯವಾಗಿಲ್ಲ. ಈಗ ಮೂರು ರಾಜ್ಯಗಳ ಮುಖ್ಯಮಂತ್ರಿಗಳ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡಿದ್ದು, ಮುಂದಿನ ದಿನಗಳಲ್ಲಿ ವರಿಷ್ಠರು ಆಹ್ವಾನ ನೀಡಿದರೆ ಹೋಗುತ್ತೇನೆ' ಎಂದು ತಿಳಿಸಿದರು.

ಕಿರಣ್ ಕುಮಾರ್‌ಗೆ 'ಸಿದ್ಧಗಂಗಾಶ್ರೀ' ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ತುಮಕೂರು: ಸಿದ್ಧಗಂಗಾ ಮಠದ ಹಳೆಯ ವಿದ್ಯಾರ್ಥಿಗಳ ಹಾಗೂ ಹಿತೈಷಿಗಳ ಟ್ರಸ್ಟ್ ಕೊಡಮಾಡುವ 2022–23ನೇ ಸಾಲಿನ 'ಸಿದ್ಧಗಂಗಾ ಶ್ರೀ' ಪ್ರಶಸ್ತಿಗೆ ಇಸ್ರೊ ಮಾಜಿ ಅಧ್ಯಕ್ಷ ಎ.ಎಸ್.ಕಿರಣ್ ಕುಮಾರ್ ಆಯ್ಕೆ ಆಗಿದ್ದಾರೆ.

ಎ.ಎಸ್.ಕಿರಣ್ ಕುಮಾರ್

ಪ್ರಶಸ್ತಿ ₹1 ಲಕ್ಷ ನಗದು, ಅಭಿನಂದನಾ ಪತ್ರ, ಸ್ಮರಣಿಕೆ ಒಳಗೊಂಡಿದೆ. ಬಾಹ್ಯಾಕಾಶ ಕ್ಷೇತ್ರಕ್ಕೆ ನೀಡಿದ ಕೊಡುಗೆ ಹಾಗೂ ಜೀವಮಾನದ ಸಾಧನೆ ಪರಿಗಣಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಸಿದ್ಧಗಂಗಾ ಮಠದಲ್ಲಿ ಡಿ. 17ರಂದು ನಡೆಯುವ ಟ್ರಸ್ಟ್‌ನ 67ನೇ ಸರ್ವ ಸದಸ್ಯರ ವಾರ್ಷಿಕ ಮಹಾಧಿವೇಶನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

KARNATAKA POWER CORPORATION LIMITED
(A Government of Karnataka Enterprises)
CIN : U85110KA1970SGC001919

ABSTRACT BID NOTIFICATION
(Through Kpp Portal Only)

Bids are invited from the qualified bidders through **(https://kppp.karnataka.gov.in)** for the work of **(1) No. KPCL/2023-24/PS/WORK_INDENT765/Call-2, Date: 04-12-2023, "Conducting RLA studies on unit-1 & unit -2 generators at Varahi Underground Power House of KPCL hydel station, by different tests as per KPCL specification and furnishing of reports"** Last date for receipt of completed bids along with documents to meet the pre-qualification criteria is up to **3:00 p.m. on 04.01.2024.** Further details can be obtained from Chief Engineer (Electrical Designs), KPCL, 3rd Floor, (Drugs Control Department Premises), Site No.3, Survey No. 13/3, Palace Road, Bengaluru-01. **Mobile : 91416 07505, e-mail: ceedkpcl@gmail.com**

ಕರ್ನಾಟಕ ಸರ್ಕಾರ
ಕರ್ನಾಟಕ ಮುನಿಸಿಪಲ್ ಡಾಟಾ ಸೊಸೈಟಿ
(ಪೌರಾಡಳಿತ ನಿರ್ದೇಶನಾಲಯ)
1–4, 6ನೇ ಮಹಡಿ, ಐಟಿ ಪಾರ್ಕ್, ರಾಜಾಜಿನಗರ ಕೈಗಾರಿಕಾ ಪ್ರದೇಶ, ಬೆಂಗಳೂರು–560010.
ದೂರವಾಣಿ: 080–23003100 E-mail: jdr@mrc.gov.in Web: www.mrc.gov.in
ಸಂ: E50646 KMDS/TECH/OTHE/19/2023 ದಿನಾಂಕ: 13.12.2023

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕೆ.ಎಂ.ಡಿ.ಎಸ್.ಗೆ ಅವಶ್ಯವಿರುವ ಈ ಕೆಳಕಂಡ ಸೇವೆಗಳನ್ನು ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ಬಿಡ್‌ದಾರರು ಬಿಡ್‌ಗಳನ್ನು https://kppp.karnataka.gov.inನಲ್ಲಿ ಸಲ್ಲಿಸಬಹುದಾಗಿದೆ.

ಕ್ರ.ಸಂ.	ಟೆಂಡರ್ ವಿವರ
1.	ಟೆಂಡರ್ ಸಂಖ್ಯೆ. DMA/2023-24/IND1037 ಟೆಂಡರ್ ಹೆಸರು: The Supply of Redhat Enterprise Linux, Redhat Enterprise Virtualization, Redhat Network Services and JBOSS Licenses for a period of One Year. ಟೆಂಡರ್ ಪೂರ್ವಭಾವಿ ಸಭೆ ದಿನಾಂಕ & ಸಮಯ: 18-12-2023 at 11.30 AM ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ: 02-01-2024 at 11.00 AM ಆರ್ಥಿಕ ಬಿಡ್ ತೆರೆಯುವ ದಿನಾಂಕ & ಸಮಯ: 05-01-2024 at 12.00 PM

ಮೇಲಿನ ಟೆಂಡರ್‌ಗಳ ಪ್ರಕಟಣೆ ದಿನಾಂಕ : **13-12-2023**. ಮೇಲಿನ ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **31-12-2023 at 5.30 PM.**

ಸಹಿ/– ಜಂಟಿ ನಿರ್ದೇಶಕರು (ಸುಧಾರಣೆ)
DIPR/CP/YC/2532/2023-24 ಕರ್ನಾಟಕ ಮುನಿಸಿಪಲ್ ಡಾಟಾ ಸೊಸೈಟಿ, ಬೆಂಗಳೂರು

ಕರ್ನಾಟಕ ಸರ್ಕಾರ
ಕಾರ್ಕಳ ತಾಲೂಕು ಪಂಚಾಯತ್
ಸರ್ವಜ್ಞ ವೃತ್ತ ಬಳಿ ಬೈಪಾಸ್ ರಸ್ತೆ, ಜಯಂತಿ ನಗರ, ಕಾರ್ಕಳ–574104, ಉಡುಪಿ ಜಿಲ್ಲೆ
ದೂರವಾಣಿ: 08258–295703, Email : tpkrkl@gmail.com tpkarkala-ka@gov.in
ಸಂ:ತಾಪಂಕಾ:ಇ–ಟೆಂಡರ್:ಸಿಆರ್:01/2023–24 ದಿನಾಂಕ: 11.12.2023.

ಟೆಂಡರ್ ಪ್ರಕಟಣೆ

ಕಾರ್ಕಳ ತಾಲೂಕು ಪಂಚಾಯತ್ ನ ವ್ಯಾಪ್ತಿಯಲ್ಲಿ ಈ ಕೆಳಕಾಣಿಸಿದ ಕಾಮಗಾರಿಯನ್ನು 2023–24ನೇ ಸಾಲಿನಲ್ಲಿ ತಾಲೂಕು ಪಂಚಾಯತ್ ನ ಸಂಯುಕ್ತ ಅನುದಾನದಡಿ ಅನುಷ್ಠಾನ ಮಾಡಲು ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ತಾಲೂಕು ಪಂಚಾಯತ್ ಕಾರ್ಕಳ, ಇವರಿಂದ ಇ–ಟೆಂಡರ್ ಮೂಲಕ ಅರ್ಹ ಗುತ್ತಿಗೆದಾರರಿಂದ ಬಿಡ್ಡು ಸಲ್ಲಿಸಲು ಟೆಂಡರ್ ಅಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು: Supply, Installation & Commissioning 15 Liters capacity plain & Hot water Purification Machine with in Built Stainless Steel Tank, UV+UF 60LPH Sediment Filter, Ultrafiltration 1 No, 11 watt UV set, 1 Liters capacity ABS Heater. (Wall Mounted) to Karkala Taluk Selected Anganwadies., ಟೆಂಡರ್ ಸಂಖ್ಯೆ: **RDPR/2023-24/IND0506**, ಟೆಂಡರ್ ಮೊತ್ತ: **23,20,000.00**

(1) ಟೆಂಡರ್ **ದಿನಾಂಕ: 11.12.2023** ರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್ ಲೋಡ್ ಮಾಡಿಕೊಳ್ಳುವುದು. (2) ಟೆಂಡರ್ ಫಾರಂ ಆನ್ ಲೈನ್ ಮೂಲಕ ಸಲ್ಲಿಸಲು ಕೊನೆಯ **ದಿನಾಂಕ: 26.12.2023 ಅಪರಾಹ್ನ 3.00** ಗಂಟೆಗೆ (3) ಟೆಂಡರ್ ತೆರೆಯುವ **ದಿನಾಂಕ: 27.12.2023 ಅಪರಾಹ್ನ 3.00** ಗಂಟೆಗೆ.

ಆಸಕ್ತಿಯುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಗಾಗಿ ಮತ್ತು ಟೆಂಡರಿಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಸರಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ **https://www.kppp.karnataka.gov.in** ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಅಧಿಕಾರಿ, ತಾಲೂಕು ಪಂಚಾಯತ್, ಕಾರ್ಕಳ
ವಾಸಾಇ/ಸನಿಉ/ಕೆಎಸ್‌ಎಂಸಿಎ/527/23–24 ದಿ: 12.12.2023

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಬಿ.ಟಿ.ಎಂ. ಬಡಾವಣೆ ವಿಭಾಗ, ಬೃಬೆಂಮಪಾ ವಾಣಿಜ್ಯ ಸಂಕೀರ್ಣ, 2ನೇ ಮಹಡಿ, ಲಶ್ಕರ್ ಹೊಸೂರು ರಸ್ತೆ, ಆಡುಗೋಡಿ, ಬೆಂಗಳೂರು–560 030.
ಸಂಖ್ಯೆ:ಕಾಪಾಅ/(ಬಿಟಿಎಂ)/ಎಇ/ಇ-ಪ್ರೊಕ್ಯೂರ್/16/2023-24 ದಿನಾಂಕ: 11-12-2023

ಟೆಂಡರ್ ಪ್ರಕಟಣೆ (ಐಎಫ್‌ಟಿ) (ದ್ವಿ ಲಕೋಟೆ ಪದ್ಧತಿ) 2ನೇ ಕರೆ
(ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ) ಕೆಡಬ್ಲ್ಯೂ–4

ಕಾರ್ಯಪಾಲಕ ಅಭಿಯಂತರರು, ಬಿ.ಟಿ.ಎಂ. ಬಡಾವಣೆ ವಿಭಾಗ, ಬಿ.ಬಿ.ಎಂ.ಪಿ ಬೆಂಗಳೂರು ರವರು ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು	ನಿಗದಿಪಡಿಸಿದ ಅಂದಾಜು ವೆಚ್ಚ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ. ಗಳಲ್ಲಿ)
1	ವಾರ್ಡ್ ನಂ.172ರ ಬಿಟಿಎಂ ಲೇಔಟ್ ಉಪ ವಿಭಾಗ ಮತ್ತು ವಾರ್ಡ್ ನಂ.152ರ ಎಸ್‌ಜಿ ಪಾಳ್ಯದ ಮಾರುತಿನಗರ 10ನೇ ಅಡ್ಡರಸ್ತೆಯಿಂದ 12ನೇ ಅಡ್ಡರಸ್ತೆಯವರೆಗೆ ಚಿಕ್ಕದುಗೋಡಿ, ಬಾಲಾಜಿನಗರ, ಭಾರತಿ ಲೇಔಟ್, ಎಕೆ ಕಾಲೋನಿ, ವೆಂಕಟೇಶ್ವರ ಲೇಔಟ್, ಚಾಕೊಲೇಟ್ ಕಾರ್ಖಾನೆ ರಸ್ತೆ, ಹಳೆ ಮಡಿವಾಳ, ಡಾಲರ್ಸ್ ಸ್ಕೀಮ್ ಮತ್ತು ಸುತ್ತಮುತ್ತಲಿನ ಪ್ರದೇಶಗಳ ಸಮಗ್ರ ರಸ್ತೆ, ಒಳಚರಂಡಿ, ಕಲ್ವರ್ಟ್‌ಗಳು ಮತ್ತು ಸುಧಾರಣಾ ಕಾಮಗಾರಿಗಳು. (ಪ್ಯಾಕೇಜ್: 2 ಒಟ್ಟು–4 ಕಾಮಗಾರಿಗಳು).	450.00	6,75,000/– (ರೂ. 1.00 ಲಕ್ಷವನ್ನು ಕೆಪಿಪಿಪಿ ಪೋರ್ಟಲ್‌ನಲ್ಲಿ ಪಾವತಿಸಬೇಕು ಮತ್ತುರೂ. 5,75,000/– ಬಾಕಿ ಮೊತ್ತವು ಬ್ಯಾಂಕ್ ಗ್ಯಾರಂಟಿ ರೂಪದಲ್ಲಿರಬೇಕು)

ಟೆಂಡರ್‌ನ ಕಾರ್ಯಸೂಚಿ: 1. ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ: **21–12–2023 ಸಂಜೆ 4:00 ಗಂಟೆಗೆ ಅಥವಾ ಅದಕ್ಕೂ ಮುಂಚಿತವಾಗಿ.** 2. ಬಿಡ್ ಪೂರ್ವ ಸಭೆಯು **16–12–2023 ರಂದು ಸಂಜೆ 3:00 ಗಂಟೆಗೆ ಮುಖ್ಯ ಅಭಿಯಂತರರು, (ದಕ್ಷಿಣ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, 9ನೇ ಮೇನ್, 9ನೇ ಕ್ರಾಸ್, ಜಯನಗರ 2ನೇ ಬ್ಲಾಕ್, ಬೆಂಗಳೂರು–560 011** ಈ ಕಚೇರಿಯಲ್ಲಿ ನಡೆಯಲಿದೆ. 3. ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 22–12–2023ರ ಸಂಜೆ 4:30 ಗಂಟೆಗೆ.** 4. ಈ ಟೆಂಡರ್ ಸೂಚನೆಯನ್ನು ಬಿ.ಬಿ.ಎಂ.ಪಿ ವೆಬ್‌ಸೈಟ್ **www.bbmp.gov.in** ನಲ್ಲಿಯೂ ನೋಡಬಹುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in** ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಬಿ.ಟಿ.ಎಂ. ಬಡಾವಣೆ ವಿಭಾಗ, ಬೃಬೆಂಮಪಾ.

ಮಹಾನಗರ ಪಾಲಿಕೆ, ವಿಜಯಪುರ
ಸಂಖ್ಯೆ:ಮನಪಾ/ಲೋ.ವಿ/ಕಾಅ/ಡಿಎಮ್‌ಎ/ಟಿಎನ್‌ಡಿ/ಇಪ್ರೋ/2023–24/
ದಿನಾಂಕ:08.12.2023

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ವಿಜಯಪುರ ಮಹಾನಗರ ಪಾಲಿಕೆ ಬಿಡುಗಡೆಯಾದ 1) ಸ್ವಚ್ಛ ಭಾರತ ಮಿಷನ್ (ನಗರ) 2.0 ರ ಅನುದಾನದಲ್ಲಿ 02 ಪ್ಯಾಕೇಜ್‌ಗಳ ಕಾಮಗಾರಿಗಳು ಹಾಗೂ 2) ಸನ್ 2023–24 ನೇ ಸಾಲಿನ ಮಹಾನಗರ ಪಾಲಿಕೆಯ ಅನುದಾನದಲ್ಲಿ 03 ಕಾಮಗಾರಿಗಳು ಕೆ.ಪಿ.ಡಬ್ಲೂ.ಡಿ ಇವರಿಂದ ನೋಂದಾಯಿತ ಗುತ್ತಿಗೆದಾರರಿಂದ ಇ–ಪ್ರೊಕ್ಯುರಮೆಂಟ್ ಸ್ಟಾಂಡರ್ಡ ಟೆಂಡರ್ ಡಾಕ್ಯೂಮೆಂಟ್ ಮುಖಾಂತರ ಐಟಂವಾರು ಟೆಂಡರ್‌ನ್ನು ಆವ್ಹಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಆನ್‌ಲೈನ್ ಮೂಲಕ ವೆಬ್‌ಸೈಟ್ (https://kppp.karnataka.gov.in)ನಲ್ಲಿ ಪ್ರಕಟಿಸಲಾಗಿದೆ.

1) ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 21–12–2023

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ವಿಜಯಪುರ
ವಾಸಾಸಂಇ/ವಿಜಯಪುರ/312/ಕೆಎಸ್‌ಎಂಸಿಎ/2023–24

ಕರ್ನಾಟಕ ಸರ್ಕಾರ
ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ
ಕೇಂದ್ರೀಕೃತ ದಾಖಲಾತಿ ಘಟಕ, ಸೆಂಟ್ರಲ್ ಜೂನಿಯರ್ ಕಾಲೇಜು ಆವರಣ, ಕೆಂಪೇಗೌಡ ರಸ್ತೆ, ಬೆಂಗಳೂರು–560009, ದೂ.22228805, 22483140,22483145
ಇ–ಮೇಲ್ : cackarnataka1@gmail.com
ಸಂಖ್ಯೆ:ಸಿ.ಎ.ಸಿ–05/ಬಿ.ಇಡಿ.ದಾ./12/2023–24 ದಿನಾಂಕ: 12.12.2023

ಪತ್ರಿಕಾ ಪ್ರಕಟಣೆ

2023–24ನೇ ಸಾಲಿನ ಬಿ.ಇಡಿ ಕೋರ್ಸಿನ ಸರ್ಕಾರಿ ಕೋಟಾದ ಸೀಟುಗಳ ದಾಖಲಾತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಮೂಲದಾಖಲೆಗಳ ಪರಿಶೀಲನೆಗಾಗಿ ರೋಸ್ಟರ್ ಮತ್ತು ಮೆರಿಟ್ ಅನ್ವಯ 1:2 ಅನುಪಾತದಲ್ಲಿ ಪಟ್ಟಿಯನ್ನು ದಿನಾಂಕ: **13/12/2023**ರ ಅಪರಾಹ್ನ ಇಲಾಖಾ ವೆಬ್‌ಸೈಟ್‌ನಲ್ಲಿ **www.schooleducation.karnataka.gov.in** ಪ್ರಕಟಿಸಲಾಗುವುದು. ಸದರಿ ಪಟ್ಟಿಯಲ್ಲಿನ ಅಭ್ಯರ್ಥಿಗಳು ಅರ್ಜಿಸಲ್ಲಿಸುವಾಗ ಆಯ್ಕೆ ಮಾಡಿಕೊಂಡ ನೋಡಲ್ ಕೇಂದ್ರಕ್ಕೆ ಮೂಲದಾಖಲೆಗಳೊಂದಿಗೆ ವೇಳಾಪಟ್ಟಿಯಲ್ಲಿ ನಿಗದಿಪಡಿಸಿದ ದಿನಾಂಕಗಳಂದು ಪರಿಶೀಲನೆಗಾಗಿ ಹಾಜರಾಗುವುದು. ಗೈರುಹಾಜರಾದಲ್ಲಿ ಮುಂದಿನ ಹಂತದ ಆಯ್ಕೆ ಪ್ರಕ್ರಿಯೆಗೆ ಅವರನ್ನು ಪರಿಗಣಿಸಲಾಗುವುದಿಲ್ಲ. ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಇಲಾಖಾ ವೆಬ್‌ಸೈಟ್ ಅನ್ನು ಸಂಪರ್ಕಿಸುವುದು.

ಸಹಿ/– ವಿಶೇಷಾಧಿಕಾರಿ, ಕೇಂದ್ರೀಕೃತ ದಾಖಲಾತಿ ಘಟಕ
ವಾಸಾಸಂಇ/ವಾಪ್ರ/ಜಿಎ/2529/2023–24

ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ
ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ ಸ್ವಾಯತ್ತ ಸಂಸ್ಥೆ
(ಉನ್ನತ ವೈದ್ಯಕೀಯ ವಿಜ್ಞಾನಗಳ ಸ್ನಾತಕೋತ್ತರ ಸಂಸ್ಥೆ)
ಸಹಕಾರ ಸಂಘಗಳ ನೋಂದಾಯಿತ ನೋಂದಣಿ ಸಂಖ್ಯೆ 132/85–86 ಅಡಿಯಲ್ಲಿ ಗುರುತಿಸಲ್ಪಟ್ಟಿದೆ
ದಕ್ಷಿಣ ಆಸ್ಪತ್ರೆ ಸಂಕೀರ್ಣ, ಧರ್ಮಾರಾಂ ಕಾಲೇಜು ಅಂಚೆ, ಬೆಂಗಳೂರು–560029.
ಇ–ಮೇಲ್: ihealthchild@yahoo.in, ವೆಬ್‌ಸೈಟ್: https://igich.karnataka.gov.in
IFT No.: DME/2023-24/SE0132 Date: 12.12.2023

ಟೆಂಡರ್ ಆಹ್ವಾನ ಪ್ರಕಟಣೆ
(ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ https://kppp.karnataka.gov.in ಮುಖಾಂತರ)

ನಿರ್ದೇಶಕರು, ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ, ಬೆಂಗಳೂರು–560 029, ಇವರು ಅರ್ಹ ಟೆಂಡರ್‌ದಾರರಿಂದ ಈ ಕೆಳಗೆ ನಮೂದಿಸಿರುವ ಐಟಂಗಳಿಗಾಗಿ ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ https://kppp.karnataka.gov.in ಮೂಲಕ ಟೆಂಡರ್ ಆಹ್ವಾನಿಸಿದ್ದಾರೆ.

ಕ್ರ. ಸಂ.	ಐಟಂ ಹೆಸರು	ಪ್ರಮಾಣ	ಇಎಂಡಿ (ರೂ.ಗಳಲ್ಲಿ)	ಟೆಂಡರ್ ಪ್ರಕ್ರಿಯೆಯ ಶುಲ್ಕ
1	Housekeeping and Facility Management, Security Services	As per e-procurement website	Rs. 2,50,000/-	As per e-procurement website

ಟೆಂಡರ್ ದಾಖಲೆಗಳನ್ನು **ದಿನಾಂಕ: 13.12.2023** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ದಾಖಲೆಗಳ ಮಾರಾಟದ ಕೊನೆಯ **ದಿನಾಂಕ 12.01.2024ರ ಮಧ್ಯಾಹ್ನ 3:00 ಗಂಟೆಯವರೆಗೆ.** ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 12.01.2024ರ ಸಂಜೆ 4:00 ಗಂಟೆಯವರೆಗೆ.** ಟೆಂಡರ್ ಲಕೋಟೆ–1ನ್ನು ತೆರೆಯುವ **ದಿನಾಂಕ 16.01.2024ರ ಸಂಜೆ 4:30 ಗಂಟೆಯವರೆಗೆ.** ಹೆಚ್ಚಿನ ಮಾಹಿತಿಗಾಗಿ ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **https://kppp.karnataka.gov.in** ಅಥವಾ ಇ–ಪ್ರೊಕ್ಯೂರ್‌ಮೆಂಟ್ ಹೆಲ್ಪ್‌ಡೆಸ್ಕ್ ನಂ. **080–25501216, 080–25501227** ಸಂಪರ್ಕಿಸಿ.

ಸಹಿ/– ಆಡಳಿತಾಧಿಕಾರಿಗಳು/ಟೆಂಡರ್ ಆಹ್ವಾನಿಸುವ ಪ್ರಾಧಿಕಾರ, ಇಂ.ಮ.ಆ.ಸಂ., ಬೆಂಗಳೂರು
DIPR/CP/BCPL/2531/2023-24

ನಗರಸಭೆ ಕಾರ್ಯಾಲಯ, ಬಾಗಲಕೋಟೆ – 587 103
ಜಿಲ್ಲಾ ಬಾಗಲಕೋಟೆ, ಕರ್ನಾಟಕ ರಾಜ್ಯ
ದೂ.: 08354–200335, ಇಮೇಲ್: itstaff_ulb_bagalkote@yahoo.co.in
ವೆಬ್‌ಸೈಟ್: www.bagalkotecity.mrc.gov.in
ಸಂಖ್ಯೆ : ನ.ಸ.ಬಾ./ಆ.ಶಾ./ಘ.ವ.ನಿ./ಟೆಂಡರ್/2023–24
ದಿನಾಂಕ : 12–12–2023

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ನಗರಸಭೆ ಬಾಗಲಕೋಟೆ ವ್ಯಾಪ್ತಿಯಲ್ಲಿ ಸನ್ 2023–24 ನೇ ಸಾಲಿನ **ಸ್ವಚ್ಛ ಭಾರತ್ ಮಿಷನ್** ಅನುದಾನದಲ್ಲಿ ಪಾರಂಪರಿಕ ತ್ಯಾಜ್ಯ ನಿರ್ವಹಣೆ ಮಾಡುವ ಕಾಮಗಾರಿ **(Bio-Remediation of Legacy Waste). DMA/2023-24/OW/WORK_INDENT117/Call-3** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿತ ಗುತ್ತಿಗೆದಾರರಿಂದ **ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ ಕೆ.ಡಬ್ಲ್ಯೂ–4** ರಂತೆ ಟೆಂಡರನ್ನು ಆಹ್ವಾನಿಸಲಾಗಿದ್ದು, ವಿವರಗಳು ಈ ಕೆಳಗಿನಂತಿರುತ್ತವೆ.

DMA/2023-24/OW/WORK_INDENT117/Call-3
ರಂತೆ ರೂ. : 199.50 ಲಕ್ಷದ ಕಾಮಗಾರಿ ಇರುತ್ತದೆ.

1) Last Date for Submission of Bid through E-procurement Portal before : 29-12-2023 at 17.00 hours.
2) Opening of Technical Bid is on or after : 01-01-2024 at 11.00 a.m.
3) Opening of Financial bid is on or after : 06-01-2024 at 11.00 a.m.
4) If there is no Bidding for Tender, auto extention will be 7 days.

ಹೆಚ್ಚಿನ ಮಾಹಿತಿಗಾಗಿ **http://kppp.karnataka.gov.in** ದಲ್ಲಿ ಅಥವಾ ಈ ಕಛೇರಿಯ ಆರೋಗ್ಯ ವಿಭಾಗದಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– ಪೌರಾಯುಕ್ತರು, ನಗರಸಭೆ, ಬಾಗಲಕೋಟೆ.
ಡಿಐಪಿಆರ್/ಬಾಗಲಕೋಟೆ/227/ಮಣಿಪಾಲ್/2023–24

ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
59, ರಿಚ್‌ಮಂಡ್ ರಸ್ತೆ, ಜನರಲ್ ಕೆ.ಎಸ್. ಶಿಮ್ಮಯ್ಯ ರಸ್ತೆ ಬೆಂಗಳೂರು–25
Ph: 080 – 25584102/25594893, Website: www.ksphc.org
e-mail: eecontractksphc@gmail.com
No.EE/KSPH&IDCL/CNT/TND/TND/2023-2024/374 Date: 11.12.2023

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕೆಎಸ್‌ಪಿಹೆಚ್ & ಐಡಿಸಿಎಲ್ ಕೆಟಿಟಿಪಿ 2000 ಕಾಯ್ದೆಯ ಪ್ರಕಾರ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ದಸ್ತಾವೇಜು **ಕೆಡಬ್ಲ್ಯೂ–3** (ದ್ವಿಕೋಟೆ ದಸ್ತಾವೇಜು ಪದ್ಧತಿ) ರ ಪ್ರಕಾರ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರನ್ನು ಆಹ್ವಾನಿಸಿದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಎಪಿಟಿ) ಲಕ್ಷಗಳಲ್ಲಿ
1	ಮೈಸೂರಿನ ಕೇಂದ್ರ ಕಾರಾಗೃಹದಲ್ಲಿ ಬಾಹ್ಯ ವಾಚ್ ಟವರ್ (4 ಸಂಖ್ಯೆಗಳು) ನಿರ್ಮಾಣ.	76.71
2	ಬೆಂಗಳೂರಿನ ಕೆಎಸ್‌ಪಿಹೆಚ್ & ಐಡಿಸಿಎಲ್‌ನ ಬೆಂಗಳೂರು ನಗರ ಗ್ರಾಮಾಂತರ ಮತ್ತು ವಿದ್ಯುಚ್ಛಕ್ತಿ ವಿಭಾಗಗಳ ದುರಸ್ತಿ ಮತ್ತು ನವೀಕರಣ ಕಾಮಗಾರಿ.	66.70

ಟೆಂಡರ್ ವಿವರಗಳಾದ ಟೆಂಡರ್ ಶುಲ್ಕ, ಇಎಂಡಿ, ಟೆಂಡರ್ ದಸ್ತಾವೇಜು, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಇತ್ಯಾದಿಗಳು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **18.12.2023** ರಿಂದ ಲಭ್ಯವಿದೆ. ಯಾವುದೇ ಹೆಚ್ಚಿನ ವಿವರಗಳಿಗಾಗಿ ಕೆಎಸ್‌ಪಿಹೆಚ್ & ಐಡಿಸಿಎಲ್‌ನ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

"ಕೆಎಸ್‌ಪಿಹೆಚ್ & ಐಡಿಸಿಎಲ್ ಅಥವಾ ಎಲ್ಲಾ ಬಿಡ್‌ಗಳನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ."

ಸೂಚನೆ: ಯಾವುದೇ ಬದಲಾವಣೆ / ತಿದ್ದುಪಡಿಗಳಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು –ಗುತ್ತಿಗೆ
ವಾಸಾಸಂಇ/ವಾಪ್ರ/2510/2023–24

ಪನ್ನೂ ಹತ್ಯೆ ಸಂಚು ಆರೋಪ • ಭಾರತ – ಅಮೆರಿಕ ಸಂಬಂಧದ ಮೇಲೆ ಕರಿಛಾಯೆ

ಗಣರಾಜ್ಯೋತ್ಸವಕ್ಕೆ ಬೈಡನ್ ಗೈರು?

ನವದೆಹಲಿ (ಪಿಟಿಐ): ಖಾಲಿಸ್ತಾನಿ ಸಿಖ್ ಪ್ರತ್ಯೇಕತಾವಾದಿ ಗುರುಪತ್ವಂತ್ ಸಿಂಗ್ ಪನ್ನೂ ಹತ್ಯೆ ಯತ್ನಕ್ಕೆ ಸಂಬಂಧಿಸಿದಂತೆ ಭಾರತ ಮತ್ತು ಅಮೆರಿಕ ನಡುವಿನ ಸಂಬಂಧದ ಮೇಲೆ ಕರಿಛಾಯೆ ಮೂಡಿರುವ ಬೆನ್ನಲ್ಲೇ, ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಗಣರಾಜ್ಯೋತ್ಸವಕ್ಕೆ ಮುಖ್ಯ ಅತಿಥಿಯಾಗಿ ಭಾಗವಹಿಸಲು ಭಾರತಕ್ಕೆ ಬರುವುದಿಲ್ಲ ಎಂಬ ಮಾಹಿತಿ ಹೊರಬಿದ್ದಿದೆ.

ಜೋ ಬೈಡನ್

ಪನ್ನೂ ಹತ್ಯೆ ಯತ್ನ ಪ್ರಕರಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಸರ್ಕಾರ ಭಾಗಿಯಾಗಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಬೈಡನ್ ಅವರು ಭಾರತಕ್ಕೆ ಬಾರದಿರಲು ನಿರ್ಧರಿಸಿದ್ದಾರೆ ಎಂದು ಗೊತ್ತಾಗಿದೆ.

ಕ್ವಾಡ್ ಶೃಂಗ ಮುಂದೂಡಿಕೆ: ಬೈಡನ್ ಭಾರತಕ್ಕೆ ಭೇಟಿ ನೀಡಿದ್ದರೆ ಜನವರಿ 27ರಂದು 'ಕ್ವಾಡ್' ಶೃಂಗಸಭೆ ಆಯೋಜಿಸಲು ಯೋಜಿಸಿದ್ದ ಭಾರತ, ಇದೀಗ ಶೃಂಗವನ್ನು ಮುಂದೂಡಲು ನಿರ್ಧರಿಸಿದೆ ಎಂದು ಉನ್ನತ ಮೂಲಗಳು ಹೇಳಿವೆ.

ಮುಂದಿನ ವರ್ಷದ ಜನವರಿ 26ರಂದು ಗಣರಾಜ್ಯೋತ್ಸವಕ್ಕೆ ಮುಖ್ಯ ಅತಿಥಿಯಾಗಿ ಭಾಗವಹಿಸುವಂತೆ ಜೋ ಬೈಡನ್ ಅವರನ್ನು ಪ್ರಧಾನಿ ನರೇಂದ್ರ ಮೋದಿ ಆಹ್ವಾನಿಸಿದ್ದರು ಎಂದು ಭಾರತದಲ್ಲಿನ ಅಮೆರಿಕದ ರಾಯಭಾರಿ ಎರಿಕ್ ಗಾರ್ಸೆಟ್ಟಿ ಸೆಪ್ಟೆಂಬರ್‌ನಲ್ಲಿ ತಿಳಿಸಿದ್ದರು.

ಆದರೆ ಬೈಡನ್ ಅವರನ್ನು ಆಹ್ವಾನಿಸಿದ್ದಕ್ಕೆ ಸಂಬಂಧಿಸಿದಂತೆ ಭಾರತದಿಂದ ಯಾವುದೇ ಅಧಿಕೃತ ಪ್ರತಿಕ್ರಿಯೆ ಬಂದಿರಲಿಲ್ಲ. ಬೈಡನ್ ಅವರು ಭಾರತಕ್ಕೆ ಬರಲು ಆಗುವುದಿಲ್ಲ ಎಂದು ಶ್ವೇತಭವನ ಆಗಲೇ ಭಾರತಕ್ಕೆ ತಿಳಿಸಿತ್ತು ಎಂದೂ ಮೂಲಗಳು ತಿಳಿಸಿವೆ.

ಬೈಡನ್ ಮುಂದಿನ ಅಧ್ಯಕ್ಷ ಚುನಾವಣೆ ಮತ್ತು ಹಮಾಸ್– ಇಸ್ರೇಲ್ ಬಿಕ್ಕಟ್ಟಿನ ಬಗ್ಗೆ ಹೆಚ್ಚಿನ ಗಮನಹರಿಸಿರುವುದರಿಂದ ಭಾರತದ ಆಹ್ವಾನವನ್ನು ಒಪ್ಪಿಕೊಂಡಿಲ್ಲ ಎನ್ನಲಾಗುತ್ತಿದೆ.

ಭಾರತ, ಅಮೆರಿಕ, ಜಪಾನ್ ಮತ್ತು ಆಸ್ಟ್ರೇಲಿಯಾ ದೇಶಗಳನ್ನು ಒಳಗೊಂಡಿರುವ ಕ್ವಾಡ್ ಶೃಂಗವನ್ನು ಜನವರಿ ಬದಲಿಗೆ 2024ರ ಅಂತ್ಯದ ವೇಳೆಗೆ ನಡೆಸಬಹುದಾದ ಪರಿಷ್ಕೃತ ದಿನಾಂಕಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಅವರು ಹೇಳಿದರು.

ಈಚೆಗೆ ನಡೆದಿದ್ದ '2 + 2' ಸಚಿವರ ಸಂವಾದ: ಅಮೆರಿಕ ಕೆಲ ಹಿರಿಯ ಅಧಿಕಾರಿಗಳು ಇತ್ತೀಚೆಗೆ ಭಾರತಕ್ಕೆ ಮೇಲಿಂದ ಮೇಲೆ ಭೇಟಿ ನೀಡುತ್ತಿದ್ದಾರೆ. ನವೆಂಬರ್‌ನಲ್ಲಿ ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಆಂಟೋನಿ ಬ್ಲಿಂಕೆನ್ ಮತ್ತು ರಕ್ಷಣಾ ಕಾರ್ಯದರ್ಶಿ ಲಾಯ್ಡ್ ಆಸ್ಟಿನ್ ಭಾರತಕ್ಕೆ ಭೇಟಿ ನೀಡಿದ್ದರು. ಅವರು ಇಲ್ಲಿ '2 + 2' ಸಚಿವರೊಂದಿಗೆ ಸಂವಾದ ನಡೆಸಿದ್ದರು.

ಅಮೆರಿಕದ ಉಪ ರಾಷ್ಟ್ರೀಯ ಭದ್ರತಾ ಸಲಹೆಗಾರ ಜೋನಾಥನ್ ಫಿನರ್ ಕಳೆದ ವಾರ ಭಾರತಕ್ಕೆ ಭೇಟಿ ನೀಡಿದ್ದರು. ಪ್ರಸ್ತುತ ಎಫ್‌ಬಿಐ ನಿರ್ದೇಶಕ ಕ್ರಿಸ್ಟೋಫರ್ ರೇ ಅವರು ನವದೆಹಲಿ ಪ್ರವಾಸದಲ್ಲಿದ್ದಾರೆ.

ಸಿಖ್ ಪ್ರತ್ಯೇಕತಾವಾದಿಗಳ ಮಾಹಿತಿ ನೀಡಿ: ಎಫ್‌ಬಿಐಗೆ ಭಾರತ ಮನವಿ

ನವದೆಹಲಿ(ರಾಯಿಟರ್ಸ್): ಅಮೆರಿಕದಲ್ಲಿ ವಾಸವಾಗಿರುವ ಸಿಖ್ ಪ್ರತ್ಯೇಕತಾವಾದಿಗಳ ಕುರಿತ ಮಾಹಿತಿಯನ್ನು ಹಂಚಿಕೊಳ್ಳುವಂತೆ ಎಫ್‌ಬಿಐಗೆ ಭಾರತ ಮನವಿ ಮಾಡಿದೆ ಎಂದು ಅಧಿಕಾರಿಯೊಬ್ಬರು ಮಂಗಳವಾರ ತಿಳಿಸಿದ್ದಾರೆ.

ಅಮೆರಿಕದಲ್ಲಿ ಸಿಖ್ ಪ್ರತ್ಯೇಕತಾವಾದಿ ನಾಯಕನ ಹತ್ಯೆಗೆ ಸಂಚು ರೂಪಿಸಲಾಗಿತ್ತು ಎಂಬ ಆರೋಪಗಳ ಕುರಿತು ತನಿಖೆ ನಡೆಯುತ್ತಿರುವ ನಡುವೆಯೇ, ಭಾರತ ಈ ಮನವಿ ಮಾಡಿದೆ.

ಭಾರತಕ್ಕೆ ಭೇಟಿ ನೀಡಿರುವ ಎಫ್‌ಬಿಐ ನಿರ್ದೇಶಕ ಕ್ರಿಸ್ಟೋಫರ್ ರೇ ಅವರಿಗೆ ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಈ ಮನವಿ ಮಾಡಿದೆ ಎಂದು ತಿಳಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ನೇಮಕಗೊಂಡಿರುವ ಹಾಗೂ ಪ್ರತ್ಯೇಕತಾ ಆಂದೋಲನದಲ್ಲಿ ಭಾಗಿಯಾಗಿರುವ ಶಂಕಿತ ವ್ಯಕ್ತಿಗಳ ಕುರಿತು ಮಾಹಿತಿ ಒದಗಿಸುವಂತೆ ಕೋರಲಾಗಿದೆ ಎಂದೂ ತಿಳಿಸಿದ್ದಾರೆ.

ವೆಸ್ಟ್ ಬ್ಯಾಂಕ್ ಮೇಲೆ ದಾಳಿ ತೀವ್ರ

ಇಸ್ರೇಲ್ ಪಡೆಗಳ ಡ್ರೋನ್ ದಾಳಿ: ನಾಲ್ವರ ಸಾವು

ದಾಳಿಯಲ್ಲಿ ಗಾಯಗೊಂಡವರನ್ನು ಆಸ್ಪತ್ರೆಗೆ ಕರೆದೊಯ್ಯುತ್ತಿದ್ದ ಆಂಬುಲೆನ್ಸ್‌ಗಳನ್ನು ಇಸ್ರೇಲ್ ಪಡೆಗಳು ಮಂಗಳವಾರ ಪರಿಶೀಲಿಸಿದವು –ಎಎಫ್‌ಪಿ ಚಿತ್ರ

ಜೆರುಸಲೇಂ (ಎಎಫ್‌ಪಿ): ಹಮಾಸ್ ಬಂಡುಕೋರರನ್ನು ಗುರಿಯಾಗಿಸಿಕೊಂಡು ಇಸ್ರೇಲ್ ಪಡೆಗಳು ಗಾಜಾಪಟ್ಟಿ ಮೇಲೆ ಮಂಗಳವಾರವೂ ತೀವ್ರ ದಾಳಿ ನಡೆಸಿದವು.

ಹಮಾಸ್‌–ಇಸ್ರೇಲ್ ಮಧ್ಯೆ ಸಂಘರ್ಷ ಏರ್ಪಟ್ಟು 67 ದಿನಗಳು ಕಳೆದಿವೆ. ಇಸ್ರೇಲ್ ಪಡೆಗಳು ವೆಸ್ಟ್ ಬ್ಯಾಂಕ್ ಮೇಲೆ ಮಂಗಳವಾರ ನಡೆಸಿದ ದಾಳಿಯಲ್ಲಿ ನಾಲ್ವರು ನಾಗರಿಕರು ಮೃತಪಟ್ಟಿದ್ದಾರೆ ಎಂದು ಪ್ಯಾಲೆಸ್ಟೀನ್ ಆರೋಗ್ಯ ಸಚಿವಾಲಯ ತಿಳಿಸಿದೆ.

'ಡ್ರೋನ್ ದಾಳಿಯಲ್ಲಿ ನಾಲ್ವರು ಮೃತಪಟ್ಟಿದ್ದಾರೆ. ಇಸ್ರೇಲ್ ಸೇನೆಯು ಜೆನಿನ್ ಕ್ಯಾಂಪ್ ಮೇಲೆಯೂ ತೀವ್ರ ದಾಳಿ ಮುಂದುವರಿಸಿದೆ. ಆಂಬುಲೆನ್ಸ್‌ಗಳ ಪ್ರವೇಶಕ್ಕೆ ಅಡ್ಡಿ ಮಾಡುತ್ತಿದೆ' ಎಂದು ಪ್ಯಾಲೆಸ್ಟೀನಿಯನ್ ರೆಡ್ ಕ್ರೆಸೆಂಟ್ ಸೊಸೈಟಿ ಹೇಳಿದೆ. ಇಸ್ರೇಲ್ ಈ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

'ಆಸ್ಪತ್ರೆ ಮೇಲೆ ದಾಳಿ': ಉತ್ತರ ಪ್ಯಾಲೆಸ್ಟೀನ್ ಗಡಿಯಲ್ಲಿನ ಆಸ್ಪತ್ರೆ ಮೇಲೆ ಇಸ್ರೇಲ್ ಪಡೆಗಳು ದಾಳಿ ನಡೆಸಿವೆ ಎಂದು ಗಾಜಾಪಟ್ಟಿಯ ಆರೋಗ್ಯ ಸಚಿವಾಲಯ ತಿಳಿಸಿದೆ. 'ಕಮಲ್ ಅದ್ವಾನ್ ಆಸ್ಪತ್ರೆ ಮೇಲೆ ಆಕ್ರಮಣ ಮಾಡಿ ಬಾಂಬ್ ದಾಳಿ ನಡೆಸಲಾಗಿದೆ' ಎಂದು ವಕ್ತಾರ ಅಶ್ರಫ್–ಅಲ್–ಕುದ್ರಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ಇಸ್ರೇಲ್ ಯುದ್ಧವಿಮಾನವು ಗಾಜಾದಾದ್ಯಂತ ಇರುವ ರಾಕೆಟ್ ಉಡಾವಣಾ ನೆಲೆಗಳ ಮೇಲೆ ದಾಳಿ ನಡೆಸಿದೆ. ಭೂ ಸೇನೆಯು 250 ರಾಕೆಟ್ ಮತ್ತು ಶೆಲ್‌ಗಳನ್ನು ಪತ್ತೆ ಮಾಡಿ ವಶಕ್ಕೆ ಪಡೆದಿದೆ' ಎಂದು ಇಸ್ರೇಲ್ ಸೇನೆ ತಿಳಿಸಿದೆ. ಹಮಾಸ್ ಬಂಡುಕೋರರನ್ನು ಸದೆಬಡಿಯಲು ಇನ್ನೂ ಹಲವು ತಿಂಗಳು ಹೋರಾಡಲು ಸಿದ್ಧ ಎಂದು ಅದು ತಿಳಿಸಿದೆ.

ಈ ಮಧ್ಯೆ ಇಸ್ರೇಲ್ ಕಡೆಗೆ ಸಾಗುತ್ತಿದ್ದ ನಾರ್ವೆ ದೇಶದ ಧ್ವಜ ಇದ್ದ ಅನಿಲ ಟ್ಯಾಂಕರ್ ಮೇಲೆ ಕ್ಷಿಪಣಿ ದಾಳಿ ನಡೆದಿದ್ದು, ಹುತಿ ಬಂಡುಕೋರರು ದಾಳಿಯ ಹೊಣೆ ಹೊತ್ತಿದ್ದಾರೆ.

ತುರ್ತು ಸಭೆ: ಗಾಜಾದಲ್ಲಿ ಮಾನವೀಯ ನೆಲೆಯಲ್ಲಿ ತಕ್ಷಣವೇ ಕದನ ವಿರಾಮ ಘೋಷಣೆ ಮಾಡಬೇಕು ಎಂಬ ನಿರ್ಣಯವನ್ನು ಮತಕ್ಕೆ ಹಾಕಲು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಮಂಗಳವಾರ ತುರ್ತು ಸಭೆ ಕರೆದಿದೆ.

ಇದಕ್ಕೂ ಮುನ್ನ ಶುಕ್ರವಾರ, ಕದನ ವಿರಾಮ ಘೋಷಣೆ ಹಾಗೂ ಹಮಾಸ್‌ನಿಂದ ಒತ್ತೆಯಾಳುಗಳ ಬೇಷರತ್ ಬಿಡುಗಡೆಗೆ ಆಗ್ರಹ ಪಡಿಸುವ ಕುರಿತು ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಸಭೆಯಲ್ಲಿ ಮತಕ್ಕೆ ಹಾಕಲಾಗಿದ್ದ ನಿರ್ಣಯದ ಅನುಮೋದನೆಯನ್ನು ಅಮೆರಿಕ ತನ್ನ ಪರಮಾಧಿಕಾರ ಬಳಸಿ ತಡೆಹಿಡಿದಿತ್ತು.

ಇಸ್ರೇಲ್– ಹಮಾಸ್ ಬಂಡುಕೋರರ ನಡುವಿನ ಯುದ್ಧದಲ್ಲಿ ಈವರೆಗೆ ಗಾಜಾದಲ್ಲಿ ಮೃತಪಟ್ಟವರ ಸಂಖ್ಯೆ 18 ಸಾವಿರಕ್ಕೆ ಏರಿದೆ. ಮೃತರಲ್ಲಿ ಮಹಿಳೆಯರು ಮತ್ತು ಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

ಪಾಕಿಸ್ತಾನದಲ್ಲಿ ಆತ್ಮಾಹುತಿ ದಾಳಿ: 23 ಯೋಧರ ಸಾವು

ಪೆಶಾವರ (ಪಿಟಿಐ): ಪಾಕಿಸ್ತಾನದ ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿ, ಸ್ಫೋಟಕಗಳಿಂದ ಭರ್ತಿಯಾಗಿದ್ದ ಟ್ರಕ್ ಅನ್ನು ಸೇನಾ ನೆಲೆಗೆ ನುಗ್ಗಿಸುವ ಮೂಲಕ ಉಗ್ರರು ಮಂಗಳವಾರ ನಡೆಸಿದ ಆತ್ಮಾಹುತಿ ದಾಳಿಯಲ್ಲಿ ಕನಿಷ್ಠ 23 ಯೋಧರು ಮೃತಪಟ್ಟಿದ್ದಾರೆ.

ದಕ್ಷಿಣ ವಜೀರಿಸ್ತಾನ್ ವಲಯದಲ್ಲಿ ಭದ್ರತಾ ಪಡೆಗಳ ನೆಲೆಯನ್ನು ಗುರಿಯಾಗಿಸಿ ಕನಿಷ್ಠ ಆರು ಉಗ್ರರು ಈ ಕೃತ್ಯ ಎಸಗಿದ್ದಾರೆ. ಭದ್ರತಾ ನೆಲೆ ಪ್ರವೇಶಿಸುವ ಉಗ್ರರ ಯತ್ನವನ್ನು ಸಿಬ್ಬಂದಿ ತಡೆದಿದ್ದರು. ಅದನ್ನು ಮೀರಿ ಉಗ್ರರು ಟ್ರಕ್ ನುಗ್ಗಿಸಿದ್ದಾರೆ. ಸ್ಫೋಟದ ತೀವ್ರತೆಯಿಂದಾಗಿ ಕಟ್ಟಡ ಜಖಂಗೊಂಡಿದೆ. 23 ಯೋಧರು ಸ್ಥಳದಲ್ಲಿಯೇ ಸತ್ತಿದ್ದಾರೆ. ಆರು ಉಗ್ರರೂ ಹತರಾಗಿದ್ದಾರೆ.

17 ಉಗ್ರರು ಹತ: ಗುಪ್ತದಳ ಮೂಲಗಳನ್ನು ಆಧರಿಸಿ ಮಂಗಳವಾರ ನಡೆಸಿದ ಪ್ರತ್ಯೇಕ ಕಾರ್ಯಾಚರಣೆಯಲ್ಲಿ 17 ಉಗ್ರರು ಹತರಾಗಿದ್ದಾರೆ. ಡೆರಾ ಇಸ್ಮಾಯಿಲ್ ಖಾನ್‌ನ ದರಾಜಿಂದಾ ವಲಯದಲ್ಲಿ ಈ ಕಾರ್ಯಾಚರಣೆ ನಡೆಯಿತು ಎಂದು ಸೇನೆ ತಿಳಿಸಿದೆ.

ದಾಳಿ ಹೊಣೆ ಹೊತ್ತ ಟಿಜೆಪಿ: ತೆಹ್ರೀಕ್ ಐ ತಾಲಿಬಾನ್ ಪಾಕಿಸ್ತಾನ್ (ಟಿಟಿಪಿ) ಉಗ್ರ ಸಂಘಟನೆಯೊಂದಿಗೆ ಗುರುತಿಸಿಕೊಂಡಿರುವ ಹೊಸದಾಗಿ ಸ್ಥಾಪನೆಯಾಗಿರುವ ಉಗ್ರರ ಸಂಘಟನೆ ತೆಹ್ರೀಕ್ ಇ ಜಿಹಾದ್ ಪಾಕಿಸ್ತಾನ್ (ಟಿಜೆಪಿ) ದಾಳಿ ಹೊಣೆಯನ್ನು ಹೊತ್ತುಕೊಂಡಿದೆ.

'ಶಾ ಇತಿಹಾಸ ತಿಳಿದುಕೊಂಡಿಲ್ಲ'

ನವದೆಹಲಿ (ಪಿಟಿಐ): ದೇಶದ ಮೊದಲ ಪ್ರಧಾನಿ ಜವಾಹರ ಲಾಲ್ ನೆಹರೂ ಕುರಿತು ಜಮ್ಮು–ಕಾಶ್ಮೀರ ವಿಷಯವಾಗಿ ರಾಜ್ಯಸಭೆಯಲ್ಲಿ ಹೇಳಿಕೆ ನೀಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮಂಗಳವಾರ ಕಿಡಿ ಕಾರಿದ್ದಾರೆ.

'ಅಮಿತ್ ಶಾ ಅವರಿಗೆ ಇತಿಹಾಸವೇ ಗೊತ್ತಿಲ್ಲ' ಎಂದಿದ್ದಾರೆ.

'ಪಕ್ಷವು ಜಾತಿ ಗಣತಿಗೆ ಒತ್ತಾಯಿಸುತ್ತಿದೆ. ದೇಶದ ಸಂಪತ್ತು ಯಾರ ಕೈ ಸೇರುತ್ತಿದೆ ಎಂಬ ಪ್ರಶ್ನೆಗೂ ಸರ್ಕಾರ ಉತ್ತರಿಸುತ್ತಿಲ್ಲ. ಇಂತಹ ಪ್ರಮುಖ ವಿಷಯಗಳಿಂದ ದೇಶದ ಜನರ ಗಮನ ಬೇರೆಡೆ ಸೆಳೆಯುವುದಕ್ಕಾಗಿ ಶಾ ಈ ರೀತಿ ಹೇಳಿಕೆ ನೀಡುತ್ತಿದ್ದಾರೆ' ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.

ರಾಜ್ಯಸಭೆಯಲ್ಲಿ ಸೋಮವಾರ ಮಾತನಾಡಿದ್ದ ಸಚಿವ ಅಮಿತ್ ಶಾ, 'ಜಮ್ಮು–ಕಾಶ್ಮೀರ ಸಮಸ್ಯೆಗೆ ಜವಾಹರಲಾಲ್ ನೆಹರೂ ಕಾರಣ. ಅಕಾಲಿಕ ಕದನ ವಿರಾಮಕ್ಕೆ ಆದೇಶಿಸಿದಂತಹ ಪ್ರಮಾದ ಹಾಗೂ ಈ ವಿಷಯವನ್ನು ವಿಶ್ವಸಂಸ್ಥೆಗೆ ತೆಗೆದುಕೊಂಡು ಹೋಗಿದ್ದೇ ಸಮಸ್ಯೆಗೆ ಕಾರಣ' ಎಂದು ಹೇಳಿದ್ದರು.

'ಪಂಡಿತ ನೆಹರೂ ಅವರು ದೇಶಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟದ್ದರು. ಹಲವು ವರ್ಷ ಸೆರೆವಾಸ ಅನುಭವಿಸಿದ್ದರು. ಈ ಎಲ್ಲ ಚರಿತ್ರೆ ಅಮಿತ್ ಶಾ ಅವರಿಗೆ ಗೊತ್ತಿಲ್ಲ. ಇತಿಹಾಸ ಮರುರಚನೆಯಲ್ಲೇ ತೊಡಗಿರುವ ಅವರು, ಇಂತಹ ಸಂಗತಿಗಳನ್ನು ತಿಳಿದುಕೊಳ್ಳುತ್ತಾರೆ ಎಂದು ನಾನು ನಿರೀಕ್ಷಿಸುವುದೂ ಇಲ್ಲ' ಎಂದು ಶಾ ಹೇಳಿರುವುದಕ್ಕೆ ರಾಹುಲ್ ಪ್ರತಿಕ್ರಿಯಿಸಿದ್ದಾರೆ.

'ನೆಹರೂ ಹೊಣೆಯಲ್ಲ': 'ಜಮ್ಮು–ಕಾಶ್ಮೀರ ಸಮಸ್ಯೆಗೆ ನೆಹರೂ ಕಾರಣರಲ್ಲ. ವಿಷಯ ಹೀಗಿದ್ದರೂ, ನೆಹರೂ ಮೇಲೆ ಅವರಿಗೆ ಇಷ್ಟೊಂದು ದ್ವೇಷ ಯಾಕೆ ಎಂಬುದು ಅರ್ಥವಾಗುತ್ತಿಲ್ಲ' ಎಂದು ನ್ಯಾಷನಲ್ ಕಾನ್ಫರೆನ್ಸ್ ಹಿರಿಯ ನಾಯಕ ಫಾರೂಕ್ ಅಬ್ದುಲ್ಲಾ ಮಂಗಳವಾರ ಹೇಳಿದ್ದಾರೆ.

ನೆಹರೂ ಕುರಿತು ರಾಜ್ಯಸಭೆಯಲ್ಲಿ ಅಮಿತ್ ಶಾ ನೀಡಿರುವ ಹೇಳಿಕೆಗೆ ಅವರು ಹೀಗೆ ಪ್ರತಿಕ್ರಿಯಿಸಿದ್ದಾರೆ.

'370ನೇ ವಿಧಿಯಡಿ ವಿಶೇಷ ಸ್ಥಾನಮಾನ ನೀಡಬೇಕು ಎಂಬ ಕುರಿತು ಚರ್ಚೆ ನಡೆದ ಸಂದರ್ಭದಲ್ಲಿ ನೆಹರೂ ಅಮೆರಿಕದಲ್ಲಿದ್ದರು. ಈ ನಿರ್ಧಾರ ಕೈಗೊಂಡ ಸಭೆಯಲ್ಲಿ ಸರ್ದಾರ ವಲ್ಲಭಭಾಯಿ ಪಟೇಲ್, ಶ್ಯಾಮಪ್ರಸಾದ್ ಮುಖರ್ಜಿ ಪಾಲ್ಗೊಂಡಿದ್ದರು' ಎಂದು ಅಬ್ದುಲ್ಲಾ ಹೇಳಿದರು.

ಸಂಕ್ಷಿಪ್ತ ಸುದ್ದಿ

ಪ್ರಶಸ್ತಿ: ನೌಕರರಿಗೆ ಹೊಸ ಮಾರ್ಗಸೂಚಿ

ನವದೆಹಲಿ(ಪಿಟಿಐ): ಸರ್ಕಾರಿ ನೌಕರರು ಖಾಸಗಿ ಸಂಘ–ಸಂಸ್ಥೆಗಳಿಂದ ಪ್ರಶಸ್ತಿಗಳನ್ನು ಸ್ವೀಕರಿಸುವುದಕ್ಕೂ ಮುನ್ನ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯುವುದು ಕಡ್ಡಾಯ ಎಂದು ಕೇಂದ್ರ ಸರ್ಕಾರ ಹೇಳಿದೆ.

ಈ ಸಂಬಂಧ ಸಿಬ್ಬಂದಿ ಸಚಿವಾಲಯವು ಹೊಸ ಮಾರ್ಗ‑ಸೂಚಿಯನ್ನು ಬಿಡುಗಡೆ ಮಾಡಿದೆ. ಈಗಾಗಲೇ ಚಾಲ್ತಿಯಲ್ಲಿರುವ ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಲಾಗುತ್ತಿಲ್ಲ ಎಂಬುದು ಗಮನಕ್ಕೆ ಬಂದ ಹಿನ್ನೆಲೆಯಲ್ಲಿ ಸಚಿವಾಲಯವು ಹೊಸ ಮಾರ್ಗಸೂಚಿಯನ್ನು ಬಿಡುಗಡೆ ಮಾಡಿದೆ ಎಂದು ಮೂಲಗಳು ಹೇಳಿವೆ.

ನೌಕರರು ಸ್ವೀಕರಿಸುವ ಪ್ರಶಸ್ತಿಯು ಹಣವನ್ನು ಒಳಗೊಂಡಿರಬಾರದು. ಪ್ರಶಸ್ತಿಗಳನ್ನು ನೀಡುವ ಖಾಸಗಿ ಸಂಸ್ಥೆಗಳು/ಸಂಘಟನೆಗಳು ಸಂದೇಹಾಸ್ಪದವಾಗಿರಬಾರದು ಎಂಬುದು ಸೇರಿದಂತೆ ಹಲವಾರು ಅಂಶಗಳನ್ನು ಮಾರ್ಗಸೂಚಿ ಒಳಗೊಂಡಿದೆ.

ಸಿಬಿಎಸ್‌ಇ 10, 12ನೇ ತರಗತಿ ಪರೀಕ್ಷಾ ವೇಳಾಪಟ್ಟಿ ಪ್ರಕಟ

ನವದೆಹಲಿ (ಪಿಟಿಐ): ಕೇಂದ್ರ ಪ್ರೌಢ ಶಿಕ್ಷಣ ಮಂಡಳಿಯ (ಸಿಬಿಎಸ್‌ಇ) 10 ಮತ್ತು 12ನೇ ತರಗತಿಯ ಬೋರ್ಡ್ ಪರೀಕ್ಷಾ ವೇಳಾಪಟ್ಟಿಯು ಮಂಗಳವಾರ ಪ್ರಕಟಗೊಂಡಿದ್ದು, ಫೆಬ್ರುವರಿ 15ರಿಂದ ಪರೀಕ್ಷೆಗಳು ಆರಂಭಗೊಳ್ಳಲಿವೆ.

ಹತ್ತನೇ ತರಗತಿಯ ಪರೀಕ್ಷೆಗಳು ಮಾರ್ಚ್ 14ರಂದು ಕೊನೆ‑ಗೊಳ್ಳಲಿದ್ದು, 12ನೇ ತರಗತಿಯ ಪರೀಕ್ಷೆಗಳು ಏಪ್ರಿಲ್ 2ರಂದು ಮುಕ್ತಾಯವಾಗಲಿದೆ ಎಂದು ಪರೀಕ್ಷಾ ನಿಯಂತ್ರಕ ಸನ್ಯಾಮ್ ಭಾರದ್ವಾಜ್ ತಿಳಿಸಿದ್ದಾರೆ.

ಅರ್ಚಕನ ನಕಲಿ ಚಿತ್ರ ಹಂಚಿಕೆ: ಕಾಂಗ್ರೆಸ್ ಮುಖಂಡನ ಬಂಧನ

ಅಹಮದಾಬಾದ್(ಪಿಟಿಐ): 'ಅಯೋಧ್ಯೆಯ ರಾಮ ಮಂದಿರದ ಅರ್ಚಕ' ಎಂಬ ಒಕ್ಕಣೆಯೊಂದಿಗೆ ವ್ಯಕ್ತಿಯೊಬ್ಬರ ಅಶ್ಲೀಲ ಚಿತ್ರವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡ ಆರೋಪದಡಿ ಕಾಂಗ್ರೆಸ್ ಮುಖಂಡ ಹಿತೇಂದ್ರ ಪೀಠಾಡಿಯಾ ಎಂಬವರನ್ನು ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಹಿತೇಂದ್ರ ಅವರು ಪಕ್ಷದ ಎಸ್‌ಸಿ ಘಟಕದ ಮುಖ್ಯಸ್ಥ ಎಂದು ಕಾಂಗ್ರೆಸ್‌ನ ವೆಬ್‌ಸೈಟ್‌ನಲ್ಲಿ ಹೇಳಲಾಗಿದೆ.

ಸ್ಥಳೀಯ ಬಿಜೆಪಿ ಮುಖಂಡ ವೈಭವ್ ಮಕ್ವಾನ ಅವರು ನೀಡಿದ ದೂರಿನ ಮೇಲೆ, ನಗರದ ಕ್ರೈಂ ಬ್ರ್ಯಾಂಚ್ ಪೊಲೀಸರು ಹಿತೇಂದ್ರ ಅವರನ್ನು ಬಂಧಿಸಿದ್ದಾರೆ.

ಮೋಹಿತ್ ಪಾಂಡೆ ಎಂಬವರು ಅಯೋಧ್ಯೆಯ ರಾಮ ಮಂದಿರದಲ್ಲಿ ಅರ್ಚಕರಾಗಿ ನೇಮಕಗೊಂಡಿದ್ದಾರೆ.

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.
ಸಂಖ್ಯೆ:ಕಾಅ/ಪಂರಾಇಂವಿ/ಬೆಂನ/ಎಇ–2/ಟೆಂಡರ್/16/2023–24 ದಿನಾಂಕ: 12–12–2023
ಕೆಪಿಪಿಪಿ ಅಲ್ಪಾವಧಿ ಟೆಂಡರ್ ಪ್ರಕಟಣೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ 2023–24ನೇ ಸಾಲಿನ ಜಿಲ್ಲಾ ಪಂಚಾಯತ್ ವಿವಿಧ ಲೆಕ್ಕಶೀರ್ಷಿಕೆಯಡಿ ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **20–12–2023 ರಂದು ಸಂಜೆ 4.00 ಗಂಟೆಯವರೆಗೆ** ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್: **https://kppp.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.
ಸಹಿ/– ಕಾರ್ಯಪಾಲಕ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.
ವಾಸಾಸಂಇ/ವಾ.ಪ್ರ/2525/ಅಡ್ವರ್ಟೋರ್/2023–24

ಕೃಷಿ ವಿಶ್ವವಿದ್ಯಾನಿಲಯ
ಆಸ್ತಿ ಅಧಿಕಾರಿಗಳ ಕಛೇರಿ, ಗಾಕೃವಿಕೆ, ಬೆಂಗಳೂರು
ಸಂಖ್ಯೆ:ಇಓ/ಡಿಬಿ/ಟಿಎನ್/510/2023–24 ದಿನಾಂಕ: 29.11.2023
ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ನೋಂದಣಿ ಪಡೆದ ಏಜೆನ್ಸಿಗಳಿಂದ **ಒಂದು ವರ್ಷದವರೆಗೆ ಬಾಡಿಗೆ ಆಧಾರದಲ್ಲಿ ವಾಹನಗಳನ್ನು ಒದಗಿಸಲು** ಟೆಂಡರನ್ನು ಕರೆಯಲಾಗಿದೆ. ಟೆಂಡರ್ ಪ್ರಕಟಣೆಯ ವಿವರ, ಟೆಂಡರ್ ದಾಖಲಾತಿ, ಕಾಮಗಾರಿಯ ವಿವರಗಳು ವೆಬ್‌ಸೈಟ್ www.kppp.karnataka.gov.in ರಲ್ಲಿ ದೊರೆಯುತ್ತದೆ. ಟೆಂಡರ್ ಡಾಕ್ಯುಮೆಂಟ್‌ನ ಶುಲ್ಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಮತ್ತು ಇ.ಎಂ.ಡಿ.ಯನ್ನು ಇ–ಪ್ರೊಕ್ಯೂರ್‌ಮೆಂಟ್ ಮಾದರಿಯಂತೆ ಇ–ಪೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವುದು.
ಕೃಷಿ ವಿಶ್ವವಿದ್ಯಾನಿಲಯವು ಯಾವುದೇ ಟೆಂಡರನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕನ್ನು ಹೊಂದಿರುತ್ತದೆ.
ಖಾಲಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು www.kppp.karnataka.gov.in ಇಂದ ಪಡೆಯಬಹುದು. ಮತ್ತು ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **18.12.2023 ಅಪರಾಹ್ನ 4.00 ಗಂಟೆಯವರೆಗೆ** ಆಗಿರುತ್ತದೆ. ತಾಂತ್ರಿಕ ಬಿಡ್ಡನ್ನು ದಿನಾಂಕ: **20.12.2023 ರಂದು ಬೆಳಿಗ್ಗೆ 10.30ಕ್ಕೆ** ತೆರೆಯಲಾಗುವುದು. ಹಣಕಾಸಿನ ಬಿಡ್ಡನ್ನು **22.12.2023 ರಂದು ಬೆಳಿಗ್ಗೆ 10.30ಕ್ಕೆ** ತೆರೆಯಲಾಗುವುದು. ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಣಿ ಪಡೆಯುವುದು ಮತ್ತು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಭಾಗವಹಿಸಲು User ID ಮತ್ತು ಪಾಸ್‌ವರ್ಡ್ ಅನ್ನು ಪಡೆಯುವುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸುವುದು. ಇ–ಪ್ರೊಕ್ಯೂರ್‌ಮೆಂಟ್‌ನ ಸಹಾಯವಾಣಿ: support@eprochelpdesk ಅಥವಾ **8046010000** ಮತ್ತು **8068948777 ದೂರವಾಣಿ ಸಂಖ್ಯೆ 080–23332765.**
ಸಹಿ/– ಆಸ್ತಿ ಅಧಿಕಾರಿಗಳು
ವಾಸಾಸಂಇ/ವಾಪ್ರ/ಜಿಎ/2515/2023–24

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಕೊಪ್ಪಳ ಜಿಲ್ಲೆ.
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ.
ಮೌಲಾನಾ ಆಜಾದ್ ಭವನ ಹೊಸಪೇಟ್ ರಸ್ತೆ ಕೊಪ್ಪಳ–583231
ದೂರವಾಣಿ ಸಂ: 08539–225070 ಇ–ಮೇಲ್: domwkoppal@gmail.com
ಸಂ:ಅಸಂಇ,ಕೊ/ಹೊರಸಂಪನ್ಮೂಲ/ಸಿ.ಆರ್–/2023–24/576 ದಿನಾಂಕ 07.12.2023
:: ಪತ್ರಿಕಾ ಪ್ರಕಟಣೆ ::
ಕೊಪ್ಪಳ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಮೆಟ್ರಿಕ್ ಪೂರ್ವ/ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿನಿಲಯಗಳು, ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ/ಕಾಲೇಜುಗಳು, ಜಿಲ್ಲಾ ಕಛೇರಿ ಮತ್ತು ಜಿಲ್ಲಾ ಮತ್ತು ತಾಲೂಕು ಮಾಹಿತಿ ಕೇಂದ್ರಗಳಲ್ಲಿ ಖಾಲಿ ಇರುವ ಸ್ಟಾಫ್ ನರ್ಸ್, ಡಾಟಾ ಎಂಟ್ರಿ ಆಪರೇಟರ್‌ಗಳು, ಡ್ರೈವರ್ ಪ್ರಥಮ ದರ್ಜೆ ಸಹಾಕಯರು ಹಾಗೂ ಗ್ರೂಪ್ "ಡಿ" ಹುದ್ದೆಗಳಾದ ಅಡುಗೆಯವರು, ಅಡುಗೆ ಸಹಾಯಕರು, ರಾತ್ರಿ ಕಾವಲುಗಾರರು, ಸ್ವಚ್ಛತಾ ಸಿಬ್ಬಂದಿಯವರು, ಜವಾನರು, ಇತರೆ ಹುದ್ದೆಗಳನ್ನು ಹೊರ ಸಂಪನ್ಮೂಲ ಏಜೆನ್ಸಿಯ ಮುಖಾಂತರ ಪಡೆಯುವ ಬಗ್ಗೆ.
: ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ : (ದ್ವಿ ಲಕೋಟೆ ಪದ್ಧತಿ)
E-Procurement Short Term Re-Tender Notification
Calendar of Events :
1) ಟೆಂಡರ್ ಪ್ರಕಟಣೆ ದಿನಾಂಕ : **07.12.2023.** 2) ಟೆಂಡರ್‌ಗಿಟ್ಟ ಅಂದಾಜು ಮೊತ್ತ :ಅಂದಾಜು **ರೂ.368.00 ಲಕ್ಷಗಳು.** 3) ಇಂ.ಎಂ.ಡಿ ನಿಗಧಿಪಡಿಸಿರುವ ಮೊತ್ತ **:ರೂ.5.52 ಲಕ್ಷಗಳು.** 4) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ : **07.12.2023.** 5) e-portal ಟೆಂಡರ್ ಲಕೋಟೆಗಳನ್ನು ಸಲ್ಲಿಸುವ ಅಂತಿಮ ದಿನಾಂಕ & ಸಮಯ : **22.12.2023 ರಂದು ಸಂಜೆ 5.00 ಗಂಟೆಯೊಳಗೆ.** 6) e-portal ನ ಟೆಂಡರ್ ತೆರೆಯುವ (ದಾಖಲಾತಿಗಳನ್ನು & ತಾಂತ್ರಿಕ ಲಕೋಟೆಗಳನ್ನು ಪರಿಶೀಲಿಸುವ) ದಿನಾಂಕ ಮತ್ತು ವೇಳೆ : **27.12.2023 ರ ಬೆಳಿಗ್ಗೆ 11.00 ಗಂಟೆ** ಜಿಲ್ಲಾ ಕಛೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಕೊಪ್ಪಳ (ಸ್ಥಳ & ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ). 7) e-portal ನ ಟೆಂಡರ್ ಆರ್ಥಿಕ ಲಕೋಟೆಗಳನ್ನು ಪರಿಶೀಲಿಸುವ ದಿನಾಂಕ ಮತ್ತು ವೇಳೆ : **03.01.2024 ರ ಬೆಳಿಗ್ಗೆ 11.30 ಗಂಟೆಗೆ** ಅಥವಾ ತಾಂತ್ರಿಕ ದಾಖಲಾತಿಗಳ ಪರಿಶೀಲನೆ ನಂತರದಲ್ಲಿ ತಿಳಿಸಲಾಗುವುದು. 8) ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ Website: https://kppp.karnataka.gov.in ಅಥವಾ ಜಿಲ್ಲಾ ಅಧಿಕಾರಿಗಳು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಕೊಪ್ಪಳ. ದೂರವಾಣಿ ಸಂಖ್ಯೆ: 08539–225070
ಸಹಿ/– **(ಶ್ರೀ ಸುರೇಶ ಕೊಕರೆ)**
ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಕೊಪ್ಪಳ.
ವಾ.ಸಾ.ಇ./ಕೊಪ್ಪಳ/278/2023–24/ದೇಶಪಾಂಡೆ ಪಬ್ಲಿಸಿಟಿ

ಜಿಲ್ಲಾ ಪಂಚಾಯತ್ ಕಾರ್ಯಾಲಯ, ಮೈಸೂರು
ಜಿಲ್ಲಾ ಪಂಚಾಯತ್, ಮೈಸೂರು
ಇಮೇಲ್:ceo_zp_mys@nic.in ದೂರವಾಣಿ: 0821–2526301
ಸಂಖ್ಯೆ:ಇಎಸ್‌ಟಿ(1)/32649/2023–24 ದಿನಾಂಕ:12.12.2023
ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಅಧಿಸೂಚನೆ
ವಿಷಯ: ಮೈಸೂರು ಜಿಲ್ಲಾ ಪಂಚಾಯತ್ ಕಛೇರಿಗೆ ಅಗತ್ಯವಿರುವ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆ ಒದಗಿಸುವ ಸಂಸ್ಥೆ ವತಿಯಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಪಡೆಯಲು ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಕರೆಯುವ ಬಗ್ಗೆ.
ವೆಬ್‌ಸೈಟ್: **https://eproc.karnataka.gov.in** ಅಲ್ಪಾವಧಿ ಟೆಂಡರ್ ಮೊತ್ತ ರೂ.60.00 ಲಕ್ಷಗಳು. ಇ.ಎಂ.ಡಿ. ಮೊತ್ತ – ರೂ.1,20,000/–(ಒಂದು ಲಕ್ಷದ ಇಪ್ಪತ್ತು ಸಾವಿರ ರೂ.ಗಳು ಮಾತ್ರ). ಅಲ್ಪಾವಧಿ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ 22.12.2023ರ ಸಂಜೆ 05:00 ಗಂಟೆ.** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ 26.12.2023ರ ಸಂಜೆ 5:00 ಗಂಟೆ.** ಹೆಚ್ಚಿನ ಮಾಹಿತಿಗಾಗಿ ಮೈಸೂರು ಜಿಲ್ಲಾ ಪಂಚಾಯತ್ ಕಛೇರಿಯ ಆಡಳಿತ ಶಾಖೆಯನ್ನು ಸಂಪರ್ಕಿಸಬಹುದು.
ಸಹಿ/– ಟೆಂಡರ್ ಕರೆಯುವ ಪ್ರಾಧಿಕಾರ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮೈಸೂರು
DIPR/MYS/KAVITA/759/23-24

ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ, ಕಾವೇರಿ ಜಲಾನಯನ ಯೋಜನೆಗಳು.ಮೈಸೂರು.
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕಾಡಾ ನಂ.2 ವಿಭಾಗ, ಕಾಜಯೋ, ವಿಜಯನಗರ 1ನೇ ಹಂತ ಮೈಸೂರು–17
ಟೆಂಡರ್ ಪ್ರಕಟಣೆ ಸಂಖ್ಯೆ:06/2023–24 ದಿನಾಂಕ: 06.12.2023
2023–24ನೇ ಸಾಲಿನ ಲೆಕ್ಕ ಶೀರ್ಷಿಕೆ 4705 ಯೋಜನೆಯ ಕೃಷಿ ಪರಿಕರಗಳ ವಿತರಣೆ ಕಾರ್ಯಕ್ರಮಗಳಡಿಯಲ್ಲಿ ಶೇ. 50/90ರ ಸಹಾಯಧನದ ಮೂಲಕ ಕಾವೇರಿ ಜಲಾನಯನ ಯೋಜನೆಯ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯ ನೀರು ಬಳಕೆದಾರರ ಸಹಕಾರ ಸಂಘಗಳ ಸದಸ್ಯ ರೈತರುಗಳಿಗೆ HDPE Fabric Tarpaulins ಗಳನ್ನು ವಿತರಿಸಲು K/G-2 ಪ್ರಕಾರ e-portal ಮೂಲಕ ಟೆಂಡರ್‌ರನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಕರೆಯಲಾಗಿದೆ. ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ಟೆಂಡರ್‌ಗೆ ಸಂಬಂಧಿಸಿದಂತೆ ಎಲ್ಲಾ ಮಾಹಿತಿಗಳನ್ನು https://kppp.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ.
ಬಿಡ್‌ದಾರರು ಟೆಂಡರ್‌ಅನ್ನು ಆನ್‌ಲೈನ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 08.12.2023 ರಿಂದ ಹಾಗೂ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 26.12.2023 ಸಂಜೆ 4.00 ಗಂಟೆಯವರೆಗೆ. ಟೆಂಡರ್‌ನ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: 27.12.2023 ಸಂಜೆ 4.30 ಗಂಟೆಯ ನಂತರ. ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ: 28.12.2023 ಸಂಜೆ 4.30 ಗಂಟೆಯ ನಂತರ. ಹೆಚ್ಚಿನ ಮಾಹಿತಿಗಾಗಿ ಕೆಳಗೆ ಸಹಿ ಮಾಡಿರುವ ಅಧಿಕಾರಿರವರ ಕಛೇರಿಯನ್ನು ಸಂಪರ್ಕಿಸುವುದು.
ಸಹಿ/–ಕಾರ್ಯಪಾಲಕ ಅಭಿಯಂತರರು, ನಂ.2 ವಿಭಾಗ, ಕಾಡಾ ಕಾಜಯೋ, ಮೈಸೂರು.
DIPR/TUM/358/KSMCA/2023-24

ಆಯುಷ್ ಇಲಾಖೆ
ಸರ್ಕಾರಿ ಯುನಾನಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಡಾ:ಸಿದ್ಧಯ್ಯ ಪುರಾಣಿಕ್ ರಸ್ತೆ, ಬಸವೇಶ್ವರನಗರ, ಬೆಂಗಳೂರು–560079.
gumcprincipal1975@gmail.com ದೂರವಾಣಿ ಸಂಖ್ಯೆ: 080–23116061
ಸಂಖ್ಯೆ: ಸಯುವೈಮ&ಆ/18/ಸರಬ/2023–24 ದಿನಾಂಕ: 11.12.2023
ಇ–ಟೆಂಡರ್ ಅಧಿಸೂಚನೆ
ಪ್ರಾಚಾರ್ಯರು, ಸರ್ಕಾರಿ ಯುನಾನಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಬಸವೇಶ್ವರನಗರ, ಬೆಂಗಳೂರು ಇವರಿಂದ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ (ವಾಹನ ಚಾಲಕ ಮತ್ತು ಗ್ರೂಪ್ ಡಿ ಹುದ್ದೆಗಳ ಸೇವೆಗಳು) ಸೇವೆಗಳನ್ನು ಇ–ಟೆಂಡರ್ ಮೂಲಕ ಪಡೆಯಲು ಅನುಭವಿ ಮತ್ತು ಆಸಕ್ತ ಹಾಗೂ ಅರ್ಹ ಗುತ್ತಿಗೆದಾರರಿಂದ ಕರ್ನಾಟಕದ ಸಾರ್ವಜನಿಕ ಸಂಗ್ರಹಣೆಳಲ್ಲಿ ಪಾರದರ್ಶಕತೆ ಅಧಿನಿಯಮ 1999–2000 ನಿಯಮಗಳು ಮತ್ತು ಮುಂದುವರೆದ ನಿಯಮಗಳನ್ವಯ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ನಲ್ಲಿ (https://kppp.karnataka.gov.in) ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೌಲ್ಯ: ರೂ.84.35 ಲಕ್ಷಗಳು (ರೂಪಾಯಿಗಳು ಎಂಬತ್ತನಾಲ್ಕು ಲಕ್ಷ ಮೂವತ್ತೈದು ಸಾವಿರ ಮಾತ್ರ).
1) ಟೆಂಡರ್ ಬಿಡ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವುದು : ದಿನಾಂಕ 12.12.2023 ಸಂಜೆ 4.00 ನಂತರ. 2) ಭರ್ತಿ ಮಾಡಲಾದ ಟೆಂಡರನ್ನು ಸಲ್ಲಿಸುವುದು: ದಿನಾಂಕ 26.12.2023 ಸಂಜೆ 4.30ರ ವರೆಗೆ. 3) ಆನ್‌ಲೈನ್ ಟೆಂಡರನ್ನು ತೆರೆಯುವುದು: ದಿನಾಂಕ 27.12.2023ರ ಪೂರ್ವಾಹ್ನ 11.30 ಗಂಟೆಗೆ.
ಇತರೆ ಯಾವುದೇ ಮಾಹಿತಿಯನ್ನು ಕಛೇರಿಯ ಸಮಯದಲ್ಲಿ ಕೆಳಕಂಡವರನ್ನು ಸಂಪರ್ಕಿಸಿ ಪಡೆಯಬಹುದು.
ಸಹಿ/– ಟೆಂಡರ್ ಆಹ್ವಾನಿಸುವ ಪ್ರಾಧಿಕಾರ/ಪ್ರಾಚಾರ್ಯರು
ಸರ್ಕಾರಿ ಯುನಾನಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಬಸವೇಶ್ವರನಗರ, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/2527/ಆಕಾರ್/2023–24

ಕರ್ನಾಟಕ ಸರ್ಕಾರ
ಗಣಿ ಮತ್ತು ಭೂವಿಜ್ಞಾನ ಇಲಾಖೆ
ನಿರ್ದೇಶಕರ ಕಛೇರಿ, #49, ಖನಿಜ ಭವನ, ಸೌತ್ ಬ್ಲಾಕ್ ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560 001. ದೂರವಾಣಿ ಸಂಖ್ಯೆ. : 22384134/35
ಇ–ಮೇಲ್: dir-mines@karnataka.gov.in
ಸಂ. ಗಭೂಇ/ಎಂಎಲ್‌ಎಸ್/ಹರಾಜು/2ನೇ ಹಂತ/2023–24 ದಿನಾಂಕ: 11.12.2023
ಟೆಂಡರ್ ಸೂಚನೆ
ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ತಾಲ್ಲೂಕಿನ ದಿಂಡದಹಳ್ಳಿ ಗ್ರಾಮದ ಸ.ನಂ. 19/11 ರಲ್ಲಿ ದಾಸ್ತಾನು ಮಾಡಿರುವ ಹಳೆಯ ಸಬ್ ಗ್ರೇಡ್ ಕಬ್ಬಿಣದ ಅದಿರನ್ನು ಎಂಎಸ್‌ಟಿಸಿ ಮೂಲಕ ಹರಾಜು ಮಾಡಲು ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಟೆಂಡರ್‌ಗಳನ್ನು ಆಹ್ವಾನಿಸಿದೆ.
ಅರ್ಹತಾ ಷರತ್ತುಗಳು, ನಿಯಮಗಳು ಮತ್ತು ಷರತ್ತುಗಳು, ಎಲೆಕ್ಟ್ರಾನಿಕ್ ಹರಾಜಿನಲ್ಲಿ ಭಾಗವಹಿಸುವ ದಿನಾಂಕ ಮತ್ತು ಸಮಯವನ್ನು ಟೆಂಡರ್ ದಸ್ತಾವೇಜಿನಲ್ಲಿ ಒದಗಿಸಲಾಗಿದೆ. ಪ್ರತ್ಯೇಕ ಲಾಟ್ ವೈಸ್ ಹರಾಜು ಅಧಿಸೂಚನೆಗಳನ್ನು ಎಂಎಸ್‌ಟಿಸಿ ಜಾಲತಾಣದಲ್ಲಿ ಪ್ರಕಟಿಸಲಾಗಿದೆ. ಟೆಂಡರ್ ಡಾಕ್ಯುಮೆಂಟ್‌ಗಳು, ಅಧಿಸೂಚನೆಗಳು, ಇತ್ತೀಚಿನ ಮಾಹಿತಿಗಳು ಮತ್ತು ಆಯಾ ಲಾಟ್‌ಗಳ ಇ–ಹರಾಜು ಪ್ರಕ್ರಿಯೆಯ ಇತರ ವಿವರಗಳು ಎಂಎಸ್‌ಟಿಸಿ ಲಿಮಿಟೆಡ್ ನ ಜಾಲತಾಣದಲ್ಲಿ ಮಾತ್ರ ಎಲೆಕ್ಟ್ರಾನಿಕ್ ರೂಪದಲ್ಲಿ ಲಭ್ಯವಿರುತ್ತವೆ
https://www.mstcecommerce.com/auctionhome/aucsearch/search.jsp
ಹಳೆಯ ಸಬ್ ಗ್ರೇಡ್ ಕಬ್ಬಿಣದ ಅದಿರಿನ ದಾಸ್ತಾನನ್ನು "ಎಲ್ಲಿ ಹೇಗಿದೆಯೋ ಹಾಗೆ ಮತ್ತು ದೂರಿಗೆ ಆಸ್ಪದವಿಲ್ಲ" ದ ಆಧಾರದಲ್ಲಿ ಹರಾಜು ಮಾಡಲಾಗುವುದು. ಆಸಕ್ತ ಬಿಡ್ ದಾರರು ಭಾಗವಹಿಸುವ ಮೊದಲು ಕಬ್ಬಿಣದ ಅದಿರಿನ ಪ್ರಮಾಣ ಮತ್ತು ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಬೇಕು. ಬಿಡ್‌ನ ದೃಢೀಕರಣದ ನಂತರ ಉದ್ಭವಿಸುವ ಯಾವುದೇ ವಿವಾದಕ್ಕೆ ಇಲಾಖೆಯು ಜವಾಬ್ದಾರಿಯಲ್ಲ.
ಲಾಟ್‌ಗಳ ಹರಾಜಿನ ವೇಳಾಪಟ್ಟಿ ಎಂಎಸ್‌ಟಿಸಿ ವೆಬ್‌ಸೈಟ್‌ನಲ್ಲಿ ಲಭ್ಯವಿದೆ. ಆಸಕ್ತ ಬಿಡ್‌ದಾರರು ಎಂಎಸ್‌ಟಿಸಿ ಲಿಮಿಟೆಡ್ ಜಾಲತಾಣಕ್ಕೆ ಭೇಟಿ ನೀಡಬಹುದು
ನಿರ್ದೇಶಕರು
ಗಣಿ ಮತ್ತು ಭೂವಿಜ್ಞಾನ ಇಲಾಖೆ
DIPR/CP/2502/Zen/2023-24

ಕರ್ನಾಟಕ–ಸರಕಾರ
ಜಿಲ್ಲಾ ಪಂಚಾಯತ್, ರಾಯಚೂರು.
ಸಂ:ಜಿಪಂರಾ/ಹೊಗುಸಿ/ಇ–ಟೆಂಡರ್/ಇ–28302/2023–24 ದಿನಾಂಕ:04.12.2023
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ರಾಯಚೂರು ಜಿಲ್ಲಾ ಪಂಚಾಯತಿ, ಜಿಲ್ಲೆಯ ತಾಲೂಕ ಪಂಚಾಯತಿ, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ರಾಯಚೂರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ರಾಯಚೂರು, ಅಕ್ಷರ ದಾಸೋಹ, ರಾಯಚೂರು, ಡಿ.ಪಿ.ಆರ್.ಸಿ. ರಾಯಚೂರು, ರೇಷ್ಮೆ ಇಲಾಖೆ, ರಾಯಚೂರು ಹಾಗೂ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ರಾಯಚೂರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಯಚೂರು ಕಛೇರಿಯಲ್ಲಿ ಖಾಲಿ ಇರುವ ಡಾಟಾ ಎಂಟ್ರಿ ಆಪರೇಟರ್, ವಾಹನ ಚಾಲಕರು ಹಾಗೂ ಡಿ ಗ್ರೂಪ್ ಮತ್ತು ವಿವಿಧ ವೃಂದದ ಹುದ್ದೆಗಳಿಗೆ ಮಾನವ ಸೇವೆಯನ್ನು ಹೊರಸಂಪನ್ಮೂಲದ ಏಜೆನ್ಸಿಯ ಮುಖಾಂತರ ಪಡೆಯುವ ಬಗ್ಗೆ.
CALENDAR OF EVENTS
1) **ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ:** ಸಂ:ಜಿಪಂರಾ/ಹೊಗಸಿ/ಇ–ಟೆಂಡರ್/ಇ–28302/2023–24, ದಿನಾಂಕ:04.12.2023 2) **ಟೆಂಡರ್ ಗಿಟ್ಟ ಅಂದಾಜು ಮೊತ್ತ:** ರೂ.331.00ಲಕ್ಷ 3) **ಇಎಂಡಿ ಮೊತ್ತ:** ರೂ.4,97,000.00 (ನಾಲ್ಕು ಲಕ್ಷ ತೊಂಭತ್ತೇಳು ಸಾವಿರ ಮಾತ್ರ) 4) **e-portal ಮೂಲಕ ಟೆಂಡರ್ ಲಕೋಟೆಗಳನ್ನು ಸಲ್ಲಿಸುವ ಪ್ರಾರಂಭ & ಅಂತಿಮ ದಿನಾಂಕ ಮತ್ತು ಸಮಯ:** 05.12.2023 ರಿಂದ ದಿನಾಂಕ: 20.12.2023 ರವರೆಗೆ ಸಮಯ: ಸಂಜೆ 5.30 ಗಂಟೆಯೊಳಗೆ. 5) **e-portalನ ತಾಂತ್ರಿಕ ಲಕೋಟೆಗಳನ್ನು ತೆರೆಯುವ ದಿನಾಂಕ & ವೇಳೆ:** 22.12.2023, ಬೆಳಿಗ್ಗೆ.11.30ಗಂಟೆಗೆ. (ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ) 6) **ತಾಂತ್ರಿಕ ಲಕೋಟೆಯ ದಾಖಲಾತಿಗಳನ್ನು ಪರಿಶೀಲನೆ ಮಾಡುವ ದಿನಾಂಕ, ವೇಳೆ& ಸ್ಥಳ** 26.12.2023 ಬೆಳಿಗ್ಗೆ 11.30ಗಂಟೆಗೆ ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್, ರಾಯಚೂರು ರವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಪಂಚಾಯತ್, ರಾಯಚೂರು. (ದಿನಾಂಕ & ವೇಳೆ ಬದಲಾವಣೆಗೆ ಒಳಪಟ್ಟಿರುತ್ತದೆ) 7) **ಆರ್ಥಿಕ ಲಕೋಟೆಯನ್ನು ತೆರೆಯುವ ದಿನಾಂಕ, ವೇಳೆ& ಸ್ಥಳ:** 28.12.2023 ಬೆಳಿಗ್ಗೆ, 11.30ಗಂಟೆಗೆ. (ದಿನಾಂಕ & ವೇಳೆ ಬದಲಾವಣೆಗೆ ಒಳಪಟ್ಟಿರುತ್ತದೆ) 8) **ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಕಛೇರಿ ವಿಳಾಸ ಹಾಗೂ ದೂರವಾಣಿ ಸಂಖ್ಯೆ:** ಜಿಲ್ಲಾ ಪಂಚಾಯತ್, ರಾಯಚೂರು. ಇ–ಮೇಲ್: zpraichurceo@gmail.com ದೂರವಾಣಿ:080–228448
ಸಹಿ/– ಉಪಕಾರ್ಯದರ್ಶಿಗಳು
ಜಿಲ್ಲಾ ಪಂಚಾಯತ್, ರಾಯಚೂರು.
DIP/RCR/320/KSMC&A/317/2023-24

ಕಂದಾಯ ಇಲಾಖೆ
ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ,
(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)
ಪೋಡಿಯಂ ಬ್ಲಾಕ್, 3ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು–560001
ದೂರವಾಣಿ ಸಂ: 080–29565353, E-mail: splocaima21@gmail.com
No. SPLOCA/ADM/06/2022 Date: 11.12.2023
ಪ್ರಕಟಣೆ
ವಿಷಯ: ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ (ಐಎಂಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು) ರವರ ಕಛೇರಿಗೆ ಮಾನವ ಸಂಪನ್ಮೂಲ ಸೇವೆ ಪಡೆಯಲು ಅರ್ಜಿಗಳನ್ನು/ಪ್ರಸ್ತಾವನೆಗಳನ್ನು ಆಹ್ವಾನಿಸುತ್ತಿರುವ ಬಗ್ಗೆ.
ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ (ಐಎಂಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು) ಗಳವರ ಕಛೇರಿಗೆ ಮಂಜೂರಾಗಿ ನೇಮಕವಾಗದೇ ಖಾಲಿ ಇರುವ ಈ ಕೆಳಕಂಡ ವಿವಿಧ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಆಸಕ್ತ ಏಜೆನ್ಸಿಗಳಿಂದ / ಆಸಕ್ತ ವೈಯಕ್ತಿಕ ವ್ಯಕ್ತಿಗಳಿಂದ **Resume / quotation** ಅನ್ನು ಆಹ್ವಾನಿಸಲಾಗಿದ್ದು, ಸದರಿ ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸುವಂತೆ ಸೂಚಿಸಿದೆ.
Corrigendum for the paper notification even number, dated: 02-12-2023. **"One of the posts will be on consultancy basis for 5 months at a time."**
Last date of submission of Resume for the post below: **14th December 2023.**

Sl. No.	Post/ Designation	Qualification	No. of Post	Contract wage per month
		Basic		
1.	Legal Typist	LLB, Registered at Bar Council of Karnataka, typing speed 40 WPM both English & Kannada. Ability to communicate in both Kannada & English	1	18,000/- with OT charges and Sitting fees as per the Government norms.

The Position to be filled is a post created in the office of Special officer & Competent Authority, Financial Frauds Revenue Department Government of Karnataka vide different Government Orders and is renewable year on year. It is a post on contract renewable on satisfactory performance with periodic enhancement of salary scales, **not permanent government service.**
ಸಹಿ/–
ವಿಶೇಷಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿಗಳು
ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು, ಬೆಂಗಳೂರು
DIPR/CP/ 2491 /ZEN/2023-24

ಸುಭಾಷಿತ

ಪ್ರೀತಿ ಎಂಬುದು ಸರ್ವಋತುವಿನಲ್ಲೂ ಸಿಗುವ ಹಣ್ಣು ಮತ್ತು ಇದು ಎಲ್ಲರ ಕೈಗೆಟಕುವಂತೆ ಇರುತ್ತದೆ.

–ಮದರ್ ತೆರೇಸಾ

ವಿಶೇಷ ಸ್ಥಾನ ರದ್ದತಿ ಕ್ರಮ ಎತ್ತಿಹಿಡಿದ 'ಸುಪ್ರೀಂ': ಕೇಂದ್ರಕ್ಕೆ ಮೇಲುಗೈ

ಸಂವಿಧಾನದ 370ನೇ ವಿಧಿಯ ಅಡಿಯಲ್ಲಿ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ಕೇಂದ್ರ ಸರ್ಕಾರವು ರದ್ದುಗೊಳಿಸಿ 2019ರ ಆಗಸ್ಟ್ 5ರಂದು ಕೈಗೊಂಡಿದ್ದ ತೀರ್ಮಾನವನ್ನು ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠವು ಎತ್ತಿಹಿಡಿದಿದೆ. ಇದರೊಂದಿಗೆ, ಈ ವಿಚಾರಕ್ಕೆ ಸಂಬಂಧಿಸಿದ ಕಾನೂನು ಮತ್ತು ಸಾಂವಿಧಾನಿಕ ವಾಗ್ವಾದವು ಕೊನೆಗೊಂಡಂತಾಗಿದೆ. ಕೇಂದ್ರ ಸರ್ಕಾರ ಕೈಗೊಂಡ ನಿರ್ಧಾರವು ಸರಿಯಾಗಿದೆ ಮಾತ್ರವಲ್ಲ, ಅದಕ್ಕೆ ಅನುಸರಿಸಿದ್ದ ಪ್ರಕ್ರಿಯೆ ಮತ್ತು ವಿಧಾನ ಕೂಡ ಸರಿಯಾಗಿಯೇ ಇದೆ ಎಂದು, ಐವರು ನ್ಯಾಯಮೂರ್ತಿಗಳಿದ್ದ ಸಂವಿಧಾನ ಪೀಠ ಹೇಳಿದೆ. ಕೇಂದ್ರ ಸರ್ಕಾರ ಕೈಗೊಂಡ ನಿರ್ಧಾರದ ಬಗ್ಗೆ ಒಂದು ಪ್ರಮುಖ ಟೀಕೆ ಇತ್ತು. ಅದೆಂದರೆ, ಈ ನಿರ್ಧಾರ ಕೈಗೊಳ್ಳಲು ಅನುಸರಿಸಿದ ಪ್ರಕ್ರಿಯೆಯು ತಪ್ಪು ಮತ್ತು ಲೋಪದಿಂದ ಕೂಡಿತ್ತು ಎಂಬುದು. ಸರ್ಕಾರದ ನಿರ್ಧಾರದೊಂದಿಗೆ ಸಹಮತ ಇದ್ದವರು ಕೂಡ ಈ ಅಂಶವನ್ನು ಎತ್ತಿದ್ದರು. ರಾಜ್ಯ ವಿಧಾನಸಭೆಯ ಅನುಪಸ್ಥಿತಿಯಲ್ಲಿ ನಿರ್ಧಾರ ಕೈಗೊಳ್ಳುವ ಅಧಿಕಾರವು ರಾಷ್ಟ್ರಪತಿ ಮತ್ತು ಸಂಸತ್ತಿಗೆ ಇದೆ ಎಂದು ಕೋರ್ಟ್ ಹೇಳುವ ಮೂಲಕ ಈ ಟೀಕೆಯನ್ನು ತಿರಸ್ಕರಿಸಿದೆ. ಈ ನಿರ್ಧಾರ ತೆಗೆದುಕೊಳ್ಳುವುದಕ್ಕೆ ಮುನ್ನವೇ 356ನೇ ವಿಧಿಯ ಅಡಿಯಲ್ಲಿ ಜಮ್ಮು-ಕಾಶ್ಮೀರ ವಿಧಾನಸಭೆಯನ್ನು ವಿಸರ್ಜನೆ ಮಾಡಲಾಗಿತ್ತು.



ಜಮ್ಮು–ಕಾಶ್ಮೀರದ ರಾಜ್ಯ ಸ್ಥಾನಮಾನವನ್ನು ಮರುಸ್ಥಾಪಿಸುವ ಕೆಲಸ ತ್ವರಿತವಾಗಿ ಆಗಬೇಕು

ಜಮ್ಮು ಮತ್ತು ಕಾಶ್ಮೀರವನ್ನು ಭಾರತದಲ್ಲಿ ವಿಲೀನಗೊಳಿಸಿದ ಸಂದರ್ಭದಲ್ಲಿ ಇತರ ರಾಜ್ಯಗಳಿಗೆ ಇಲ್ಲದ ಯಾವುದೇ ಸಾರ್ವಭೌಮತ್ವ ಆ ರಾಜ್ಯಕ್ಕೆ ಇರಲಿಲ್ಲ ಎಂಬುದು ಸುಪ್ರೀಂ ಕೋರ್ಟ್ ತೀರ್ಪಿನಲ್ಲಿ ಇರುವ ಮಹತ್ವದ ಅಂಶವಾಗಿದೆ. ಈ ರಾಜ್ಯಕ್ಕೆ ವಿಶೇಷ ಸ್ಥಾನಮಾನವನ್ನು ಕೊಟ್ಟ 370ನೇ ವಿಧಿಯು ಶಾಶ್ವತವಲ್ಲ ಎಂದೂ ಸಂವಿಧಾನ ಪೀಠ ಹೇಳಿದೆ. ಇದು ತಾತ್ಕಾಲಿಕ ಮತ್ತು ಅಲ್ಪಕಾಲಕ್ಕೆ ಮಾತ್ರ ಅನ್ವಯವಾಗುವ ಅವಕಾಶವಾಗಿದೆ. ರಾಷ್ಟ್ರಪತಿ ಆಳ್ವಿಕೆಯು ಘೋಷಣೆಯಾದ ಬಳಿಕ ರಾಷ್ಟ್ರಪತಿ ಅವರ ಅಧಿಕಾರಗಳು ಮತ್ತು ಅವರು ಕೈಗೊಳ್ಳಬಹುದಾದ ಕ್ರಮಗಳಿಗೆ ಮಿತಿ ಇಲ್ಲ ಎಂದೂ ನ್ಯಾಯಾಲಯ ಹೇಳಿದೆ. ಜಮ್ಮು-ಕಾಶ್ಮೀರ ಸಂವಿಧಾನ ರಚನಾ ಸಭೆಯು 1957ರಲ್ಲಿಯೇ ರದ್ದಾಗಿದ್ದರೂ 370ನೇ ವಿಧಿಯ ಅಡಿಯಲ್ಲಿ ನೀಡಿರುವ ವಿಶೇಷ ಸ್ಥಾನಮಾನವನ್ನು ರದ್ದುಪಡಿಸುವ ಅಧಿಕಾರವು ರಾಷ್ಟ್ರಪತಿಯವರಿಗೆ ಇದೆ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಸಂವಿಧಾನ ರಚನಾ ಸಭೆಯ ಅನುಪಸ್ಥಿತಿಯಲ್ಲಿ ವಿಶೇಷ ಸ್ಥಾನಮಾನವನ್ನು ರದ್ದುಪಡಿಸಲು ಅವಕಾಶ ಇಲ್ಲ ಎಂಬುದು ಕೇಂದ್ರದ ನಿರ್ಧಾರವನ್ನು ಪ್ರಶ್ನಿಸಿದವರ ವಾದದ ಮುಖ್ಯ ಭಾಗವಾಗಿತ್ತು. ರಾಜ್ಯದ ಸಂವಿಧಾನ ರಚನಾ ಸಭೆಯು ಬರ್ಖಾಸ್ತುಗೊಂಡ ಬಳಿಕ ರಾಷ್ಟ್ರಪತಿಯವರಿಗೆ ಈ ಅಧಿಕಾರ ಇಲ್ಲ ಎಂದರೆ ಅದು ವಿಲೀನ ಪ್ರಕ್ರಿಯೆಯೇ ಸ್ಥಗಿತಗೊಳ್ಳುವುದಕ್ಕೆ ಕಾರಣವಾಗಬಹುದು, ಇದು ವಿಲೀನದ ಮೂಲ ಉದ್ದೇಶಕ್ಕೆ ವಿರುದ್ಧವಾಗುತ್ತದೆ ಎಂದು ತೀರ್ಪಿನಲ್ಲಿ ವಿವರಿಸಲಾಗಿದೆ.

ಜಮ್ಮು–ಕಾಶ್ಮೀರವನ್ನು ಕೇಂದ್ರ ಆಡಳಿತದ ಎರಡು ಪ್ರದೇಶಗಳಾಗಿ ವಿಭಜನೆ ಮಾಡಿರುವುದು ಸಿಂಧು. ಆದರೆ, ಜಮ್ಮು–ಕಾಶ್ಮೀರದ ರಾಜ್ಯ ಸ್ಥಾನಮಾನವನ್ನು ಸಾಧ್ಯವಾದಷ್ಟು ಬೇಗ ಮರುಸ್ಥಾಪಿಸಬೇಕು ಎಂದು ಕೋರ್ಟ್ ಹೇಳಿದೆ. ಈ ಕೆಲಸ ತ್ವರಿತವಾಗಿ ಆಗಬೇಕು. ಶಾಂತಿ–ಸುವ್ಯವಸ್ಥೆಯಂತಹ ಕಾರಣವನ್ನು ಕೊಟ್ಟು ಮುಂದೂಡಬಾರದು. 2024ರ ಸೆಪ್ಟೆಂಬರ್ 30ರೊಳಗೆ ಅಲ್ಲಿ ಚುನಾವಣೆ ನಡೆಸಬೇಕು ಎಂದೂ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಲಾಗಿದೆ. ರಾಜ್ಯವೊಂದರ ಸ್ಥಾನಮಾನ ಬದಲಾವಣೆಯ ಅಧಿಕಾರವು ಕೇಂದ್ರ ಸರ್ಕಾರಕ್ಕೆ ಇದೆ ಎಂಬುದನ್ನು ನ್ಯಾಯಾಲಯವು ಒಪ್ಪಿಕೊಂಡಿಲ್ಲ ಎಂಬುದು ಇಲ್ಲಿ ಗಮನಿಸಬೇಕಾದ ಅಂಶ. ಜಮ್ಮು–ಕಾಶ್ಮೀರದ ರಾಜ್ಯ ಸ್ಥಾನಮಾನವನ್ನು ಮರುಸ್ಥಾಪಿಸಲಾಗುವುದು ಎಂದು ಕೇಂದ್ರ ಸರ್ಕಾರವು ಭರವಸೆ ನೀಡಿರುವುದರಿಂದ ಜಮ್ಮು–ಕಾಶ್ಮೀರ ಪುನರ್‌ರಚನೆ ಕಾಯ್ದೆಯನ್ನು ಪರಿಶೀಲನೆಗೆ ಒಳಪಡಿಸುವ ಅಗತ್ಯ ಇಲ್ಲ ಎಂದು ಕೋರ್ಟ್ ಹೇಳಿದೆ. 356ನೇ ವಿಧಿಯ ಅಡಿಯಲ್ಲಿ ರಾಷ್ಟ್ರಪತಿಯವರು ಹೊಂದಿರುವ ಅಧಿಕಾರಗಳ ಕುರಿತು ಹೊಸ ಹೊಳಹುಗಳನ್ನು ಈ ತೀರ್ಪು ಕೊಡಬಹುದು. ಸತ್ಯಶೋಧನೆ ಮತ್ತು ಸಾಮರಸ್ಯ ಆಯೋಗವೊಂದನ್ನು ರಚಿಸಬೇಕು ಎಂದು ತೀರ್ಪು ಶಿಫಾರಸು ಮಾಡಿದೆ. ಇದು ಅಗತ್ಯವಾಗಿ ಆಗಬೇಕಾದ ಕೆಲಸ ಮತ್ತು ಆಯೋಗವನ್ನು ಆದಷ್ಟು ಬೇಗ ರಚಿಸಬೇಕು. ಜಮ್ಮು–ಕಾಶ್ಮೀರಕ್ಕೆ ಇದ್ದ ವಿಶೇಷ ಸ್ಥಾನಮಾನವನ್ನು ಬಿಜೆಪಿ ಹಿಂದಿನಿಂದಲೂ ವಿರೋಧಿಸಿಕೊಂಡು ಬಂದಿದೆ. ಈ ವಿರೋಧವು ಬಿಜೆಪಿಯ ಸೈದ್ಧಾಂತಿಕ ನೆಲೆಯ ಪ್ರಮುಖ ಅಂಶಗಳಲ್ಲಿ ಒಂದಾಗಿತ್ತು. ಹಾಗಾಗಿ, ಈಗಿನ ತೀರ್ಪಿನಿಂದ ಕೇಂದ್ರ ಸರ್ಕಾರದ ಕೈ ಮೇಲಾದಂತಾಗಿದೆ. ಬಿಜೆಪಿ ವಿರೋಧಿ ಪಕ್ಷಗಳು ಈ ವಿಚಾರದಲ್ಲಿ ಭಿನ್ನ ನಿಲುವುಗಳನ್ನು ಹೊಂದಿವೆ. ಒಗ್ಗಟ್ಟಿನ ಮತ್ತು ಸುಸಂಬದ್ಧವಾದ ಪ್ರತಿಕ್ರಿಯೆ ನೀಡುವುದು ಈ ಪಕ್ಷಗಳಿಗೆ ದೊಡ್ಡ ಸವಾಲಾಗಲಿದೆ.

ದಿನದ ಟ್ವೀಟ್

ಇಷ್ಟೆಲ್ಲಾ ಆದರೆ ಮಾತ್ರ...

2024ರ ಲೋಕಸಭಾ ಚುನಾವಣೆಯಲ್ಲಿ 'ಇಂಡಿಯ' ಮೈತ್ರಿಕೂಟ ಗೆಲುವು ಸಾಧಿಸಬಹುದೇ? ನನ್ನ ಉತ್ತರ 'ಹೌದು'. ಆದರೆ ಅದು ಸ್ವಾಭಾವಿಕವಾಗಿ ಆಗುವುದಿಲ್ಲ, ಕಠಿಣ ಹೋರಾಟದ ಫಲವಾಗಿರುತ್ತದೆ. ಅದರ ಗುರಿ ನಿರ್ದಿಷ್ಟವಾಗಿರಬೇಕು. ಬಿಜೆಪಿಯ 'ನೆಲಬಾಂಬ್'ಗಳಿಂದ ತಪ್ಪಿಸಿಕೊಳ್ಳಬೇಕು. ನಕಾರಾತ್ಮಕ ಪ್ರಚಾರ, ವೈಯಕ್ತಿಕ ತೇಜೋವಧೆ ಮಾಡಬಾರದು. ಉದ್ದೇಶ ಸಾಧನೆಯತ್ತ ಮಾತ್ರ ಗಮನವಿರಬೇಕು. ಎಲ್ಲ ಕಟ್ಟಾಳುಗಳೂ ಸ್ಪರ್ಧಿಸಬೇಕು ಮತ್ತು ಪ್ರಧಾನಿ ಅಭ್ಯರ್ಥಿಯನ್ನು ಘೋಷಿಸಬೇಕು- ಅವರು ಒಬಿಸಿ ಸಮುದಾಯದವರೇ ಆಗಿರಬೇಕು.

ಪಾರ್ಥ ದಾಸ್, ಚುನಾವಣಾ ಫಲಿತಾಂಶ ವಿಶ್ಲೇಷಕ

ಕಿಡಿನುಡಿ

ಅಸ್ಪೃಶ್ಯ ಸಮುದಾಯಗಳು ಅಸ್ಪೃಶ್ಯತೆಯಿಂದ ವಿಮೋಚನೆಗೊಳ್ಳುವ ಹಾದಿಯನ್ನು ತೊರೆದು ಮನುವಾದದೆಡೆಗೆ ವಾಲಿದರೆ, ಅದು ಆ ಸಮುದಾಯಗಳ ಜನಸಾಮಾನ್ಯರ ಸೋಲಾಗುವುದಿಲ್ಲ, ಬದಲಿಗೆ ಅದು ಅಲ್ಲಿಯ ಬುದ್ಧಿಜೀವಿಗಳ ಸೋಲಾಗಿರುತ್ತದೆ.

ರಘೋತ್ತಮ ಹೊ.ಬ., ಬರಹಗಾರ

25 ವರ್ಷಗಳ ಹಿಂದೆ

ಭಾನುವಾರ, 13-12-1998

● ವದಂತಿಗಳಿಗೆ ರೆಕ್ಕೆಪುಕ್ಕ ಮೂಡಿಸಿದ ಭೇಟಿ

ಬೆಂಗಳೂರು, ಡಿ. 12– ಜನತಾದಳದ ರಾಷ್ಟ್ರೀಯ ನಾಯಕರಾದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಹಾಗೂ ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಪರಸ್ಪರ ಮನೆಗಳಿಗೆ ಭೇಟಿ ನೀಡಿ 'ಮುಖಾಮುಖಿ' ಮಾತುಕತೆ ನಡೆಸಿರುವುದು ರಾಷ್ಟ್ರಮಟ್ಟದಲ್ಲಿ ಎರಡೂ ಪಕ್ಷಗಳಲ್ಲಿ ಗೊಂದಲ ಮತ್ತು ಸ್ಥಳೀಯ ನಾಯಕರಿಗೆ ಮುಜುಗರ ಉಂಟುಮಾಡಿದೆ.

ಎಐಸಿಸಿ ಮಾಜಿ ಅಧ್ಯಕ್ಷ ಹಾಗೂ ಮಾಜಿ ಪ್ರಧಾನಿ ಪಿ.ವಿ. ನರಸಿಂಹ ರಾವ್ ಅವರೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ಗೌಡರು ಒಂದು ರೀತಿಯಲ್ಲಿ 'ಪಿವಿಐಪಿ' ಅವರನ್ನು ಗುರುವಿನಂತೆ ಆರಾಧಿಸುತ್ತಾ ಸಲಹೆ–ಸೂಚನೆ ಪಡೆಯುತ್ತಿದ್ದುದು ಗುಟ್ಟೇನಲ್ಲ. ಆದರೆ, ಸೀತಾರಾಂ ಕೇಸರಿ ಅವರು ಎಐಸಿಸಿ ಅಧ್ಯಕ್ಷರಾದ ಮೇಲೂ ಗೌಡರ–ಪಿವಿಎನ್ ಸಂಬಂಧ ಮುಂದುವರಿದಂತೆ ಗೌಡರು–ಕೇಸರಿ ಸಂಬಂಧ ಹಳಸತೊಡಗಿ, ದಿನಕಳೆದಂತೆ ಇವರಿಬ್ಬರ ನಡುವಿನ ಶೀತಲ ಸಮರ ಬೀದಿಕಾಳಗವಾಯಿತು.

ಕೊನೆಗೆ ಸವಾಲು–ಪ್ರತಿ ಸವಾಲಿನ ಮಟ್ಟಕ್ಕೆ ಹೋಗಿ, ಕೇಂದ್ರದ ಸಮ್ಮಿಶ್ರ ಸರ್ಕಾರಕ್ಕೆ ಹೊರಗಿನಿಂದ ಬೆಂಬಲ ನೀಡಿದ್ದ ಕಾಂಗ್ರೆಸ್ ದಿಢೀರ್ ತನ್ನ ನಿಲುವನ್ನು ಬದಲಿಸಿದ ಕಾರಣ, ಸರ್ಕಾರ ಪತನಗೊಂಡದ್ದು ಇತಿಹಾಸದ ಪುಟ ಸೇರಿದೆ.

50 ವರ್ಷಗಳ ಹಿಂದೆ

ಗುರುವಾರ, 13-12-1973

● ಯೋಗ್ಯ, ಸಮರ್ಥ ಸಂಪುಟ ರಚನೆಗೆ ಶಾಸಕರ ಪ್ರಬಲ ತಂಡವೊಂದರ ಆಗ್ರಹ

ಬೆಂಗಳೂರು, ಡಿ. 12– ಇಬ್ಬರು ಮೂವರನ್ನು ಬಿಟ್ಟು, ಅದೇ ಮಂದಿಯನ್ನು ಸೇರಿಸಿ ಮಂತ್ರಿಮಂಡಲ ಪುನರ್ ರಚಿಸುವ ಬದಲು, 'ಸರ್ಕಾರಕ್ಕೆ ಕೆಟ್ಟ ಹೆಸರು ತರುವ ಎಲ್ಲರನ್ನೂ ತೆಗೆದು, ಯೋಗ್ಯರನ್ನು ಸೇರಿಸಿ, ಸಮರ್ಥ ಮಂತ್ರಿಮಂಡಲ ರಚಿಸಬೇಕೆಂದು' ಮುಖ್ಯಮಂತ್ರಿಯವರನ್ನು ಆಗ್ರಹಪಡಿಸಲು ಶಾಸಕರ ಪ್ರಬಲ ಗುಂಪು ಇಲ್ಲಿ ರಚಿತವಾಗಿದೆ.

ಈ ಅಭಿಪ್ರಾಯ ಪ್ರತಿಪಾದಿಸುವ ಸುಮಾರು ಐವತ್ತು ಮಂದಿ ಶಾಸಕರು ಇಂದು ರಾತ್ರಿ ಶಾಸಕರ ಭವನದಲ್ಲಿ ಸಭೆ ಸೇರಿ, 'ಅರಸು ಅವರು ಬೆಂಗಳೂರಿಗೆ ಬಂದು ಶಾಸಕರ ಅಭಿಪ್ರಾಯ ಪಡೆದು ಮಂತ್ರಿಮಂಡಲದ ಅಂತಿಮ ಪಟ್ಟಿ ಸಿದ್ಧಪಡಿಸಬೇಕು' ಎಂಬ ನಿಲುವಿಗೆ ಬಂದರೆಂದು ತಿಳಿದುಬಂದಿದೆ.

● ಸಂಪುಟಕ್ಕೆ ರಂಗನಾಥ್, ಎ.ಪಿ.ಪಾಟೀಲ್, ಪ್ರಭಾಕರ್?

ನವದೆಹಲಿ, ಡಿ. 12– ಕರ್ನಾಟಕದ ಮುಖ್ಯಮಂತ್ರಿ ದೇವರಾಜ ಅರಸು ಅವರು ಗುರುವಾರ ಬೆಂಗಳೂರಿಗೆ ಹಿಂತಿರುಗಿದ ಕೂಡಲೇ ಪುನರ್ ರಚಿಸುವ ತಮ್ಮ ಸಚಿವ ಸಂಪುಟಕ್ಕೆ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಕೆ.ಎಚ್.ರಂಗನಾಥ್ ಅವರನ್ನು ಸೇರಿಸಿಕೊಳ್ಳುವ ಸಂಭವವಿದೆ.

ಎ.ಪಿ.ಪಾಟೀಲ್ ಮತ್ತು ಪ್ರಭಾಕರ್ ಅವರನ್ನೂ ಸಚಿವರನ್ನಾಗಿ ನೇಮಿಸಿಕೊಳ್ಳುವ ವಿಷಯವೂ ಪರಿಶೀಲನೆಯಲ್ಲಿದೆ.

ಕಾಯಿಲೆ ಪತ್ತೆ ಮಾಡುವ ವಂಶವಾಹಿ ಪರೀಕ್ಷೆಗಳು ವ್ಯಾಪಕ ಸ್ವರೂಪ ಪಡೆಯುತ್ತಿವೆ

ಆರೋಗ್ಯ ಫಲಕ್ಕೆ 'ಜೀನ್ ಜಾತಕ'ದ ಬಲ

ವಿಶ್ಲೇಷಣೆ

ಕೇಶವ ಎಚ್. ಕೊರ್ಸೆ

ಬೆಂಗಳೂರಿನಲ್ಲಿ ಇತ್ತೀಚೆಗಷ್ಟೇ ಜರುಗಿದ 'ಬೆಂಗಳೂರು ಟೆಕ್' ಸಮ್ಮೇಳನದ 'ಬಯೋ ಇಂಡಿಯಾ' ಜೈವಿಕ ತಂತ್ರಜ್ಞಾನ ಪ್ರದರ್ಶನದ ಆಕರ್ಷಣೆಗಳಲ್ಲಿ ವಂಶವಾಹಿ ಪರೀಕ್ಷೆ ತಂತ್ರಜ್ಞಾನವೂ ಪ್ರಮುಖವಾಗಿತ್ತು. ದೇಹದ ಒಂದು ಜೀವಕೋಶವಿದ್ದರೆ ಸಾಕು, ಅದರ ಕೋಶಕೇಂದ್ರದಿಂದ ವಂಶವಾಹಿಗಳನ್ನು ಬೇರ್ಪಡಿಸಿ, ಅವುಗಳಲ್ಲಿನ ರಾಸಾಯನಿಕಗಳ ಅಣುರಚನೆ ನೋಡಿ, ಆ ವ್ಯಕ್ತಿಯ 'ತಳಿನಕ್ಷೆ'ಯನ್ನೇ ರಚಿಸುವ 'ಜೀನ್ ಟೆಸ್ಟಿಂಗ್' ತಂತ್ರಜ್ಞಾನವದು. ದೇಶದಲ್ಲೀಗ ಈ ಬಗೆಯ ಇಪ್ಪತ್ತಕ್ಕೂ ಹೆಚ್ಚಿನ ಪ್ರಯೋಗಾಲಯ ಉದ್ಯಮಗಳು, ಐವತ್ತಕ್ಕೂ ಮೀರಿ ನವೋದ್ಯಮಗಳು ಬೆಳೆದುನಿಂತಿವೆ ಎಂಬ ಅಂದಾಜಿದೆ. ಬೆಂಗಳೂರು ಈ ಕ್ಷೇತ್ರದಲ್ಲೂ ಮುಂಚೂಣಿಯಲ್ಲಿದೆ.

ಬರೀ ಎರಡು ದಶಕಗಳ ಹಿಂದೆ, ಗರ್ಭಿಣಿಯರ ಭ್ರೂಣಪರೀಕ್ಷೆಯು ಕೆಲವೇ ಸರಳ ಪರೀಕ್ಷೆಗಳಿಗೆ ಸೀಮಿತವಾಗಿತ್ತು. ಗರ್ಭಾಶಯದ್ರವದ ಜೀವಕೋಶಗಳ ಕೋಶಕೇಂದ್ರದಲ್ಲಿ ವರ್ಣತಂತುಗಳ ಜೋಡಣೆ ಸರಿಯಾಗಿದೆಯೇ ಎಂದಷ್ಟೇ ಪರೀಕ್ಷಿಸುತ್ತಿದ್ದರು. ಅವುಗಳ ಸಂಖ್ಯೆ ಹಾಗೂ ಜೋಡಣೆ ಕ್ರಮದಲ್ಲಿ ಏರುಪೇರಿದ್ದರೆ, ಜನಿಸುವ ಮಗು ವಂಶವಾಹಿ ಕಾಯಿಲೆಗಳಿಗೆ ತುತ್ತಾಗುವ ಸಾಧ್ಯತೆಯಿರುತ್ತದೆ. ಉದಾಹರಣೆಗೆ, ಒಂದು ವರ್ಣತಂತು ಹೆಚ್ಚಿರುವ 'ಟ್ರೈಸೋಮಿ' ಮಗು, ಡೌನ್ ಸಿಂಡ್ರೋಂ ಕಾಯಿಲೆಗೆ ತುತ್ತಾಗುತ್ತದೆ. ಆ ಬಗೆಯ ರೋಗಗಳನ್ನು ಗುಣಪಡಿಸಲಾಗದ ಕಾರಣಕ್ಕೆ, ಅಂಥ ಭ್ರೂಣವನ್ನು ನಿರಾಕರಿಸಲು ಕಾನೂನು ಒಪ್ಪಿಗೆಯೂ ಇದೆ.

ಆದರೆ, ಹಿಂದಿನ ಎರಡು ದಶಕಗಳ ಅವಧಿಯಲ್ಲಿ ಈ ಪರೀಕ್ಷೆಗಳು ವರ್ಣತಂತುವಿನ ಹಂತ ದಾಟಿ, ಅದರಲ್ಲಿನ ಕೋಟ್ಯಂತರ ವಂಶವಾಹಿಗಳಲ್ಲಿ ಒಂದೊಂದನ್ನೂ ನಿಖರವಾಗಿ ಗುರುತಿಸುವ ಮಟ್ಟಕ್ಕೆ ಜೈವಿಕ ತಂತ್ರಜ್ಞಾನ ಬೆಳೆದುನಿಂತಿದೆ. ಜೀವಕೋಶಗಳ ಕೋಶಕೇಂದ್ರದಲ್ಲಿ ಇರುವ ವಂಶವಾಹಿಗಳ ಸಮೂಹವಾದ 'ಜೀನೋಮ್' ಸ್ವರೂಪದ ಕುರಿತು, ತೊಂಬತ್ತರ ದಶಕದ ನಂತರ ಯಶಸ್ವಿಯಾಗಿ ನಡೆದ ಜಾಗತಿಕ ಸಂಶೋಧನೆಗಳ ಫಲವಾಗಿ, ವಂಶವಾಹಿ ಪರೀಕ್ಷೆಯು ಒಂದು ಬೃಹತ್ ತಂತ್ರಜ್ಞಾನವಾಗಿ ಬೆಳೆಯುತ್ತಿದೆ. ಆರು ಸಾವಿರಕ್ಕೂ ಹೆಚ್ಚು ವಿಧದ ರೋಗಗಳು ಹಾಗೂ ದೈಹಿಕ, ಮಾನಸಿಕ ಸ್ಥಿತಿಗಳನ್ನು ಗುರುತಿಸುವ, ಇಪ್ಪತ್ತಾರು ಸಾವಿರಕ್ಕೂ ಮಿಕ್ಕಿ 'ಜೆನೆಟಿಕ್ ಪರೀಕ್ಷೆ'ಗಳು ಇಂದು ಜಾಗತಿಕವಾಗಿ ಅಭಿವೃದ್ಧಿ ಆಗಿವೆಯಂತೆ! ಉಗುರಿನ ತುಣುಕು ಅಥವಾ ಒಂದು ಕೂದಲು ಸಿಕ್ಕರೂ ಸಾಕು, ಹಿಂದಿನ ಮೂರು ತಿಂಗಳಲ್ಲಿ ಆ ವ್ಯಕ್ತಿ ಮದ್ಯ ಸೇವಿಸಿದ್ದನೇ ಎಂಬುದನ್ನೂ ನಿಖರವಾಗಿ ಹೇಳುವಷ್ಟು 'ಜೀನ್ ಟೆಸ್ಟಿಂಗ್' ಬೆಳೆದುನಿಂತಿದೆ. ನಮ್ಮ ದೇಶವೂ ಈ ಕ್ಷೇತ್ರದಲ್ಲಿ ಕ್ಷಮತೆ ಸಾಧಿಸಿರುವುದನ್ನು 'ಬೆಂಗಳೂರು ಬಯೋ' ಸಾರುತ್ತಿತ್ತು.

ಭ್ರೂಣ, ಶಿಶು ಅಥವಾ ವಯಸ್ಕರಲ್ಲಿ ಯಾರ ಮೇಲೆ ಬೇಕಾದರೂ ಈ ಪರೀಕ್ಷೆ ನಡೆಸಲು ಸಾಧ್ಯ. ಇದಕ್ಕೆ ಬೇಕಾದದ್ದು ವರ್ಣತಂತು ಒದಗಿಸುವ ಚಿಟಿಕೆ ಜೀವಕೋಶಗಳು ಮಾತ್ರ. ರಕ್ತ, ಅಂಡಾಣು, ವೀರ್ಯ, ಕೂದಲು, ಉಗುರು, ಜೊಲ್ಲು ಯಾವುದೂ ಆದೀತು. ಪಾರಂಪರಿಕ ರಕ್ತಪರೀಕ್ಷೆ ಪ್ರಯೋಗಾಲಯಗಳೂ ಈ ಹೊಸ ತಂತ್ರಜ್ಞಾನದ ನವೋದ್ಯಮಗಳ ಜೊತೆ ಕೈಜೋಡಿಸಿ ಈ ಸೇವೆ ಒದಗಿಸುತ್ತಿವೆ. ಹಲವು ಕಂಪನಿಗಳು ಈ ಸೇವೆಗಳನ್ನು ಅಂತರ್ಜಾಲದ ಮೂಲಕವೂ ಒದಗಿಸುತ್ತಿವೆ. ಅವು ಒದಗಿಸುವ ಪರೀಕ್ಷಾ ಕಿಟ್‌ಗಳ ಸಾಧನಗಳಲ್ಲಿ ಒಂದಿಷ್ಟು ಜೊಲ್ಲು ಸುರಿಸಿ ಹಿಂತಿರುಗಿಸಿದರಾಯಿತು. ಒಂದು ವಾರದಲ್ಲಿ ನಮ್ಮ ಮೊಬೈಲಿಗೆ ನಾವು ಬಯಸಿದ 'ಜೀನ್ ಟೆಸ್ಟಿಂಗ್' ವರದಿ ಬರುತ್ತದೆ! ಆರೆಂಟು ಸಾವಿರ ರೂಪಾಯಿಯಷ್ಟು ಕಡಿಮೆ ವೆಚ್ಚದಲ್ಲೂ ಇದು ಲಭ್ಯವಿದೆ.

ಮನುಷ್ಯನ ಯಾವುದೇ ಜೀವಕೋಶವೊಂದರಲ್ಲಿ ಇಪ್ಪತ್ಮೂರು ಜೊತೆ ವರ್ಣತಂತುಗಳಿವೆ. ಅವುಗಳಲ್ಲಿ ಒಂದು ಜೊತೆಯು ಲಿಂಗ ನಿರ್ಣಯಿಸುವ ಎಕ್ಸ್ ಮತ್ತು ವೈ ವರ್ಣತಂತುಗಳನ್ನು ಒಳಗೊಂಡಿದೆ. ರೈಲುಹಳಿಗಳ ನಡುವಿನ ಪಟ್ಟಿಗಳಂತೆ ಉದ್ದಕ್ಕೆ ಅವುಗಳಲ್ಲಿ ವಂಶವಾಹಿ ರಾಸಾಯನಿಕಗಳು ಬೆಸೆದುಕೊಂಡಿದ್ದು, ಅವುಗಳ ಜೋಡಣೆಯ ಕ್ರಮವನ್ನು ಅರ್ಥೈಸಿಕೊಳ್ಳುವ ತಂತ್ರಕ್ಕೆ ಸೀಕ್ವೆನ್ಸಿಂಗ್ ಎನ್ನುತ್ತಾರೆ. ಇದನ್ನು ಆಧರಿಸಿಯೇ ಈ ವಂಶವಾಹಿ ಪರೀಕ್ಷೆಗಳನ್ನು ಮಾಡುವುದು. ಪ್ರಸ್ತುತ ಇವನ್ನು ಮೂರು ಬಗೆಯ ಉದ್ದೇಶಗಳಿಗೆ ಕೈಗೊಳ್ಳುತ್ತಿದ್ದಾರೆ.

ಮೊದಲಿನದು, ವೈದ್ಯಕೀಯ ಕಾರಣಗಳು. ಭ್ರೂಣ, ಮಗು ಅಥವಾ ವಯಸ್ಕರಲ್ಲಿ ವಂಶವಾಹಿ ವ್ಯತ್ಯಯದಿಂದಾಗಿ (ಮ್ಯೂಟೇಶನ್) ಈಗ ಅಥವಾ ಭವಿಷ್ಯದಲ್ಲಿ ತುತ್ತಾಗಬಹುದಾದ ಕಾಯಿಲೆಗಳನ್ನು ಅರಿಯಲು ಮಾಡುವ ಪರೀಕ್ಷೆಗಳು. ಉದಾಹರಣೆಗೆ, ಎಬಿಸಿಸಿ2 ವಂಶವಾಹಿಯ ಸ್ವರೂಪ ಅರಿತು ಯಕೃತ್ತಿನ ಕ್ಯಾನ್ಸರ್ ಸಾಧ್ಯತೆಯನ್ನು ನಿರ್ಧರಿಸಬಹುದು. ಎಚ್‌ಎಲ್‌ಎ- ಬಿ27 ವಂಶವಾಹಿಯನ್ನು ಪರೀಕ್ಷಿಸಿ ಸಂಧಿವಾತವಿದೆಯೇ ಎಂದು ಹೇಳಬಹುದು. ಬಿಆರ್‌ಸಿಎ ವಂಶವಾಹಿಯ ಮ್ಯೂಟೇಶನ್ ಪರೀಕ್ಷಿಸಿ ಸ್ತನ ಕ್ಯಾನ್ಸರ್ ಸಾಧ್ಯತೆಯನ್ನು ಅರಿಯಬಹುದು. ಮಧುಮೇಹ, ರಕ್ತದೊತ್ತಡ, ಜೀರ್ಣಕ್ರಿಯೆರೋಗ, ಬೊಜ್ಜು, ಆಹಾರ ಹಾಗೂ ಔಷಧದ ಅಲರ್ಜಿಯಂತಹ ಹಲವು ಗಂಭೀರ ಕಾಯಿಲೆಗಳು ಹಾಗೂ ಮನೋದೈಹಿಕ ಸ್ಥಿತಿಗಳ ಹಿಂದಿರುವ ತಳಿವಿಜ್ಞಾನದ ಕಾರಣಗಳನ್ನು ಅರಿಯಬಹುದು. ಇದನ್ನಾಧರಿಸಿ ಆ ರೋಗಗಳನ್ನು ಸೂಕ್ತವಾಗಿ ನಿರ್ವಹಿಸಲು ಸಾಧ್ಯ.

ಎರಡನೆಯದು, ವ್ಯಕ್ತಿಯ ಗುರುತು ಪತ್ತೆಹಚ್ಚುವುದು. ವ್ಯಕ್ತಿಗಳ ನಡುವಿನ ಸಂಬಂಧ ಅರಿಯುವುದು, ಆಸ್ತಿ ಹಂಚಿಕೆ ನಿರ್ಣಯ, ಅಪರಾಧಿಗಳನ್ನು ಕಂಡುಹಿಡಿಯುವಂತಹ ಕಾನೂನಿನ ಆಯಾಮವಿರುವ ಸಂದರ್ಭಗಳಲ್ಲಿ ಈ ಪರೀಕ್ಷೆಗಳು ಸಹಾಯ ಮಾಡುತ್ತವೆ. ಮಗುವೊಂದರ ನೈಜ ತಂದೆ-ತಾಯಿ, ಬಂಧು-ಬಳಗವನ್ನು ಗುರುತಿಸಲು ಅಥವಾ ದೇಶಕ್ಕೆ ವಲಸೆ ಬರುವವರ ನೈಜತೆಯನ್ನು ನಿಖರವಾಗಿ ಗುರುತಿಸಲೂ ಸಾಧ್ಯ.

ಮೂರನೆಯದು, ಈಗ ಸಮಸ್ಯೆಯಿಲ್ಲದೆಯೂ ಮುಂದೆ ಅನಾರೋಗ್ಯ ಕಾಡಬಾರದೆಂದು ಆಶಿಸಿ, ಭವಿಷ್ಯದಲ್ಲಿ ಸಂಭವಿಸಬಹುದಾದ ಅನಾರೋಗ್ಯದ ಬಗ್ಗೆ ಅರಿಯಲು ಸ್ವಯಂಪ್ರೇರಣೆಯಿಂದ ಕೈಗೊಳ್ಳುವ 'ನೆಮ್ಮದಿ ಬಯಕೆ ಪರೀಕ್ಷೆ'ಗಳು. ಖಾಸಗಿ ಕ್ಷೇತ್ರದಲ್ಲಿ ವೇಗವಾಗಿ ಬೆಳೆಯುತ್ತಿರುವ ಈ ಮೂರು ಬಗೆಯ ಪರೀಕ್ಷೆಗಳು ಹಲವಾರು ಬಗೆಯ ವೈದ್ಯಕೀಯ, ಕಾನೂನು ಹಾಗೂ ನೈತಿಕ ಸವಾಲುಗಳನ್ನು ಈಗ ಸೃಷ್ಟಿಸುತ್ತಿವೆ. ಉದಾಹರಣೆಗೆ, ವಂಶವಾಹಿಯೊಂದರಲ್ಲಿ ಮ್ಯೂಟೇಶನ್ ಇದೆ ಎಂದಮಾತ್ರಕ್ಕೆ, ಮುಂದೆ ರೋಗ ಬರಲೇಬೇಕೆಂದೇನೂ ಇಲ್ಲ. ಹೀಗಾಗಿ, ಅನವಶ್ಯಕವಾಗಿ ಜೀನ್ ಟೆಸ್ಟಿಂಗ್ ಆಮಿಷಗಳಿಗೆ ಬಲಿಯಾಗದೆ ಜನರು ವಿವೇಕ ತೋರಬೇಕೆಂದು, ಸ್ವತಃ ಇದರ ತಜ್ಞೆಯಾಗಿರುವ 'ಇಂಡಿಯನ್ ಅಕಾಡೆಮಿ ಆಫ್ ಮೆಡಿಕಲ್ ಜೆನೆಟಿಕ್ಸ್'ನ ಸಂಸ್ಥಾಪಕ ಅಧ್ಯಕ್ಷೆ ಡಾ. ಶುಭಾ ಫಡ್ಕೆ ಹೇಳುತ್ತಾರೆ. ಈ ಪ್ರಯೋಗಾಲಯಗಳ ಗುಣಮಟ್ಟವನ್ನು ನಿಯಂತ್ರಿಸುವ ಕಾನೂನಿನ ಚೌಕಟ್ಟು ಸಹ ಇನ್ನೂ ರೂಪಿತವಾಗಿಲ್ಲ. ಜೀನ್ ಟೆಸ್ಟಿಂಗ್ ವರದಿ ಆಧರಿಸಿ ವಿಮೆ ಕಂಪನಿಗಳು ವಿಮೆ ನಿರಾಕರಿಸುವ ಸಂದರ್ಭಗಳೂ ಉದ್ಭವಿಸುತ್ತಿದ್ದು, ಗ್ರಾಹಕರು ನ್ಯಾಯಾಲಯದ ಮೊರೆ ಹೋಗುತ್ತಿದ್ದಾರೆ.

ಅಂತಿಮವಾಗಿ, ನೈತಿಕ ಸವಾಲುಗಳು. ವೈದ್ಯರ ಹಂಗಿಲ್ಲದೆ ಮುಕ್ತ ಮಾರುಕಟ್ಟೆಯಲ್ಲಿ ಈಗ ವಂಶವಾಹಿ ಪರೀಕ್ಷೆಗಳು ಗ್ರಾಹಕರಿಗೆ ಲಭ್ಯವಾಗುತ್ತಿವೆ. ಇದರ ಪರಿಣಾಮವೇನು? ವೈಯಕ್ತಿಕ ಮಾಹಿತಿಗಳು ದುರ್ಬಳಕೆಯಾದರೆ ಯಾರು ಹೊಣೆ? ಖಾಸಗಿ ಉದ್ಯಮಗಳ ಬಳಿಯಿರುವ ಈ ದತ್ತಾಂಶಗಳು ಅನರ್ಹರ ಕೈಗೆ ದೊರೆಯದಂತೆ ನೋಡಿಕೊಳ್ಳುವುದು ಹೇಗೆ? ಮಾನಸಿಕ ಒತ್ತಡ, ಲೈಂಗಿಕ ಗುಣಾವಗುಣಗಳು, ಕ್ಯಾನ್ಸರ್, ಮಧುಮೇಹ, ಮರೆವಿನ ಕಾಯಿಲೆಯಂತಹ, ಭವಿಷ್ಯದಲ್ಲಿ ಉದ್ಭವಿಸಬಹುದಾದ ಸಮಸ್ಯೆಗಳು ಈಗಲೇ ತಿಳಿದುಬಿಟ್ಟರೆ, ಅದರ ಪರಿಣಾಮವೇನಾದೀತು? ಅಂತಹ ಮಾಹಿತಿ ಸೋರಿಕೆಯಾದಲ್ಲಿ, ಆ ವ್ಯಕ್ತಿಯು ಎದುರಿಸುವ ಅಪಾಯಗಳೇನು? ಈ ಎಲ್ಲ ವೈದ್ಯಕೀಯ, ಕಾನೂನು ಹಾಗೂ ನೈತಿಕ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳುವ ಸೂಕ್ತವಾದ 'ವಂಶವಾಹಿ ಪರೀಕ್ಷೆ ನೀತಿ- ನಿಯಮಾವಳಿ'ಗಳನ್ನು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಶೀಘ್ರದಲ್ಲಿ ರೂಪಿಸಲೇಬೇಕಿದೆ.

ಇಷ್ಟಾಗಿಯೂ, ಇದನ್ನೂ ಮೀರಿದ ಗಂಭೀರ ಪ್ರಶ್ನೆಯೊಂದಿದೆ. ಛಿದ್ರವಾಗುತ್ತಿರುವ ನೈಸರ್ಗಿಕ ಪರಿಸರ ಹಾಗೂ ಹವಾಮಾನ ಬದಲಾವಣೆಯಿಂದಾಗಿ ದಿನಕ್ಕೊಂದು ಹೊಸ ಕಾಯಿಲೆ ಹುಟ್ಟುತ್ತಿದೆಯಲ್ಲವೇ? ಇದನ್ನು ನಿರ್ವಹಿಸುವ ಸಾಮೂಹಿಕ ಪ್ರಯತ್ನಗಳಿಗೆ ಬದಲಾಗಿ, ಕ್ಷಿಪ್ರ ಪರಿಹಾರವೆಂದು ತೋರುವ ವೈಯಕ್ತಿಕ ವಂಶವಾಹಿ ಪರೀಕ್ಷೆಯ 'ಜೀನ್ ಜಾತಕ'ದ ಭ್ರಮೆಗೆ ಇಂದಿನ ತಲೆಮಾರು ಎಲ್ಲೆಮೀರಿ ಜಾರುತ್ತಿದೆಯೇ? ಚಿಂತಿಸಬೇಕಾದ ಸಂಗತಿ.

ಚುರುಮುರಿ

ದುಡ್ಡು ದುಮ್ಮಾನ...

● ಮಣ್ಣೆರಾಜು

'ನಮ್ಮಲ್ಲಿ 'ಬಹುಮನಿ' ಸುಲ್ತಾನರು ಬಹಳಷ್ಟು ಮಂದಿ ಇದ್ದಾರೆ. ಐಟಿ ದಾಳಿಯಲ್ಲಿ ಇಂಥಾ ದುಡ್ಡಪ್ಪಗಳು ಬೆಳಕಿಗೆ ಬರ್ತಾರೆ' ಎನ್ನುತ್ತಾ ಬಂದರು ಗೆಳೆಯ ಗೋಪಾಲಿ.

'ನಮ್ಮದು ಸಂಪದ್ಭರಿತ ದೇಶ. ಖನಿಜ ಸಂಪತ್ತು, ಕಳ್ಳ ಸಂಪತ್ತು ಹೇರಳವಾಗಿದೆ. ನೆಲ ಅಗೆದು, ಬಿಲ ಬಗೆದು ಹೊರತೆಗೆಯಬೇಕಷ್ಟೇ' ಎಂದರು ಶಂಕ್ರಿ.

'ಲಕ್ಷಲಕ್ಷ ದುಡ್ಡು ಎಣಿಸುವ ಬ್ಯಾಂಕ್ ಅಧಿಕಾರಿ ನೀನು, ನಿನ್ನ ಅಂಗೈಯಲ್ಲಿ ಧನರೇಖೆ ಇದೆ'.

'ಲಕ್ಷ-ಕೋಟಿ ಎಣಿಸಿ, ಗುಣಿಸುವ ಯೋಗ ಇದೆ ಎಂಬ ಜ್ಯೋತಿಷಿ ಮಾತು ನಂಬಿಕೊಂಡು ಇವರನ್ನು ಮದುವೆಯಾದೆ. ಆದರೇನು ಬಂತು, ತಿಂಗಳ ಸಂಬಳ ಎಣಿಸಿಕೊಂಡು ಬಾಳೋದೇ ಆಗಿದೆ' ಸುಮಿ ಸಂಕಟ ಹೇಳಿಕೊಂಡರು.

'ಬ್ಯಾಂಕ್ ಅಧಿಕಾರಿ ಹೆಂಡ್ತಿಗೂ ದುಡ್ಡಿನ ಬರವೆ?'

'ಬ್ಯಾಂಕ್ ಆಫೀಸರ್ ಹೆಂಡ್ತಿ ಅಂತ ನೆರೆಹೊರೆ ಹೆಂಗಸರು ಬಂದು, 'ಗೃಹಲಕ್ಷ್ಮಿ ದುಡ್ಡು ಬಂದಮೇಲೆ ವಾಪಸ್ ಕೊಡ್ತೀನಿ, ಎರಡು ಸಾವಿರ ಸಾಲ ಕೊಡಿ' ಅಂತಾರೆ. ಕೊಡಲು ನನ್ನಲ್ಲಿ ದುಡ್ಡು ಇರಲ್ಲ. ಮನೆ ಖರ್ಚಿಗೆ ದುಡ್ಡು ಕೇಳಿದರೆ ಇವರು ಖರ್ಚಿನ ಪ್ರಾಜೆಕ್ಟ್ ರಿಪೋರ್ಟ್ ಕೊಡು ಅಂತಾರೆ'.

'ನಿನಗೆ ದುಡ್ಡಿನ ಗಣಿತ ಗೊತ್ತಿಲ್ಲ' ಶಂಕ್ರಿ ರೇಗಿದರು.

'ದುಡ್ಡನ್ನು ಗಳಿಸುವುದಕ್ಕಿಂತ ಎಣಿಸೋದು ಕಷ್ಟನಾ? ಎಂಪಿಯೊಬ್ಬರ ದುಡ್ಡು ಎಣಿಸಲು ಅಧಿಕಾರಿಗಳಿಗೆ ಸಾಧ್ಯವಾಗಲಿಲ್ಲವಂತೆ, ಎಣಿಕೆ ಮೆಷಿನ್‌ಗಳೂ ಸುಸ್ತಾದವಂತೆ'.

'ಹೌದು, ಗೋಡೆ ಒಡೆದು ಇಟ್ಟಿಗೆ ತೆಗೆದು, ಇಟ್ಟಿಗೆ, ಮಣ್ಣಿನ ಕಣ ವಿಂಗಡಿಸಿ ಎಣಿಸಿದಂತೆ ದುಡ್ಡಿನ ಗೋಡೆಯ ಒಂದೊಂದೂ ನೋಟು ಎಣಿಸೋದು ಸರಳವಲ್ಲ. ಮೆಷಿನೂ ಕೆಡುತ್ತೆ, ತಲೆನೂ ಕೆಡುತ್ತೆ'.

'ವಶಪಡಿಸಿಕೊಂಡ ಅಕ್ರಮ ಹಣವನ್ನು ಸರ್ಕಾರ ಏನು ಮಾಡುತ್ತೆ? ಸ್ವಿಸ್ ಬ್ಯಾಂಕಿನಿಂದ ಕಪ್ಪುಹಣವನ್ನಂತೂ ತಂದು ಹಂಚಲಿಲ್ಲ, ರೈಡ್ ಮಾಡಿದ ಕಪ್ಪುಹಣವನ್ನಾದರೂ ಜನರ ಬ್ಯಾಂಕ್ ಅಕೌಂಟಿಗೆ ಹಾಕ್ತಾರೇನೋ ಕಾದುನೋಡೋಣ' ಅಂದುಕೊಂಡರು ಸುಮಿ.

ಸಂಗತ

ಪಾಠದ ಜೊತೆ ಇರಲಿ ಆಟದ ಮಜಾ

ಕೌಟುಂಬಿಕ ಮತ್ತು ಶಾಲಾ ಪರಿಸರ ಎರಡರಲ್ಲೂ ಮಕ್ಕಳ ದೈಹಿಕ ಚಟುವಟಿಕೆಗೆ ಪೂರಕವಾದ ವಾತಾವರಣ ನಿರ್ಮಿಸಬೇಕಾಗಿದೆ

● ಎಚ್.ಬಿ.ಚಂದ್ರಶೇಖರ್

ನಮ್ಮ ಶಿಕ್ಷಣ ಕ್ರಮದಲ್ಲಿ ನಿಗದಿತ ಪಠ್ಯಪುಸ್ತಕಗಳ ಅಭ್ಯಾಸ ಹಾಗೂ ಪರೀಕ್ಷೆಗಾಗಿ ಗಂಭೀರವಾಗಿ ಸಿದ್ಧತೆ ನಡೆಸುವುದಕ್ಕೆ ನೀಡುವಷ್ಟು ಪ್ರಾಮುಖ್ಯವನ್ನು ಆಟೋಟ, ವ್ಯಾಯಾಮದ ಅಭ್ಯಾಸಕ್ಕೆ ನೀಡುವುದಿಲ್ಲ. ಇಂತಹ ಅಭ್ಯಾಸವು ದೈಹಿಕ ಬೆಳವಣಿಗೆಯ ಜೊತೆ ಬೌದ್ಧಿಕ ಬೆಳವಣಿಗೆಗೂ ಸಹಕಾರಿ ಎಂಬ ಅಂಶವನ್ನು ನಾವೆಲ್ಲ ಮರೆತುಬಿಡುತ್ತೇವೆ. ಅದರಲ್ಲೂ ಹೆಚ್ಚಿನ ಶಾಲೆ, ಕಾಲೇಜುಗಳು ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಆಟವು ಸಂಪೂರ್ಣ ನಿಷಿದ್ಧ ಎನ್ನುವಂತೆ ಮಾಡಿಬಿಡುತ್ತವೆ. ಪರೀಕ್ಷೆಯ ಸಿದ್ಧತೆಗೆ ಓದಿನ ಜೊತೆ ಜೊತೆಗೆ ಆಟ, ಓಟದಂತಹ ಒಂದಷ್ಟು ದೈಹಿಕ ಚಟುವಟಿಕೆಗಳು ಮಕ್ಕಳ ಏಕತಾನತೆಯನ್ನು ಹೋಗಲಾಡಿಸಿ, ಅವರಲ್ಲಿ ಹುರುಪು, ಚೈತನ್ಯವನ್ನು ತುಂಬುತ್ತವೆ. ಆದರೆ, ಕೌಟುಂಬಿಕ ಮತ್ತು ಶಾಲಾ ಪರಿಸರದಲ್ಲಿ ದೈಹಿಕ ಚಟುವಟಿಕೆಗೆ ದೊರೆಯಬೇಕಾದಷ್ಟು ಪ್ರಾಮುಖ್ಯ ದೊರೆಯದಿರುವುದು ವಾಸ್ತವ.

ವ್ಯಕ್ತಿತ್ವ ವಿಕಸನದ ಕುರಿತು ವಿದ್ಯಾರ್ಥಿಗಳ ಜೊತೆ ಸಂವಾದ ನಡೆಸುವ ಸಂದರ್ಭದಲ್ಲಿ ನಾನು ಅವರಿಗೆ, 'ನಿಮ್ಮಲ್ಲಿ ಎಷ್ಟು ಜನ ಆಟ, ವ್ಯಾಯಾಮ, ಯೋಗದಂತಹ ಚಟುವಟಿಕೆಗಳನ್ನು ರೂಢಿಸಿಕೊಂಡಿದ್ದೀರಿ?' ಎಂದು ಕೇಳುತ್ತೇನೆ. ಹೆಚ್ಚಿನ ಸಂದರ್ಭಗಳಲ್ಲಿ ಶೇ 10ರಿಂದ 30ರಷ್ಟು ವಿದ್ಯಾರ್ಥಿಗಳು ಮಾತ್ರ ಇಂತಹ ಯಾವುದಾದರೂ ಚಟುವಟಿಕೆಯಲ್ಲಿ ತೊಡಗಿಕೊಂಡಿರುವುದಾಗಿ ಹೇಳುತ್ತಾರೆ. ಒಂದಷ್ಟು ವಿದ್ಯಾರ್ಥಿಗಳು ಚೆಸ್‌ನಂತಹ ಒಳಾಂಗಣ ಆಟಗಳನ್ನು ಆಡುವುದಾಗಿ ತಿಳಿಸುತ್ತಾರೆ.

ಶಾಲೆಗಳಲ್ಲಿ ದೈಹಿಕ ಚಟುವಟಿಕೆಯ ಆಯೋಜನೆಗೆ ದೈಹಿಕ ಶಿಕ್ಷಣ ಶಿಕ್ಷಕರು ಇರಬೇಕಾಗುತ್ತದೆ. ಆದರೆ ಕಡಿಮೆ ಸಂಖ್ಯೆಯ ದಾಖಲಾತಿ ಹೊಂದಿರುವ ಶಾಲೆಗಳಿಗೆ ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಯನ್ನು ಮಂಜೂರು ಮಾಡಿರುವುದಿಲ್ಲ. ಕೆಲವು ಕಡೆ ಈ ಹುದ್ದೆ ಇನ್ನಷ್ಟೇ ಭರ್ತಿಯಾಗಬೇಕಿರುತ್ತದೆ. ಎಷ್ಟೋ ಶಾಲೆಗಳಲ್ಲಿ ಆಟದ ಮೈದಾನ ಇರುವುದಿಲ್ಲ. ಇಂತಹ ಸನ್ನಿವೇಶಗಳಲ್ಲಿ ದೈಹಿಕ ಚಟುವಟಿಕೆಗೆ ಹಿನ್ನಡೆ ಆಗದಂತೆ ಸೂಕ್ತ ಯೋಜನೆ ರೂಪಿಸುವುದು ಅಗತ್ಯ. ದೈಹಿಕ ಶಿಕ್ಷಣ ಶಿಕ್ಷಕರು ಲಭ್ಯವಾಗದಂತಹ ಕಡೆಗಳಲ್ಲಿ ಇತರ ಶಿಕ್ಷಕರೇ ಈ ಕಾರ್ಯಕ್ಕೆ ಮುಂದಾಗಬೇಕು.

ಆಟದ ಮೈದಾನ ಇಲ್ಲದಿದ್ದರೆ ಸೂಕ್ತವಾದ ರೀತಿಯಲ್ಲಿ ದೈಹಿಕ ಚಟುವಟಿಕೆಗಳನ್ನು ಆಯೋಜಿಸಬೇಕು. ನಿಯಮಿತವಾಗಿ ಕೈಗೊಳ್ಳುವ ದೈಹಿಕ ಚಟುವಟಿಕೆಗಳಿಂದ ದೇಹದ ಮೂಳೆ, ಸ್ನಾಯುಗಳು ಗಟ್ಟಿಯಾಗುವುದರ ಜೊತೆಗೆ ದೇಹದ ಕ್ಷಮತೆಯೂ ಉತ್ತಮಗೊಳ್ಳುತ್ತದೆ. ಆರೋಗ್ಯಕರ ಆಹಾರಾಭ್ಯಾಸದ ಜೊತೆಗೆ ದೇಹವನ್ನು ಚಟುವಟಿಕೆಯಿಂದ ಇರಿಸುವುದರ ಮಹತ್ವವನ್ನು ವಿದ್ಯಾರ್ಥಿ ಹಂತದಲ್ಲೇ ರೂಢಿಸುವುದು ಒಳಿತು.

ಶಾಲೆಗಳಲ್ಲಿ ಸಾಮಾನ್ಯವಾಗಿ ಶನಿವಾರದಂದು ಪಿ.ಟಿ. ಪಿರಿಯಡ್ ಹೆಸರಿನಲ್ಲಿ ದೈಹಿಕ ವ್ಯಾಯಾಮ ಮಾಡಿಸಲಾಗುತ್ತದೆ. ಇಂದಿನ ಆಧುನಿಕ ಜೀವನದಲ್ಲಿ ವಾರಕ್ಕೊಮ್ಮೆ ಮಾಡುವ ದೈಹಿಕ ಚಟುವಟಿಕೆ ಏನೇನೂ ಸಾಲದು. ತಜ್ಞರ ಪ್ರಕಾರ, ಶಾಲೆಗಳಲ್ಲಿ ಪ್ರತಿದಿನ ಮಕ್ಕಳು ಕನಿಷ್ಠ 60 ನಿಮಿಷದಷ್ಟು ಕಾಲ ದೈಹಿಕ ಚಟುವಟಿಕೆಯಲ್ಲಿ ತೊಡಗಬೇಕು. ಮಕ್ಕಳನ್ನು ಕಠಿಣವಾದ ದೈಹಿಕ ಚಟುವಟಿಕೆಯಲ್ಲಿ ತೊಡಗಿಸುವ ಮುನ್ನ ಅವರ ದೇಹವು ಅದಕ್ಕೆ ಸೂಕ್ತವಾಗಿ ಹೊಂದಿಕೊಳ್ಳುವಷ್ಟು ಆರೋಗ್ಯಕರವಾಗಿ ಇದೆಯೇ ಎಂಬುದನ್ನು ವೈದ್ಯಕೀಯ ತಪಾಸಣೆಯಿಂದ ಮೊದಲು ಖಾತರಿಪಡಿಸಿಕೊಂಡು ಮುಂದುವರಿಯಬೇಕು. ದೈಹಿಕ ಚಟುವಟಿಕೆಯಲ್ಲಿ ನಿರಂತರವಾಗಿ ತೊಡಗಿಸಿಕೊಳ್ಳುವ ವಿಷಯದಲ್ಲಿ ತಂದೆ, ತಾಯಿ ಹಾಗೂ ಶಿಕ್ಷಕರು ಮಾದರಿಯಾಗಬೇಕು.

ಸಾಮಾನ್ಯವಾಗಿ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ನಿರಂತರವಾಗಿ ಬೋಧನಾ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುತ್ತಾರೆ. ಒಂದೆರಡು ತರಗತಿಗಳು ಮುಕ್ತಾಯವಾದ ನಂತರ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಎದ್ದು ನಿಂತು, ಒಂದೆರಡು ನಿಮಿಷ ಕೈಕಾಲುಗಳನ್ನು ಸಡಿಲಗೊಳಿಸುವ ರೀತಿಯ ಸರಳ ವ್ಯಾಯಾಮಗಳನ್ನು ಮಾಡುವುದು ಒಳ್ಳೆಯದು. ಇದು ಅವರಲ್ಲಿ ಜಡತ್ವವನ್ನು ಹೋಗಲಾಡಿಸಿ, ನವ ಚೈತನ್ಯವನ್ನು ತರಬಲ್ಲದು. ತರಗತಿಗಳಲ್ಲಿ ವಿದ್ಯಾರ್ಥಿಗಳು ಆಕಳಿಸಿದಾಗ ಅಥವಾ ತೂಕಡಿಸಿದಾಗ ಅವರನ್ನು ಶಿಕ್ಷೆಗೊಳಪಡಿಸುವ ಬದಲು, ಸರಳ ದೈಹಿಕ ಚಟುವಟಿಕೆಗಳಿಂದ ಅವರಲ್ಲಿ ಒಂದಿಷ್ಟು ಚೈತನ್ಯ ತುಂಬುವ ಪ್ರಯತ್ನ ಮಾಡಬೇಕು. ಕೆಲ ಕಾರ್ಪೊರೇಟ್ ಸಂಸ್ಥೆಗಳಲ್ಲಿ ಸಭೆಗಳು ಸುದೀರ್ಘ ಅವಧಿಗೆ ನಿಗದಿಯಾಗಿದ್ದರೆ, ದೈಹಿಕ ಚಲನೆಗೆ ಪೂರಕವಾಗಿ ಮಧ್ಯಮಧ್ಯೆ ಸಭೆಯನ್ನು ಕೆಲ ನಿಮಿಷ ಸ್ಥಗಿತಗೊಳಿಸಿ, ಬಳಿಕ ಮುಂದುವರಿಸುವಂತಹ ವ್ಯವಸ್ಥೆ ಇರುತ್ತದೆ. ದೇಹದ ಚಲನಶೀಲತೆಯ ಪ್ರಾಮುಖ್ಯತೆಯನ್ನು ಶಾಲೆಗಳೂ ಮನಗಾಣಬೇಕು.

ಆಟದ ಪಿರಿಯಡ್ ಅಥವಾ ಬಿಡುವಿನ ಪಿರಿಯಡ್‌ಗಳಲ್ಲಿ ಶಿಕ್ಷಕರೇ ವಿದ್ಯಾರ್ಥಿಗಳ ಜೊತೆ ಆಟವಾಡಬಹುದು. ಇದರಿಂದ ಶಿಕ್ಷಕರು-ವಿದ್ಯಾರ್ಥಿಗಳ ನಡುವಿನ ಬಾಂಧವ್ಯ ಉತ್ತಮವಾಗುವುದರ ಜೊತೆಗೆ ಇಬ್ಬರ ಆರೋಗ್ಯಕ್ಕೂ ಒತ್ತು ಕೊಟ್ಟಂತಾಗುತ್ತದೆ. ಮಕ್ಕಳಿಗೆ ತರಗತಿಯ ಕೋಣೆಯಲ್ಲಿ ಸಿಗುವುದಕ್ಕಿಂತ ಹೆಚ್ಚಿನ ಖುಷಿ ಹಾಗೂ ಸಂತಸ ಆಟದ ಮೈದಾನದಲ್ಲಿ ಸಿಗುತ್ತದೆ. ಶಾಲೆಗಳಲ್ಲಿ ಹಾಲು, ಮೊಟ್ಟೆ, ಶೇಂಗಾ ಚಿಕ್ಕಿ, ಬಾಳೆಹಣ್ಣಿನಂತಹ ಪೌಷ್ಟಿಕ ಆಹಾರ ನೀಡುತ್ತಿರುವುದು ಸರಿಯಷ್ಟೆ. ಇದರ ಜೊತೆಗೆ ಕ್ರೀಡಾ ಚಟುವಟಿಕೆಗಳಿಗೂ ಇನ್ನಷ್ಟು ಒತ್ತು ನೀಡುವುದು ಪರಿಣಾಮಕಾರಿಯಾಗುತ್ತದೆ.

ಲೇಖಕ: ಹಿರಿಯ ಉಪನ್ಯಾಸಕ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್), ಬೆಂಗಳೂರು ನಗರ ಜಿಲ್ಲೆ ಬೆಂಗಳೂರು

ವಾಚಕರ ವಾಣಿ

ಸಾಂಸ್ಕೃತಿಕ ರಂಗದ ಕಾಯಕಲ್ಪಕ್ಕೆ ಸಿಗಲಿ ಆದ್ಯತೆ

ವೃತ್ತಿರಂಗಭೂಮಿಯ ಹಿರಿಯ ಕಲಾವಿದ ಬಾಬಣ್ಣ ಕಲ್ಮನಿ ಅವರು 2021– 22ನೇ ಸಾಲಿನ ಗುಬ್ಬಿ ವೀರಣ್ಣ ಪ್ರಶಸ್ತಿ ತಮಗೆ ಘೋಷಣೆಯಾಗಿದ್ದರೂ ಪ್ರದಾನ ಮಾಡದಿದ್ದುದರ ಬಗ್ಗೆ ನೊಂದು, ಅದನ್ನು ಕೊಡಮಾಡುವಂತೆ ಪತ್ರಿಕೆಯ ಮೂಲಕ ಮಾಡಿದ್ದ ಮನವಿಯು ಸರ್ಕಾರದ ಕಿವಿಗೆ ಬೀಳುವ ಮುನ್ನವೇ ತೀರಿಕೊಂಡಿರುವುದು ವಿಷಾದದ ಸಂಗತಿ. ಕಲಾವಿದರ ಅಳಲು, ಬದುಕಿನ ಸಂಕಷ್ಟ ಆಳುವವರ ಕಣ್ಣಿಗೆ ಕಾಣುವುದಿಲ್ಲ, ಹೇಳಿದರೂ ಕೇಳುವುದಿಲ್ಲ. ಇದು ಈ ಅವಧಿಯ ಸರ್ಕಾರದ ನಡೆ ಮಾತ್ರವಲ್ಲ, ಯಾವುದೇ ಪಕ್ಷವು ಸರ್ಕಾರದ ನೇತೃತ್ವ ವಹಿಸಿದರೂ ಸಾಂಸ್ಕೃತಿಕ ರಂಗದ ಬಗ್ಗೆ ಅದು ಈ ರೀತಿಯ ಅವಜ್ಞೆಯನ್ನು ಬೆಳೆಸಿಕೊಂಡೇ ಇರುತ್ತದೆ. 'ನರಿಯ ಕೂಗು ಗಿರಿಗೆ ಕೇಳದು' ಎಂಬ ಮಾತಿದೆ. ಹಾಗೇ ಕಲಾವಿದರ ಅಳಲು ಕೂಡ ಸಂಬಂಧಪಟ್ಟವರಿಗೆ ಕೇಳುವುದಿಲ್ಲ. ಕಲಾವಿದರಿಗೆ ಬೇಕಾದ ಸಹಾಯವು ಸಕಾಲದಲ್ಲಿ ದೊರಕದೇ ಇರುವುದಕ್ಕೆ ಬಹಳಷ್ಟು ಕಾರಣಗಳು ಇರಬಹುದು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯವ್ಯಾಪ್ತಿಯನ್ನು ಸಚಿವರಿಗೆ ಮನವರಿಕೆ ಮಾಡಿಕೊಡಲು ಅಧಿಕಾರಿಗಳು ವಿಫಲರಾಗಿರಬಹುದು ಇಲ್ಲವೇ ಅಧಿಕಾರಿಗಳ ಮಾತಿಗೆ ಸಚಿವರು ಕಿವುಡಾಗಿರಬಹುದು.

ನಮ್ಮ ಕಲಾವಿದರು ಆಗಾಗ್ಗೆ ತಮ್ಮ ಬೇಡಿಕೆಗಳನ್ನು ಮಂಡಿಸುತ್ತಲೇ ಇರುತ್ತಾರೆ. ಅದು ಪ್ರಶಸ್ತಿ ಪುರಸ್ಕಾರವಾಗಲಿ, ಮಾಸಾಶನವಾಗಲಿ ಅಥವಾ ಆರೋಗ್ಯಕ್ಕೆ ಸಂಬಂಧಪಟ್ಟ ವಿಶೇಷ ಅನುದಾನದ ಕೋರಿಕೆಯಾಗಲಿ, ಕಾಲಕಾಲಕ್ಕೆ ಅರ್ಹರಿಗೆ ತಲುಪಿದರೆ ಇಂತಹ ಪರಿಸ್ಥಿತಿ ಉಂಟಾಗಲಾರದೇನೊ. ಈ ಹಿಂದೆಯೂ ಪ್ರಶಸ್ತಿಗೆ ಪಾತ್ರರಾದವರು ಪ್ರಶಸ್ತಿ ಸ್ವೀಕರಿಸುವ ಮುನ್ನವೇ ಕಣ್ಮುಚ್ಚಿದ ನಿದರ್ಶನವಿದೆ. ಆಯ್ಕೆ ಸಮಿತಿಯು ಪ್ರಶಸ್ತಿಗೆ ಕಲಾವಿದರನ್ನು ಆಯ್ಕೆ ಮಾಡಿದ ಮೇಲೆ ವರ್ಷಗಟ್ಟಲೆ ಪ್ರಶಸ್ತಿ ಪ್ರದಾನ ಮಾಡದೇ ಇರುವುದು ಎಷ್ಟು ಸರಿ? ಅಕಾಡೆಮಿಗಳು, ಪ್ರಾಧಿಕಾರಗಳು ಮಾತ್ರವಲ್ಲದೆ ರಂಗಾಯಣಗಳಿಗೆ ಆಗಬೇಕಾದ ನೇಮಕಾತಿಯೂ ನನೆಗುದಿಗೆ ಬಿದ್ದಿದೆ. ಚಲನಚಿತ್ರ ರಾಜ್ಯ ಪ್ರಶಸ್ತಿಗಳು, ಹಾಗೆಯೇ ಸಬ್ಸಿಡಿ, ಸಹಾಯಧನ ಇನ್ನೂ ವಿತರಣೆಯಾಗದೆ ಎಲ್ಲರೂ ಕಸಿವಿಸಿಗೊಂಡಿದ್ದಾರೆ. ಈ ಬಗ್ಗೆ ಸಂಬಂಧಪಟ್ಟವರು ಮಧ್ಯಪ್ರವೇಶ ಮಾಡಿ, ಕರ್ನಾಟಕದ ಸಾಂಸ್ಕೃತಿಕ ರಂಗಕ್ಕೆ ಅತ್ಯಗತ್ಯವಾದ ಕಾಯಕಲ್ಪಕ್ಕೆ ಮುಂದಾಗುವರೇ?

ಶಶಿಧರ ಭಾರಿಘಾಟ್, ಬೆಂಗಳೂರು

ಶಾಂತಿಪ್ರಿಯ ನಾಡಿನಲ್ಲಿ ಅಮಾನವೀಯ ಕೃತ್ಯ

ಉತ್ತರ ಭಾರತದ ಕೆಲವೆಡೆ ಮತ್ತು ಮಣಿಪುರದಲ್ಲಿ ಇತ್ತೀಚೆಗೆ ವರದಿಯಾಗಿದ್ದ ಮಹಿಳೆಯರ ವಿರುದ್ಧದ ಅಮಾನವೀಯ ಕೃತ್ಯಗಳು ಜನಮಾನಸದಿಂದ ಮರೆಯಾಗುವ ಮುನ್ನವೇ ಅಂತಹುದೇ ಪ್ರಕರಣ ಈಗ ನಮ್ಮ ರಾಜ್ಯದಲ್ಲೇ ನಡೆದಿರುವುದು ದುರದೃಷ್ಟಕರ ಮತ್ತು ನಾಚಿಕೆಗೇಡಿನ ಸಂಗತಿ. ವಿಧಾನಮಂಡಲದ ಅಧಿವೇಶನ ಬೆಳಗಾವಿಯಲ್ಲಿ ನಡೆಯುತ್ತಿರುವ ಸಂದರ್ಭದಲ್ಲಿ, ಅದೇ ತಾಲ್ಲೂಕಿನ ಹೊಸ ವಂಟಮೂರಿ ಗ್ರಾಮದಲ್ಲಿ ಮಹಿಳೆಯೊಬ್ಬರನ್ನು ಹಾಡಹಗಲೇ ವಿವಸ್ತ್ರಗೊಳಿಸಿ ಮೆರವಣಿಗೆ ಮಾಡಿ ಥಳಿಸಿರುವುದು ನಾಗರಿಕ ಸಮಾಜ ತಲೆತಗ್ಗಿಸುವಂತೆ ಮಾಡಿದೆ. ಶಾಂತಿಪ್ರಿಯ ಎನಿಸಿಕೊಂಡಿದ್ದ ಕರ್ನಾಟಕದಲ್ಲಿ ಇಂತಹ ಕೃತ್ಯ ನಡೆದಿರುವುದು ತೀವ್ರ ವಿಷಾದಕರ.

ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಬೇಕು. ತಪ್ಪಿತಸ್ಥರು ಎಷ್ಟೇ ಪ್ರಭಾವಶಾಲಿಗಳಾಗಿದ್ದರೂ ಯಾವುದೇ ಮುಲಾಜಿಗೆ ಒಳಪಡದೆ ಅವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಬೇಕು. ಈ ಮೂಲಕ ಅಮಾಯಕರ ರಕ್ಷಣೆಗೆ ಮುಂದಾಗಬೇಕು.

ಡಿ.ಪ್ರಸನ್ನಕುಮಾರ್, ಬೆಂಗಳೂರು

ಆ್ಯಸಿಡ್ ದಾಳಿ: ಗಂಭೀರವಾಗಿ ಪರಿಗಣಿಸಿ

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊದ (ಎನ್‌ಸಿಆರ್‌ಬಿ) 2022ರ ಅಂಕಿಅಂಶಗಳ ಪ್ರಕಾರ, ದೇಶದಲ್ಲಿ ಅತಿ ಹೆಚ್ಚು ಆ್ಯಸಿಡ್ ದಾಳಿ ಪ್ರಕರಣಗಳು ನಡೆದಿರುವ ನಗರಗಳ ಪಟ್ಟಿಯಲ್ಲಿ ಬೆಂಗಳೂರು ಮೊದಲ ಸ್ಥಾನದಲ್ಲಿ ಇರುವುದು ಆತಂಕದ ವಿಷಯ, ಜೊತೆಗೆ ಇದು ರಾಜ್ಯಕ್ಕೆ ಅಗೌರವ ತರುವ ಸಂಗತಿಯಾಗಿದೆ.

ಆ್ಯಸಿಡ್ ದಾಳಿಯು ಕಾನೂನಿನ ಪ್ರಕಾರ ಶಿಕ್ಷಾರ್ಹ ಅಪರಾಧ. ರಾಜ್ಯ ಸರ್ಕಾರ ಇಂತಹ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಬೇಕು. ಆ್ಯಸಿಡ್ ದಾಳಿಕೋರರನ್ನು ಕಠಿಣ ಶಿಕ್ಷೆಗೆ ಗುರಿಪಡಿಸಬೇಕು. ಸಾಮಾನ್ಯರಿಗಲ್ಲದೆ ಅವಶ್ಯಕತೆ ಇರುವವರಿಗೆ ಮಾತ್ರ ಆ್ಯಸಿಡ್ ಸಿಗುವಂತೆ ನೋಡಿಕೊಳ್ಳಬೇಕು.

ರಾಸುಮ ಭಟ್, ಚಿಕ್ಕಮಗಳೂರು

ಮಾದರಿ ವಿಶ್ವವಿದ್ಯಾಲಯ ರೂಪುಗೊಳ್ಳಲಿ

ರಾಜ್ಯದ ಸರ್ಕಾರಿ ವಿಶ್ವವಿದ್ಯಾಲಯಗಳು 'ಪ್ರಪಾತ'ಕ್ಕೆ ಜಾರುತ್ತಿರುವುದರ ಕುರಿತ ವಿಶೇಷ ವರದಿ (ಪ್ರ.ವಾ., ಡಿ. 10) ಓದಿ ಆಘಾತವಾಯಿತು. ಹಿಂದೆ ಎಂಬತ್ತರ ದಶಕದಲ್ಲಿ ರಾಜ್ಯ ಸರ್ಕಾರದ ಸಚಿವರೊಬ್ಬರು ಶಿಕ್ಷಣ ಇಲಾಖೆಯನ್ನು ಅನುತ್ಪಾದಕ ಖಾತೆ ಎಂದು ಕರೆಯುವ ಮೂಲಕ ಇಲಾಖೆಯ ಘನತೆಗೆ ಮಸಿ ಬಳಿಯುವ ಕೆಲಸ ಮಾಡಿದ್ದರು. ಸರ್ಕಾರಗಳು ಯಾವುದೇ ಸಂಸ್ಥೆಯನ್ನು ಆರಂಭಿಸುವಾಗ ತೋರುವ ಆಸಕ್ತಿಯನ್ನು, ಆ ಸಂಸ್ಥೆಯನ್ನು ಮಾದರಿಯಾಗಿ ರೂಪಿಸುವಲ್ಲಿ ತೋರುವುದಿಲ್ಲ. ಹಾಗಾಗಿ, ಸರ್ಕಾರಿ ಅನುದಾನದಡಿ ಪ್ರಾರಂಭಗೊಂಡ ಕೆಲವು ವಿಶ್ವವಿದ್ಯಾಲಯಗಳ ಪಾಡು ಶೋಚನೀಯವಾಗಿದೆ. ಅವು ಬಹುತೇಕ ಸಿಬ್ಬಂದಿ, ಮೂಲಸೌಕರ್ಯದ ಕೊರತೆಯನ್ನು ಎದುರಿಸುತ್ತಿರುತ್ತವೆ. ಎಷ್ಟೋ ಕಡೆ ಸ್ನಾತಕೋತ್ತರ ಕೇಂದ್ರಗಳ ಸ್ಥಿತಿಯು ಪ್ರಾಥಮಿಕ ಶಾಲೆಗಳಿಗಿಂತಲೂ ಶೋಚನೀಯವಾಗಿದೆ. ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬದಿರುವುದರಿಂದ ಶೇ 75-80 ಭಾಗದಷ್ಟು ಅತಿಥಿ ಉಪನ್ಯಾಸಕರೇ ಕಾರ್ಯನಿರ್ವಹಿಸುತ್ತಿದ್ದಾರೆ.

ಈ ಮಧ್ಯೆ, ಶಿಕ್ಷಣದ ಗುಣಮಟ್ಟ ಗಣನೀಯವಾಗಿ ಕುಸಿದಿದೆ ಎಂಬ ಬಲವಾದ ಆರೋಪ ಕೇಳಿಬರುತ್ತಿದೆ. ಹೀಗಾಗಿ, ಸರ್ಕಾರವು ಮನಸೋಇಚ್ಛೆ ಮತ್ತಷ್ಟು ವಿಶ್ವವಿದ್ಯಾಲಯಗಳನ್ನು ತೆರೆಯದೆ, ಇರುವ ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಉಪನ್ಯಾಸಕರು, ಪ್ರಾಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡಲು ಮುಂದಾಗಬೇಕು. ಅಗತ್ಯ ಮೂಲ ಸೌಕರ್ಯ ಒದಗಿಸಬೇಕು. ಆ ಮೂಲಕ ಶಿಕ್ಷಣದ ಗುಣಮಟ್ಟ ಕಾಯ್ದುಕೊಳ್ಳಲು ಪ್ರಯತ್ನಿಸಬೇಕು.

ಎಂ.ಜಿ.ರಂಗಸ್ವಾಮಿ, ಹಿರಿಯೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮಹಿಳೆಯರ ಬೆತ್ತಲೆಗೊಳಿಸುವ ಪ್ರಕರಣ ತನಿಖೆ ಕುಂಟಲೇನು ಕಾರಣ?

ಮಹಿಳೆಯರನ್ನು ಬೆತ್ತಲೆಗೊಳಿಸಿದ ಸಾವಿರಾರು ಪ್ರಕರಣಗಳು ರಾಜ್ಯದಲ್ಲಿ ನಡೆಯುತ್ತಿದ್ದರೂ ಅವು ಸದ್ದು ಮಾಡುವುದೇ ಇಲ್ಲ. ಕೆಲವೇ ಪ್ರಕರಣಗಳು ದೊಡ್ಡ ಸುದ್ದಿಯಾದರೆ, ಉಳಿದವು ಯಾರ ಗಮನಕ್ಕೂ ಬರುವುದಿಲ್ಲ. ಸುದ್ದಿಯಾದ ಪ್ರಕರಣಗಳು ವಿವಿಧ ಕಾರಣಗಳಿಂದಾಗಿ ತ್ವರಿತವಾಗಿ ಇತ್ಯರ್ಥವಾಗುತ್ತವೆ, ರಾಜಕೀಯವೂ ಆಗುತ್ತವೆ. ಆದರೆ ಸುದ್ದಿಯಾಗದೇ ಇರುವ ಸುದ್ದಿಗಳ ಕತೆಯೇ ಬೇರೆ. ಎಫ್‌ಐಆರ್ ದಾಖಲಾದರೂ, ನ್ಯಾಯಾಲಯದಲ್ಲಿ ಇತ್ಯರ್ಥವಾದರೂ ಅವು ದಾಖಲೆಗಳಲ್ಲಷ್ಟೇ ಉಳಿಯುತ್ತವೆ. ಇಂತಹ ಕೃತ್ಯಗಳೂ ಹೀನವಾದವು ಎಂಬುದರ ಬಗ್ಗೆ ಜನರಲ್ಲಿ ಜಾಗೃತಿ ಇಲ್ಲ. ಇದೇ ಕಾರಣಕ್ಕೆ, ಸಾವಿರಾರು ಕೃತ್ಯಗಳು ನಡೆಯುತ್ತಿದ್ದರೂ ಅವು ಜನರ ಅರಿವಿಗೇ ಬರುವುದಿಲ್ಲ

ಪ್ರಜಾವಾಣಿ ವಾರ್ತೆ

ಬೆಳಗಾವಿಯಲ್ಲಿ ಮಹಿಳೆಯೊಬ್ಬರನ್ನು ಬೆತ್ತಲೆಗೊಳಿಸಿ ಥಳಿಸಿದ ಪ್ರಕರಣಕ್ಕೆ ಸರ್ಕಾರವು ತಕ್ಷಣದಲ್ಲಿಯೇ ಸ್ಪಂದಿಸಿ ಆರೋಪಿಗಳಲ್ಲಿ ಕೆಲವರನ್ನು ಬಂಧಿಸಿತು. ಸರ್ಕಾರವೇ ಅತಿವೇಗವಾಗಿ ಸ್ಪಂದಿಸಿದ ಕಾರಣಕ್ಕೆ ಜನಸಾಮಾನ್ಯರಿಗೆ ಆಕ್ರೋಶ ವ್ಯಕ್ತಪಡಿಸಲು ಅವಕಾಶವೇ ಆಗಲಿಲ್ಲ ಎಂದು ಕಾಣುತ್ತದೆ... ರಾಜ್ಯದಲ್ಲಿ ದಾಖಲಾದ ಇಂತಹ ಸಾವಿರಾರು ಪ್ರಕರಣಗಳ ಬಗ್ಗೆ ಪ್ರಶ್ನಿಸಿದಾಗ ಸಾಮಾಜಿಕ ಕಾರ್ಯಕರ್ತೆ, ಹೊಸಪೇಟೆಯ ನಸ್ರೀನ್ ಮಿಠಾಯಿ ಅವರು ವ್ಯಕ್ತಪಡಿಸಿದ ಅಭಿಪ್ರಾಯವಿದು.

ಮಹಿಳೆಯ ಮೇಲೆ ನಡೆಸುವ ಹಿಂಸೆಯು ಸಾಮಾಜಿಕ ಪಿಡುಗು. ಅದು ಅತ್ಯಾಚಾರ ಅಥವಾ ಬೆತ್ತಲೆಗೊಳಿಸುವುದು, ದೌರ್ಜನ್ಯ ಎಸಗುವುದು ಇತ್ಯಾದಿ– ಇವು ಹಿಂಸೆಯ ಬೇರೆ ಬೇರೆ ಸ್ವರೂಪ. ಮಹಿಳೆಯನ್ನು ಸಾರ್ವಜನಿಕವಾಗಿ ಬೆತ್ತಲೆಗೊಳಿಸುವ ಪ್ರಕರಣಗಳ ಸಂಖ್ಯೆಯ ವಿಭಾಗದಲ್ಲಿ ಇತರೆ ರಾಜ್ಯಗಳಿಗೆ ಹೋಲಿಸಿದರೆ, ಕರ್ನಾಟಕವು ಮೂರನೇ ಸ್ಥಾನದಲ್ಲಿದೆ. ಇಂಥ ಪ್ರಕರಣಗಳು ಇಷ್ಟೊಂದು ಪ್ರಮಾಣದಲ್ಲಿ ನಡೆಯುತ್ತಿದೆ ಮತ್ತು ಈ ಪ್ರಕರಣಗಳಲ್ಲಿ ಎಫ್‌ಐಆರ್ ಕೂಡ ದಾಖಲಾಗುತ್ತಿದೆ. ಆದರೆ, ಹೀಗೆ ದಾಖಲಾದ ಪ್ರಕರಣಗಳ ಸ್ಥಿತಿಗತಿ ಏನು ಎಂದು ಮಾತ್ರ ತಿಳಿಯುತ್ತಿಲ್ಲ.

‘ಮಹಿಳೆಯ ಮೇಲೆ ಹಿಂಸೆ ಮಾಡುವುದು ಸಹಜ ಎಂಬ ಭಾವನೆ ಇತ್ತೀಚಿನ ವರ್ಷಗಳಲ್ಲಿ ಜನಮಾನಸದಲ್ಲಿ ಬೇರೂರಿದೆ. ಮಹಿಳೆಯೊಬ್ಬಳನ್ನು ಬೆತ್ತಲೆ ಮಾಡುವುದು ಎಂದರೆ, ಮಹಿಳೆಯೊಬ್ಬಳಿಗೆ ಮಾಡಿದ ಅತಿ ದೊಡ್ಡ ಅವಮಾನ ಎಂದು ಕೃತ್ಯ ಎಸಗುವವರಿಗೆ ಗೊತ್ತಿದೆ. ಕೃತ್ಯ ಎಸಗುವುದು ತಪ್ಪು ಎಂದು ತಿಳಿದಿದ್ದರೂ ಮಹಿಳೆಯರಿಗೆ ಅವಮಾನ ಮಾಡಬೇಕು ಎನ್ನುವ ದೃಷ್ಟಿಯಿಂದಲೇ ಇಂಥ ಕೃತ್ಯಗಳನ್ನು ಪುರುಷರು ಎಸಗುತ್ತಿದ್ದಾರೆ’ ಎನ್ನುತ್ತಾರೆ ನಸ್ರೀನ್.

ವ್ಯಾವಹಾರಿಕ ಕಾರಣಕ್ಕಾಗಿ, ಹೆಂಡತಿ ಮೋಸ ಮಾಡಿದಳು ಎಂದು, ಮಗನ ಮೇಲಿನ ದ್ವೇಷಕ್ಕಾಗಿ ತಾಯಿಯ ಮೇಲೆ ಇಂತಹ ಕೃತ್ಯ ಎಸಗುವುದು... ಮಹಿಳೆಯರನ್ನು ಬೆತ್ತಲೆಗೊಳಿಸಿದ ಕೃತ್ಯಗಳ ಹಿಂದಿನ ಸಾಮಾನ್ಯ ಕಾರಣಗಳಿವು. 2022ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯಲ್ಲಿ ಇಂಥದ್ದೊಂದು ಪ್ರಕರಣ ನಡೆದಿತ್ತು, 2021ರಲ್ಲಿ ಬೀದರ್‌ನ ಹುಮನಾಬಾದ್‌ನಲ್ಲಿ, 2020ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರದಲ್ಲಿ, 2019ರಲ್ಲಿ ಬೆಂಗಳೂರಿನ ಕೆಂಗೇರಿಯಲ್ಲಿ ಇಂಥ ಪ್ರಕರಣ ನಡೆದಿತ್ತು. ಕೆಂಗೇರಿಯ ಪ್ರಕರಣದಲ್ಲಿ, ಪ್ರೇಮಿಗಳನ್ನು ಸುಲಿಗೆ ಮಾಡಲು ಬಂದಿದ್ದ ದುಷ್ಕರ್ಮಿಗಳು ಕೊನೆಗೆ ಯುವತಿಯನ್ನು ಬೆತ್ತಲೆಗೊಳಿಸಿ ವಿಡಿಯೊ ಚಿತ್ರೀಕರಣ ಮಾಡಿಕೊಂಡಿದ್ದರು.

‘ಮಹಿಳೆಯರನ್ನು ಬೆತ್ತಲೆಗೊಳಿಸುವ ಕೃತ್ಯವನ್ನು ಸಾಮಾನ್ಯವಾಗಿ ಮಹಿಳೆಯ ಕುಟುಂಬಸ್ಥರೇ ನಡೆಸುತ್ತಾರೆ. ಇಲ್ಲವೇ ಸ್ನೇಹಿತರು, ಪರಿಚಿತರೇ ನಡೆಸುತ್ತಾರೆ. ಇದೇ ಕಾರಣಕ್ಕಾಗಿ ಇಂಥ ಪ್ರಕರಣಗಳು ಹೆಚ್ಚು ವರದಿಯಾಗುವುದೂ ಇಲ್ಲ, ದಾಖಲಾಗುವುದೂ ಇಲ್ಲ. ಪ್ರಕರಣಗಳು ದಾಖಲಾದರೂ ಅವು ನ್ಯಾಯಾಲಯ ಮುಟ್ಟುವಷ್ಟರಲ್ಲಿ ರಾಜಿ–ಸಂಧಾನ ನಡೆದುಹೋಗಿರುತ್ತದೆ’ ಎನ್ನುವುದು ದೊಡ್ಡಬಳ್ಳಾಪುರದ ‘ಯುವ ಸಂಚಲನ’ದ ಚಿದಾನಂದ್ ಅವರ ಅಭಿಪ್ರಾಯ. ಇಂತಹ ಕಾರಣಗಳಿಂದಲೇ ನ್ಯಾಯಾಲಯಗಳಲ್ಲಿ ಈ ಪ್ರಕರಣಗಳ ವಿಚಾರಣೆ ಮುಂದುವರಿಯುವುದೇ ಇಲ್ಲ ಎಂದೂ ಅವರು ಹೇಳುತ್ತಾರೆ.

ಇಂಥ ಪ್ರಕರಣಗಳು ದೊಡ್ಡಮಟ್ಟದಲ್ಲಿ ಸುದ್ದಿಯಾಗುವುದು ಕೂಡ ವಿರಳ ಎನ್ನಬಹುದು. ಜನಸಾಮಾನ್ಯರು ಕೂಡ ಈ ಬಗ್ಗೆ ಆಕ್ರೋಶ ವ್ಯಕ್ತಪಡಿಸುವುದಿಲ್ಲ. 2019–2022ರ ಮಧ್ಯೆ ರಾಜ್ಯದ ಪ್ರಮುಖ ಪತ್ರಿಕೆಗಳಲ್ಲಿ ವರದಿಯಾದ ಇಂತಹ ಪ್ರಕರಣಗಳ ಸಂಖ್ಯೆ 10ರ ಗಡಿ ಮುಟ್ಟುವುದಿಲ್ಲ. ಆದರೆ ಈ ಅವಧಿಯಲ್ಲಿ ರಾಜ್ಯದಾದ್ಯಂತ ದಾಖಲಾದ ಇಂತಹ ಪ್ರಕರಣಗಳ ಸಂಖ್ಯೆ 5,000ದ ಆಸುಪಾಸಿನಲ್ಲಿದೆ. ಮಹಿಳೆಯನ್ನು ಬೆತ್ತಲೆ ಮಾಡುವುದೂ ಅತ್ಯಂತ ಹೀನ ಕೃತ್ಯ ಎಂಬುದರ ಬಗ್ಗೆ ಅರಿವು ಇಲ್ಲದೇ ಇರುವುದೇ ಇದಕ್ಕೆ ಕಾರಣ ಎಂಬುದು ಸಾಮಾಜಿಕ ಕಾರ್ಯಕರ್ತರ ಅಭಿಪ್ರಾಯ.

ಇಂತಹ ಕೆಲವು ಕೃತ್ಯಗಳಷ್ಟೇ ದೊಡ್ಡಮಟ್ಟದಲ್ಲಿ ಸುದ್ದಿಯಾಗುತ್ತವೆ. ಅದು ಮಣಿಪುರದ ಕೃತ್ಯವಿರಬಹುದು ಅಥವಾ ಬೆಳಗಾವಿಯ ಕೃತ್ಯವಿರಬಹುದು. ಇಂತಹ ಕೃತ್ಯಗಳಲ್ಲಿ ಸಂತ್ರಸ್ತೆಯರ ಗುರುತು ಪತ್ತೆಯಾಗುವಂತಹ ವಿಡಿಯೊ, ಚಿತ್ರ ಮತ್ತು ಮಾಹಿತಿಗಳೂ ದೊಡ್ಡಮಟ್ಟದಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತವೆ. ಗೂಗಲ್‌ನಂತಹ ಹುಡುಕುತಾಣದಲ್ಲಿ ಈ ಪ್ರಕರಣಗಳ ಕುರಿತು ಮಾಹಿತಿಗಾಗಿ ಅಕ್ಷರಗಳ ಟೈಪಿಸುತ್ತಿದ್ದರೆ, ‘ಮಣಿಪುರ ರೇಪ್ ಅನ್‌ಎಡಿಟೆಡ್ ವಿಡಿಯೊ’ ಎಂದು ಗೂಗಲ್ ಸಜೆಸ್ಟ್ ಮಾಡುತ್ತದೆ. ಅಂತಹ ವಿಡಿಯೊಗಳನ್ನು ಲಕ್ಷಾಂತರ ಸಂಖ್ಯೆಯಲ್ಲಿ ಜನರು ಹುಡುಕಿದ್ದರಷ್ಟೇ ಆಟೊಫಿಲ್‌ನಲ್ಲಿ ಹಾಗೆ ಬರುತ್ತದೆ. ಈಗ ಬೆಳಗಾವಿಯ ಪ್ರಕರಣದಲ್ಲೂ ಹೀಗೇ ಆಗಿದೆ. ಆ ಪ್ರಕರಣವು ದೊಡ್ಡಮಟ್ಟದಲ್ಲಿ ಸುದ್ದಿಯಾದ ಬೆನ್ನಲ್ಲೇ ಸಾವಿರಾರು ಮಂದಿ, ಕೃತ್ಯದ ಅನ್‌ಎಡಿಟೆಡ್ ವಿಡಿಯೊಗಾಗಿ ಗೂಗಲ್‌ನಲ್ಲಿ ಹುಡುಕಿದ್ದಾರೆ. ಅತ್ಯಾಚಾರವಷ್ಟೇ ಹೀನ ಕೃತ್ಯ, ಬೆತ್ತಲೆ ಮಾಡಿ ಹಲ್ಲೆ ಮಾಡುವುದು ಹೀನವಲ್ಲ ಎಂಬ ಮನಃಸ್ಥಿತಿ ಇರುವುದರಿಂದಲೇ ಈ ರೀತಿ ಆಗುತ್ತಿದೆ. ಈ ಬಗ್ಗೆ ಜನ ಸಾಮಾನ್ಯರಲ್ಲಿ ಅರಿವು ಮೂಡಿಸುವ ಅಗತ್ಯವಿದೆ ಎಂಬುದು ಸಾಮಾಜಿಕ ಕಾರ್ಯಕರ್ತರ ಅನಿಸಿಕೆ.

ಅತಿಹೆಚ್ಚು ಪ್ರಕರಣಗಳು ದಾಖಲಾದ ಮೊದಲ ನಾಲ್ಕು ರಾಜ್ಯಗಳು



- ಇಂತಹ ಅತಿಹೆಚ್ಚು ಪ್ರಕರಣಗಳು ದಾಖಲಾಗಿರುವುದು ಒಡಿಶಾದಲ್ಲಿ
- ಎರಡನೇ ಸ್ಥಾನದಲ್ಲಿ ಉತ್ತರ ಪ್ರದೇಶವಿದೆ
- ಅತಿಹೆಚ್ಚು ಪ್ರಕರಣ ದಾಖಲಾಗಿರುವ ಮೂರನೇ ರಾಜ್ಯದ ಸ್ಥಾನವು ಅಸ್ಸಾಂ ಮತ್ತು ಕರ್ನಾಟಕದ ಮಧ್ಯೆ ಅದಲು ಬದಲಾಗುತ್ತಿದೆ
- ದೇಶದಲ್ಲಿ ದಾಖಲಾಗುತ್ತಿರುವ ಒಟ್ಟು ಪ್ರಕರಣಗಳ ಮೂರನೇ ಎರಡರಷ್ಟು ಪ್ರಕರಣಗಳು ಈ ನಾಲ್ಕು ರಾಜ್ಯಗಳಲ್ಲೇ ದಾಖಲಾಗುತ್ತಿವೆ

ಐಪಿಸಿ ಸೆಕ್ಷನ್ 354ಬಿ: ಏನು, ಎತ್ತ...

ಮಹಿಳೆಯನ್ನು ವಿವಸ್ತ್ರಗೊಳಿಸುವ ಉದ್ದೇಶದಿಂದ ಅವಳ ಮೇಲೆ ಹಲ್ಲೆ ನಡೆಸುವುದು ಅಥವಾ ಬಲ ಪ್ರಯೋಗಿಸುವುದು ಶಿಕ್ಷಾರ್ಹ ಅಪರಾಧ ಎಂದು ಭಾರತೀಯ ದಂಡ ಸಂಹಿತೆಯ 354ಬಿ ಸೆಕ್ಷನ್ ಹೇಳುತ್ತದೆ. ಮಹಿಳೆಯ ಗೌರವಕ್ಕೆ ಧಕ್ಕೆ ತರುವ ಉದ್ದೇಶದ ಎಲ್ಲಾ ಕೃತ್ಯಗಳನ್ನು 354 ಸೆಕ್ಷನ್ ಮತ್ತು ಅದರ ಉಪಸೆಕ್ಷನ್‌ಗಳಲ್ಲಿ ವಿವರಿಸಲಾಗಿದೆ. 354ಬಿ ಅಂತಹ ಒಂದು ಸೆಕ್ಷನ್. ಬಲಪ್ರಯೋಗದ ಮೂಲಕ ಮಹಿಳೆಯನ್ನು ವಿವಸ್ತ್ರಗೊಳಿಸುವುದು ಕೃತ್ಯದ ಸ್ವರೂಪವಾದರೂ, ಆಕೆಯ ಗೌರವಕ್ಕೆ ಧಕ್ಕೆ ತರುವುದೇ ಅಂತಹ ಕೃತ್ಯದ ಉದ್ದೇಶ ಎಂದು ಪರಿಗಣಿಸಲಾಗುತ್ತದೆ. ರಾಜ್ಯ ಪೊಲೀಸ್ ಇಲಾಖೆಯ ‘ಅಪರಾಧ ಪರಿಶೀಲನೆ’ ಮಾಸಿಕ ವರದಿಯಲ್ಲೂ 354ಬಿ ಅನ್ನು ‘ಮಹಿಳೆಯ ಗೌರವಕ್ಕೆ ಧಕ್ಕೆ ತರುವ ಕೃತ್ಯ’ಗಳ ಅಡಿಯಲ್ಲೇ ಸೇರಿಸಲಾಗಿದೆ.

ಮಹಿಳೆಯನ್ನು ವಿವಸ್ತ್ರಗೊಳಿಸುವ ಯತ್ನ, ಆಕೆಯ ಬಟ್ಟೆಯನ್ನು ಎಳೆದಾಡುವಂತಹ ಕೃತ್ಯಗಳೂ ಇದೇ ವ್ಯಾಪ್ತಿಗೆ ಬರುತ್ತವೆ. ಇವೆಲ್ಲವೂ ಶಿಕ್ಷಾರ್ಹ ಅಪರಾಧಗಳೇ ಆಗಿವೆ. ಇಂತಹ ಕೃತ್ಯಕ್ಕೆ ಮೂರು ವರ್ಷಗಳಿಂದ ಏಳು ವರ್ಷಗಳವರೆಗೆ ಜೈಲುಶಿಕ್ಷೆ ವಿಧಿಸಲು ಅವಕಾಶವಿದೆ. ಜತೆಗೆ ದಂಡ ವಿಧಿಸಲೂ ಅವಕಾಶವಿದೆ.

ಪ್ರತಿ ವರ್ಷ ದೇಶದಾದ್ಯಂತ ಇಂತಹ ಸರಿಸುಮಾರು 10 ಸಾವಿರ ಪ್ರಕರಣಗಳು ದಾಖಲಾಗುತ್ತಿವೆ. ಕೆಲವು ವರ್ಷಗಳಲ್ಲಿ ಇಂತಹ ಪ್ರಕರಣಗಳ ಸಂಖ್ಯೆ 10 ಸಾವಿರವನ್ನೂ ದಾಟಿದೆ. ಇಂತಹ ಕೃತ್ಯಗಳು ಸಾವಿರಾರು ಸಂಖ್ಯೆಯಲ್ಲಿ ನಡೆಯುತ್ತಿದ್ದರೂ, ಕೆಲವು ಪ್ರಕರಣಗಳಷ್ಟೇ ದೊಡ್ಡಮಟ್ಟದಲ್ಲಿ ಸುದ್ದಿಯಾಗುತ್ತಿವೆ. ಮಹಿಳೆಯನ್ನು ಸಂಪೂರ್ಣವಾಗಿ ವಿವಸ್ತ್ರಗೊಳಿಸಿ ಮೆರವಣಿಗೆ ಮಾಡಿ, ಥಳಿಸಿದಂತಹ ಪ್ರಕರಣಗಳಷ್ಟೇ ಸುದ್ದಿಯಾಗುತ್ತಿವೆ. ಉಳಿದ ಕೃತ್ಯಗಳೂ ಅಷ್ಟೇ ಹೀನವಾಗಿದ್ದರೂ ಶಿಕ್ಷಾರ್ಹ ಅಪರಾಧವಾಗಿದ್ದರೂ ಅವು ಪೊಲೀಸ್ ದಾಖಲೆಗಳಲ್ಲಿ ಮಾತ್ರ ಉಳಿಯುತ್ತಿವೆ.

ಎನ್‌ಸಿಆರ್‌ಬಿ ದಾಖಲೆಗಳಲ್ಲೂ 354ಬಿ ಕೃತ್ಯಗಳ ಬಗ್ಗೆ ವಿಸ್ತೃತ ದತ್ತಾಂಶ ಲಭ್ಯವಿಲ್ಲ. ಇಂತಹ ಪ್ರಕರಣಗಳ ಸ್ಥಿತಿಗತಿ ಏನು? ಎಷ್ಟು ಪ್ರಕರಣಗಳು ಸುಳ್ಳು ಎಂದು ವಜಾ ಆಗಿವೆ? ಎಷ್ಟೆಲ್ಲಾ ಪ್ರಕರಣಗಳಲ್ಲಿ ಆರೋಪಪಟ್ಟಿ ಸಲ್ಲಿಕೆಯಾಗಿವೆ ಎಂಬುದಕ್ಕೆ ಸಂಬಂಧಿಸಿದ ರಾಜ್ಯವಾರು ವಿವರಗಳು ಇಲ್ಲ. ನ್ಯಾಯಾಲಯಗಳು ವಿಲೇವಾರಿ ಮಾಡಿದ ಇಂತಹ ಪ್ರಕರಣಗಳ ಕುರಿತೂ ರಾಜ್ಯವಾರು ವಿಸ್ತೃತ ವರದಿ ಲಭ್ಯವಿಲ್ಲ. ಹೀಗಾಗಿ ಈ ಹೊತ್ತಿಗೆ ಇವುಗಳಲ್ಲಿ ವಿಲೇವಾರಿಯಾದ ಪ್ರಕರಣಗಳೆಷ್ಟು? ಎಷ್ಟೆಲ್ಲಾ ಸುಳ್ಳು ಪ್ರಕರಣಗಳು, ಎಷ್ಟೆಲ್ಲಾ ಪ್ರಕರಣಗಳಲ್ಲಿ ಶಿಕ್ಷೆಯಾಯಿತು ಎಂಬ ಮಾಹಿತಿ ಲಭ್ಯವಿಲ್ಲ.

ಆಧಾರ: ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊವಿನ ‘ಭಾರತದಲ್ಲಿ ಅಪರಾಧ’ ವರದಿಗಳು

ಬೆಳ್ಳಿತೆರೆಯಲ್ಲೂ ಚಂದನ್ ಶೆಟ್ಟಿ-ನಿವೇದಿತಾ ಜೋಡಿ!

ರಿಯಲ್ ಲೈಫ್‌ನಲ್ಲಿ ಈಗಾಗಲೇ ಜೋಡಿಯಾಗಿರುವ ಚಂದನ್ ಶೆಟ್ಟಿ ಹಾಗೂ ನಿವೇದಿತಾ ಗೌಡ ದಂಪತಿ ಇದೀಗ ರೀಲ್‌ನಲ್ಲಿಯೂ ಜೊತೆಯಾಗುತ್ತಿದ್ದಾರೆ. ಸೈಕೋಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಚಿತ್ರಕ್ಕೆ ನಿರ್ದೇಶಕ ನಂದಕಿಶೋರ್ ಜೊತೆ ಹಲವು ಸಿನಿಮಾಗಳಲ್ಲಿ ಕೆಲಸ ಮಾಡಿರುವ ಪುನೀತ್ ಶ್ರೀನಿವಾಸ್ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ.

‘ಹನ್ನೆರಡು ವರ್ಷಗಳಿಂದ ಚಿತ್ರರಂಗದಲ್ಲಿದ್ದೇನೆ. ‘ಅಧ್ಯಕ್ಷ’ದಿಂದ ಹಿಡಿದು ಅನೇಕ ಸಿನಿಮಾಗಳಿಗೆ ಸಹಾಯಕ, ಸಹ ನಿರ್ದೇಶಕನಾಗಿ ಕೆಲಸ ಮಾಡಿರುವೆ. ಇದೀಗ ನನ್ನದೇ ಸ್ವಂತ ಕಥೆ, ಚಿತ್ರಕಥೆಯೊಂದಿಗೆ ನಿರ್ದೇಶನಕ್ಕೆ ಇಳಿದಿರುವೆ. ಮುಂದಿನ ತಿಂಗಳಿನಿಂದ ಚಿತ್ರೀಕರಣ ಪ್ರಾರಂಭವಾಗಲಿದ್ದು, ಸದ್ಯದಲ್ಲೇ ಚಿತ್ರದ ಶೀರ್ಷಿಕೆ ಹಾಗೂ ಮಹೂರ್ತದ ದಿನಾಂಕವನ್ನು ಪ್ರಕಟಿಸಲಾಗುವುದು’ ಎಂದಿದ್ದಾರೆ ನಿರ್ದೇಶಕ ಪುನೀತ್.

ಚೌಡೇಶ್ವರಿ ಸಿನಿ ಕ್ರಿಯೇಶನ್ಸ್ ಮೂಲಕ ಎಲ್.ಮೋಹನ್ ಕುಮಾರ್ ಅವರು ಚಿತ್ರಕ್ಕೆ ಬಂಡವಾಳ ಹೂಡುತ್ತಿದ್ದಾರೆ. ಮೊದಲ ಹಂತದಲ್ಲಿ ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ. ‘ಹಲವು ಹೆಸರಾಂತ ನಟರು ಈ ಚಿತ್ರದಲ್ಲಿ ನಟಿಸಲಿದ್ದಾರೆ. ದೊಡ್ಡ ಬಜೆಟ್‌ನ ಚಿತ್ರವಿದು’ ಎಂದರು ನಿರ್ಮಾಪಕರು.

ಎಂ.ಎಸ್.ತ್ಯಾಗರಾಜ್ ಅವರ ಸಂಗೀತ ಸಂಯೋಜನೆ, ಕರುಣಾಕರ್ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ.

ಚಂದನ್ ಶೆಟ್ಟಿ

ಒಂಟಿ ಬಂಟಿಯ ಲವ್‌ಸ್ಟೋರಿ

ಕಿರುಚಿತ್ರಗಳನ್ನು ನಿರ್ಮಾಣ ಮಾಡುತ್ತಿದ್ದ ಯತೀಶ್ ಪನ್ನಸಮುದ್ರ ಎಂಬುವವರು ಸಿನಿಮಾವೊಂದರ ನಿರ್ದೇಶನಕ್ಕೆ ಕೈಹಾಕಿದ್ದಾರೆ. ಅದೇ ‘ಒಂಟಿ ಬಂಟಿ ಲವ್‌ಸ್ಟೋರಿ’. ನಿರ್ದೇಶನದ ಜೊತೆಗೆ ನಾಯಕನಾಗಿಯೂ ಅವರು ನಟಿಸಿದ್ದಾರೆ.

‘ಸಿನಿಮಾದಲ್ಲಿ ನಟನೆಯ ಕನಸನ್ನು ಕಾಲೇಜು ದಿನಗಳಿಂದ ಹೊಂದಿದ್ದೆ. ಚಿತ್ರ ಅಂದುಕೊಂಡಂತೆ ಬಂದಿದೆ. ಪ್ರೇಕ್ಷಕರನ್ನು ಸೆಳೆಯುವ ಎಲ್ಲ ಅಂಶಗಳೂ ಸಿನಿಮಾದಲ್ಲಿದೆ. ಯುವ ಪ್ರೇಕ್ಷಕರನ್ನು ದೃಷ್ಟಿಯಲ್ಲಿಟ್ಟುಕೊಂಡು ಚಿತ್ರ ನಿರ್ಮಿಸಿದ್ದೇನೆ’ ಎನ್ನುತ್ತಾರೆ ಯತೀಶ್.

ಹಾಸನ ಜಿಲ್ಲೆ ಅರಸೀಕೆರೆಯ ಯತೀಶ್, ಎಂಜಿನಿಯರ್. ಸಾಫ್ಟ್‌ವೇರ್ ಕಂಪನಿಯಲ್ಲಿ ದುಡಿದು ಇದೀಗ ಬೆಳ್ಳಿತೆರೆಗೆ ಬರುತ್ತಿದ್ದಾರೆ. ಜೀವನದಲ್ಲಿ ಯಾವುದು ಮುಖ್ಯ ಎಂದು ತಿಳಿಯದೆ ಪರದಾಡುವ ಯುವಜನರ ಮಾನಸಿಕ ತೊಳಲಾಟವನ್ನೇ ಕಥೆಯಾಗಿಟ್ಟುಕೊಂಡು ಯತೀಶ್ ಈ ಕಥೆ ಹೆಣೆದಿದ್ದಾರೆ. ಓದೋ ಕಾಲದಲ್ಲಿ ಲವ್, ಲವ್ ಮಾಡೋ ಕಾಲದಲ್ಲಿ ಉದ್ಯೋಗ, ಉದ್ಯೋಗ ಮಾಡುವಾಗ ಹಣ ಮುಖ್ಯವೋ, ಹೆಸರು ಮುಖ್ಯವೋ ಎಂಬ ತೊಳಲಾಟ– ಇದೇ ಕಥಾಹಂದರ. ಇದು ರೊಮ್ಯಾಂಟಿಕ್ ಕಾಮಿಡಿ ಜಾನರ್‌ನ ಸಿನಿಮಾ ಎಂದಿದೆ ಚಿತ್ರತಂಡ. ಚಿತ್ರದಲ್ಲಿ ಶ್ವೇತಾ ಭಟ್ ಮತ್ತು ಶ್ರುತಿ ಚಂದ್ರಶೇಖರ್ ನಾಯಕಿಯಾಗಿದ್ದಾರೆ. ಚಿತ್ರದಲ್ಲಿ ಎರಡು ಹಾಡುಗಳನ್ನು ಪ್ರಮೋದ್ ಮರವಂತೆ ಬರೆದಿದ್ದಾರೆ.

ಶೀಘ್ರದಲ್ಲೇ ಸಿನಿಮಾ ಬಿಡುಗಡೆಯಾಗಲಿದೆ ಎನ್ನುವುದು ತಂಡದ ಮಾಹಿತಿ.

ಯತೀಶ್ ಹಾಗೂ ಶ್ರುತಿ ಚಂದ್ರಶೇಖರ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

‘ಪ್ರಜಾವಾಣಿ’ ಸೂಕ್ಷ್ಮತೆ ಮೆರೆದಿದೆ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಗಾವಿ ಜಿಲ್ಲೆಯ ಹೊಸ ವಂಟಮೂರಿ ಗ್ರಾಮದ ಮಹಿಳೆಯನ್ನು ಬೆತ್ತಲೆಗೊಳಿಸಿ, ಮೆರವಣಿಗೆ ಮಾಡಿ ಥಳಿಸಿರುವ ಘಟನೆ ಬಗ್ಗೆ ಆಘಾತ ವ್ಯಕ್ತಪಡಿಸಿರುವ ಹೈಕೋರ್ಟ್, ಘಟನೆಯ ವರದಿಗಾರಿಕೆಗೆ ಸಂಬಂಧಿಸಿದಂತೆ ಮಾಧ್ಯಮಗಳ ವಿರುದ್ಧ ತೀವ್ರ ಅಸಮಾಧಾನ ದಾಖಲಿಸಿದೆ. ಈ ಸಂಬಂಧ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡು ಸೂಕ್ತ ಕ್ರಮ ಕೈಗೊಳ್ಳುವಂತೆ ರಿಜಿಸ್ಟ್ರಾರ್ ಜನರಲ್ ಅವರಿಗೆ ಆದೇಶಿಸಿದೆ.

ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಮತ್ತು ನ್ಯಾಯಮೂರ್ತಿ ಎಂ.ಜಿ.ಎಸ್.ಕಮಾಲ್ ಅವರಿದ್ದ ವಿಭಾಗೀಯ ನ್ಯಾಯಪೀಠವು ಮಂಗಳವಾರ ಬೆಳಗ್ಗೆ ಕಲಾಪ ಆರಂಭವಾಗುತ್ತಿದ್ದಂತೆಯೇ ಈ ಪ್ರಕರಣವನ್ನು ಮುಕ್ತ ನ್ಯಾಯಾಲಯದಲ್ಲಿ ಪ್ರಸ್ತಾಪಿಸಿತು.

‘ಒಂದೆಡೆ, ದೇಶವು 76ನೇ ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಿಸಿಕೊಳ್ಳುತ್ತಿದ್ದರೆ ಮತ್ತೊಂದೆಡೆ ಇಂತಹ ಘಟನೆ ನಡೆದಿರುವುದು ನಮ್ಮೆಲ್ಲರ ಅಂತಃಕರಣವನ್ನು ಕಲಕಿ, ತಲೆತಗ್ಗಿಸುವಂತೆ ಮಾಡಿದೆ. ಇದೊಂದು ಹೃದಯ ಮಿಡಿಯುವ ಆಘಾತಕಾರಿ ಘಟನೆ‘ ಎಂದು ದಿಗ್ಭ್ರಮೆ ವ್ಯಕ್ತಪಡಿಸಿದೆ.

ಸಂತ್ರಸ್ತೆಯನ್ನು ಸಚಿವೆ ಲಕ್ಷ್ಮಿ ಹೆಬ್ಬಾಳಕರ ಸಂತೈಸುತ್ತಿರುವ ಚಿತ್ರವು ಮಂಗಳವಾರದ (ಡಿ.12) ದಿನಪತ್ರಿಕೆಗಳಲ್ಲಿ ಪ್ರಕಟವಾಗಿರುವುದನ್ನು ಉಲ್ಲೇಖಿಸಿದ ನ್ಯಾಯಪೀಠ, ‘ಈ ವಿಷಯದಲ್ಲಿ ‘ಪ್ರಜಾವಾಣಿ‘ಯಂತಹ ದಿನಪತ್ರಿಕೆ ತನ್ನ ಸೂಕ್ಷ್ಮತೆ ಮೆರೆದಿದೆ. ಆದರೆ, ಇನ್ನುಳಿದಂತೆ ಹಲವು ಮಾಧ್ಯಮ ಅದರಲ್ಲೂ ಎಲೆಕ್ಟ್ರಾನಿಕ್ ಮಾಧ್ಯಮಗಳು ಅತ್ಯಂತ ಬೇಜವಾಬ್ದಾರಿ ಮತ್ತು ಅಸೂಕ್ಷ್ಮತೆಯಿಂದ ನಡೆದುಕೊಂಡಿವೆ‘ ಎಂದು ಚಾಟಿ ಬೀಸಿದೆ.

‘ಸಂತ್ರಸ್ತೆಯ ವೈಯಕ್ತಿಕ ಘನತೆಯನ್ನು ಕಾಪಾಡಬೇಕಿದೆ’ ಎಂದ ನ್ಯಾಯಪೀಠ, ‘ಇನ್ನು ಮುಂದೆ ರಾಷ್ಟ್ರೀಯ, ರಾಜ್ಯ ಮತ್ತು ಯಾವುದೇ ಸ್ತರದ ಮಾಧ್ಯಮಗಳು ಸಂತ್ರಸ್ತೆಯ ಸಂದರ್ಶನ ಅಥವಾ ವಿಡಿಯೊಗ್ರಾಫ್ ಪ್ರಸಾರ ಮಾಡಬಾರದು‘ ಎಂದು ನಿರ್ದೇಶಿಸಿತು. ಈಗಾಗಲೇ ಮಾಡಿದ್ದರೆ ಅವುಗಳನ್ನು ತೆಗೆದುಹಾಕುವಂತೆಯೂ ತಾಕೀತು ಮಾಡಿತು.

‘ಸುದ್ದಿ ಪ್ರಸಾರ ಮಾಡುವುದಕ್ಕೆ ಮಾಧ್ಯಮಗಳ ಮೇಲೆ ನಿಷೇಧ ಹೇರುತ್ತಿಲ್ಲ‘ ಎಂದ ನ್ಯಾಯಪೀಠ, ‘ನ್ಯಾಯಾಲಯ, ಮಾಧ್ಯಮದ ಸ್ವಾತಂತ್ರ್ಯವನ್ನು ಯಾವತ್ತೂ ಮನ್ನಿಸುತ್ತದೆ‘ ಎಂದು ಸ್ಪಷ್ಟಪಡಿಸಿತು. ಪ್ರಕರಣಕ್ಕೆ ಸಂಬಂಧಿಸಿದಂತೆ ಇದೇ 14ರಂದು ವಸ್ತುಸ್ಥಿತಿ ವರದಿ ಸಲ್ಲಿಸುವಂತೆ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರಿಗೆ ನಿರ್ದೇಶಿಸಿತು.

ಗುಂಡಣ್ಣ

ಸಿಟ್ಟಿನ ಕೈಗೆ ಸಿಕ್ಕಿಬಿದ್ದ ಮನಸ್ಸು

ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

‘**ತನಗೆ** ಮುನಿವರಿಗೆ ತಾ ಮುನಿಯಲೇಕಯ್ಯಾ, ತನಗಾದ ಆಗೇನು? ಅವರಿಗಾದ ಚೇಗೇನು? ತನುವಿನ ಕೋಪ ತನ್ನ ಹಿರಿತನದ ಕೇಡು, ಮನದ ಕೋಪ ತನ್ನ ಅರಿವಿನ ಕೇಡು. ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ, ನೆರೆಮನೆಯ ಸುಡದು ಕೂಡಲಸಂಗಮದೇವಾ’ ಎಂದು ಬಸವಣ್ಣನವರು ಕೋಪದ ಸ್ವರೂಪದ ಬಗ್ಗೆ ಹೇಳಿದ್ದಾರೆ.

ನನ್ನ ಕಂಡು ಸಿಟ್ಟಾಗುವವರ ಮೇಲೆ ತಿಳಿವಳಿಕೆ ಇರುವ ನಾನೇಕೆ ಕನಲಬೇಕು. ಅದರಿಂದ ನನಗಾಗುವ ಒಳಿತೂ ಇಲ್ಲ. ನಾ ಮುನಿದವರಿಗೆ ಆಗುವ ತೊಂದರೆಯೂ ಇಲ್ಲ. ದೇಹದ ಮೂಲಕ ವ್ಯಕ್ತವಾಗುವ ಕೋಪವು ಸಮಾಜದಲ್ಲಿ ನನಗಿರುವ ಮಹತ್ವ, ಗೌರವ, ದೊಡ್ಡತನಗಳನ್ನು ನಾಶ ಮಾಡುತ್ತದೆ. ಯಾರಿಗೂ ಕಾಣದಂತೆ ಮನದಲ್ಲೇ ಕೋಪವನ್ನು ಮುಚ್ಚಿಟ್ಟುಕೊಂಡರೆ ಅದು ನನ್ನ ತಿಳಿವಳಿಕೆ, ಬುದ್ಧಿಶಕ್ತಿ ಮತ್ತು ಮನಃಸ್ಥಿತಿಯನ್ನೇ ಕೊಲ್ಲುತ್ತದೆ.

ಕೋಪದ ಜೊತೆ ಹುಟ್ಟುವ ಜಗಳ, ಬೈಗುಳ, ದ್ವೇಷ, ಹೊಡೆದು ಕೊಲ್ಲುವ ಆಲೋಚನೆಗಳು ಕೂಡ ಒಳಿತನ್ನು ತರುವಂತವಲ್ಲ. ಇಷ್ಟೆಲ್ಲಾ ಗೊತ್ತಿದ್ದರೂ ಮನುಷ್ಯರು ಕೋಪದ ಪಾಶದೊಳಗೆ ಸಿಕ್ಕಿ ಬೀಳುತ್ತಾರೆ. ಸಹಜವಾಗಿ ಅತಿ ಕೋಪಿಷ್ಠರು ಆತ್ಮೀಯರ ಸಲಹೆಗಳನ್ನು ತಡವಾಗಿ ಸ್ವೀಕರಿಸುತ್ತಾರೆ. ಒಳ್ಳೆಯ ವ್ಯಕ್ತಿಯೊಂದಿಗೆ ಇದ್ದರೆ ನಮ್ಮ ಕೋಪವು ಬೇಗನೆ ಸಾಯುತ್ತದೆ ಎನ್ನುತ್ತಾರೆ. ಆದರೆ ಅಂತಹ ಒಳ್ಳೆಯವರು ಈಗೆಲ್ಲಿ ಸಿಗುತ್ತಾರೆ?

ಕೋಪಿಷ್ಠರ ಮಾತಷ್ಟೇ ಒರಟು, ಮನಸ್ಸು ಬಲು ಮೃದು ಎನ್ನುತ್ತಾರೆ ಕೆಲವರು. ಇದನ್ನು ಪೂರಾ ಒಪ್ಪುವುದು ಕೂಡ ಕಷ್ಟ. ಕೋಪದಿಂದ ಉಂಟಾಗುವ ನಷ್ಟಗಳು ಹಲವಾರು. ಇದರಿಂದ ನೀವು ನಿಮ್ಮ ಸುಂದರ ಬಾಂಧವ್ಯಗಳನ್ನು ಕಳೆದುಕೊಳ್ಳಬಹುದು. ಅತಿಯಾದ ಕೋಪ ನಿಮ್ಮ ಆರೋಗ್ಯವನ್ನು ಕೂಡ ತಿಂದುಹಾಕುತ್ತದೆ. ಕೋಪದಿಂದ ದೇಹ, ಮನಸ್ಸಿಗಾಗುವ ದುಷ್ಪರಿಣಾಮಗಳು ಅನೇಕ. ಕೋಪ ಬರುವುದು ಒಂದು ನೈಸರ್ಗಿಕವಾದ ಪ್ರಕ್ರಿಯೆ. ಕೋಪ ಬಂದಾಗ ದೇಹದ ಒಳಗಿಟ್ಟುಕೊಂಡು ಕೊರಗುವುದಕ್ಕಿಂತ ಅದನ್ನು ಹೊರಕ್ಕೆ ಎಳೆದು ಹಾಕುವುದು ಒಳ್ಳೆಯದು ಎಂದು ಹಲವರು ಹೇಳುತ್ತಾರೆ. ಇದರ ಬದಲಿಗೆ ಕೋಪವೇ ಬರದಂತೆ ಅಭ್ಯಾಸ ಮಾಡಿಕೊಳ್ಳುವುದು ಇನ್ನೂ ಉತ್ತಮ. ವಿಷಯಗಳು ನಾವು ಅಂದುಕೊಂಡಂತೆ ಆಗದಿದ್ದಾಗ ಪ್ರತಿಯೊಬ್ಬರಿಗೂ ಕೋಪ ಬಂದೇ ಬರುತ್ತದೆ. ಹೀಗಾಗಿ ಹೀಗೆಯೇ ಆಗಬೇಕು ಎಂಬ ಹಟ ಹಿಡಿಯುವುದನ್ನು ಬಿಟ್ಟೇ ಬಿಡುವುದು ವಾಸಿ. ಕೋಪಿಸುವುದರಲ್ಲಿ ನಿಧಾನಿಯಾದವನು ತನ್ನ ದೊಡ್ಡತನದ ಕೇಡನ್ನು ತಿಳಿವಳಿಕೆಯ ಹದವನ್ನು ಎಂದೆಂದೂ ಕೆಡಿಸಿಕೊಳ್ಳುವುದಿಲ್ಲ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಡಿಸೆಂಬರ್ 13, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಮಾರ್ಗಶಿರ ಶುಕ್ಲ ಪ್ರತಿಪದ್ ಗಂ. 27-10 ನಕ್ಷತ್ರ: ಜ್ಯೇಷ್ಠ ಗಂ. 11-05 ಯೋಗ: ಶೂಲ ಗಂ 16-18 ಕರಣ: ಕಿಂಸ್ತುಘ್ನ ಗಂ. 16-09, ವೃಶ್ಚಿಕ ಮಾಸದ 27 ನೇ ದಿನ, ಮಳೆನಕ್ಷತ್ರ: ಜ್ಯೇಷ್ಠ 4.
ರಾಹುಕಾಲ : ಮಧ್ಯಾಹ್ನ 12-00 – 01-30
ಸೂರ್ಯೋದಯ : 06-48 **ಸೂರ್ಯಾಸ್ತ :** 06-01
ಮುಸ್ಲಿಂ ದಿನಾಂಕ : 28 ಜುಮಾದುಲ್ಲಾವಲ್
ಅದೃಷ್ಟ ಸಂಖ್ಯೆ : 9, 7

ಮೇಷ: ರಕ್ತದೊತ್ತಡ ಇರುವವರು ಆಹಾರ ಪದ್ಧತಿಯಿಂದಲೇ ಅದನ್ನು ನಿಯಂತ್ರಿಸಿಕೊಳ್ಳಲು ಯತ್ನಿಸಿ. ಇತರರು ಅವಿರೋಧ ಆಯ್ಕೆಗೆ ಒಲವು ತೋರುವುದರಿಂದ ನೀವು ಸುಲಭವಾಗಿ ಸ್ಥಾನಗಳಿಸುವಲ್ಲಿ ಯಶಸ್ವಿಯಾಗುವಿರಿ.

ವೃಷಭ: ಮಗಳ ಮದುವೆ ವಿಚಾರದಲ್ಲಿ ಇಂದು ನೀವು ಇಡುವ ಹೆಜ್ಜೆ ಬಹಳ ಪ್ರಮುಖವಾದದ್ದು. ಸಾಂಸಾರಿಕವಾಗಿ ನಿಮ್ಮ ನಿರ್ಣಯಗಳನ್ನು ಎಲ್ಲರೂ ಬೆಂಬಲಿಸಲಿದ್ದಾರೆ. ಆರೋಗ್ಯದ ಬಗ್ಗೆ ಎಚ್ಚರವಿರಲಿ.

ಮಿಥುನ: ಪಾಲುದಾರಿಕೆಯಲ್ಲಿ ನಿರೀಕ್ಷೆಗೂ ಮೀರಿದ ಲಾಭವಾಗಲಿದೆ. ಆದರೆ, ದೊಡ್ಡ ಮೊತ್ತದ ಅಥವಾ ಹೆಚ್ಚಿನ ಜವಾಬ್ದಾರಿಯ ಕೆಲಸದಲ್ಲಿ ವಿಘ್ನಗಳು ಎದುರಾಗಲಿದೆ. ಧಾರ್ಮಿಕತೆ ಅನುಸರಿಸುವುದರಿಂದ ಶುಭವಾಗಲಿದೆ.

ಕರ್ಕಾಟಕ: ವ್ಯವಹಾರದ ಬಗ್ಗೆ ಹೆಚ್ಚಿನ ವಿಷಯ ತಿಳಿದುಕೊಳ್ಳುವಿರಿ. ಮಗಳ ವಿದೇಶ ಪ್ರಯಾಣದ ತಯಾರಿಯಲ್ಲಿ ನೀವು ಭಾಗಿಯಾಗುವಿರಿ. ವಿದ್ಯಾರ್ಥಿಗಳಿಗೆ ನಿರಂತರ ಅಧ್ಯಯನ ಅನಿವಾರ್ಯವಾಗಲಿದೆ.

ಸಿಂಹ: ಆಹಾರದ ವಿಚಾರದಲ್ಲಿ ದಾಕ್ಷಿಣ್ಯ ಪ್ರವೃತ್ತರಾಗಿ ಸಿಕ್ಕಿಕೊಳ್ಳಬೇಡಿ. ಗುತ್ತಿಗೆ ವೃತ್ತಿಯವರಿಗೆ ತಮ್ಮ ಮನೋಬಯಕೆ ಈಡೇರಲಿದೆ. ಅನಾರೋಗ್ಯದಿಂದ ಇರುವ ಪತ್ನಿಯ ಆರೋಗ್ಯದಲ್ಲಿ ಸುಧಾರಣೆ ಕಂಡುಬರಲಿದೆ.

ಕನ್ಯಾ: ನಿಮ್ಮ ದೊಡ್ಡ ಕನಸುಗಳನ್ನು ಸಾಕಾರಗೊಳಿಸಿಕೊಳ್ಳುವ ನಿಟ್ಟಿನಲ್ಲಿ ಪ್ರಯತ್ನಿಸಲು ಈ ದಿನ ಸೂಕ್ತ. ತಂದೆ-ತಾಯಿಯ ಆರೈಕೆಯಿಂದ ಪುಣ್ಯ ಸಂಪಾದನೆಯಾಗಲಿದೆ. ಹಳದಿ ವಸ್ತ್ರವು ಇಂದು ಶುಭ ತರಲಿದೆ.

ತುಲಾ: ವೈವಾಹಿಕ ವಿಚಾರದಲ್ಲಿ ನಿಮ್ಮ ಮನದ ಅಭಿಲಾಷೆಗಳನ್ನು ವ್ಯಕ್ತಪಡಿಸಲು ಹಿಂಜರಿಯಬೇಡಿ. ಹೈನುಗಾರಿಕೆಯಲ್ಲಿ ಆದಾಯ ವೃದ್ಧಿಯಾಗಲಿದೆ. ಎಂಜಿನಿಯರಿಂಗ್, ವೈದ್ಯಕೀಯ ವಿದ್ಯಾರ್ಥಿಗಳು ಹೆಚ್ಚಿನ ಶ್ರಮ ವಹಿಸಬೇಕು.

ವೃಶ್ಚಿಕ: ನಿಮ್ಮ ಅನ್ವೇಷಣೆಯ ಸ್ವಭಾವವು ನಿಮ್ಮ ವೃತ್ತಿ ಬದುಕಿನಲ್ಲಿ ಹೊಸ ತಿರುವು ತರಲಿದೆ. ಮಕ್ಕಳಿಗೆ ವ್ಯವಹಾರ ಒಪ್ಪಿಸಿ ನೆಮ್ಮದಿಯಿಂದ ವಿಶ್ರಾಂತಿ ಜೀವನದಲ್ಲಿ ಇರಲು ಇಚ್ಛಿಸುವಿರಿ. ಶೀತ ಬಾಧೆಯ ಸಾಧ್ಯತೆ ಇದೆ.

ಧನು: ಹಿಂದೆ ನಡೆದ ದುರ್ಘಟನೆಗಳನ್ನು ಮರೆತು ಭವಿಷ್ಯದತ್ತ ಗಮನ ಹರಿಸುವುದು ಉತ್ತಮ. ಈ ದಿನವನ್ನು ಪರೋಪಕಾರಕ್ಕಾಗಿ ಮೀಸಲಿಡಬೇಕಾಗಲಿದೆ. ವೃತ್ತಿಯ ಪರವಾಗಿ ಶತ್ರುಗಳ ವಿರುದ್ಧ ಹೋರಾಟ ನಡೆಸಬೇಕಾಗಲಿದೆ.

ಮಕರ: ನಿಮ್ಮ ಭಾವನೆಗಳ ಜೊತೆಗೆ ನಿಮ್ಮ ಅಭಿಪ್ರಾಯವು ಬದಲಾಗುವ ಕಾಲವಿದು. ಹಾಗಾಗಿ ಯಾವುದೇ ವಿಷಯದಲ್ಲಿ ನಿರ್ಧಾರ ತೆಗೆದುಕೊಳ್ಳುವುದು ಸರಿಯಲ್ಲ. ಜನರೊಂದಿಗೆ ಬೆರೆತು ಬಾಳುವ ಅಭ್ಯಾಸ ಮಾಡಿಕೊಳ್ಳಿರಿ.

ಕುಂಭ: ಬಹುದಿನಗಳಿಂದ ಕೂಡಿಟ್ಟ ಹಣದಿಂದ ಬಂಗಾರ ಖರೀದಿಸುವ ಮನಸ್ಸಾಗಲಿದೆ. ಇದರಿಂದ ಲಾಭವೇ ಆಗಲಿದೆ. ವೈವಾಹಿಕ ಮಾತುಕತೆಗಳು ಪ್ರಗತಿ ಪಥದತ್ತ ಸಾಗುವುದಕ್ಕೆ ರಾಮನನ್ನು ಪ್ರಾರ್ಥಿಸಿ.

ಮೀನ: ತಂದೆ ತಾಯಿಯ ಆರೋಗ್ಯವು ಉತ್ತಮವಾಗಿ ಸುಧಾರಿಸುವುದರಿಂದ ಮನೆಯಲ್ಲಿ ನೆಮ್ಮದಿಯ ವಾತಾವರಣ ಇರಲಿದೆ. ನಿಮ್ಮ ಪ್ರೀತಿಯನ್ನು ವ್ಯಕ್ತಪಡಿಸಲು ಇದು ಸುದಿನ. ಅನಿರೀಕ್ಷಿತ ಪ್ರಯಾಣದ ಸಂಭವವಿದೆ.

ಪದಬಂಧ 5528

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ರಣಧೀರನು ಕಾಳಗ ನಡೆಸಿದ ಜಾಗ (4)
5.ಯಜಮಾನನ ಸ್ವಭಾವ (4)
6.ದಾರಿಯಲ್ಲಿ ನಡೆದು ಹೋಗುತ್ತಿರುವವನು (4)
8.ಕಳ್ಳನ ಬಗ್ಗೆ ಇಷ್ಟು ಆಸಕ್ತಿಯೇ? (4)
11.ಜೇನುನೊಣ ಹೀರುತ್ತಿರುವ ಹೂವಿನ ಸಿಹಿರಸ (4)
13.ಸವಿಯಾದ ವಿವರಗಳನ್ನು ಒಳಗೊಂಡಿದ್ದು! (4)
15.ಪ್ರಯಾಣದ ನಡುವೆ ಕರವಿಟ್ಟ ಘಟನೆ (4)
16.ನಡುವೆ ಗರ ತಿರುಗಿಸಿದರೆ ಆಧೀನ (4)

ಮೇಲಿಂದ ಕೆಳಕ್ಕೆ
1.ಇದು ನಡುಮನೆ (3)
2.ನಡುವಿರುವ ಮಾಣಿ ಬಲು ನಂಬಿಕಸ! (4)
3.ದಾಳಿ ನಡೆಸಿ ತಿಂದಿದ್ದು ಶ್ರೇಷ್ಠಕಬ್ಬು (4)
4.ಗಣಕ್ಕೆಲ್ಲಾ ಗಣಿತ ಕಲಿಸಿದ ಕರಣಿಕ (3)
7.ಹೇಳಿಕೆಯಿಂದಲೇ ಮಾಡಿದ ಸಾಮ್ಯ! (3)
9.ಕಳ್ಳನಿಗೆ ದೋಷ ಅಂಟಿಕೊಂಡಿದೆ ಯಲ್ಲ! (3)
10.ಕೊಡದಂತಹ ದೊಡ್ಡ ಪಾತ್ರೆ (3)
11.ಮರದ ಕೆಳಗೆ ಸಿಕ್ಕಿರುವ ಪಚ್ಚೆ (4)
12.ಕಸರತ್ತು ಮಾಡಿ ಹಾಕಿದ ಸಹಿ (4)
13.ಸರಿಗೆ ತಂದವನು ಸರಿ ಸಮನಾದವನು (3)
14.ಪರಿಣಯಕ್ಕೆ ತಿರುಗಿದ ಪ್ರೀತಿ! (3)



5527ರ ಪದಬಂಧದ ಉತ್ತರ

ಎಡದಿಂದ ಬಲಕ್ಕೆ
1.ಪಲಾಯನ 3.ವರ್ಣಮಾಲೆ
5.ಕಕವ 7.ಸಮಗಾರ
9.ಶೋಕ 10.ಕ್ಷಭ
11.ರವಿಚಂದ್ರ 13.ಭವನ
17.ದಿಗಂಬರ 18.ಹಸುಗೂಸು

ಮೇಲಿಂದ ಕೆಳಕ್ಕೆ
1.ಪದಕ 2.ನನ್ನಿ
3.ವನಸುಮ 4.ಲೆಕ್ಕ
6.ಕನಿಕರ 7.ಸಮುದ್ರ
8.ರಕ್ತಸ್ರಾವ 12.ಚಂದಾದಾರ
14.ನನಸು 15.ಹಾದಿ
16.ದೇಹ

ಸುಡೊಕು 5914

		5	6		2			3
	3	1			4	6		
6				1			5	9
	8	3		6				4
1				4				8
2			8		1	5	6	
					3			
4		2		9			3	1
	1		4		6		7	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5913 ಸುಡೊಕು

8	7	6	1	4	9	3	2	5
1	3	4	5	2	7	8	6	9
5	9	2	6	3	8	7	4	1
2	1	5	9	7	3	6	8	4
6	4	7	8	1	2	9	5	3
3	8	9	4	5	6	1	7	2
9	2	8	3	6	5	4	1	7
7	6	1	2	9	4	5	3	8
4	5	3	7	8	1	2	9	6

ನಿವಾಸ ತೊರೆಯಲು ಮಹುವಾಗೆ ಶೀಘ್ರ ಸೂಚನೆ?

ನವದೆಹಲಿ (ಪಿಟಿಐ): ಲೋಕಸಭೆಯಿಂದ ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಅವರನ್ನು ಉಚ್ಚಾಟಿಸಿರುವ ಕುರಿತು ಲೋಕಸಭೆ ಸದನ ಸಮಿತಿಯು ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯಕ್ಕೆ ತಿಳಿಸಿದೆ. ಹೀಗಾಗಿ, ಅಧಿಕೃತ ನಿವಾಸವನ್ನು ತೊರೆಯುವಂತೆ ಶೀಘ್ರದಲ್ಲೇ ಮಹುವಾ ಅವರಿಗೆ ಸಚಿವಾಲಯ ಸೂಚಿಸುವ ನಿರೀಕ್ಷೆ ಇದೆ.

ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ಈ ದಿಸೆಯಲ್ಲಿ ಪ್ರಕ್ರಿಯೆಗಳಿಗೆ ಚಾಲನೆ ನೀಡಿದೆ ಎನ್ನಲಾಗಿದೆ.

ಸಂಸತ್ತಿನಲ್ಲಿ ಪ್ರಶ್ನೆ ಕೇಳಲು ಉದ್ಯಮಿ ದರ್ಶನ್ ಹೀರಾನಂದಾನಿ ಅವರಿಂದ ಮಹುವಾ ಹಣ ಪಡೆದಿದ್ದಾರೆ ಎಂದು ಸಂಸತ್ತಿನ ನೀತಿ ಸಮಿತಿಯು ನೀಡಿದ್ದ ವರದಿಯನ್ನು ಲೋಕಸಭೆ ಇತ್ತೀಚೆಗೆ ಅಂಗೀಕರಿಸಿದೆ.

ಸುಪ್ರೀಂ ಕೋರ್ಟ್ ತೀರ್ಪನ್ನು ಮಸೂದೆ ಉದ್ದೇಶಪೂರ್ವಕವಾಗಿ ಉಲ್ಲಂಘಿಸುತ್ತದೆ: ಕಾಂಗ್ರೆಸ್

ಸಿಇಸಿ ನೇಮಕ ಮಸೂದೆಗೆ ಒಪ್ಪಿಗೆ

ಲೋಕಸಭೆಯಲ್ಲಿ ಗೃಹ ಸಚಿವ ಅಮಿತ್ ಶಾ ಮಂಗಳವಾರ ಮಾತನಾಡಿದರು —ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಚುನಾವಣಾ ಆಯುಕ್ತರ ನೇಮಕಕ್ಕೆ ಕೇಂದ್ರ ಸರ್ಕಾರವು ಮಂಡಿಸಿರುವ ಹೊಸ ಮಸೂದೆಯು, 'ಹೌದಪ್ಪ'ಗಳನ್ನು ನೇಮಕ ಮಾಡಲು ಆಡಳಿತಾರೂಢ ಪಕ್ಷಕ್ಕೆ ಅವಕಾಶ ಮಾಡಿಕೊಡುತ್ತದೆ ಎಂದು ವಿರೋಧ ಪಕ್ಷಗಳ ಪ್ರಮುಖರು ರಾಜ್ಯಸಭೆಯಲ್ಲಿ ಆತಂಕ ವ್ಯಕ್ತಪಡಿಸಿದರು.

'ಈ ಮಸೂದೆಯು ಚುನಾವಣಾ ಆಯೋಗವನ್ನು ಕಾರ್ಯಾಂಗದ ವಶಕ್ಕೆ ಒಪ್ಪಿಸುವಂತೆ ಇದೆ. ಸುಪ್ರೀಂ ಕೋರ್ಟ್‌ನ ತೀರ್ಪನ್ನು ಇದು ಉದ್ದೇಶಪೂರ್ವಕವಾಗಿ ಉಲ್ಲಂಘಿಸುತ್ತದೆ. ಈ ಮಸೂದೆಯು ಸತ್ತು ಹುಟ್ಟಿರುವ ಶಿಶು ಇದ್ದಂತೆ' ಎಂದು ಕಾಂಗ್ರೆಸ್ ಸದಸ್ಯ ರಣದೀಪ್ ಸಿಂಗ್ ಸುರ್ಜೇವಾಲಾ ಆಕ್ರೋಶ ವ್ಯಕ್ತಪಡಿಸಿದರು.

ಮುಖ್ಯ ಚುನಾವಣಾ ಆಯುಕ್ತರು ಮತ್ತು ಇತರ ಚುನಾವಣಾ ಆಯುಕ್ತರ (ನೇಮಕ, ಸೇವಾ ನಿಯಮಗಳು ಮತ್ತು ಅಧಿಕಾರ ಅವಧಿ) ಮಸೂದೆ 2023ರ ಬಗ್ಗೆ ಚರ್ಚೆ ಆರಂಭಿಸಿದ ಸುರ್ಜೇವಾಲಾ, 'ಚುನಾವಣಾ ಆಯೋಗವು ಈ ಹಿಂದೆ ವಿಶ್ವಾಸಾರ್ಹತೆಗೆ ಪರ್ಯಾಯ ಪದವಾಗಿತ್ತು. ಆದರೆ ಸರ್ಕಾರವು ಇಂದು ಆಯೋಗವನ್ನು ಹೊಂದಾಣಿಕೆ ಮಾಡಿಕೊಂಡಿರುವ ಸಂಸ್ಥೆಯನ್ನಾಗಿಸಿದೆ' ಎಂದು ದೂರಿದರು.

ಈ ಮಸೂದೆಗೆ ರಾಜ್ಯಸಭೆಯು ಮಂಗಳವಾರ ಅನುಮೋದನೆ ನೀಡಿದೆ. ಆಮ್ ಆದ್ಮಿ ಪಕ್ಷದ ರಾಘವ್ ಛಡ್ಡಾ ಅವರು, 'ಸುಪ್ರೀಂ ಕೋರ್ಟ್ ತೀರ್ಪನ್ನು ಅಡಿಮೇಲು ಮಾಡಲು ಕೇಂದ್ರ ಸರ್ಕಾರವು ಯತ್ನಿಸುತ್ತಿರುವುದು ಕೆಲವು ತಿಂಗಳ ಅವಧಿಯಲ್ಲಿ ಇದು ಎರಡನೆಯ ಸಲ. ಇದು ಕೋರ್ಟ್‌ಗೆ ಮಾಡುತ್ತಿರುವ ಅವಮಾನ' ಎಂದು ದೂರಿದರು.

'ಚುನಾವಣೆಗಳು ಮುಕ್ತವಾಗಿ ಹಾಗೂ ನ್ಯಾಯಸಮ್ಮತವಾಗಿ ನಡೆಯಬೇಕು ಎಂಬುದು ಸಂವಿಧಾನದ ಮೂಲ ಸ್ವರೂಪದ ಭಾಗ. ಈ ಮಸೂದೆಯು ಸಂವಿಧಾನ ಮೂಲ ಸ್ವರೂಪಕ್ಕೆ ವಿರುದ್ಧವಾಗಿದೆ' ಎಂದು ಛಡ್ಡಾ ಆರೋಪಿಸಿದರು. 'ಆಡಳಿತ ಪಕ್ಷವು ಸಂಬಿತ್ ಪಾತ್ರಾ (ಬಿಜೆಪಿಯ ರಾಷ್ಟ್ರೀಯ ವಕ್ತಾರ) ಅವರನ್ನೂ ಮುಖ್ಯ ಚುನಾವಣಾ ಆಯುಕ್ತರನ್ನಾಗಿ ನೇಮಕ ಮಾಡಬಹುದು. ಅವರು ಮುಖ್ಯ ಚುನಾವಣಾ ಆಯುಕ್ತರಾದರೆ ಅದೆಷ್ಟು ಅಪಾಯಕಾರಿ ಆಗಬಹುದು' ಎಂದು ಛಡ್ಡಾ ಕಳವಳ ವ್ಯಕ್ತಪಡಿಸಿದರು.

ಆದರೆ, ಸುಪ್ರೀಂ ಕೋರ್ಟ್ ತೀರ್ಪನ್ನು ಅಡಿಮೇಲು ಮಾಡುವ ಉದ್ದೇಶದಿಂದ ಈ ಮಸೂದೆ ಮಂಡಿಸಲಾಗಿದೆ ಎಂಬ ಆರೋಪವನ್ನು ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಅಲ್ಲಗಳೆದಿದ್ದಾರೆ. ಈ ಮಸೂದೆಯು ಸುಪ್ರೀಂ ಕೋರ್ಟ್ ತೀರ್ಪಿಗೆ ಅನುಗುಣವಾಗಿಯೇ ಇದೆ, ಇದು ಸಂವಿಧಾನದಲ್ಲಿ ಹೇಳಿರುವ ರೀತಿಯಲ್ಲಿ ಅಧಿಕಾರ ವ್ಯಾಪ್ತಿಯನ್ನು ಪ್ರತ್ಯೇಕಿಸುವ ಕೆಲಸ ಮಾಡುತ್ತದೆ ಎಂದು ತಿಳಿಸಿದ್ದಾರೆ.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಅವರನ್ನು ಆಯ್ಕೆ ಸಮಿತಿಯ ಸದಸ್ಯರನ್ನಾಗಿಸದೆ ಇರುವುದು ಏಕೆ ಎಂದು ಛಡ್ಡಾ ಪ್ರಶ್ನಿಸಿದರು. 'ಪ್ರಧಾನಿ, ವಿರೋಧ ಪಕ್ಷದ ನಾಯಕ ಹಾಗೂ ಸಿಜೆಐ ಇರುವ ಆಯ್ಕೆ ಸಮಿತಿಯೊಂದನ್ನು ರಚಿಸಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಆದರೆ ಮಸೂದೆಯು ಸಿಜೆಐ ಅವರನ್ನು ಒಳಗೊಂಡಿಲ್ಲ' ಎಂದು ಛಡ್ಡಾ ಹೇಳಿದರು. ಈ ಮಸೂದೆಯ ಮೂಲಕ ಆಡಳಿತಾರೂಢ ಪಕ್ಷವು ಮುಖ್ಯ ಚುನಾವಣಾ ಆಯುಕ್ತರ ಕಚೇರಿಯನ್ನು ತನ್ನ ವಶಕ್ಕೆ ತೆಗೆದುಕೊಳ್ಳುತ್ತದೆ ಎಂದೂ ಆರೋಪಿಸಿದರು.

ಈ ಮಸೂದೆಯನ್ನು ವಿರೋಧಿಸಿದ ಡಿಎಂಕೆ ಸದಸ್ಯ ತಿರುಚಿ ಶಿವ, ಇದನ್ನು ಸಮಿತಿಯ ಪರಿಶೀಲನೆಗೆ ಕಳುಹಿಸಬೇಕು ಎಂದು ಒತ್ತಾಯಿಸಿದರು. ಬಿಜೆಡಿ ಸದಸ್ಯ ಅಮರ್ ಪಟ್ನಾಯಕ್ ಅವರು ಮಸೂದೆಗೆ ಬೆಂಬಲ ಸೂಚಿಸಿದರು. ಈ ಮಸೂದೆಯನ್ನು ಆಗಸ್ಟ್ 10ರಂದು ರಾಜ್ಯಸಭೆಯಲ್ಲಿ ಮಂಡಿಸಲಾಗಿತ್ತು.

ರಾಜ್ಯದ ಐದು ಮಸೂದೆಗೆ ಅನುಮೋದನೆ ಬಾಕಿ

ನವದೆಹಲಿ: ಕರ್ನಾಟಕ ರಾಜ್ಯದ ಐದು ಮಸೂದೆಗಳಿಗೆ ಕೇಂದ್ರ ಸರ್ಕಾರದ ಅನುಮೋದನೆ ಸಿಕ್ಕಿಲ್ಲ.

ಈ ಬಗ್ಗೆ ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಅಜಯ್ ಕುಮಾರ್ ಮಿಶ್ರಾ ಲೋಕಸಭೆಯಲ್ಲಿ ಮಂಗಳವಾರ ಉತ್ತರ ನೀಡಿದ್ದಾರೆ.

'ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು (ಕರ್ನಾಟಕ ತಿದ್ದುಪಡಿ) ಮಸೂದೆ–2015, ಕರ್ನಾಟಕ ಕುಲಾಂತರಿ ಹಾಗೂ ತಳಿ ವಿಜ್ಞಾನದ ಪ್ರಕಾರ ಮಾರ್ಪಾಡಾದ ಹತ್ತಿ ಬೀಜಗಳ (ಮಾರಾಟ ಬೆಲೆ ನಿಗದಿ ಹಾಗೂ ಪರಿಹಾರ ಸಂದಾಯ) ಮಸೂದೆ–2015, ಕ್ರಿಮಿನಲ್ ಕಾನೂನು ತಿದ್ದುಪಡಿ ಸುಗ್ರೀವಾಜ್ಞೆ (ಕರ್ನಾಟಕ ತಿದ್ದುಪಡಿ) ಮಸೂದೆ–2022, ನೋಂದಣಿ (ಕರ್ನಾಟಕ ತಿದ್ದುಪಡಿ) ಮಸೂದೆ– 2023 ಸೇರಿದಂತೆ ಐದು ಮಸೂದೆಗಳು ಸಚಿವಾಲಯದಲ್ಲಿ ಬಾಕಿ ಉಳಿದಿವೆ' ಎಂದು ಅವರು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಛತ್ತೀಸಗಢ, ಮಧ್ಯ ಪ್ರದೇಶ ಮುಖ್ಯಮಂತ್ರಿಗಳ ಪ್ರಮಾಣ ಇಂದು

ರಾಯಪುರ/ ಭೋಪಾಲ್ (ಪಿಟಿಐ): ಛತ್ತೀಸಗಢದ ನೂತನ ಮುಖ್ಯಮಂತ್ರಿ ವಿಷ್ಣುದೇವ್ ಸಾಯ್ ಅವರ ಪ್ರಮಾಣ ವಚನ ಸ್ವೀಕಾರವು ಐತಿಹಾಸಿಕ ಸಮಾರಂಭ ಆಗಲಿದೆ. ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ಪಕ್ಷದ ನಾಯಕರು ಮತ್ತು ಮುಖ್ಯ-ಮಂತ್ರಿಗಳು ಸಮಾರಂಭದಲ್ಲಿ ಪಾಲ್ಗೊಳ್ಳುವರು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಅರುಣ್ ಸಾವ್ ಹೇಳಿದ್ದಾರೆ.

ಬುಧವಾರ ಮಧ್ಯಾಹ್ನ 2 ಗಂಟೆಗೆ ರಾಯಪುರದ ವಿಜ್ಞಾನ ಕಾಲೇಜಿನ ಮೈದಾನದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ 50,000ಕ್ಕೂ ಹೆಚ್ಚು ಮಂದಿ ಪಾಲ್ಗೊಳ್ಳಲಿದ್ದಾರೆ.

ಮೋಹನ್ ಯಾದವ್ ಇಂದು ಪ್ರಮಾಣ: ಮಧ್ಯಪ್ರದೇಶದ ಮುಖ್ಯಮಂತ್ರಿ ಮೋಹನ್ ಯಾದವ್ ಅವರು ಬುಧವಾರ ಪ್ರಮಾಣ ವಚನ ಸ್ವೀಕರಿಸಲಿದ್ದು ಇದಕ್ಕಾಗಿ ವ್ಯಾಪಕ ಸಿದ್ಧತೆ ಮಾಡಲಾಗಿದೆ.

ಭೋಪಾಲ್‌ನ ಲಾಲ್ ಪರೇಡ್ ಮೈದಾನದಲ್ಲಿ ಸಮಾರಂಭ ನಡೆಯಲಿದೆ.

ಕೇಂದ್ರಾಡಳಿತ ಪ್ರದೇಶಗಳಲ್ಲಿ ಮಹಿಳಾ ಮೀಸಲಾತಿ: ಮಸೂದೆ

ನವದೆಹಲಿ (ಪಿಟಿಐ): ಕೇಂದ್ರಾಡಳಿತ ಪ್ರದೇಶಗಳಾದ ಪುದುಚೇರಿ, ಜಮ್ಮು ಮತ್ತು ಕಾಶ್ಮೀರಕ್ಕೂ ಮಹಿಳಾ ಮೀಸಲಾತಿ ಮಸೂದೆಯ ಉಪಲಬ್ಧತೆಯನ್ನು ವಿಸ್ತರಿಸುವ ಪ್ರಸ್ತಾವ ಹೊಂದಿರುವ ಎರಡು ಮಸೂದೆಗಳನ್ನು ಮಂಗಳವಾರ ಲೋಕಸಭೆಯಲ್ಲಿ ಮಂಡಿಸಲಾಯಿತು.

ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರಾಯ್ ಅವರು ಜಮ್ಮು ಮತ್ತು ಕಾಶ್ಮೀರ ಮರುಜೋಡಣೆ -2019 (ಎರಡನೇ ತಿದ್ದುಪಡಿ) ಮಸೂದೆ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳ (ತಿದ್ದುಪಡಿ) ಮಸೂದೆಯನ್ನು ಲೋಕಸಭೆಗೆ ಪರಿಚಯಿಸಿದರು.

'ರಾಜ್ಯದ ಜಿ. ಪಂ, ತಾ. ಪಂ.ಗಳಿಗೆ ಅನುದಾನ ಬಿಡುಗಡೆ ಮಾಡಿಲ್ಲ'

ನವದೆಹಲಿ: ಚುನಾವಣೆ ನಡೆಸದ ಕಾರಣಕ್ಕೆ ಕರ್ನಾಟಕದ ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಗಳಿಗೆ 15ನೇ ಹಣಕಾಸು ಆಯೋಗದ ಅಡಿಯಲ್ಲಿ ಅನುದಾನ ಬಿಡುಗಡೆ ಮಾಡಿಲ್ಲ ಎಂದು ಕೇಂದ್ರ ಪಂಚಾಯತ್ ರಾಜ್ ಖಾತೆಯ ರಾಜ್ಯ ಸಚಿವ ಕಪಿಲ್ ಮೊರೇಶ್ವರ ಪಾಟೀಲ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಕೋಲಾರ ಸಂಸದ ಎಸ್.ಮುನಿಸ್ವಾಮಿ ಕೇಳಿರುವ ಪ್ರಶ್ನೆಗೆ ಉತ್ತರ ನೀಡಿರುವ ಸಚಿವರು, 'ಸಂವಿಧಾನದ 243 ಇ ವಿಧಿಯ ಅಡಿಯ ಪ್ರಕಾರ, ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಸಕಾಲಕ್ಕೆ ಚುನಾವಣೆ ನಡೆಸುವುದು ರಾಜ್ಯ ಸರ್ಕಾರಗಳ ಹೊಣೆ. ಚುನಾವಣೆ ನಡೆಸಲು ಅಡ್ಡಿಯಾಗಿರುವ ಆಡಳಿತಾತ್ಮಕ ತೊಡಕುಗಳನ್ನು ನಿವಾರಿಸುವಂತೆ ಕರ್ನಾಟಕ ಸರ್ಕಾರಕ್ಕೆ ಸಲಹೆ ನೀಡಲಾಗಿದೆ' ಎಂದು ಹೇಳಿದ್ದಾರೆ.

ಪರಿಶಿಷ್ಟ ಪಂಗಡಕ್ಕೆ ಕೋಲಿ ಸಮುದಾಯ: ಜಾಧವ ಒತ್ತಾಯ

ನವದೆಹಲಿ: ಕರ್ನಾಟಕದ ಕೋಲಿ, ಕಬ್ಬಲಿಗ, ಗಂಗಾಮತಸ್ಥ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು ಎಂದು ಕಲಬುರಗಿ ಸಂಸದ ಡಾ. ಉಮೇಶ ಜಾಧವ ಆಗ್ರಹಿಸಿದರು.

ಲೋಕಸಭೆಯಲ್ಲಿ ಮಂಗಳವಾರ ಶೂನ್ಯ ವೇಳೆಯಲ್ಲಿ ಮಾತನಾಡಿದ ಅವರು, 'ಈ ಸಂಬಂಧ ಕರ್ನಾಟಕ ಸರ್ಕಾರ ಕೇಂದ್ರಕ್ಕೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಿದೆ. ಜತೆಗೆ, ಬುಡಕಟ್ಟು ಲಕ್ಷಣದ ಅಧ್ಯಯನ ವರದಿಯನ್ನೂ ಸಲ್ಲಿಸಿದೆ. ಹೀಗಾಗಿ, ಕೇಂದ್ರ ಸರ್ಕಾರ ತ್ವರಿತವಾಗಿ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು. ಕಲಬುರಗಿ, ಬೀದರ್ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿರುವ ಕುರುಬ (ಗೊಂಡ) ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು ಎಂದು ರಾಜ್ಯ ಸರ್ಕಾರ 2014ರಲ್ಲೇ ಶಿಫಾರಸು ಮಾಡಿದೆ. ಈ ಬಗ್ಗೆಯೂ ಕೇಂದ್ರ ಶೀಘ್ರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

'ಪ್ರತಿಭಟನೆಗೆ ಸಿ.ಎಂ ಪಿತೂರಿ'

ನವದೆಹಲಿ(ಪಿಟಿಐ): ತಮ್ಮ ವಿರುದ್ಧ 'ಸ್ಟೂಡೆಂಟ್ ಫೆಡರೇಷನ್ ಆಫ್ ಇಂಡಿಯಾ' (ಎಸ್‌ಎಫ್‌ಐ) ನಡೆಸುತ್ತಿರುವ ಪ್ರತಿಭಟನೆಯು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರಿಂದ ರೂಪಿಸಲಾದ ಪಿತೂರಿ ಎಂದು ಕೇರಳ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು ಆರೋಪಿಸಿದ್ದಾರೆ.

ಮಂಗಳವಾರ ದೆಹಲಿಯಲ್ಲಿ ಪ್ರತಿಕ್ರಿಯಿಸಿ, 'ಮುಖ್ಯಮಂತ್ರಿ ಸೂಚನೆ ಮೇರೆಗೆ ಪ್ರತಿಭಟನಕಾರರು ಕೆಲಸ ಮಾಡುತ್ತಿದ್ದಾರೆ. ಕಮ್ಯುನಿಸ್ಟ್ ಸರ್ಕಾರ ಇದೆ ಎಂಬ ಕಾರಣಕ್ಕೆ ಕೇರಳ ಸರ್ವಾಧಿಕಾರ ರಾಜ್ಯವಾಗದು' ಎಂದರು.

'ವಿವಾದಿತ ಸ್ಥಳ: ಮುಸ್ಲಿಮರೇ ಮರಳಿಸಲಿ'

ಇಂದ್ರೇಶ್ ಕುಮಾರ್

ನವದೆಹಲಿ (ಪಿಟಿಐ): 'ಧಾರ್ಮಿಕ ತಾಣಗಳಿರುವ, ವಿವಾದಾತ್ಮಕ ಭೂಮಿಯನ್ನು ಮುಸ್ಲಿಮರು ಮತ್ತು ಇತರೆ ಧರ್ಮದವರು ಸ್ವಯಂಪ್ರೇರಿತರಾಗಿ ಹಿಂದೂಗಳಿಗೆ ಮರಳಿಸಬೇಕು' ಎಂದು ಆರ್‌ಎಸ್‌ಎಸ್ ಹಿರಿಯ ನಾಯಕ ಇಂದ್ರೇಶ್ ಕುಮಾರ್ ಹೇಳಿದ್ದಾರೆ.

ಪಿಟಿಐಗೆ ನೀಡಿರುವ ಸಂದರ್ಶನದಲ್ಲಿ ಅವರು, 'ಪ್ರತಿ ಮಸೀದಿಯ ಸಂಕೀರ್ಣದ ಕೆಳಗೆ ಶಿವಲಿಂಗ ಪತ್ತೆ ಮಾಡುವ ಅಗತ್ಯವಿಲ್ಲ' ಎಂದು ಹೇಳುವ ಮೂಲಕ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಈ ವಿಷಯದಲ್ಲಿ ಸ್ಪಷ್ಟ ನಿಲುವು ಹೊಂದಿದ್ದರು' ಎಂದರು.

'ಸಮಾಜದಲ್ಲಿ ಪರಸ್ಪರ ಘರ್ಷಣೆ ತಪ್ಪಿಸುವುದು, ಈ ಮೂಲಕ ಸಮಾಜವನ್ನು ದ್ವೇಷ ಮತ್ತು ಹಿಂಸಾಚಾರದಿಂದ ಮುಕ್ತವಾಗಿಸುವುದು ಭಾಗವತ್ ಅವರ ಹೇಳಿಕೆಯ ಗುರಿಯಾಗಿತ್ತು. ಈ ಮಾತನ್ನು ಎಲ್ಲರೂ ಅರ್ಥಮಾಡಿಕೊಳ್ಳಬೇಕು' ಎಂದು ಅಭಿಪ್ರಾಯಪಟ್ಟರು.

'ರಾಮಮಂದಿರ ಎಲ್ಲರಿಗಾಗಿ ಇದೆ. ಅದು, ರಾಷ್ಟ್ರೀಯ ದೇವಸ್ಥಾನ. ಭಾರತ ಎಲ್ಲ ಧರ್ಮವನ್ನು ಸ್ವೀಕರಿಸಿರುವ, ಎಲ್ಲ ಧರ್ಮವನ್ನು ಗೌರವಿಸುವ ದೇಶ. ಹೀಗಾಗಿ, ಇದನ್ನು ರಾಷ್ಟ್ರೀಯ ದೇಗುಲ ಎಂದು ಕರೆಯುವುದು ಸೂಕ್ತವಾಗಿದೆ' ಎಂದು ಅಭಿಪ್ರಾಯಪಟ್ಟರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

33ನೇ ವರ್ಷದ ನೆನಪು

ಶ್ರೀ ದಿಬ್ಬೂರ್ ಕುಮಾರ್
31.3.36 – 13.12.90
ಪತ್ನಿ, ಮಕ್ಕಳು ಮತ್ತು ಮೊಮ್ಮಕ್ಕಳು

3ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಕೆ. ಪಿ. ಶ್ರೀನಿವಾಸ ರೆಡ್ಡಿ
ಮರಣ: 13–12–2020
ಇಂತಿ ದುಃಖತಪ್ತರು:
ಪತ್ನಿ, ಮಕ್ಕಳು, ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು.

ಕ್ರಿಮಿನಲ್ ಅಪರಾಧ: ಪರಿಷ್ಕೃತ ಮಸೂದೆಗಳ ಮಂಡನೆ

ನವದೆಹಲಿ (ಪಿಟಿಐ): ಕ್ರಿಮಿನಲ್ ಅಪರಾಧಗಳಿಗೆ ಸಂಬಂಧಿಸಿದಂತೆ ಈಗ ಜಾರಿಯಲ್ಲಿ ಇರುವ ಮೂರು ಕಾನೂನುಗಳಿಗೆ ಬದಲಾಗಿ ಜಾರಿಗೆ ತರಲು ಉದ್ದೇಶಿಸಿರುವ ಕಾನೂನುಗಳಿಗೆ ಸಂಬಂಧಿಸಿದ ಮೂರು ಪರಿಷ್ಕೃತ ಮಸೂದೆಗಳನ್ನು ಕೇಂದ್ರ ಸರ್ಕಾರವು ಸಂಸತ್ತಿನಲ್ಲಿ ಮಂಗಳವಾರ ಮಂಡಿಸಿದೆ. ಸಂಸತ್ತಿನ ಸ್ಥಾಯಿ ಸಮಿತಿ ಮಾಡಿದ್ದ ಶಿಫಾರಸುಗಳನ್ನು ಪರಿಷ್ಕೃತ ಮಸೂದೆಗಳು ಒಳಗೊಂಡಿವೆ ಎಂದು ಸರ್ಕಾರ ಹೇಳಿದೆ.

ಭಾರತೀಯ ನ್ಯಾಯ ಸಂಹಿತಾ ಮಸೂದೆಯನ್ನು ಲೋಕಸಭೆಯಲ್ಲಿ ಆ. 11ರಂದು ಮಂಡಿಸಲಾಗಿತ್ತು. ಇದರ ಜೊತೆಯಲ್ಲೇ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಅಧಿನಿಯಮ ಮಸೂದೆಯನ್ನು ಮಂಡಿಸಲಾಗಿತ್ತು. ಈ ಮೂರು ಮಸೂದೆಗಳನ್ನು ಈಗ ಜಾರಿಯಲ್ಲಿ ಇರುವ ಭಾರತೀಯ ದಂಡ ಸಂಹಿತೆ (ಐಪಿಸಿ), ಅಪರಾಧ ಪ್ರಕ್ರಿಯಾ ಸಂಹಿತೆ (ಸಿಆರ್‌ಪಿಸಿ) ಕಾಯ್ದೆ ಮತ್ತು ಭಾರತೀಯ ಸಾಕ್ಷ್ಯ ಕಾಯ್ದೆಯ ಬದಲಿಗೆ ಜಾರಿಗೆ ತರಲು ಕೇಂದ್ರ ಉದ್ದೇಶಿಸಿದೆ.

ಪುನಃಮಂಡಿಸಲಾಗಿರುವ ಮಸೂದೆಗಳಲ್ಲಿ ಕನಿಷ್ಠ ಐದು ಬದಲಾವಣೆಗಳನ್ನು ತರಲಾಗಿದೆ. ಭಯೋತ್ಪಾದನೆಗೆ ಸಂಬಂಧಿಸಿದ ವ್ಯಾಖ್ಯಾನ ಕೂಡ ಬದಲಾವಣೆಯಲ್ಲಿ ಸೇರಿದೆ. ಭಾರತೀಯ ನ್ಯಾಯ (ಎರಡನೆಯ) ಸಂಹಿತೆ ಮಸೂದೆಯಲ್ಲಿ ಭಯೋತ್ಪಾದನೆಯ ವ್ಯಾಖ್ಯಾನವು ಈಗ 'ಆರ್ಥಿಕ ಭದ್ರತೆ' ಎಂಬ ಪದಗಳನ್ನು ಕೂಡ ಒಳಗೊಂಡಿದೆ.

'ದೇಶದ ಆರ್ಥಿಕ ಭದ್ರತೆಗೆ ಧಕ್ಕೆ ತರುವ ಉದ್ದೇಶದಿಂದ ಎಸಗುವ ಕೃತ್ಯಗಳು' ಕೂಡ ಭಯೋತ್ಪಾದಕ ಕೃತ್ಯ ಎಂಬ ವ್ಯಾಖ್ಯಾನದ ಅಡಿಯಲ್ಲಿ ಬರುತ್ತವೆ ಎಂದು ಪರಿಷ್ಕೃತ ಮಸೂದೆಯು ಹೇಳುತ್ತದೆ. ಅತ್ಯಾಚಾರ ಸಂತ್ರಸ್ತರ ಅಥವಾ ಅಂತಹ ಬಗೆಯ ಅಪರಾಧಗಳ ಸಂತ್ರಸ್ತರ ಗುರುತನ್ನು ಬಹಿರಂಗಪಡಿಸುವ ರೀತಿಯಲ್ಲಿ ಕೋರ್ಟ್ ಕಲಾಪಗಳನ್ನು ಕೋರ್ಟ್‌ನ ಅನುಮತಿ ಇಲ್ಲದೆ ಪ್ರಕಟಿಸುವುದು ಶಿಕ್ಷಾರ್ಹ ಅಪರಾಧ ಎಂದು ಹೇಳಲಾಗಿದೆ. ಈ ಅಪರಾಧಕ್ಕಾಗಿ ಗರಿಷ್ಠ ಎರಡು ವರ್ಷಗಳವರೆಗೆ ಶಿಕ್ಷೆ ವಿಧಿಸಬಹುದು ಎಂದು ಮಸೂದೆಯಲ್ಲಿ ಹೇಳಲಾಗಿದೆ.

ಕ್ರೌರ್ಯಕ್ಕೆ ಅರ್ಥವ್ಯಾಪ್ತಿ ವಿಸ್ತಾರ

ನವದೆಹಲಿ: ಭಾರತೀಯ ನ್ಯಾಯ (ಎರಡನೆಯ) ಸಂಹಿತೆ ಮಸೂದೆಯು ಮಹಿಳೆಯರನ್ನು ಗುರಿಯಾಗಿಸಿಕೊಂಡ ಕ್ರೌರ್ಯಕ್ಕೆ ವಿಸ್ತೃತ ಅರ್ಥವನ್ನು ನೀಡಿದೆ. ಮಹಿಳೆಯ ಮಾನಸಿಕ ಆರೋಗ್ಯಕ್ಕೆ ಧಕ್ಕೆ ತರುವುದು ಕೂಡ ಕ್ರೌರ್ಯ ಎಂದು ಅದು ಹೇಳಿದೆ. 'ಮಹಿಳೆಯು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಸೃಷ್ಟಿಸುವ, ಆಕೆಯ ಜೀವಕ್ಕೆ ಅಥವಾ ಆರೋಗ್ಯಕ್ಕೆ ಅಪಾಯ ತಂದೊಡ್ಡುವ, ಆಕೆಗೆ ಅಪಾರ ನೋವುಂಟು ಮಾಡುವ ಯಾವುದೇ ಉದ್ದೇಶಪೂರ್ವಕ ಕೃತ್ಯವು' ಕ್ರೌರ್ಯವಾಗುತ್ತದೆ ಎಂದು ಮಸೂದೆಯು ಹೇಳಿದೆ.

ಮಹಿಳೆಯರನ್ನು ಗುರಿಯಾಗಿಸಿಕೊಂಡ ಕ್ರೌರ್ಯದ ವ್ಯಾಖ್ಯಾನದ ಅಡಿಯಲ್ಲಿ, ಮಾನಸಿಕ ಕಿರುಕುಳವನ್ನು ಕೇಂದ್ರವು ಸೇರಿಸಿರುವುದು ಇದೇ ಮೊದಲು. ಕ್ರೌರ್ಯ ಎಸಗಿದ್ದು ಸಾಬೀತಾದಲ್ಲಿ ಪತಿಗೆ ಅಥವಾ ಮಹಿಳೆಯ ಅತ್ತೆ–ಮಾವಂದಿರಿಗೆ ಮೂರು ವರ್ಷಗಳ ಜೈಲುಶಿಕ್ಷೆ ವಿಧಿಸುವ ಅವಕಾಶವನ್ನು ಮಸೂದೆ ಒಳಗೊಂಡಿದೆ.

ಭಜನ್ ಲಾಲ್ ನೂತನ ಸಿ.ಎಂ

ಒಂದನೇ ಪುಟದಿಂದ

ರಾಜಕೀಯ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ.

ಮುಖ್ಯಮಂತ್ರಿ ಹುದ್ದೆಯ ಪ್ರಬಲ ಆಕಾಂಕ್ಷಿಗಳಲ್ಲಿ ಒಬ್ಬರಾಗಿದ್ದ ಹಿರಿಯ ನಾಯಕಿ ವಸುಂಧರಾ ರಾಜೇ ಅವರು ಶಾಸಕಾಂಗ ಪಕ್ಷದ ಸಭೆಯಲ್ಲಿ ಭಜನ್ ಲಾಲ್ ಹೆಸರನ್ನು ಸೂಚಿಸಿದರು.

ಉಪಮುಖ್ಯಮಂತ್ರಿಯಾಗಿ ಆಯ್ಕೆಯಾಗಿರುವ ಜೈಪುರ ರಾಜಮನೆತನದ ದಿಯಾ ಕುಮಾರಿ ಶಾಸಕಿಯಾಗಿರುವುದು ಇದು ಎರಡನೇ ಬಾರಿ. 52 ವರ್ಷದ ಅವರು 2013ರಲ್ಲಿ ಮೊದಲ ಸಲ ಆಯ್ಕೆಯಾಗಿದ್ದರು. ಈ ಬಾರಿ ವಿದ್ಯಾಧರ ನಗರ ಕ್ಷೇತ್ರದಿಂದ 71,368 ಮತಗಳ ಅಂತರದಿಂದ ಗೆದ್ದಿದ್ದಾರೆ. 2019ರಲ್ಲಿ ರಾಜಸಮಂದ್ ಕ್ಷೇತ್ರದಿಂದ ಸಂಸದರಾಗಿ ಆಯ್ಕೆಯಾಗಿದ್ದರು.

ದಲಿತ ಸಮುದಾಯಕ್ಕೆ ಸೇರಿದ 54 ವರ್ಷದ ಪ್ರೇಮಚಂದ್, ದುದು ವಿಧಾನಸಭಾ ಕ್ಷೇತ್ರದಿಂದ 35,743 ಮತಗಳ ಅಂತರದಿಂದ ಗೆದ್ದಿದ್ದಾರೆ. ಜೈಪುರದ ರಾಜಸ್ಥಾನ ವಿಶ್ವವಿದ್ಯಾಲಯದಿಂದ ಅವರು ಪಿಎಚ್.ಡಿ ಪದವಿ ಪಡೆದಿದ್ದಾರೆ.

ರಾಜಸ್ಥಾನದ ಒಟ್ಟು ಜನಸಂಖ್ಯೆ 7.82 ಕೋಟಿ ಆಗಿದ್ದು, ಅದರಲ್ಲಿ ಬ್ರಾಹ್ಮಣ ಸಮುದಾಯದವರು ಒಂದು ಕೋಟಿಯಷ್ಟು ಇದ್ದಾರೆ. ರಾಜಕೀಯದಲ್ಲಿ ಸೂಕ್ತ ಪ್ರಾತಿನಿಧ್ಯ ದೊರೆತಿಲ್ಲ ಎಂಬ ಅಸಮಾಧಾನವನ್ನು ಅವರು ಹೊಂದಿದ್ದರು. ಜಾತಿ ಸಮೀಕರಣ ಮತ್ತು ಮುಂಬರುವ ಲೋಕಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಪಕ್ಷದ ವರಿಷ್ಠರು ಭಜನ್ ಲಾಲ್ ಅವರನ್ನು ಆಯ್ಕೆ ಮಾಡಿದ್ದಾರೆ ಎಂದು ವಿಶ್ಲೇಷಿಸಲಾಗಿದೆ.

ರಾಜಸ್ಥಾನದ ಒಟ್ಟು ಜನಸಂಖ್ಯೆಯಲ್ಲಿ ದಿಯಾ ಅವರ ರಜಪೂತ ಸಮುದಾಯದ ಪ್ರಮಾಣವು ಶೇ 10ರಷ್ಟು ಇದ್ದರೆ, ಪರಿಶಿಷ್ಟ ಜಾತಿಯ ಜನಸಂಖ್ಯೆ ಶೇ 17ರಷ್ಟು. ದಿಯಾ ಮತ್ತು ಬೈರವ ಅವರ ಆಯ್ಕೆಯ ಹಿಂದೆ ಈ ಎರಡೂ ಸಮುದಾಯಗಳನ್ನು ಒಲಿಸಿಕೊಳ್ಳುವ ಉದ್ದೇಶ ಇದೆ.

'ಜನರು ಬಿಜೆಪಿ ಮೇಲೆ ಇಟ್ಟಿರುವ ನಿರೀಕ್ಷೆಗಳನ್ನು ರಾಜಸ್ಥಾನದ ಎಲ್ಲ ಶಾಸಕರು ಖಂಡಿತವಾಗಿಯೂ ಈಡೇರಿಸುವರು ಎಂದು ಭರವಸೆ ನೀಡುತ್ತೇನೆ. ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ರಾಜಸ್ಥಾನವು ಎಲ್ಲಾ ಕ್ಷೇತ್ರಗಳಲ್ಲಿ ಸಮಗ್ರ ಅಭಿವೃದ್ಧಿ ಯಾಗುವುದನ್ನು ನಾವು ಖಚಿತಪಡಿಸುತ್ತೇವೆ' ಎಂದು ಭಜನ್ ಲಾಲ್ ಪ್ರತಿಕ್ರಿಯಿಸಿದ್ದಾರೆ.

ಫೋಟೊದಲ್ಲಿ ಹಿಂದಿನ ಸಾಲಿನಲ್ಲಿದ್ದರು...

ಜೈಪುರ (ಪಿಟಿಐ): ರಾಜಸ್ಥಾನ ಬಿಜೆಪಿ ಶಾಸಕಾಂಗ ಪಕ್ಷದ ನಾಯಕನ ಆಯ್ಕೆಗೆ ಪಕ್ಷದ ಇಲ್ಲಿನ ಕಚೇರಿಯಲ್ಲಿ ಮಂಗಳವಾರ ಮಧ್ಯಾಹ್ನ ಸಭೆ ನಡೆಯಿತು. ಸಭೆಗೂ ಮುನ್ನ ಶಾಸಕರು ಗ್ರೂಪ್ ಫೋಟೊ ತೆಗೆಸಿಕೊಂಡಿದ್ದರು. ಈ ವೇಳೆ ಭಜನ್ ಲಾಲ್ ಶರ್ಮಾ ಅವರು ಹಿಂದಿನ ಸಾಲಿನಲ್ಲಿ ನಿಂತಿದ್ದರು! ಆದರೆ ಸರಿಸುಮಾರು ಒಂದು ಗಂಟೆಯ ಬಳಿಕ ಅವರು ಮುಂಚೂಣಿಗೆ ಬಂದರಲ್ಲದೆ, ಎಲ್ಲರ ಕೇಂದ್ರಬಿಂದು ಎನಿಸಿಕೊಂಡರು.

ಮುಖ್ಯಮಂತ್ರಿ ಹುದ್ದೆಗೆ ಆಕಾಂಕ್ಷಿಗಳ ದೊಡ್ಡ ಪಟ್ಟಿಯೇ ಇದ್ದರೂ, ಭಜನ್ ಲಾಲ್ ಹೆಸರು ಎಲ್ಲೂ ಕೇಳಿಬಂದಿರಲಿಲ್ಲ.

ಅನುದಾನ ಬಿಡುಗಡೆ ಸಂಬಂಧ ಕೇಂದ್ರದ ಜೊತೆ ಅಧಿಕಾರಿಗಳ ಸಂಪರ್ಕ: ಕೃಷ್ಣಬೈರೇಗೌಡ

ಸಾಮಾಜಿಕ ಭದ್ರತೆ ಯೋಜನೆಗಿಲ್ಲ ಕೇಂದ್ರದ ಹಣ

• ಮಂಜುನಾಥ ಹೆಬ್ಬಾರ್

ನವದೆಹಲಿ: 2023-24ನೇ ಆರ್ಥಿಕ ವರ್ಷದಲ್ಲಿ ಎಂಟು ತಿಂಗಳು ಕಳೆದರೂ ಕರ್ನಾಟಕದ ಸಾಮಾಜಿಕ ಭದ್ರತಾ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಒಂದು ಪೈಸೆ ಅನುದಾನವೂ ಬಿಡುಗಡೆಯಾಗಿಲ್ಲ.

ವೃದ್ಧಾಪ್ಯ, ಸಂಧ್ಯಾ ಸುರಕ್ಷಾ, ವಿಧವಾ, ಅಂಗವಿಕಲ ಸೇರಿದಂತೆ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳ ಫಲಾನುಭವಿಗಳಿಗೆ ಮಾಸಾಶನ ನೀಡಲು ರಾಜ್ಯ ಸರ್ಕಾರವು ವಾರ್ಷಿಕವಾಗಿ ₹10,500 ಕೋಟಿ ವೆಚ್ಚ ಮಾಡುತ್ತಿದೆ. ಈ ಯೋಜನೆಗಳಿಗೆ ಕೇಂದ್ರ ಸರ್ಕಾರ ವರ್ಷಕ್ಕೆ ₹450 ಕೋಟಿಯಿಂದ ₹500 ಕೋಟಿಯಷ್ಟು ಅನುದಾನ ನೀಡುತ್ತಿದೆ. ಆದರೆ, ಈ ವರ್ಷ ಅನುದಾನ ಬಿಡುಗಡೆಗೆ ಕೇಂದ್ರ ಸರ್ಕಾರ ಮೀನಮೇಷ ಎಣಿಸುತ್ತಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಇತ್ತೀಚೆಗೆ ಭೇಟಿ ಮಾಡಿದ್ದ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಅನುದಾನ ಬಿಡುಗಡೆ ಮಾಡುವಂತೆ ಮನವಿ ಸಲ್ಲಿಸಿದ್ದರು. ಹಣ ಬಿಡುಗಡೆಗೆ ಒತ್ತಾಯಿಸಿ ರಾಜ್ಯ ಸರ್ಕಾರ ಸಹ ಕೇಂದ್ರಕ್ಕೆ ಪತ್ರ ಬರೆದಿದೆ. ಇನ್ನೊಂದೆಡೆ, ಸಾಮಾಜಿಕ ಭದ್ರತಾ ಯೋಜನೆಗಳಿಗೆ ಕೇಂದ್ರ ನೀಡುತ್ತಿರುವ ಅನುದಾನದಲ್ಲಿ ಕಳೆದೆರಡು ವರ್ಷಗಳಿಂದ ಗಣನೀಯ ಇಳಿಕೆಯಾಗಿದೆ.

'ಈ ಆರ್ಥಿಕ ವರ್ಷ ಮುಗಿಯಲು ಮೂರು ತಿಂಗಳಷ್ಟೇ ಉಳಿದಿವೆ. ಈ ತನಕ ಭಾಗಶಃ ಅನುದಾನವಾದರೂ ಬರಬೇಕಿತ್ತು. ಈ ಬಗ್ಗೆ ಕೇಂದ್ರಕ್ಕೆ ಮನವರಿಕೆಯನ್ನೂ ಮಾಡಿಕೊಡಲಾಗಿದೆ. ಅನುದಾನ ಬಿಡುಗಡೆ ಸಂಬಂಧ ಕರ್ನಾಟಕ ಭವನದ ಅಧಿಕಾರಿಗಳು ಕೇಂದ್ರ ಸರ್ಕಾರದೊಂದಿಗೆ ನಿರಂತರ ಸಂಪರ್ಕದಲ್ಲಿದ್ದಾರೆ. ಬಡ ಫಲಾನುಭವಿಗಳಿಗೆ ಪಿಂಚಣಿ ನೀಡುವ ಈ ಯೋಜನೆಗೆ ಕೇಂದ್ರ ಆದಷ್ಟು ಬೇಗ ಹಣ ಬಿಡುಗಡೆ ಮಾಡಬೇಕು' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ 'ಪ್ರಜಾವಾಣಿ'ಗೆ ತಿಳಿಸಿದರು. 'ಕೆಲವು ಯೋಜನೆಗಳಿಗೆ ಕೇಂದ್ರದ ಹಣ ಬಿಡುಗಡೆಗೆ 'ಅನುದಾನ ಬಳಕೆ ಪ್ರಮಾಣಪತ್ರ' ಸಲ್ಲಿಸಬೇಕು. ಆದರೆ, ಈ ಯೋಜನೆಯಲ್ಲಿ ಹಣ ಬಿಡುಗಡೆಗೆ ಅಂತಹ ಷರತ್ತುಗಳೇನೂ ಇಲ್ಲ' ಎಂದು ಅವರು ಸ್ಪಷ್ಟಪಡಿಸಿದರು.

ರಾಜ್ಯದಲ್ಲಿ ಅನುಷ್ಠಾನಗೊಳ್ಳುತ್ತಿರುವ ಕೇಂದ್ರ ಸರ್ಕಾರದ ಸಹಭಾಗಿತ್ವದ ಯೋಜನೆಗಳಿಗೆ ಈ ವರ್ಷ ಇಲ್ಲಿಯವರೆಗೆ ₹10,450 ಕೋಟಿ ಅನುದಾನ ಬಿಡುಗಡೆಯಾಗಿದೆ. ನೇರವಾಗಿ ಅನುಷ್ಠಾನ ಇಲಾಖೆಗಳ ಖಾತೆಗಳಿಗೆ ಜಮೆ ಮಾಡಿರುವ ₹4,200 ಕೋಟಿಯೂ ಇದರಲ್ಲಿ ಸೇರಿದೆ.

ಸಾಮಾಜಿಕ ಭದ್ರತಾ ಯೋಜನೆ

ವರ್ಷ	ಕೇಂದ್ರದ ಅನುದಾನ(₹ಕೋಟಿಗಳಲ್ಲಿ)
2018-19	520
2019-20	520
2020-21	667
2021-22	495
2022-23	446

ವಿವಿಧ ಯೋಜನೆ- ಫಲಾನುಭವಿಗಳು

ಯೋಜನೆಗಳು	ಫಲಾನುಭವಿಗಳು
ವೃದ್ಧಾಪ್ಯ	19.47 ಲಕ್ಷ
ವಿಧವಾ	18 ಲಕ್ಷ
ಅಂಗವಿಕಲ	9.61 ಲಕ್ಷ
ಸಂಧ್ಯಾ ಸುರಕ್ಷಾ	30.64 ಲಕ್ಷ
ಮನಸ್ವಿನಿ	1.42 ಲಕ್ಷ
ಮೈತ್ರಿ	2,121
ಆತ್ಮಹತ್ಯೆ ಮಾಡಿಕೊಂಡ ಕೃಷಿಕನ ಪತ್ನಿ	6,107
ಆಸಿಡ್ ದಾಳಿಗೆ ಒಳಗಾದ ಮಹಿಳೆಯರು	49
ಎಂಡೋಸಲ್ಫಾನ್ ಸಂತ್ರಸ್ತರು	6,849
ಒಟ್ಟು	79.32 ಲಕ್ಷ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Cook
"ಇಂದಿರಾನಗರದಲ್ಲಿರುವ ಒಬ್ಬ ಮಹಿಳೆಯಿರುವ ಮನೆಗೆ ಮನೆಯಲ್ಲೇ ವಾಸಮಾಡಿಕೊಂಡು ಅಡಿಗೆಮಾಡಲು ಮಹಿಳೆ ಬೇಕಾಗಿದ್ದಾರೆ.ವಸತಿ ಸೌಲಭ್ಯ ನೀಡಲಾಗುತ್ತದೆ ಒಬ್ಬರಿಗೆ ಮಾತ್ರ. ಸಂಪರ್ಕಿಸಿ: 9845058243"

Domestic Helpers / Housekeeping
ಬೆಂಗಳೂರಿನ ಜೆಪಿ ನಗರದ ಮನೆಯಲ್ಲೇ ಉಳಿದುಕೊಂಡು ಮನೆಕೆಲಸ ಮಾಡುವ, ಕನ್ನಡ ಅಥವಾ ತೆಲುಗು ಅಥವಾ ತಮಿಳು ಮಾತನಾಡುವ ದಂಪತಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ: 9986071243

General
ಲಾಂಡ್ರಿಗೆ ಫ್ಯಾಕ್ಟರಿ ಹೆಲ್ಪರ್ಸ್ ಬೇಕಾಗಿದ್ದಾರೆ. ಸ್ಥಳ: ಕೋಳಿಫಾರಂ, ಬನ್ನೇರುಘಟ್ಟ ರಸ್ತೆ, ಬೆಂಗಳೂರು. ವೇತನ. 15000, ಊಟ + ವಸತಿ ನೀಡಲಾಗುತ್ತದೆ. ಸಮಯ: ಬೆಳಿಗ್ಗೆ 8 ರಿಂದ ಸಂಜೆ 7 ಭಾನುವಾರ ರಜಾದಿನ ಸಂಪರ್ಕಿಸಿ: 9880266007, 8050666007.

ಮಂಗಳೂರಿನ ದೇವಸ್ಥಾನಕ್ಕೆ ಪೌರೋಹಿತ್ಯ ತಿಳಿದ ಬ್ರಾಹ್ಮಣ ಪ್ರಧಾನ ಅರ್ಚಕರು ಕೂಡಲೇ ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಕೂಡಲೇ ಸಂಪರ್ಕಿಸಿ: 8310912684.

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ,TVS, ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ,ಡಿಗ್ರಿ, ITIನವರುಗಳು 17,000- 65,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

ಮಂಗಳೂರು–ಭಾರತದ ಅತೀ ದೊಡ್ಡ ಕಂಪೆನಿಯ ಹೊಸ ಆಫೀಸ್ ನಲ್ಲಿ ಉದ್ಯೋಗಗಳು. ಪಿಯುಸಿ ಆಗಿರಬೇಕು. 30–65 ವರ್ಷಗಳು, ಸಂದರ್ಶನ 16ನೇ ಶನಿವಾರ. ಫೋನ್: 6364563490/ 9972710151

ಕಂಪನಿ ಆಫೀಸ್, ವರ್ಕ್ ಫ್ರಮ್ ಹೋಂ ಬೇಕಾಗಿದ್ದಾರೆ. ವಯೋಮಿತಿ ಇರುವುದಿಲ್ಲ. 18,000–57,000/–. ಮೊದಲು ಬಂದವರಿಗೆ ಆದ್ಯತೆ. 8861041526, 99457191526

WANTED COMMUNITY worker at Electronic city-Phase 1 for repuated NGO contact immedately: 8310071645

Hospital & Medical Jobs
IK HOSPITAL (Alipur-Gauribidanur) is Recruiting Gynaecologist, Duty Doctors (Female), OT & Staff Nurses. For details contact: 9036064018.

ಬೇಕಾಗಿದ್ದಾರೆ: ANM/GNM ನರ್ಸ್ ಗಳು,OT Technicians, ಅನುಭವಿ ನರ್ಸ್ ಗಳು, ಕನ್ಸಲ್ಟಿಂಗ್ ಡಾಕ್ಟರ್ ಗಳಿಗೆ ಸಹಾಯಕಿಯರು. ಹಗಲು ಮತ್ತು ರಾತ್ರಿ ಪಾಳಿಯಲ್ಲಿ ಕೆಲಸ. ಸಂಪರ್ಕಿಸಿರಿ: ಧನ್ವಂತರಿ ಆಸ್ಪತ್ರೆ, ದರ್ಬೆ, ಪುತ್ತೂರು. 9845298052, 9743051261. e-mail:dhanvantharihospitalputturdk@gmail.com

Wanted
ರಾವ್ ಸಂಸ್ಥೆಗೆವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡುಗಿಯರು ಬೇಕಾಗಿದ್ದಾರೆ ಊಟವಸತಿಯಿದೆ12,000- 17,000, 8951315839, 7022770052

Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000ರಿಂದ20,000 ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 8050198999, 6366430266

ಉಚಿತ 50ಕೆ.ಜಿ. ಬೆಳೆಯುವ ಅಣಬೆ ಬೀಜವನ್ನು ಪಡೆದು ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ ಜಾಗದವಶ್ಯಕತೆಯಿಲ್ಲ. ತರಬೇತಿಗಾಗಿ 9036900002/ 8095555516

Manager
MANGALORE FINANCIAL sector company requires Dev. Managers & Business Associates. Only IRDA Licence holders Ph: 9972710151/ 8050969719

ಸಾರ್ವಜನಿಕ ಪ್ರಕಟಣೆ
ADVERTISEMENT OF PETITION
IN THE HIGH COURT OF KARNATAKA AT BENGALURU (ORIGINAL JURISDICTION)
IN THE MATTER OF THE COMPANIES ACT, 1956
IN THE MATTER OF M/s. SRI KRISHNA SHELTERS PRIVATE Ltd.,
COMPANY PETITION No.131/2016
BETWEEN:
M/s. ULTRATECH CEMENT Ltd. (Unit: Birla Ready Mix), A company incorporated under the Companies Act, 1956 having its Registered office at B-Wing, Ahura Centre, 2nd Floor, Mahakali Caves Road, Andheri (East), Mumbai-400 093. Regional Office at Industry House, 5th Floor, 45, Race Course Road, BENGALURU-560 001. Rep. by its Manager (Commercial), Sri. Sushil Singhania S/o Late Sri. K. C. Singhania, Aged 50 years, ...PETITIONER
:: AND ::
M/s. SRI KRISHNA SHELTERS PRIVATE Ltd., Managing Director– Mr. Raghavendra Regd. Office at #59, Sri Krishna Sudha, West Anjaneya Temple Street, Off: Basavangudi Main Road, Gandhi Bazaar, Bangalore-560 004. ...RESPONDENT
A Petition under Section 433 (e) of the Companies Act 1956, for winding up was presented by M/s. ULTRATECH CEMENT Ltd. on 10/06/2016 and the said petition is fixed for hearing before the Company Judge on 03/01/2024. Any person desirous of supporting or opposing the said petition should send to the petitioner's advocate, notice of his intention, signed by him or his advocate, with his name and address, so as to reach the petitioner's advocate not later than Five days before the date fixed for the hearing of the petition. Where he seeks to oppose the petition, the grounds of opposition or a copy of the affidavit shall be furnished with such notice. A copy of the petition will be furnished by the under-signed to any person requiring the same on payment of the prescribed charges for the same.
S. J. SANGHVI, Manjappa V, Advocates, #518, Avenue Road, Bangalore-560 002
Advocate for petitioner
Dated: 03/12/2023

ಭವಿಷ್ಯ
Astrology
ಒಂದೇ ಕರೆಯಲ್ಲಿಶಾಶ್ವತ ಪರಿಹಾರ ಸ್ತ್ರೀಪುರುಷ.ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿಪರಿಹಾರ ಪಂಡಿತ್:ಮೋಡಿ.ಬೆಟ್ಟಪ್ಪ ಉಚಿತ:ಭವಿಷ್ಯ:ಖಚಿತ ಪರಿಹಾರ,ದಕ್ಷಿಣಕನ್ನಡಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ವ್ಯಾಪಾರ
Business to Business
Business
ಮಹಿಳೆಯರಿಗೆ ಹಾಗೂ ಮಹಿಳಾ ಸಂಘ ಸಂಸ್ಥೆಗಳಿಗೆ ವ್ಯಾಪಾರ ಮಾಡುವುದಕ್ಕೆ ರೇಷ್ಮೆ ಸೀರೆಗಳನ್ನು, ಎಲ್ಲಾ ತರಹದ ಸೀರೆಗಳನ್ನು ಕೊಡಲಾಗುತ್ತದೆ. 8892501007/ 9606701007

ಪ್ರವಾಸ
Travel
★ಆರ್.ಗಾಂಧಿ ಟೂರ್ಸ್★ ವಿಮಾನದಲ್ಲಿ 05.02.2024, 10.02.2024, 15.02.2024 6 ದಿನಗಳ ಕಾಶಿ, ಗಯಾ ಪ್ರಯಾಗ ಅಯೋಧ್ಯೆ ಪ್ಯಾಕೇಜ್. 9945445809/ 9902433500

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
www.dhclassifieds.com
ಬುಕ್ ಮಾಡಿ
ಹೆಸರು ಬದಲಾವಣೆ
ನಿಮ್ಮ ಹೆಸರು ಬದಲಾವಣೆ ಆಗಿದೆಯೇ?
ಇಂದೇ ನಿಮ್ಮ ಜಾಹೀರಾತು ಬುಕ್ ಮಾಡಿರಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9886213331 | 9901641752
9845114560 | 9900428036
9731810277 | 080- 45557163/164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಷೇರುಪೇಟೆ ವಹಿವಾಟು 377



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	20,997
ಇಂದಿನ ಅಂತ್ಯ	20,906
▼	91
ದಿನದ ಕನಿಷ್ಠ	20,867

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹590
12 ಮೊಟ್ಟೆಗೆ	₹80
ಮೈಸೂರು	
100 ಮೊಟ್ಟೆಗೆ	₹595

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1620 (1620)
ಸೋಯಾ (ರಿಫೈನ್ಡ್)	₹915 (915)
ಸೂರ್ಯಕಾಂತಿ (ರಿಫೈನ್ಡ್)	₹927 (925)
ಪಾಮೋಲಿನ್	₹828 (828)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹305-470
ದ್ವಿತಳಿ (ಬಿ.ವಿ)	₹233-625

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹148
ಆರ್‌ಎಸ್‌ಎಸ್-5	₹144
ಗುಡ್ ಲಾಟ್	₹127

ವಿನಿಮಯ ದರ

$ ಡಾಲರ್	83.39
£ ಪೌಂಡ್	104.68
€ ಯುರೊ	89.91
¥ ಯೆನ್ (100ಕ್ಕೆ)	57

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹7962-8135
ಕೆ.ಆರ್.ಪೇಟೆ	₹8250-8250
ತಿಪಟೂರು	₹7000-8000
ತುಮಕೂರು	₹3800-4500
ತುರುವೇಕೆರೆ	₹7700-7900

₹34,115 ಕೋಟಿ ಬಂಡವಾಳ ಹೂಡಿಕೆಗೆ ಅನುಮೋದನೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಮಂಗಳವಾರ ನಡೆದ 'ರಾಜ್ಯ ಉನ್ನತಮಟ್ಟದ ಒಪ್ಪಿಗೆ ನೀಡುವ ಸಮಿತಿ ಸಭೆ'ಯು ₹34,115 ಕೋಟಿ ಮೊತ್ತದ ಬಂಡವಾಳ ಹೂಡಿಕೆಯ 14 ಉದ್ಯಮಗಳ ಸ್ಥಾಪನೆಗೆ ಅನುಮೋದನೆ ನೀಡಿತು.

ಹೂಡಿಕೆಯಿಂದಾಗಿ 13,308 ಜನರಿಗೆ ಉದ್ಯೋಗ ದೊರೆಯಲಿದೆ. ಹೆಚ್ಚುವರಿ ₹13,911 ಕೋಟಿ ಮೊತ್ತದ ಬಂಡವಾಳ ಹೂಡಿಕೆ ಮಾಡುವ ಫಾಕ್ಸ್‌ಕಾನ್‌ನ ಪ್ರಸ್ತಾವಕ್ಕೂ ಸಮಿತಿ ಅನುಮೋದನೆ ನೀಡಿತು. ಫಾಕ್ಸ್‌ಕಾನ್ ಈಗಾಗಲೇ ರಾಜ್ಯದಲ್ಲಿ ₹8,000 ಕೋಟಿ ಬಂಡವಾಳ ಹೂಡಿಕೆ ಮಾಡಲು ಅನುಮೋದನೆ ಪಡೆದಿದೆ.

ಜೆಎಸ್‌ಡಬ್ಲ್ಯು ರಿನ್ಯೂ ಎನರ್ಜಿ ಫೋರ್‌ಲಿಮಿಟೆಡ್ (₹4,960 ಕೋಟಿ), ಜೆಎಸ್‌ಡಬ್ಲ್ಯು ಸ್ಟೀಲ್ ಲಿಮಿಟೆಡ್ (₹3,804 ಕೋಟಿ), ಟೊಯೊಟಾ ಕಿರ್ಲೋಸ್ಕರ್ ಮೋಟರ್ ಪ್ರೈವೇಟ್ ಲಿಮಿಟೆಡ್ (₹3,237.30 ಕೋಟಿ), ಟಿಆರ್‌ಐಎಲ್ ಬೆಂಗಳೂರು ರಿಯಲ್ ಎಸ್ಟೇಟ್ ಸಿಕ್ಸ್ ಲಿಮಿಟೆಡ್ (₹3,273 ಕೋಟಿ ಹೂಡಿಕೆ), ಜಾನಕಿ ಕಾರ್ಪ್ ಲಿಮಿಟೆಡ್ (₹607 ಕೋಟಿ ಮೊತ್ತದ ಹೆಚ್ಚುವರಿ ಹೂಡಿಕೆ) ಪ್ರಸ್ತಾವಗಳು 'ಎಸ್‌ಎಚ್‌ಎಲ್‌ಸಿಸಿ' ಅನುಮೋದನೆ ಪಡೆದಿರುವ ದೊಡ್ಡ ಮೊತ್ತದ ಬಂಡವಾಳ ಹೂಡಿಕೆ ಯೋಜನೆಗಳಲ್ಲಿ ಸೇರಿವೆ. ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಬಂಡವಾಳ ಹೂಡಿಕೆಯ ನಾಲ್ಕು ಪ್ರಸ್ತಾವಗಳಿಗೆ ಅನುಮೋದನೆ ನೀಡಲಾಯಿತು. ಈ ಯೋಜನೆಗಳಿಂದ ಒಟ್ಟು ₹9,461 ಕೋಟಿ ಮೊತ್ತದ ಬಂಡವಾಳ ಹೂಡಿಕೆ ಆಗಲಿದೆ. ಇವುಗಳಿಂದ ಈ ಪ್ರದೇಶದಲ್ಲಿ 3,538 ಜನರಿಗೆ ಉದ್ಯೋಗ ದೊರೆಯಲಿದೆ.

ಮುಂಬೈ ಧಾರಣೆ

ಶೇಂಗಾ

12-12-2023

ಜಾವಾ 70/80(ಹೊಸ)	12000-12100
ಜಾವಾ 80/90(ಹೊಸ)	11000-11100
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10800-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1630)
ಒಂದು ವಾರದ ಡೆಲಿವರಿ	1625 (1625)
ಸೋಯಾ ಕಚ್ಚಾ	880 (890)
ಪಾಮ್ ವಾರದ ಡೆಲಿವರಿ	826 (826)
ಸೂರ್ಯಕಾಂತಿ ಎಣ್ಣೆ ಕಚ್ಚಾ	860 (860)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
61,000 (61,300)
ಬೆಳ್ಳಿ ಕೆ.ಜಿ 71,600 (71,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸಹಜ ಕೃಷಿಕ ಕೈಲಾಸಮೂರ್ತಿ ಅವರ 'ಶಿಸ್ತು' ಪ್ರಯೋಗ ಯಶಸ್ವಿ

ಬರಗಾಲದಲ್ಲೂ ಭರ್ಜರಿ ಭತ್ತ!

• ಮೋಹನ್ ಕುಮಾರ ಸಿ.

ಮೈಸೂರು: ಕಾವೇರಿ ಜಲಾನಯನ ಪ್ರದೇಶದಲ್ಲಿ ನೀರಿನ ಅಭಾವದಿಂದ ಭತ್ತದ ಗದ್ದೆಗಳು ಬಹುತೇಕ ಪಾಳು ಬಿದ್ದಿದ್ದರೆ, ತಿ.ನರಸೀಪುರ ತಾಲ್ಲೂಕಿನ ಮಾಡ್ರಹಳ್ಳಿಯ ಸಹಜ ಕೃಷಿಕ ಎಂ.ಕೆ. ಕೈಲಾಸಮೂರ್ತಿ ಅವರು, ಮಳೆ ನೀರಿನಲ್ಲೇ 25–30 ಕ್ವಿಂಟಲ್ ಭತ್ತ ಬೆಳೆದು ಅಚ್ಚರಿ ಗೊಳಿಸಿದ್ದಾರೆ.

ಮಳೆ ಕಡಿಮೆಯಾಗಿರುವುದರಿಂದ ಕಟ್ಟು ಪದ್ಧತಿಯಲ್ಲಿ ಕಬಿನಿ ಜಲಾಶಯದಿಂದ ಕಾಲುವೆಗಳಿಗೆ ನೀರು ಹರಿಸಲಾಗುತ್ತಿದೆ. ನಷ್ಟ ಭೀತಿಯಲ್ಲಿ ರೈತರು ಭತ್ತ ನಾಟಿ ಮಾಡದೆ ಹೆಸರು, ಉದ್ದು ಬೆಳೆದಿದ್ದಾರೆ. ಮೂರ್ತಿ ಅವರು ಬೆಳೆದಿರುವ ಭತ್ತ ಮಾತ್ರ ನಳನಳಿಸುತ್ತಿದೆ.

'ಶಿಸ್ತು' ವಿಧಾನ: ಶೇ 90ರಷ್ಟು ನೀರು ಉಳಿಸುವ, ಗೊಬ್ಬರ, ಕೀಟನಾಶಕ ಬೇಕಾಗದ, ಮಣ್ಣಿನ ಫಲವತ್ತತೆ ಹೆಚ್ಚಿಸುವ, ಆದಾಯ ದ್ವಿಗುಣಗೊಳಿಸುವ ಹೊಸ ವಿಧಾನ ಇದು. ಅಪಘಾತದಲ್ಲಿ ಸಾವನ್ನಪ್ಪಿದ ಮೊಮ್ಮಗ ಶಿವಾಂಕ್ ಹಾಗೂ ಗಾಯಗೊಂಡಿದ್ದ ಮೊಮ್ಮಗಳು 'ಸ್ತುತಿ'

ತಿ.ನರಸೀಪುರದ ಮಾಡ್ರಹಳ್ಳಿಯಲ್ಲಿ ಸಹಜ ಕೃಷಿಕ ಎಂ.ಕೆ.ಕೈಲಾಸ ಮೂರ್ತಿ ಅವರು ಕಡಿಮೆ ನೀರಿನಲ್ಲಿ ಬೆಳೆದಿರುವ ಭತ್ತ

> **ನನ್ನಂತೆಯೇ ಭತ್ತ ಬೆಳೆದರೆ ಬೆಂಗಳೂರಿಗೆ ನೀರಿನ ಅಭಾವವಾಗದು. ಮೇಕೆದಾಟು ಅಣೆಕಟ್ಟೆಯೇ ಬೇಕಿಲ್ಲ**
> **ಎಂ.ಕೆ.ಕೈಲಾಸಮೂರ್ತಿ,** ನೈಸರ್ಗಿಕ ಕೃಷಿಕ

ಅವರ ಹೆಸರಿನ ಮೊದಲಕ್ಷರಗಳನ್ನು ಸೇರಿಸಿ ವಿಧಾನಕ್ಕೆ 'ಶಿಸ್ತು' ಎಂದು ಹೆಸರಿಸಿದ್ದು, ಬೆಳೆಯು ಶಿಸ್ತು ಬೇಡುತ್ತದೆ.

ಮೂರು ವರ್ಷದಿಂದ ನಾಲ್ಕು ಎಕರೆಯಲ್ಲಿ ನಡೆಸಿದ ಪ್ರಯೋಗ ಯಶಸ್ವಿಯಾಗಿದ್ದು, 15 ದಿನಕ್ಕೊಮ್ಮೆ ಇದುವರೆಗೂ ನಾಲ್ಕು ಬಾರಿಯಷ್ಟೇ ನೀರು ಹಾಯಿಸಿದ್ದಾರೆ. ಒಂದು ಅಂಗುಲದಷ್ಟೇ ಹಾಯಿಸುತ್ತಾರೆ. ಮಳೆ ನೀರು ನಿಲ್ಲದಂತೆ ಕಾಲುವೆಯಲ್ಲಿ ಬಸಿದುಬಿಡುತ್ತಾರೆ. ಇತರರು ಒಂದು ಎಕರೆಗೆ ಬಳಸುವಷ್ಟು ನೀರಿನಿಂದ ಶಿಸ್ತು ವಿಧಾನದಲ್ಲಿ 10 ಎಕರೆಯಲ್ಲಿ ಭತ್ತ ಬೆಳೆಯಬಹು ಎಂಬುದು ವಿಶೇಷ.

'ಸಾಲು ಪದ್ಧತಿಯಲ್ಲಿ ಪ್ರತಿ ಒಂಬತ್ತು ಅಂಗುಲಕ್ಕೆ ಭತ್ತ ಬಿತ್ತಿದ್ದೇನೆ. ಅದಕ್ಕಾಗಿ ನವಲಗುಂದದಲ್ಲಿ ಮಿನಿ ಟ್ರ್ಯಾಕ್ಟರ್‌ಗೆ ಬಿತ್ತನೆ ಯಂತ್ರವನ್ನು ಅಳವಡಿಸಿ ಅಭಿವೃದ್ಧಿಪಡಿಸಿರುವೆ. ನಾನೇ ಇಲ್ಲಿ ಕಾರ್ಮಿಕ–ಮಾಲೀಕ. ನನ್ನ ವಿಧಾನದಲ್ಲಿ, ಭತ್ತ ಬೆಳೆಯುವ ಭೂಮಿಯನ್ನು 10 ಪಟ್ಟು ವಿಸ್ತರಿಸಬಹುದು' ಎಂದು 'ಪ್ರಜಾವಾಣಿ'ಗೆ ತಿಳಿಸಿದರು.

'ಕಳೆ ಸಸ್ಯಗಳ ಬೆಳವಣಿಗೆ ತಡೆಯಲು ಎತ್ತರದ ತಳಿ ಬಳಸಬೇಕು. ನಾನು ಆರ್‌ಎನ್‌ಆರ್ ತಳಿ ಬಳಸಿ ಸಾವಯವ ಪದ್ಧತಿಯಲ್ಲಿ ಬೆಳೆದಿರುವೆ. ಎಕರೆಗೆ 25ರಿಂದ 30 ಕ್ವಿಂಟಲ್ ಇಳುವರಿ ಸಿಗಲಿದೆ. ರೋಗ ಬಂದರೂ ಹೆಚ್ಚು ಬಾಧೆ ಇರಲಿಲ್ಲ. ನೀರು ಕಡಿಮೆಯಾದರೂ 18 ಕ್ವಿಂಟಲ್ ಸಿಕ್ಕೇ ಸಿಗುತ್ತದೆ. ಭೂಮಿಯ ಫಲವತ್ತತೆ ಹಾಳಾಗುವುದರಿಂದ ಅಂತರ್ಜಲದ ನೀರನ್ನು ಬಳಸಿಲ್ಲ' ಎಂದರು.

ನಿಗಮದ ನೆರವು: ತೂಬು ಕಾಲುವೆಯು ಗದ್ದೆ ಪಕ್ಕ ಹೋಗಿದ್ದು, ತೇವಾಂಶ ಹಾಗೂ ನೀರು ಗದ್ದೆಯೊಳಕ್ಕೆ ಹೋಗುತ್ತಿತ್ತು. ಅದರ ತಡೆಗೆ ಕಾವೇರಿ ನೀರಾವರಿ ನಿಗಮವು ₹ 75 ಲಕ್ಷ ವೆಚ್ಚದಲ್ಲಿ ಸಿಮೆಂಟ್ ಕಾಲುವೆ ನಿರ್ಮಿಸಿರುವುದರಿಂದ ನೀರು ಪೋಲಾಗುವುದು ತಪ್ಪಿದೆ.

ರಾಜ್ಯಗಳಿಗೆ ಜಿಎಸ್‌ಟಿ ಪರಿಹಾರ ಬಾಕಿ ಚುಕ್ತಾ: ಸಚಿವೆ ನಿರ್ಮಲಾ

ನವದೆಹಲಿ (ಪಿಟಿಐ): 'ಯಾವುದೇ ರಾಜ್ಯಕ್ಕೆ ಸರಕು ಮತ್ತು ಸೇವಾ ತೆರಿಗೆಯ (ಜಿಎಸ್‌ಟಿ) ಪರಿಹಾರ ಬಾಕಿ ಉಳಿಸಿಕೊಂಡಿಲ್ಲ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸ್ಪಷ್ಟಪಡಿಸಿದ್ದಾರೆ.

'ಪಶ್ಚಿಮ ಬಂಗಾಳಕ್ಕೆ ಜಿಎಸ್‌ಟಿ ಪರಿಹಾರ ಮೊತ್ತ ಬಾಕಿ ಉಳಿದಿದೆ' ಎಂಬ ತೃಣಮೂಲ ಕಾಂಗ್ರೆಸ್‌ನ ರಾಜ್ಯಸಭಾ ಸದಸ್ಯ ಸಾಕೇತ್ ಗೋಖಲೆ ಅವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ರಾಜ್ಯಗಳಿಗೆ ಬಾಕಿ ಮೊತ್ತ ಪಾವತಿಸಲು ಕೇಂದ್ರ ಸರ್ಕಾರ ಸಿದ್ಧವಿದೆ. ಆದರೆ, ಎಷ್ಟು ಮೊತ್ತ ಸಿಗಬೇಕು ಎನ್ನುವ ಕುರಿತು ಆಯಾ ರಾಜ್ಯವು ಅಕೌಂಟೆಂಟ್ ಜನರಲ್ (ಎ.ಜಿ) ಪ್ರಮಾಣ ಪತ್ರ ಸಲ್ಲಿಸುವುದು ಕಡ್ಡಾಯ' ಎಂದರು.

'ಕೇಂದ್ರದಿಂದ ಹಣ ಪಾವತಿಯಲ್ಲಿ ವಿಳಂಬವಾಗುತ್ತದೆ ಎಂಬುದು ಸರಿಯಲ್ಲ. ಕೆಲವು ರಾಜ್ಯಗಳು ಇನ್ನೂ ಎ.ಜಿ ಪ್ರಮಾಣ ಪತ್ರ ಸಲ್ಲಿಸಿಲ್ಲ. ಅದನ್ನು ಸಲ್ಲಿಸದ ರಾಜ್ಯಗಳು ಅನಗತ್ಯವಾಗಿ ಕೇಂದ್ರದ ವಿರುದ್ಧ ಆರೋಪ ಮಾಡುತ್ತಿವೆ. ಅವುಗಳ ಪಾಲಿನ ಬಾಕಿ ಬಿಡುಗಡೆ ಮಾಡಲು ಸಾಧ್ಯವಿಲ್ಲ' ಎಂದು ಹೇಳಿದರು.

2022–23ನೇ ಸಾಲಿನಡಿ ಕರ್ನಾಟಕ ಹೊರತುಪಡಿಸಿದರೆ ಯಾವುದೇ ರಾಜ್ಯ ಪ್ರಮಾಣ ಪತ್ರ ಸಲ್ಲಿಸಿಲ್ಲ ಎಂದ ಅವರು, ಪಶ್ಚಿಮ ಬಂಗಾಳವು 2019–20ರ ಹಣಕಾಸು ವರ್ಷದಿಂದ 2022–23ರ ಮೊದಲ ತ್ರೈಮಾಸಿಕ ಅವಧಿವರೆಗಿನ ಪ್ರಮಾಣ ಪತ್ರ ನೀಡಿಲ್ಲ. ಸಲ್ಲಿಕೆ ಮಾಡಿದರೆ ಬಾಕಿ ಮೊತ್ತವನ್ನು ತ್ವರಿತವಾಗಿ ಬಿಡುಗಡೆಗೊಳಿಸಲಾಗುವುದು ಎಂದು ಭರವಸೆ ನೀಡಿದರು.

ಚಿಲ್ಲರೆ ಹಣದುಬ್ಬರ ಶೇ 5.55ಕ್ಕೆ ಏರಿಕೆ

ನವದೆಹಲಿ (ಪಿಟಿಐ): ದೇಶದ ಚಿಲ್ಲರೆ ಹಣದುಬ್ಬರವು ಕಳೆದ ಮೂರು ತಿಂಗಳಿಗೆ ಹೋಲಿಸಿದರೆ ನವೆಂಬರ್‌ನಲ್ಲಿ ಶೇ 5.55ರಷ್ಟು ಏರಿಕೆಯಾಗಿದೆ. ಜನರ ದೈನಂದಿನ ಬಳಕೆಯ ಆಹಾರ ಪದಾರ್ಥಗಳ ದರವು ಅಲ್ಪಾವಧಿಯಲ್ಲಿ ಏರಿಕೆ ಯಾಗಿರುವುದೇ ಇದಕ್ಕೆ ಕಾರಣವಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ಗ್ರಾಹಕರ ದರ ಸೂಚ್ಯಂಕ (ಸಿಪಿಐ) ಆಧಾರಿತ ಈ ಚಿಲ್ಲರೆ ಹಣದುಬ್ಬರವು ಅಕ್ಟೋಬರ್‌ನಲ್ಲಿ ಶೇ 4.87ರಷ್ಟು ಕನಿಷ್ಠ ಮಟ್ಟದಲ್ಲಿ ದಾಖಲಾಗಿತ್ತು. ಕಳೆದ ಹಣಕಾಸು ವರ್ಷದ ನವೆಂಬರ್‌ನಲ್ಲಿ ಶೇ 5.88ರಷ್ಟಿತ್ತು.

ಯುಪಿಐ ಸ್ವಯಂ ಪಾವತಿ ಮಿತಿ ₹1 ಲಕ್ಷಕ್ಕೆ ಏರಿಕೆ

ಮುಂಬೈ (ಪಿಟಿಐ): ಯುಪಿಐ ಮೂಲಕ ನಡೆಸುವ ಸ್ವಯಂ ಪಾವತಿ ಮಿತಿಯನ್ನು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ₹1 ಲಕ್ಷಕ್ಕೆ ಹೆಚ್ಚಿಸಿದೆ.

ಮ್ಯೂಚುವಲ್ ಫಂಡ್‌ಗಳಿಗೆ ಚಂದಾದಾರಿಕೆ, ವಿಮಾ ಕಂತುಗಳ ಪಾವತಿ ಮತ್ತು ಕ್ರೆಡಿಟ್ ಕಾರ್ಡ್ ಬಿಲ್ ಪಾವತಿಗಳಿಗಾಗಿ ಪ್ರತಿ ವಹಿವಾಟಿಗೆ ₹15 ಸಾವಿರದಿಂದ ₹1 ಲಕ್ಷಕ್ಕೆ ಮಿತಿ ಹೆಚ್ಚಿಸಲು ನಿರ್ಧರಿಸಲಾಗಿದೆ ಎಂದು ಆರ್‌ಬಿಐ ಮಂಗಳವಾರ ತಿಳಿಸಿದೆ.

ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು ದ್ವೈಮಾಸಿಕ ಹಣಕಾಸು ನೀತಿಯನ್ನು ಅನಾವರಣಗೊಳಿಸುವ ವೇಳೆ ಈ ಬಗ್ಗೆ ಘೋಷಿಸಿದ್ದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	850-900
ನಡುಗೋಲು	1000-1100
ರಾಶಿ	1200-1250
ರಾಶಿ ಉತ್ತಮ	1300-1350
ಹೆರಕಿದ್ದು	2000-2100
ಹಸಿರು ಸಾಧಾರಣ	1350-1450
ಹಸಿರು ಉತ್ತಮ	1500-1600
ಹಸಿರು ಅತಿ ಉತ್ತಮ	2000-2100
ಕಾಳು ಮೆಣಸು	585-590
ಅಡಿಕೆ	
ಬಂಟ್ವಾಳ	
ಕೋಕ	15000-27500
ಹೊಸತು	27500-36000
ಹಳತು	42500-45500
ಸಾಗರ	
ಬಿಳಿಗೋಟು	33399-33399
ಚಾಲಿ	34299-38399
ಕೋಕ	31899-31899
ಕೆಂಪುಗೋಟು	32499-32499
ರಾಶಿ	45699-47439
ಸಿಪ್ಪೆಗೋಟು	15099-20910
ಸಿದ್ದಾಪುರ	
ಬಿಳಿಗೋಟು	30889-34109
ಚಾಲಿ	37619-39209
ಕೋಕ	30689-34089
ಕೆಂಪುಗೋಟು	32089-33119
ರಾಶಿ	42619-46839
ತಟ್ಟಿಬೆಟ್ಟೆ	38109-42309
ಶಿರಸಿ	
ಬೆಟ್ಟೆ	37699-45919
ಬಿಳಿಗೋಟು	32699-36199
ಚಾಲಿ	37119-39799
ಕೆಂಪುಗೋಟು	29799-34719
ರಾಶಿ	44699-47899
ಯಲ್ಲಾಪುರ	
ಅಪಿ	60079-66679
ಬಿಳಿಗೋಟು	25699-34720
ಚಾಲಿ	36599-39700
ಕೋಕ	16899-30269
ಕೆಂಪುಗೋಟು	25499-34109
ರಾಶಿ	43007-58099
ತಟ್ಟಿಬೆಟ್ಟೆ	37409-42999

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	12900	13300	-	184.10
ಎಸಿ	7140	7000	-	
ಆರ್‌ಪಿ	10200	10000	-	ಲಂಡನ್-
ಆರ್‌ಸಿ	6225	6000	-	2653 ಡಾಲರ್ಸ್

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಮಹಾದೇವಪ್ಪ ನಿಂಗಪ್ಪ ಮಲ್ಲಿಗವಾಡ, ಹುಬ್ಬಳ್ಳಿ

• **ಪ್ರಶ್ನೆ: ನಾನು 2023ರ ಮಾರ್ಚ್ 31ರಂದು ನನ್ನ ಸ್ವಂತ ವಶದಲ್ಲಿದ್ದ ಜಮೀನನ್ನು ಮಾರಾಟ ಮಾಡಿರುತ್ತೇನೆ. ಇದರಲ್ಲಿ ಎರಡು ಪ್ರತ್ಯೇಕ ಜಮೀನುಗಳಿದ್ದು ₹65.63 ಲಕ್ಷ ಹಾಗೂ ₹17.50 ಲಕ್ಷ ಹೀಗೆ ಒಟ್ಟಾರೆ ₹83.13 ಲಕ್ಷ ಈ ಮಾರಾಟದಿಂದ ಬಂದಿದೆ. ಮೊದಲು ಉಲ್ಲೇಖಿಸಿದ ಮೊತ್ತಕ್ಕೆ ₹65,625 ತೆರಿಗೆ ಕಟಾಯಿಸಲಾಗಿದೆ. ಈ ಮಾರಾಟಕ್ಕೆ ಸಂಬಂಧಿಸಿ ತೆರಿಗೆ ವಿವರ ಸಲ್ಲಿಸಲು ಇಬ್ಬರು ಲೆಕ್ಕ ಪರಿಶೋಧಕರನ್ನು ಭೇಟಿಯಾದೆ. ಒಬ್ಬರ ಪ್ರಕಾರ ₹12 ಲಕ್ಷ ಹಾಗೂ ಇನ್ನೊಬ್ಬರ ಪ್ರಕಾರ ₹8 ಲಕ್ಷ ತೆರಿಗೆ ಬರುವ ಬಗ್ಗೆ ಹೇಳಿರುತ್ತಾರೆ. ಆದರೆ, ನಾವು ರೈತಾಪಿ ಜನರು ಮಾರಾಟದ ಹಣದಲ್ಲಿ ನನ್ನ ಇಬ್ಬರ ಹೆಣ್ಣುಮಕ್ಕಳಿಗೆ ತಲಾ ₹10 ಲಕ್ಷ, ಇಬ್ಬರು ಗಂಡು ಮಕ್ಕಳಲ್ಲಿ ಒಬ್ಬನ ಮಗನಿಗೆ (ಮೊಮ್ಮಗನಿಗೆ) ₹32 ಲಕ್ಷ ಕೊಟ್ಟು ಕೃಷಿ ಭೂಮಿ ಖರೀದಿಸಿದ್ದೇನೆ ಹಾಗೂ ಇನ್ನೊಬ್ಬ ಮಗನಿಗೆ ವ್ಯಾಪಾರ ವಹಿವಾಟು ಮಾಡಲು ₹20 ಲಕ್ಷ ಹಂಚಿಕೆ ಮಾಡಿ ಉಳಿದ ಮೊತ್ತವನ್ನು ನಾನು ಹಾಗೂ ನನ್ನ ಹೆಂಡತಿಯ ಹೆಸರಲ್ಲಿ ಬ್ಯಾಂಕಿನ ಉಳಿತಾಯ ಖಾತೆ ಹಾಗೂ ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡಿದ್ದೇವೆ. ಮುಂದೆ ನಾವು ಈ ಹಣಕ್ಕೆ ತೆರಿಗೆ ಕಟ್ಟಬೇಕಾದ ಪರಿಸ್ಥಿತಿ ಬರಬಹುದೇ. ಈ ಬಗ್ಗೆ ತಿಳಿಸಿಕೊಡಿ.**

ಉತ್ತರ: ನಿಮ್ಮ ಆಸ್ತಿ ಮಾರಾಟ ವಿಚಾರದಲ್ಲಿ ಈಗಾಗಲೇ ತೆರಿಗೆ ಕಟಾವಣೆಯಾಗಿದೆ ಹಾಗೂ ಈ ಬಗ್ಗೆ ತೆರಿಗೆ ಇಲಾಖೆಯಲ್ಲಿ ಮಾಹಿತಿ ಲಭ್ಯವಿದೆ ಎನ್ನುವುದು ನಿಮ್ಮ ಪ್ರಶ್ನೆಯಲ್ಲಿ ಇರುವ ಅಂಶ. ಇನ್ನೊಂದು ಆಸ್ತಿಯ ಮಾರಾಟವೂ ಆಗಿ ಅದರ ಮೊತ್ತವೂ ನಿಮಗೆ ಲಭ್ಯವಾಗಿದೆ. ಹೀಗಾಗಿ, ಈ ಹಂತದಲ್ಲೇ, ಆರ್ಥಿಕ ವರ್ಷ 2022-23ಕ್ಕೆ ಆಸ್ತಿಯ ಒಡೆತನ ಇದ್ದ ವ್ಯಕ್ತಿಯ ಹೆಸರಲ್ಲಿ ತೆರಿಗೆ ನಿರ್ಧಾರವಾಗುತ್ತದೆ. ಇನ್ನು ತೆರಿಗೆ ರಿಟರ್ನ್ಸ್ ಸಲ್ಲಿಸಲು ಈಗಾಗಲೇ ನಿಗದಿತ ಗಡುವು ಮೀರಿದೆ (ಜುಲೈ 31). ಆದರೆ, ಹೆಚ್ಚುವರಿ ದಂಡ ಪಾವತಿಸಿ ರಿಟರ್ನ್ಸ್ ಸಲ್ಲಿಸಲು ಡಿಸೆಂಬರ್ 31ರ ತನಕ ಅವಕಾಶವಿದೆ. ಇದರೊಡನೆ, ಅನ್ವಯವಾಗುವ ತೆರಿಗೆ ಹಾಗೂ ಅದರ ಮೇಲೆ ಅನ್ವಯವಾಗುವ ಬಡ್ಡಿಯನ್ನೂ ಪಾವತಿಸಬೇಕಾಗುತ್ತದೆ. ಈ ಬಗ್ಗೆ ತ್ವರಿತ ಸಲಹೆ ಪಡೆದುಕೊಳ್ಳಿ ಹಾಗೂ ನಿಮ್ಮ ನಿರ್ಣಯ ಅಗತ್ಯ.

ನೀವು ಹೇಳಿರುವಂತೆ ಪ್ರತ್ಯೇಕವಾದ ತೆರಿಗೆ ಪಾವತಿಯ ಸಲಹೆಗಳು ಬಂದಿರುತ್ತವೆ. ಇದರ ನಿವಾರಣೆಗೆ ನೀವು ಅವರಿಗೆ ನೀಡಿದ ಮಾಹಿತಿ ಒಂದೇ ಪ್ರಕಾರವಾದುದೇ ಎಂಬುದನ್ನು ಮೊದಲು ಖಚಿತಪಡಿಸಿಕೊಳ್ಳಿ. ಅವರು ಅದನ್ನು ಅರ್ಥೈಸಿ ಲೆಕ್ಕಾಚಾರಕ್ಕೆ ಪರಿಗಣಿಸಿದ ವಿವರಗಳು ವ್ಯತ್ಯಾಸವಿರಬಹುದು. ಇದಕ್ಕಾಗಿ ಸಂಪೂರ್ಣ ವಿವರದ ಮಾಹಿತಿ ಪಡೆದು ತುಲನೆ ಮಾಡಿಕೊಳ್ಳಿ ಹಾಗೂ ಸಂದೇಹ ಬಗೆಹರಿಸಿಕೊಳ್ಳಿ.

ಇನ್ನು ನಿಮ್ಮ ಮಕ್ಕಳ, ಮೊಮ್ಮಕ್ಕಳ ಹೆಸರಿಗೆ ಬಂದಿರುವ ಹಣ ವರ್ಗಾವಣೆ ಮಾಡಿದ ಮಾತ್ರಕ್ಕೆ ನಿಮಗೆ ಅನ್ವಯವಾಗುವ ವೈಯಕ್ತಿಕ ತೆರಿಗೆ ಬಾಧ್ಯತೆಯಿಂದ ತಪ್ಪಿಸಿಕೊಳ್ಳುವುದು ಕಷ್ಟ. ಮಾತ್ರವಲ್ಲ ಅವರ ಹಣದ ಮೂಲದ ದಾಖಲೆಯ ದೃಷ್ಟಿಯಿಂದಲೂ ಇದನ್ನು 'ಉಡುಗೊರೆ'ಯ ರೂಪದಲ್ಲಿ ನೀವೇ ನೀಡಿರುವ ಬಗ್ಗೆ ಸೂಕ್ತ 'ಗಿಫ್ಟ್ ಡೀಡ್' ಇರಿಸುವುದು ಸೂಕ್ತ. ಈ ಹಣದ ವರ್ಗಾವಣೆಗೆ ಮತ್ತೊಮ್ಮೆ ತೆರಿಗೆ ಇರುವುದಿಲ್ಲ.

ನಾಗರಾಜ್, ಅರಸೀಕೆರೆ

• **ಪ್ರಶ್ನೆ: ಅಕ್ಟೋಬರ್ 25ರ ಸಂಚಿಕೆಯಲ್ಲಿ ನನ್ನ ಪ್ರಶ್ನೆಗೆ ಉತ್ತರಿಸುತ್ತಾ ನೀವು ಊಹಿಸಿರುವಂತೆ ನನ್ನ ಮಾಸಿಕ ಪಿಂಚಣಿ ಆದಾಯ ₹1 ಲಕ್ಷದ ಸಮೀಪ ಇದ್ದು, ಇದು ವಾರ್ಷಿಕವಾಗಿ ₹11 ಲಕ್ಷದಿಂದ ₹12 ಲಕ್ಷ ಆಗಿರುತ್ತದೆ. ನನ್ನ ಮುಖ್ಯ ಪ್ರಶ್ನೆ ಏನೆಂದರೆ ನನಗೆ ವಯಸ್ಸು 82 ಆಗಿರುವುದರಿಂದ ನನ್ನ ಸೂಪರ್ ಸೀನಿಯಾರಿಟಿ ಪರಿಗಣಿಸಿ ಆದಾಯ ತೆರಿಗೆಯಲ್ಲಿ ವಿಶೇಷ ರಿಯಾಯಿತಿಗಳಿವೆಯೇ ಎಂಬುದು. ಇದಲ್ಲದೆ ಸೆಕ್ಷನ್ 194ಪಿ ಇದರಲ್ಲಿ ಏನಿದೆ. ಹಾಗೆ ಹಳೆಯ ಪದ್ಧತಿ ಆಯ್ಕೆ ಮಾಡಿಕೊಂಡರೆ ₹5 ಲಕ್ಷ ತೆರಿಗೆ ಮಿತಿ ಹಾಗೂ ಹೊಸ ತೆರಿಗೆ ಪದ್ಧತಿ ಆರಿಸಿದರೆ ₹7 ಲಕ್ಷ ವಿನಾಯಿತಿ ಎಂಬುದು ಸರಿಯೇ .**

ಉತ್ತರ: ನಿಮ್ಮ ಪ್ರಶ್ನೆಯಲ್ಲಿ ಉಲ್ಲೇಖಿಸಿರುವ ವಿಚಾರ ಸರಿಯಾಗಿದ್ದರೂ ಅವನ್ನು ಅನ್ವಯಿಸುವ ಸಂದರ್ಭಗಳನ್ನೂ ನಾವು ಗಮನಿಸಬೇಕಾಗುತ್ತದೆ. ಕಾರಣ ಇಂತಹ ವಿಚಾರದಲ್ಲಿ ಹೊರನೋಟಕ್ಕೆ ಸಾಮಾನ್ಯವಾಗಿ ಎಲ್ಲರೂ ಅರ್ಥೈಸುವ ವಿಚಾರವೆಂದರೆ ಹೊಸ ತೆರಿಗೆ ಪದ್ಧತಿಯನ್ನು ಆಯ್ಕೆ ಮಾಡಿದೊಡನೆ ಎಲ್ಲರಿಗೂ ₹7 ಲಕ್ಷದ ಆದಾಯದ ತನಕ ತೆರಿಗೆಯೇ ಇಲ್ಲ ಎಂಬುದು. ಆದರೆ, ಗಮನಿಸಬೇಕಾದ ಮುಖ್ಯ ಅಂಶವೆಂದರೆ, ತೆರಿಗೆಗೊಳಪಡುವ ಆದಾಯ ₹7 ಲಕ್ಷದ ಮಿತಿ ದಾಟಿದೊಡನೆ ಎಲ್ಲಾ ವಯೋಮಾನದವರಿಗೂ ಸೆಕ್ಷನ್ 87ಎ ಅಡಿ ಸಿಗುವ ₹25,000 ತನಕದ ವಿಶೇಷ ತೆರಿಗೆ ರಿಬೇಟ್ ಲಭ್ಯವಾಗುವುದಿಲ್ಲ. ಹೀಗಾಗಿ ತೆರಿಗೆ ₹3 ಲಕ್ಷದಿಂದಲೇ ಆರಂಭವಾಗುತ್ತದೆ. ಈ ವಿನಾಯಿತಿಯ ಲಭ್ಯತೆ ₹7 ಲಕ್ಷದೊಳಗೆ ತೆರಿಗೆಗೊಳಪಡುವ ಆದಾಯ ಇರುವವರಿಗೆ ಮಾತ್ರ ಲಭ್ಯವಾಗುತ್ತದೆ.

ನಿಮ್ಮ ವಾರ್ಷಿಕ ಆದಾಯ ಈಗಾಗಲೇ ₹12 ಲಕ್ಷವಿದೆ. ನಿಮಗೆ ಸ್ಟ್ಯಾಂಡರ್ಡ್ ಡಿಡಕ್ಷನ್ ₹50 ಸಾವಿರ ಕಳೆದು ಉಳಿದ ಮೊತ್ತದ ಮೇಲೂ ₹11.50 ಲಕ್ಷ ಆದಾಯವಿದ್ದಾಗ ವಯೋಮಾನದ ಪರಿಗಣನೆ ಅನ್ವಯವಾಗದೆ ಸಹಜವಾಗಿ ₹3 ಲಕ್ಷಕ್ಕಿಂತ ಅಧಿಕ ಇರುವ ಆದಾಯದ ಮೇಲೆ (ಹೊಸ ತೆರಿಗೆ ಪದ್ಧತಿಯಡಿ ಇರುವ ಮೂಲ ಆದಾಯ ವಿನಾಯಿತಿ ಮಿತಿ) ವಿವಿಧ ಹಂತದ ಸ್ಲ್ಯಾಬ್ ದರದಂತೆ ತೆರಿಗೆ ಕಟ್ಟಬೇಕಾಗುತ್ತದೆ. ಅಂದರೆ ₹3-6 ಲಕ್ಷಕ್ಕೆ ಶೇ 5, ₹6-9 ಲಕ್ಷಕ್ಕೆ ಶೇ 10, ₹9-12 ಲಕ್ಷಕ್ಕೆ ಶೇ 15ರ ತೆರಿಗೆ ದರ, ಹೀಗೆ ಮುಂದುವರಿಯುತ್ತದೆ.

ನೀವು ಸೂಪರ್ ಸೀನಿಯರ್ ಆಗಿರುವುದರಿಂದ ನಿಮ್ಮ ವಯಸ್ಸಿಗೆ ಅನ್ವಯಿಸಿ ಹಳೆ ಪದ್ಧತಿ ಆಯ್ಕೆ ಮಾಡಿಕೊಂಡರೆ ₹5 ಲಕ್ಷ ತನಕದ ಆದಾಯಕ್ಕೆ ಸಂಪೂರ್ಣ ತೆರಿಗೆ ವಿನಾಯಿತಿ ಇದೆ. ಉಳಿದ ಹೆಚ್ಚುವರಿ ಮೊತ್ತಕ್ಕೆ ಸ್ಲ್ಯಾಬ್ ದರದಂತೆ ₹5-10 ಲಕ್ಷಕ್ಕೆ ಶೇ 20 ಹಾಗೂ ಮುಂದಿನ ಹೆಚ್ಚುವರಿ ಆದಾಯಕ್ಕೆ ಶೇ 30ರ ದರದಲ್ಲಿ ತೆರಿಗೆ ಇರುತ್ತದೆ.

ನಿಮ್ಮ ವಿಚಾರದಲ್ಲಿ, ಸೆಕ್ಷನ್ 194ಪಿ ಇದರಂತೆ ಕೇವಲ ಪಿಂಚಣಿ ಆದಾಯ ಹಾಗೂ ಬಡ್ಡಿ ಆದಾಯ ಇದ್ದಾಗ ನೀವು ಆಯ್ಕೆ ಮಾಡಿದ ಯಾವುದೇ ಪದ್ಧತಿಯಡಿ ಬ್ಯಾಂಕಿನವರು ನಿಮಗೆ ಅನ್ವಯವಾಗುವ ಸಮರ್ಪಕ ತೆರಿಗೆಯನ್ನು ಕಡಿತಗೊಳಿಸಿ ಈ ಬಗ್ಗೆ ಆದಾಯ ತೆರಿಗೆ ಇಲಾಖೆಗೆ ಮಾಹಿತಿ ಸಲ್ಲಿಸಿದ್ದರೆ ನೀವು ರಿಟರ್ನ್ಸ್ ಸಲ್ಲಿಸುವ ಅಗತ್ಯ ಇಲ್ಲ. ನಿಮ್ಮಲ್ಲಿ ಯಾವುದೇ ತೆರಿಗೆ ರಿಯಾಯಿತಿಗೆ ಸಂಬಂಧಿಸಿದ ಹೂಡಿಕೆ ಇಲ್ಲ ಎಂದು ಪರಿಭಾವಿಸಿ ಹೇಳುವುದಾದರೆ ₹12 ಲಕ್ಷದ ಪಿಂಚಣಿ ಆದಾಯಕ್ಕೆ ಹೊಸ ತೆರಿಗೆ ಪದ್ಧತಿಯೇ ಸೂಕ್ತ. ಸುಮಾರಾಗಿ ವರ್ಷಕ್ಕೆ 86 ಸಾವಿರದಷ್ಟು ತೆರಿಗೆ ಬರಬಹುದು. ಇದೇ ಸನ್ನಿವೇಶದಲ್ಲಿ ಹಳೆಯ ತೆರಿಗೆ ಪದ್ಧತಿಯಡಿ ತೆರಿಗೆ ಸುಮಾರು ₹1.51 ಲಕ್ಷವಾಗಿರುತ್ತದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್:businessdesk@prajavani.co.in

ಟರ್ಕಿ: ಸೂಪರ್‌ಲೀಗ್ ಪಂದ್ಯದ ವೇಳೆ ಘಟನೆ– ಫೀಫಾ ಖಂಡನೆ

ಪಿಚ್‌ಗೆ ನುಗ್ಗಿ ಫುಟ್‌ಬಾಲ್ ರೆಫ್ರಿ ಮೇಲೆ ಹಲ್ಲೆ

ಅಂಕಾರಾ (ಎಎಫ್‌ಪಿ/ ಎಪಿ): ಟರ್ಕಿಯ ಅಂಕಾರಾದಲ್ಲಿ ಸೂಪರ್ ಲೀಗ್ ಫುಟ್‌ಬಾಲ್ ಪಂದ್ಯವೊಂದು ಮುಗಿದ ತಕ್ಷಣವೇ ಮೈದಾನಕ್ಕೆ ಧಾವಿಸಿದ ಕ್ಲಬ್‌ವೊಂದರ ಅಧ್ಯಕ್ಷ, ರೆಫ್ರಿ ಮೇಲೆ ಹಲ್ಲೆ ನಡೆಸಿದ ಪ್ರಕರಣ ಸೋಮವಾರ ನಡೆದಿದೆ. ಇದರ ಬೆನ್ನಿಗೇ ಟರ್ಕಿಯ ಫುಟ್‌ಬಾಲ್ ಫೆಡರೇಷನ್, ಮುಂದಿನ ಎಲ್ಲ ಲೀಗ್ ಪಂದ್ಯಗಳನ್ನು ಅನಿರ್ದಿಷ್ಟಾವಧಿಗೆ ಸ್ಥಗಿತಗೊಳಿಸಿದೆ.

ಜಾಯ್ಕುರ್ ರಿಝೆಸ್‌ಪಾಸ್ ಕ್ಲಬ್ ವಿರುದ್ಧ ಸೋಮವಾರ ನಡೆದ ಪಂದ್ಯಕ್ಕೆ ಮುಕ್ತಾಯದ ಸೀಟಿ ಊದುತ್ತಿದ್ದಂತೆ ಎದುರಾಳಿ ಎಂಕೆಇ ಅಂಕಾರಾಗುಜು ಕ್ಲಬ್ ಅಧ್ಯಕ್ಷ ಫಾರೂಕ್ ಕೋಜಾ ಅವರು ಗುಂಪಿನೊಡನೆ ಪಿಚ್‌ಗೆ ಧಾವಿಸಿ ರೆಫ್ರಿ ಹಲೀಲ್ ಉಮುತ್ ಮೆಲೆರ್ ಅವರ ಮುಖಕ್ಕೆ ಗುದ್ದಿದ್ದಾರೆ. ಏಟು ತಪ್ಪಿಸಲು ಎರಡೂ ಕೈಗಳಿಂದ ಮುಖ ಮುಚ್ಚಿಕೊಂಡ ಅವರು ಕೆಳಕ್ಕೆ ಬಿದ್ದಿದ್ದಾರೆ. ಮತ್ತೊಬ್ಬರು ಮೆಲೆರ್ ಅವರನ್ನು ಒದೆಯುತ್ತಿರುವ ದೃಶ್ಯಾವಳಿಗಳು ದಾಖಲಾಗಿವೆ. ರೆಫ್ರಿ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ಈ ಪಂದ್ಯ 1–1 ಡ್ರಾ ಆಗಿತ್ತು.

ಅಧಿಕಾರಿಗೆ ಗಾಯಗೊಳಿಸಿದ ಮತ್ತು ಬೆದರಿಕೆ ಒಡ್ಡಿದ ಕಾರಣಕ್ಕೆ ಕೋಜಾ ಮತ್ತಿಬ್ಬರನ್ನು ಬಂಧಿಸಲಾಗಿದೆ. ಕೃತ್ಯದಲ್ಲಿ ತೊಡಗಿದ ಉಳಿದವರನ್ನೂ ಬಂಧಿಸಲಾಗುವುದು ಎಂದು ಟರ್ಕಿಯ ನ್ಯಾಯ ಸಚಿವ ಇಲ್ಮಾಝ್ ತುಂಕ್ 'ಎಕ್ಸ್'ನಲ್ಲಿ ಬರೆದಿದ್ದಾರೆ. ನ್ಯಾಯಾಲಯವೊಂದು ಬಂಧಿತ ಮೂವರನ್ನು ವಿಚಾರಣೆ ಪೂರ್ವ ಪೊಲೀಸ್ ವಶಕ್ಕೆ ನೀಡಿದೆ. ಕೋಜಾ ಅವರು ಆಡಳಿತಾರೂಢ ಎಕೆಪಿ ಸ್ಥಾಪಕ ಸದಸ್ಯರಾಗಿದ್ದು, ಸರ್ಕಾರಕ್ಕೆ ಈ ಪ್ರಕರಣ ಮುಜುಗರ ಉಂಟುಮಾಡಿದೆ.

ಟರ್ಕಿಯ ಅಂಕಾರದಲ್ಲಿ ಸೋಮವಾರ ಸೂಪರ್‌ಲೀಗ್ ಫುಟ್‌ಬಾಲ್ ಪಂದ್ಯದ ವೇಳೆ ರೆಫ್ರಿ ಹಲೀಲ್ ಉಮುತ್ ಮೆಲೆರ್ ಅವರಿಗೆ ಅಂಕಾರಾಗುಜು ಕ್ಲಬ್‌ನ ಅಧ್ಯಕ್ಷ ಫರೂಕ್ ಕೋಜಾ (ಎಡಗಡೆ) ಮುಖಕ್ಕೆ ಪಂಚ್ ಮಾಡಿದರು. ಮುಖಮುಚ್ಚಿಕೊಂಡು ಕೆಳಕ್ಕೆ ಬಿದ್ದ ಅವರಿಗೆ ವ್ಯಕ್ತಿಯೊಬ್ಬ ಒದೆಯಲು ಮುಂದಾದರು —ಎಎಫ್‌ಪಿ ಚಿತ್ರ

'ಒಪ್ಪಲಾಗದ ಕೃತ್ಯ'

ಪ್ಯಾರಿಸ್ ವರದಿ (ಎಎಫ್‌ಪಿ): ಹಲ್ಲೆ ಪ್ರಕರಣವನ್ನು ವಿಶ್ವ ಫುಟ್‌ಬಾಲ್ ಸಂಸ್ಥೆ (ಫೀಫಾ) ಅಧ್ಯಕ್ಷ ಗಿಯಾನಿ ಇನ್ಫಾಂಟಿನೊ ಅವರು ಮಂಗಳವಾರ ಖಂಡಿಸಿದ್ದಾರೆ. ಇದು 'ಒಪ್ಪಲಾಗದ ಕೃತ್ಯ' ಎಂದು ಟೀಕಿಸಿದ್ದಾರೆ.

'ಕ್ರೀಡಾಂಗಣದೊಳಗೆ ಆಗಲಿ, ಆಚೆಯೇ ಆಗಲಿ ಫುಟ್‌ಬಾಲ್‌ನಲ್ಲಿ ಹಿಂಸೆಗೆ ಅವಕಾಶವೇ ಇಲ್ಲ' ಎಂದು ಸಾಮಾಜಿಕ ಮಾಧ್ಯಮದಲ್ಲಿ ಇನ್ಫಾಂಟಿನೊ ಬರೆದಿದ್ದಾರೆ.

ವೇಟ್‌ಲಿಫ್ಟಿಂಗ್: ಮೀರಾಬಾಯಿ ಚಾನು ಅಲಭ್ಯ

ನವದೆಹಲಿ (ಪಿಟಿಐ): ಗಾಯಗೊಂಡಿರುವ ವೇಟ್‌ಲಿಫ್ಟರ್ ಮೀರಾಬಾಯಿ ಚಾನು ಅವರು ಮುಂದಿನ ಫೆಬ್ರುವರಿಯಲ್ಲಿ ನಡೆಯಲಿರುವ ಏಷ್ಯನ್ ಚಾಂಪಿಯನ್‌ಷಿಪ್‌ನಿಂದ ಹಿಂದೆ ಸರಿದಿದ್ದಾರೆ.

49 ಕೆ.ಜಿ ವಿಭಾಗದಲ್ಲಿ ಸ್ಪರ್ಧಿಸುತ್ತಿರುವ ಚಾನು, ಅಕ್ಟೋಬರ್‌ನಲ್ಲಿ ಏಷ್ಯನ್ ಕ್ರೀಡಾಕೂಟದಲ್ಲಿ ಸ್ಪರ್ಧಿಸುವ ವೇಳೆ ಉಂಟಾದ ತೊಡೆಯ ಸ್ನಾಯು ಸೆಳೆತದಿಂದ ಇನ್ನೂ ಚೇತರಿಸಿಕೊಳ್ಳುತ್ತಿದ್ದಾರೆ. 'ನಾನು ಈ ಬಾರಿ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸುವುದಿಲ್ಲ. ಬದಲಿಗೆ ನಾನು ವಿಶ್ವಕಪ್‌ನಲ್ಲಿ ಭಾಗವಹಿಸುತ್ತೇನೆ' ಎಂದು ಚಾನು ಮಂಗಳವಾರ ತಿಳಿಸಿದ್ದಾರೆ.

ಪ್ಯಾರಾ ಈಜು: ಶ್ರೀಧರ್‌ಗೆ 10 ಪದಕ

ಬೆಂಗಳೂರು: ಬೆಳಗಾವಿಯ ಪ್ಯಾರಾ ಈಜುಪಟು ಶ್ರೀಧರ ಮಾಳಗಿ ಅವರು ಥಾಯ್ಲೆಂಡ್‌ನ ನಖೋನ್ ರಟ್ಚಸಿಮಾದಲ್ಲಿ ಇತ್ತೀಚೆಗೆ ನಡೆದ 'ವಿಶ್ವ ಎಬಿಲಿಟಿ ಸ್ಪೋರ್ಟ್ಸ್ ಗೇಮ್ಸ್'ನ ಈಜು ಸ್ಪರ್ಧೆಗಳಲ್ಲಿ ಒಟ್ಟು 10 ಪದಕಗಳನ್ನು ಗಳಿಸಿ ಉತ್ತಮ ಪ್ರದರ್ಶನ ನೀಡಿದ್ದಾರೆ.

ಭಾರತ ತಂಡ, ಡಿಸೆಂಬರ್ 1 ರಿಂದ 9ರವರೆಗೆ ನಡೆದ ಈ ಕೂಟದಲ್ಲಿ 103 ಪದಕಗಳನ್ನು ಗೆದ್ದುಕೊಂಡಿದೆ. ವಾಣಿಜ್ಯ ಪದವಿ ಅಂತಿಮ ವರ್ಷದ ವಿದ್ಯಾರ್ಥಿಯಾಗಿರುವ ಶ್ರೀಧರ್ ಕ್ಲಾಸ್ ವಿಭಾಗದಲ್ಲಿ ಸ್ಪರ್ಧಿಸಿ, 50 ಮೀ. ಬ್ಯಾಕ್‌ಸ್ಟ್ರೋಕ್, 50 ಮೀ ಮತ್ತು 100 ಮೀ. ಬ್ರೆಸ್ಟ್ ಸ್ಟ್ರೋಕ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ. 100 ಮೀ. ಮತ್ತು 400 ಮೀ. ಫ್ರೀಸ್ಟೈಲ್, 100 ಮೀ. ಬ್ಯಾಕ್‌ಸ್ಟ್ರೋಕ್, 50 ಮೀ. ಮತ್ತು 100 ಮೀ. ಬಟರ್‌ಫ್ಲೈ ಮತ್ತು 200 ಮೀ. ವೈಯಕ್ತಿಕ ಮೆಡ್ಲೆ ವಿಭಾಗದಲ್ಲಿ ಬೆಳ್ಳಿಯ ಪದಕ ಗಳಿಸಿದ್ದಾರೆ. ಜೊತೆಗೆ 50 ಮೀ. ಫ್ರೀಸ್ಟೈಲ್‌ನಲ್ಲಿ ಕಂಚಿನ ಪದಕವನ್ನೂ ತಮ್ಮದಾಗಿಸಿಕೊಂಡಿದ್ದಾರೆ.

ಶ್ರೀಧರ ಅವರು ನಾಲ್ಕು ವರ್ಷಗಳಿಂದ ಬೆಂಗಳೂರಿನಲ್ಲಿ ನೆಲೆಸಿದ್ದು, ವೈಟ್‌ಫೀಲ್ಡ್‌ನ ಜಿ-ಸ್ವಿಮ್‌ನಲ್ಲಿ ಶರತ್ ಗಾಯಕವಾಡ್ ಅವರಿಂದ ತರಬೇತಿ ಪಡೆಯುತ್ತಿದ್ದಾರೆ. ಈಗಾಗಲೇ ವಿವಿಧ ಅಂತರರಾಷ್ಟ್ರೀಯ ಈಜು ಸ್ಪರ್ಧೆಗಳಲ್ಲಿ ಭಾಗವಹಿಸಿರುವ ಅವರು ಪ್ಯಾರಾ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುವ ಉದ್ದೇಶದಿಂದ ತರಬೇತಿ ಪಡೆಯುತ್ತಿದ್ದಾರೆ.



ಶ್ರೀಧರ ಮಾಳಗಿ

ಗೆಲುವಿನೊಡನೆ ಅಗ್ರಸ್ಥಾನಕ್ಕೇರಿದ ವಾರಿಯರ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಣಿಂದರ್ ಸಿಂಗ್, ನಿತಿನ್ ಕುಮಾರ್ ಅವರ ಅಮೋಘ ರೈಡಿಂಗ್ ನೆರವಿನಿಂದ ಬೆಂಗಾಲ್ ವಾರಿಯರ್ಸ್ ತಂಡ 60–42 ಪಾಯಿಂಟ್‌ಗಳಿಂದ ಪಟ್ನಾ ಪೈರೆಟ್ಸ್ ತಂಡವನ್ನು ಸೋಲಿಸಿ ಪ್ರೊ ಕಬಡ್ಡಿ ಲೀಗ್‌ನ ಹತ್ತನೇ ಆವೃತ್ತಿಯಲ್ಲಿ ಅಜೇಯ ಓಟ ಮುಂದುವರಿಸಿ ಅಗ್ರಸ್ಥಾನಕ್ಕೇರಿತು. ಒಟ್ಟು 102 ಪಾಯಿಂಟ್‌ಗಳನ್ನು ಕಂಡ ಪಂದ್ಯದಲ್ಲಿ ಐವರು ರೈಡರ್‌ಗಳು ಸೂಪರ್ ಟೆನ್ ಸಾಧನೆಗೆ ಪಾತ್ರರಾಗಿದ್ದು ವಿಶೇಷ.

ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಈ ಪಂದ್ಯದಲ್ಲಿ ವಿರಾಮದ ವೇಳೆ ವಾರಿಯರ್ಸ್ 27–16 ಪಾಯಿಂಟ್‌ಗಳಿಂದ ಮುಂದಿತ್ತು. ಬೆಂಗಾಲ್ ತಂಡ ಆಡಿರುವ ನಾಲ್ಕು ಪಂದ್ಯಗಳಲ್ಲಿ ಮೂರು ಗೆದ್ದು, ಒಂದು ಪಂದ್ಯವನ್ನು ಟೈ ಮಾಡಿಕೊಂಡಿದ್ದು 18 ಪಾಯಿಂಟ್ಸ್ ಸಂಗ್ರಹಿಸಿದೆ. ಮೂರನೇ ಪಂದ್ಯ ಆಡಿದ ಪೈರೆಟ್ಸ್ ಮೊದಲ ಸಲ ಹಿನ್ನಡೆ ಕಂಡಿತು.

ವಾರಿಯರ್ಸ್ ಮುಂದಿನ ಪಂದ್ಯ ಪುಣೇರಿ ಪಲ್ಟನ್ ವಿರುದ್ಧ ಆಡಲಿದೆ. ಮಣಿಂದರ್ (15 ಪಾಯಿಂಟ್), ನಿತಿನ್ ಕುಮಾರ್ (14 ಪಾಯಿಂಟ್ಸ್), ಶ್ರೀಕಾಂತ್ ಜಾಧವ್ (12) ಅವರು ಬಹುಪಾಲು ಪಾಯಿಂಟ್ಸ್ ಗಳಿಸಿದರು. ಪಟ್ನಾ ಪೈರೆಟ್ಸ್ ಪರ ಪ್ರಮುಖ ರೈಡರ್ ಸಚಿನ್ (14 ಮತ್ತು ಸುಧಾಕರ್ (14) ಉತ್ತಮ ರೈಡಿಂಗ್ ಪ್ರದರ್ಶಿಸಿದರು.

ಆರಂಭದಲ್ಲಿ ಮಣಿಂದರ್ ಅವರನ್ನು ಕ್ಯಾಚ್ ಮಾಡಿದ ಪೈರೆಟ್ಸ್, ನಂತರ ಸಚಿನ್ ರೈಡಿಂಗ್‌ನಿಂದ ಮುನ್ನಡೆ ಗಳಿಸಿತ್ತು. ಆದರೆ ನಿತಿನ್ ಅವರು ಒಂದೇ ರೈಡ್‌ನಲ್ಲಿ ಐದು ಪಾಯಿಂಟ್ಸ್ ಪಡೆದಿದ್ದು ಪರಿಸ್ಥಿತಿಯನ್ನು ಬದಲಾಯಿಸಿತು. 10–10ರಲ್ಲಿ ಸಮ ಮಾಡಿಕೊಂಡ ನಂತರ ಪಂದ್ಯದುದ್ದಕ್ಕೂ ವಾರಿಯರ್ಸ್ ಮುನ್ನಡೆ ಕಾಪಾಡಿಕೊಂಡಿತು.

ಇಂದಿನ ಪಂದ್ಯಗಳು: ತಮಿಳ್ ತಲೈವಾಸ್– ತೆಲುಗು ಟೈಟಾನ್ಸ್ (ರಾತ್ರಿ 8.00), ಬೆಂಗಳೂರು ಬುಲ್ಸ್– ಜೈಪುರ ಪಿಂಕ್‌ಪ್ಯಾಂಥರ್ಸ್ (ರಾತ್ರಿ 9.00)

ಬೆಂಗಾಲ್ ವಾರಿಯರ್ಸ್ ಹಾಗೂ ಪಟ್ನಾ ಪೈರೆಟ್ಸ್ ತಂಡಗಳ ನಡುವಿನ ಪಂದ್ಯ

ಸೆಮಿಫೈನಲ್‌ಗೆ ಭಾರತ ಪಡೆ

ದುಬೈ(ಪಿಟಿಐ): ಮಧ್ಯಮವೇಗಿ ರಾಜ್ ಲಿಂಬಾನಿ ಅವರ ದಾಳಿಯ ಮುಂದೆ ಭಾರತ 19 ವರ್ಷದೊಳಗಿನವರ ತಂಡವು ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ನೇಪಾಳ ವಿರುದ್ಧ ಸುಲಭ ಜಯ ಸಾಧಿಸಿತು. ಇದರೊಂದಿಗೆ ಸೆಮಿಫೈನಲ್ ಪ್ರವೇಶಿಸಿತು.

ಮಂಗಳವಾರ ನಡೆದ ಪಂದ್ಯದಲ್ಲಿ ರಾಜ್ ಏಳು ವಿಕೆಟ್ ಉರುಳಿಸಿದರು. ಇದರಿಂದಾಗಿ ಭಾರತ 19 ವರ್ಷದೊಳಗಿನವರ ತಂಡವು 10 ವಿಕೆಟ್‌ಗಳಿಂದ ಜಯಿಸಿತು. ಮೊದಲು ಬ್ಯಾಟ್ ಮಾಡಿದ ನೇಪಾಳ ತಂಡವು 22.1 ಓವರ್‌ಗಳಲ್ಲಿ 52 ರನ್‌ಗಳ ಅಲ್ಪಮೊತ್ತ ದಾಖಲಿಸಿತು. ಎಲ್ಲ ಬ್ಯಾಟರ್‌ಗಳೂ ಒಂದಂಕಿ ಮಾತ್ರ ಗಳಿಸಿದರು. ಭಾರತದ ಬೌಲರ್‌ಗಳು 13 ಇತರೆ ರನ್‌ಗಳನ್ನು ನೀಡಿದರು.

ಸಂಕ್ಷಿಪ್ತ ಸ್ಕೋರು: ನೇಪಾಳ: 22.1 ಓವರ್‌ಗಳಲ್ಲಿ 52 (ಹೇಮಂತ್ ಧಾಮಿ 8, ದೀಪಕ್ ಬೊಹರಾ 7, ರಾಜ್ ಲಿಂಬಾನಿ 13ಕ್ಕೆ7, ಆರಾಧ್ಯ ಶುಕ್ಲಾ 31ಕ್ಕೆ2) ಭಾರತ: 7.1 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 57 (ಆದರ್ಶ್ ಸಿಂಗ್ ಔಟಾಗದೆ 13, ಅರ್ಷಿನ್ ಕುಲಕರ್ಣಿ ಔಟಾಗದೆ 43) ಫಲಿತಾಂಶ: ಭಾರತ 19 ವರ್ಷದೊಳಗಿನವರ ತಂಡಕ್ಕೆ 10 ವಿಕೆಟ್‌ಗಳ ಜಯ.

ಫುಟ್‌ಬಾಲ್ ಆಟಗಾರ ಲತೀಫ್ ಖಾನ್ ನಿಧನ

ಬೆಂಗಳೂರು: ಅಂತರರಾಷ್ಟ್ರೀಯ ಫುಟ್‌ಬಾಲ್ ಆಟಗಾರರನ್ನು ದೇಶಕ್ಕೆ ಕೊಡುಗೆಯಾಗಿ ನೀಡಿದ 'ಖಾನ್ ಕುಟುಂಬ'ದ ಕುಡಿ ಲತೀಫ್ ಖಾನ್ (88) ಮಂಗಳವಾರ ನಿಧನರಾದರು.

ಬೆಂಗಳೂರು ಮುಸ್ಲಿಮ್ಸ್ ತಂಡದಲ್ಲಿ 1953 ಮತ್ತು 54ರಲ್ಲಿ ಆಡಿದ್ದ ಅವರು ಹಲವು ಗೋಲುಗಳನ್ನು ಹೊಡೆದಿದ್ದರು. 1955ರಲ್ಲಿ ಅವರು ಎಲ್‌ಆರ್‌ಡಿಇ ತಂಡವನ್ನು ಸೇರಿಕೊಂಡರು. ನಂತರ ಅವರು ಕೋಲ್ಕತ್ತದ ಮೊಹಮ್ಮಡನ್ ಸ್ಪೋರ್ಟಿಂಗ್ ಕ್ಲಬ್‌ನಲ್ಲಿ ಆಡಿದ್ದರು. ತಮ್ಮ ಅದ್ಭುತ ಕಾಲ್ಚಳಕದಿಂದ ಭಾರತ ತಂಡದ ಆಯ್ಕೆಗಾರರ ಗಮನ ಸೆಳೆದಿದ್ದರು. 1960ರ ರೋಮ್ ಒಲಿಂಪಿಕ್ ಕೂಟಕ್ಕೆ ಆಯ್ಕೆಯಾಗಿದ್ದ ಭಾರತ ತಂಡದ ರಾಷ್ಟ್ರೀಯ ಶಿಬಿರಕ್ಕೂ ಅರ್ಹತೆ ಗಳಿಸಿದ್ದರು.

ಲತೀಫ್ ಅವರಿಗೆ ಒಬ್ಬ ಪುತ್ರ, ಮೂವರು ಪುತ್ರಿಯರು ಹಾಗೂ ಸಹೋದರ ಅಮ್ಜದ್ ಖಾನ್ ಇದ್ದಾರೆ.

ಮಂಗಳವಾರ ಸಂಜೆ ಟ್ಯಾನರಿ ಗ್ರೇವ್‌ಯಾರ್ಡ್‌ನಲ್ಲಿ ಲತೀಫ್ ಅವರ ಅಂತಿಮ ಸಂಸ್ಕಾರ ನಡೆಯಿತು.

ಫುಟ್‌ಬಾಲ್ ಕುಟುಂಬ: ಲತೀಫ್ ಅವರು ಬೆಂಗಳೂರಿನ ಕ್ರೆಸೆಂಟ್ಸ್ ಫುಟ್‌ಬಾಲ್ ಕ್ಲಬ್ ಸಂಸ್ಥಾಪಕರಾದ ಮೆಹಮೂದ್ ಖಾನ್ ಅವರ ಎರಡನೇ ಮಗ. ಲತೀಫ್ ಅವರ ಮೂವರು ಸಹೋದರರಾದ ಅಹಮದ್ ಖಾನ್, ಎರಡು ಒಲಿಂಪಿಕ್ ಕೂಟಗಳಲ್ಲಿ ರಾಷ್ಟ್ರೀಯ ತಂಡವನ್ನು ಪ್ರತಿನಿಧಿಸಿದ್ದರು. ಸರ್ಮದ್ ಖಾನ್ ಅವರೂ ಭಾರತ ತಂಡವನ್ನು ಪ್ರತಿನಿಧಿಸಿದ್ದರು. ಅಮ್ಜದ್ ಖಾನ್ ಅವರು ಸಿಐಎಲ್ ಮತ್ತು ಮೈಸೂರು ತಂಡಗಳನ್ನು ಪ್ರತಿನಿಧಿಸಿದ್ದರು.

ಲತೀಫ್ ಅವರೂ 1962ರಲ್ಲಿ ಸಂತೋಷ್ ಟ್ರೋಫಿ ಟೂರ್ನಿಯಲ್ಲಿ ಮೈಸೂರು ರಾಜ್ಯ ತಂಡವನ್ನು ಪ್ರತಿನಿಧಿಸಿದವರು. ಆ ಟೂರ್ನಿಯಲ್ಲಿ ಮೈಸೂರು ತಂಡವು ರನ್ನರ್ ಅಪ್ ಆಗಿತ್ತು. ಶ್ರೀಲಂಕಾದಲ್ಲಿ ನಡೆದಿದ್ದ ಪೆಂಟಾಗ್ಯುಲರ್ ಟೂರ್ನಿಯಲ್ಲಿ ಆಡಿದ್ದರು. ಏಷ್ಯನ್ ಚಿನ್ನದ ಪದಕ ವಿಜೇತ ಅರುಮೈನಾಯಗಂ ಮುಜಿಬುಲಾ ಅವರ ಸಮಕಾಲೀನ ಆಟಗಾರರಾಗಿದ್ದವರು ಲತೀಫ್.

ಲತೀಫ್ ಖಾನ್

ಎಸ್‌ಎಲ್‌ಸಿ ವಜಾ ಆದೇಶ ವಾಪಸ್

ಕೊಲಂಬೊ (ಎಎಫ್‌ಪಿ): ಭ್ರಷ್ಟಾಚಾರ ಆರೋಪಗಳಿಗೆ ಸಂಬಂಧಿಸಿದಂತೆ ದೇಶದ ಕ್ರಿಕೆಟ್ ಮಂಡಳಿಯನ್ನು ವಜಾಗೊಳಿಸಿರುವ ಆದೇಶವನ್ನು ಶ್ರೀಲಂಕಾದ ಕ್ರೀಡಾ ಸಚಿವ ಹರಿನ್ ಫರ್ನಾಂಡೊ ಮಂಗಳವಾರ ಹಿಂದಕ್ಕೆ ಪಡೆದಿದ್ದಾರೆ.

ಕರ್ತವ್ಯ ನಿರ್ವಹಣೆಯಲ್ಲಿ ಸರ್ಕಾರದ ಹಸ್ತಕ್ಷೇಪ ತಡೆಯಲು ವಿಫಲವಾಗಿದೆ ಎಂಬ ಕಾರಣಕ್ಕೆ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಆ ದೇಶದ ಕ್ರಿಕೆಟ್ ಮಂಡಳಿಯನ್ನು (ಎಸ್‌ಎಲ್‌ಸಿ) ಅಮಾನತ್ತುಗೊಳಿಸಿತ್ತು. ಸಚಿವ ಫರ್ನಾಂಡೊ ಅವರ ಈ ನಿರ್ಧಾರದಿಂದ ಅಮಾನತು ಆದೇಶ ವಾಪಸ್ ಪಡೆಯಲು ಐಸಿಸಿಗೆ ಹಾದಿ ಸುಗಮವಾದಂತಾಗಿದೆ.

'ಅಮಾನತು ಆದೇಶವನ್ನು ಐಸಿಸಿ ಹಿಂಪಡೆಯಲಿ ಎಂಬ ಉದ್ದೇಶದಿಂದ ಶ್ರೀಲಂಕಾ ಕ್ರಿಕೆಟ್ ಮಧ್ಯಂತರ ಸಮಿತಿ ನೇಮಿಸುವ ನಿರ್ಧಾರವನ್ನು ಹಿಂಪಡೆಯುವ ರಾಜ್ಯಪತ್ರಕ್ಕೆ ಸಹಿ ಹಾಕಿದ್ದೇನೆ' ಎಂದು ಫರ್ನಾಂಡೊ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ದೇಶದ ಮಂಡಳಿಯನ್ನು ಕ್ರೀಡಾ ಸಚಿವರಾಗಿದ್ದ ರೋಷನ್ ರಣಸಿಂಘೆ ವಜಾಗೊಳಿಸಿ ಅರ್ಜುನ ರಣತುಂಗ ನೇತೃತ್ವದಲ್ಲಿ ಮಧ್ಯಂತರ ಸಮಿತಿ ನೇಮಕ ಮಾಡಿದ್ದರು.

ಜೂನಿಯರ್ ವಿಶ್ವ ಕಪ್ ಹಾಕಿ: ನೆದರ್ಲೆಂಡ್ಸ್ ತಂಡದ ಮೇಲೆ 4–3 ಜಯ

ನಾಲ್ಕರ ಘಟ್ಟಕ್ಕೆ ಭಾರತ

ಭಾರತ ಜೂನಿಯರ್ ಹಾಕಿ ತಂಡದ ಆಟಗಾರರ ಸಂಭ್ರಮ –ಹಾಕಿಮಲೇಷ್ಯಾ ಟ್ವಿಟರ್ ಚಿತ್ರ

ಕ್ವಾಲಾಲಂಪುರ (ಪಿಟಿಐ): ಕೆಚ್ಚೆದೆಯ ಆಟ ಪ್ರದರ್ಶಿಸಿದ ಭಾರತ ತಂಡ, ಪುರುಷರ ಜೂನಿಯರ್ ವಿಶ್ವಕಪ್ ಹಾಕಿ ಟೂರ್ನಿಯಲ್ಲಿ ಮಂಗಳವಾರ 4–3 ಗೋಲುಗಳಿಂದ ಪ್ರಬಲ ನೆದರ್ಲೆಂಡ್ಸ್ ತಂಡವನ್ನು ಮಣಿಸಿ ಸೆಮಿಫೈನಲ್‌ಗೆ ದಾಪುಗಾಲಿಟ್ಟಿತು.

ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಮಧ್ಯಂತರದ ವೇಳೆ 0–2 ರಿಂದ ಹಿಂದೆಬಿದ್ದಿದ್ದ ಭಾರತ ಮೂರನೇ ಕ್ವಾರ್ಟರ್ ನಂತರವೂ (15 ನಿಮಿಷಗಳು ಇರುವಾಗ) 2–3 ರಿಂದ ಹಿನ್ನಡೆಯ-ಲ್ಲಿತ್ತು. ಆದರೆ ಹೋರಾಟ ತೋರಿ ಜಯಗಳಿಸಿದ್ದು ಛಲದ ಮನೋಭಾವಕ್ಕೆ ನಿದರ್ಶನವಾಯಿತು.

ಭಾರತ ತಂಡ ಗುರುವಾರ ನಡೆಯಲಿರುವ ಸೆಮಿಫೈನಲ್‌ನಲ್ಲಿ ಜರ್ಮನಿಯನ್ನು ಎದುರಿಸಲಿದೆ.

ಐದನೇ ನಿಮಿಷ ಟಿಮೊ ಬೋರ್ಸ್ ಅವರು ಪೆನಾಲ್ಟಿ ಕಾರ್ನರ್ ಪರಿವರ್ತಿಸಿ ಡಚ್ಚರ ಪಾಳೆಯಕ್ಕೆ ಮುನ್ನಡೆ ಒದಗಿಸಿದರು. ಭಾರತ ತಂಡ ರಕ್ಷಣೆಗೆ ಒತ್ತು ನೀಡಿ ಆಡಿದರೂ, ನೆದರ್ಲೆಂಡ್ಸ್ ತಂಡ 16ನೇ ನಿಮಿಷ ಮುನ್ನಡೆ ಹೆಚ್ಚಿಸುವಲ್ಲಿ ಯಶಸ್ವಿಯಾಯಿತು. ಪೆಪಿನ್ ವಾನ್‌ಡರ್ ಹೀಡನ್ ಅವರೂ ಪೆನಾಲ್ಟಿ ಕಾರ್ನರ್ ಮೂಲಕ ಗೋಲು ಗಳಿಸಿದರು. ವಿರಾಮದ ವೇಳೆಗೆ ಇದೇ ಅಂತರ ಮುಂದುವರಿಯಿತು. ಮೂರನೇ ಕ್ವಾರ್ಟರ್‌ನಲ್ಲಿ (34ನೇ ನಿಮಿಷ), ಅರಿಜೀತ್ ಸಿಂಗ್ ಹುಂಡಲ್ ಅವರ ಪಾಸ್‌ನಲ್ಲಿ ಆದಿತ್ಯ ಲಾಲಗೆ ಭಾರತದ ಪರ ಮೊದಲ ಗೋಲು ಗಳಿಸಿದರು. ಎರಡು ನಿಮಿಷಗಳ ನಂತರ ‘ಪೆನಾಲ್ಟಿ ಸ್ಟ್ರೋಕ್’ ಅವಕಾಶವನ್ನು ಅರಿಜೀತ್ ಗೋಲಾಗಿ ಪರಿವರ್ತಿಸಿ ಭಾರತ ತಂಡ ಸ್ಕೋರ್ ಸಮ ಮಾಡಲು ನೆರವಾದರು.

ಭಾರತದ ಆಟಗಾರರು ಒತ್ತಡ ಹಾಕಿದರೂ, ನೆದರ್ಲೆಂಡ್ಸ್ 44ನೇ ನಿಮಿಷ ಮತ್ತೊಮ್ಮೆ ಮುನ್ನಡೆಯಿತು. ಒಲಿವಿಯರ್ ಹೊರ್ಟೆನ್ಸಿಯಸ್ ಅವರು ಪೆನಾಲ್ಟಿ ಕಾರ್ನರ್ ಅವಕಾಶವನ್ನು ಗೋಲಾಗಿ ಪರಿವರ್ತಿಸಿದರು.

ಹತ್ತು ನಿಮಿಷಗಳು ಉಳಿದಿರುವಂತೆ, ಭಾರತದ ಆಟಗಾರರು ಎದುರಾಳಿ ರಕ್ಷಣಾ ಪಡೆಯ ಮೇಲೆ ಒತ್ತಡ ಹೆಚ್ಚಿಸಿದರು. 52ನೇ ನಿಮಿಷ ಇದು ಫಲ ನೀಡಿತು. ಉತ್ತಮ ಗೋಲು ಯತ್ನದಲ್ಲಿ ಎದುರಾಳಿ ಕಡೆಯ ನೆಟ್‌ಗೆ ಬಡಿದು ರಿಬೌಂಡ್ ಆದ ಚೆಂಡನ್ನು ಸೌರಭ್ ಆನಂದ್ ಕುಶ್ವಾಹ ಅವರು ಗುರಿಮುಟ್ಟಿಸಿದ-ರು. ಸ್ಕೋರ್ ಮತ್ತೆ (3–3) ಆಯಿತು.

ಪಂದ್ಯ ಮುಕ್ತಾಯಕ್ಕೆ ಬರೇ ಮೂರು ನಿಮಿಷಗಳಿರುವಾಗ (57ನೇ ನಿಮಿಷ) ನಾಯಕ ಉತ್ತಮ್ ಸಿಂಗ್ ಅವರು ತಂಡಕ್ಕೆ ದೊರೆತ ಪೆನಾಲ್ಟಿ ಕಾರ್ನರ್ ಅವಕಾಶವನ್ನು ಪರಿವರ್ತಿಸಿ ತಂಡಕ್ಕೆ ನಿರ್ಣಾಯಕ ಗೋಲನ್ನು ಗಳಿಸಿ ಕೊಟ್ಟರು.

ಡಚ್ ಪಡೆಯ ಪ್ರಬಲ ದಾಳಿಯ ನಡುವೆಯೂ ಭಾರತ ಕೊನೆಗಳಿಯಲ್ಲಿ ಎದುರಾಳಿಗೆ ಗೋಲು ನಿರಾಕರಿಸಿತು. ರಕ್ಷಣೆ ವಿಭಾಗದಲ್ಲಿ ರೋಹಿತ್ ಅವರು ಸತತ ಆರು ಪೆನಾಲ್ಟಿ ಕಾರ್ನರ್‌ಗಳಲ್ಲಿ ಎದುರಾಳಿಗಳ ಗೋಲು ಯತ್ನಕ್ಕೆ ತಡಗೋಡೆಯಾದರು. ಅವರ ಪ್ರಯತ್ನಕ್ಕೆ ‘ಪಂದ್ಯದ ಆಟಗಾರ’ ಗೌರವ ಒಲಿಯಿತು.

ಮುಖ್ಯಾಂಶಗಳು
- ಭಾರತದ ಸೆಮಿಫೈನಲ್ ಎದುರಾಳಿ ಜರ್ಮನಿ
- ಜರ್ಮನಿಗೆ 2–1 ರಿಂದ ಆರ್ಜೆಂಟೀನಾ ಮೇಲೆ ಜಯ
- ರಕ್ಷಣೆ ವಿಭಾಗದಲ್ಲಿ ಮಿಂಚಿದ ರೋಹಿತ್

ದಕ್ಷಿಣ ಆಫ್ರಿಕಾಗೆ ರೋಚಕ ಜಯ

ಎರಡನೇ ಟಿ20: ರೀಜಾ, ಸ್ಟಬ್ಸ್ ಮಿಂಚು, ಸೂರ್ಯ, ರಿಂಕು ಅರ್ಧಶತಕ

ಸೇಂಟ್ ಜಾರ್ಜ್ ಪಾರ್ಕ್(ಪಿಟಿಐ): ಮಳೆಯ ಆಟದ ನಡುವೆ ನಡೆದ ಟಿ20 ಪಂದ್ಯದಲ್ಲಿ ಆತಿಥೇಯ ದಕ್ಷಿಣ ಆಫ್ರಿಕಾ ತಂಡವು ಭಾರತದ ಎದುರು ರೋಚಕ ಜಯಸಾಧಿಸಿತು.

ಮಂಗಳವಾರ ಇಲ್ಲಿ ನಡೆದ ಟಿ20 ಸರಣಿಯ ಎರಡನೇ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವು 5 ವಿಕೆಟ್‌ಗಳಿಂದ ಗೆದ್ದಿತು. ಮೂರು ಪಂದ್ಯಗಳ ಸರಣಿಯಲ್ಲಿ 1–0ಯಿಂದ ಮುನ್ನಡೆ ಸಾಧಿಸಿತು. ಸರಣಿಯ ಮೊದಲ ಪಂದ್ಯವು ಮಳೆಗಾಹುತಿಯಾಗಿತ್ತು.

ಈ ಪಂದ್ಯದಲ್ಲಿಯೂ ಮಳೆಯಿಂದಾಗಿ ದಕ್ಷಿಣ ಆಫ್ರಿಕಾ ತಂಡದ ಗೆಲುವಿನ ಗುರಿಯನ್ನು ಪರಿಷ್ಕ-ರಿಸಲಾಗಿತ್ತು. ಟಾಸ್ ಸೋತಿದ್ದ ಭಾರತ ಮೊದಲು ಬ್ಯಾಟಿಂಗ್ ಮಾಡಿತು. ತಂಡವು 19.3 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 180 ರನ್ ಗಳಿಸಿತು. ಈ ಸಂದರ್ಭದಲ್ಲಿ ಮಳೆ ಬಂದು ಆಟ ನಿಂತಿತು. ಆದ್ದರಿಂದ ಡಕ್ವರ್ಥ್ ಲೂಯಿಸ್ ನಿಯಮದಡಿಯಲ್ಲಿ 15 ಓವರ್‌ಗಳಲ್ಲಿ 152 ರನ್‌ಗಳ ಗುರಿಯನ್ನು ಪರಿಷ್ಕರಿಸಲಾಯಿತು.

ಆರಂಭಿಕ ಬ್ಯಾಟರ್ ರೀಜಾ ಹೆನ್ರಿಕ್ಸ್ (49 ರನ್) ಮತ್ತು ಮ್ಯಾಥ್ಯೂ ಬ್ರೀಟ್ಜ್ ಅವರು ಕೇವಲ 2.5 ಓವರ್‌ಗಳಲ್ಲಿ42 ರನ್ ಸೂರೆ ಮಾಡಿ ಉತ್ತಮ ಆರಂಭ ನೀಡಿದರು. ಮೂರನೇ ಓವರ್‌ನಲ್ಲಿ ಮ್ಯಾಥ್ಯೂ ರನ್‌ಔಟ್ ಆಗಿದ್ದರಿಂದ ಜೊತೆಯಾಟ ಮುರಿಯಿತು. ಕ್ರೀಸ್‌ಗೆ ಬಂದ ಏಡನ್ ಮರ್ಕರಂ 17 ಎಸೆತಗಳಲ್ಲಿ 30 ರನ್ ಗಳಿಸಿದರು. ಅವರು ಮತ್ತು ರಿಜಾ ಕ್ರಮವಾಗಿ ಎಂಟು ಹಾಗೂ ಒಂಬತ್ತನೇ ಓವರ್‌ನಲ್ಲಿ ಔಟ್ ಆದರು. ಇದರಿಂದಾಗಿ ಭಾರತ ಬಳಗದಲ್ಲಿ ಮತ್ತೆ ಗೆಲುವಿನ ವಿಶ್ವಾಸ ಮೂಡಿತು. ನಂತರದ ನಾಲ್ಕು ಓವರ್‌ಗಳಲ್ಲಿ ತುರುಸಿನ ಪೈಪೋಟಿ ನಡೆಯಿತು. ಕ್ಲಾಸೆನ್ ಮತ್ತು ಡೇವಿಡ್ ಮಿಲ್ಲರ್ ವಿಕೆಟ್ ಪಡೆಯುವಲ್ಲಿ ಸಿರಾಜ್ ಹಾಗೂ ಮುಕೇಶ್ ಕುಮಾರ್ ಯಶಸ್ವಿಯಾದರು.

ಭಾರತದ ಸೂರ್ಯಕುಮಾರ್ ಯಾದವ್ ಅರ್ಧಶತಕದ ಸಂಭ್ರಮ –ಎಪಿ ಚಿತ್ರ

ಆದರೆ ಸ್ಟಬ್ಸ್ ಮತ್ತು ಆ್ಯಂಡಿಲೆ ಪಿಶುವಾಯೊ ಅವರನ್ನು ಕಟ್ಟಿಹಾಕಲು ಭಾರತದ ಬೌಲರ್‌ಗಳಿಗೆ ಸಾಧ್ಯವಾಗಲಿಲ್ಲ. ಇನಿಂಗ್ಸ್‌ನ ಕೊನೆಯ 12 ಎಸೆತಗಳಲ್ಲಿ ಬೇಕಾಗಿದ್ದ 12 ರನ್‌ಗಳನ್ನು ಇಬ್ಬರೂ ಸೇರಿ ಐದು ಎಸೆತಗಳಲ್ಲಿ ಹೊಡೆದರು. ಆ್ಯಂಡಿಲೆ ವಿಜಯದ ಸಿಕ್ಸರ್ ಸಿಡಿಸಿದರು.

ಸೂರ್ಯ, ರಿಂಕು ಅಬ್ಬರ: ದಕ್ಷಿಣ ಆಫ್ರಿಕಾ ಎದುರಿನ ಎರಡನೇ ಟಿ20 ಪಂದ್ಯದಲ್ಲಿ ಸೂರ್ಯ (56; 36ಎ, 4X5, 6X3) ಮತ್ತು ರಿಂಕು (ಔಟಾಗದೆ 68; 39ಎ, 4X9, 6X2) ಅವರು ಸಿಡಿಲಬ್ಬರದ ಬ್ಯಾಟಿಂಗ್ ಮಾಡಿದರು.

ಭಾರತದ ಆರಂಭಿಕ ಜೋಡಿ ಯಶಸ್ವಿ ಜೈಸ್ವಾಲ್ ಮತ್ತು ಶುಭಮನ್ ಗಿಲ್ ಅವರಿಬ್ಬರೂ ಖಾತೆ ತೆರೆಯದೇ ಔಟಾದರು. ಈ ಹಂತದಲ್ಲಿ ಕ್ರೀಸ್‌ನಲ್ಲಿ-ದ್ದ ತಿಲಕ್ ವರ್ಮಾ (29; 20ಎ) ಅವರು ಸೂರ್ಯ ಅವರೊಂದಿಗೆ ಮೂರನೇ ವಿಕೆಟ್ ಜೊತೆಯಾಟದಲ್ಲಿ 49 ರನ್ ಸೇರಿಸಿದರು. ಇನಿಂಗ್ಸ್‌ನ ಮೊದಲ ಓವರ್‌ನಲ್ಲಿ ಮತ್ತು ಎರಡನೇ ಓವರ್‌ನಲ್ಲಿ ತಿಲಕ್ ವರ್ಮಾ ಅವರಿಗೆ ಜೀವದಾನಗಳು ಲಭಿಸಿದ್ದವು. ಗೆರಾಲ್ಡ್ ಕೋಝಿ ಎಸೆತದಲ್ಲಿ ವರ್ಮಾ ಔಟಾಗುವುದ-ರೊಂದಿಗೆ ಜೊತೆಯಾಟ ಮುರಿಯಿತು. ಸೂರ್ಯ ಮತ್ತು ರಿಂಕು ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 70 ರನ್ ಸೇರಿಸಿದರು.

ತಬ್ರೇಜ್ ಶಂಸಿ (4-0-18-1) ಪಂದ್ಯದ ಆಟಗಾರ ಗೌರವಕ್ಕೆ ಪಾತ್ರರಾದರು.

ಸಂಕ್ಷಿಪ್ತ ಸ್ಕೋರು: ಭಾರತ: 19.3 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 180 (ತಿಲಕ್ ವರ್ಮಾ 29, ಸೂರ್ಯಕುಮಾರ್ ಯಾದವ್ 56, ರಿಂಕು ಸಿಂಗ್ ಔಟಾಗದೆ 68, ರವೀಂದ್ರ ಜಡೇಜ 19, ಗೆರಾಲ್ಡ್ ಕೋಜಿ 32ಕ್ಕೆ3) ದಕ್ಷಿಣ ಆಫ್ರಿಕಾ: 13.5 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 154 (ರೀಜಾ ಹೆನ್ರಿಕ್ಸ್ 49, ಏಡನ್ ಮರ್ಕರಂ 30, ಡೇವಿಡ್ ಮಿಲ್ಲರ್ 17, ಟ್ರಿಸ್ಟನ್ ಸ್ಟಬ್ಸ್ ಔಟಾಗದೆ 14, ಆ್ಯಂಡಿಲೆ ಪಿಶುವಾಯೊ ಔಟಾಗದೆ 10, ಮುಕೇಶ್ ಕುಮಾರ್ 34ಕ್ಕೆ2) ಫಲಿತಾಂಶ:ದಕ್ಷಿಣ ಆಫ್ರಿಕಾಕ್ಕೆ 5 ವಿಕೆಟ್ ಜಯ (ಡಿಎಲ್‌ಎಸ್ ಪದ್ಧತಿ ಅನ್ವಯ)

ಡುಪ್ಲೆಸಿ ಶತಕ: ವಿದ್ವತ್‌ಗೆ ವಿಕೆಟ್

ಪೊಚೆಸ್‌ಸ್ಟ್ರೂಮ್, ದಕ್ಷಿಣ ಆಫ್ರಿಕಾ (ಪಿಟಿಐ): ಜೀನ್ ಡುಪ್ಲೆಸಿ ಅವರ ಶತಕದ ನೆರವಿನಿಂದ ದಕ್ಷಿಣ ಆಫ್ರಿಕಾ ಎ ತಂಡವು ಮಂಗಳವಾರ ಇಲ್ಲಿ ನಡೆದ ‘ಟೆಸ್ಟ್’ ಪಂದ್ಯದಲ್ಲಿ ಭಾರತ ಎ ತಂಡದ ಎದುರು ಉತ್ತಮ ಮೊತ್ತ ಗಳಿಸಿತು.

ಎರಡನೇ ದಿನದಾಟದ ಕೊನೆಗೆ 92 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 298 ರನ್ ಗಳಿಸಿತು. ಪಂದ್ಯದ ಮೊದಲ ದಿನವು ಮಳೆಗಾಹುತಿಯಾಗಿತ್ತು. ಆತಿಥೇಯ ತಂಡದ ರುಬಿನ್ ಹರ್ಮನ್ 95 ರನ್ ಗಳಿಸಿದರು. ಜೀನ್ (ಬ್ಯಾಟಿಂಗ್ 103; 207ಎ, 4X8, 6X1) ಶತಕ ಗಳಿಸಿದರು.

ಕನ್ನಡಿಗ ಧನುಷ್‌ಗೌಡಗೆ ಸ್ಥಾನ

ಬೆಂಗಳೂರು: ಕರ್ನಾಟಕದ ಧನುಷ್ ಗೌಡ ಅವರು 19 ವರ್ಷದೊಳಗಿನ-ವರ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆಡಲಿರುವ ಭಾರತ ತಂಡದಲ್ಲಿ ಸ್ಥಾನ ಗಳಿಸಿದ್ದಾರೆ.

ಮುಂದಿನ ಜನವರಿ 19ರಿಂದ ದಕ್ಷಿಣ ಆಫ್ರಿಕಾದಲ್ಲಿ ಟೂರ್ನಿಯು ನಡೆಯಲಿದೆ. ಮಂಗಳವಾರ ಬಿಸಿಸಿಐ ಆಯ್ಕೆ ಸಮಿತಿಯು ತಂಡವನ್ನು ಪ್ರಕಟಿಸಿದೆ. ಸದ್ಯ 19 ವರ್ಷದೊಳಗಿನ-ವರ ಏಷ್ಯಾಕಪ್ ಟೂರ್ನಿಯಲ್ಲಿ ಆಡುವ ತಂಡದ ಬಹುತೇಕ ಆಟಗಾರರನ್ನು ವಿಶ್ವಕಪ್ ಟೂರ್ನಿಗೂ ಉಳಿಸಿಕೊಂಡಿದೆ. ಇದೇ ತಂಡವು ಡಿ.29ರಿಂದ ನಡೆಯುವ ತ್ರಿಕೋನ ಸರಣಿಯಲ್ಲಿಯೂ ಕಣಕ್ಕಿಳಿ-ಯಲಿದೆ. ಭಾರತ, ದಕ್ಷಿಣ ಆಫ್ರಿಕಾ ಮತ್ತು ಇಂಗ್ಲೆಂಡ್ ತಂಡಗಳು ಆಡಲಿವೆ.

ಧನುಷ್ ಗೌಡ ಬಲಗೈ ಮಧ್ಯಮವೇ-ಗಿಯಾಗಿದ್ದಾರೆ. 19 ವರ್ಷದೊಳಗಿನವರ ಭಾರತ ಬಿ ತಂಡವನ್ನು ಪ್ರತಿನಿಧಿಸಿದ್ದರು

ನೆಟ್ಟಕಲ್ಲಪ್ಪ ಈಜು ಕೇಂದ್ರಕ್ಕೆ ‘ಸ್ವಿಮ್ ಆ್ಯಂಡ್ ಪ್ಲೇಬಾಲ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಟರ್‌ಪೋಲೊ ಕ್ರೀಡೆಯನ್ನು ಉನ್ನತಮಟ್ಟದಲ್ಲಿ ಅಭಿವೃ-ದ್ಧಿಪಡಿಸಲು ಭಾರತ ಈಜು ಫೆಡರೇಷನ್ ಇದೇ ಮೊದಲ ಬಾರಿಗೆ ಆರಂಭಿಸಿರುವ ‘ಸ್ವಿಮ್ ಆ್ಯಂಡ್ ಪ್ಲೇಬಾಲ್‘ ಯೋಜನೆ ಜಾರಿಗೆ ನಗರದ ನೆಟ್ಟಕಲ್ಲಪ್ಪ ಅಕ್ವಾಟಿಕ್ ಸೆಂಟರ್ (ಎನ್‌ಎಸಿ) ಆಯ್ಕೆಯಾಗಿದೆ.

ಈ ಯೋಜನೆಗೆ ಆಯ್ಕೆಯಾದ ಮೊಟ್ಟಮೊದಲ ಈಜುಕೇಂದ್ರವೆಂಬ ಹೆಗ್ಗಳಿಕೆಗೆ ಎನ್‌ಎಸಿ ಪಾತ್ರವಾಗಿದೆ. ಪುಣೆಯ ಡೆಕ್ಕನ್ ಜಿಮ್‌ಖಾನಾದಲ್ಲಿ ಮಂಗಳವಾರ ನಡೆದ ಎಸ್‌ಎಫ್‌ಐ (ಭಾರತ ಈಜು ಫೆಡರೇಷನ್) ಸಭೆಯಲ್ಲಿ ಈ ನಿರ್ಧಾರವನ್ನು ಪ್ರಕಟಿಸ-ಲಾಯಿತು.

‘ಸಭೆಯಲ್ಲಿ ಭಾಗವಹಿಸಿದ್ದ ದೇಶದ ಬಹಳಷ್ಟು ಕ್ಲಬ್‌ಗಳು ಈ ಕಾರ್ಯ-ಕ್ರಮವನ್ನು ತಮ್ಮದಾಗಿಸಿಕೊಳ್ಳಲು ಉತ್ಸುಕವಾಗಿದ್ದವು. ಇದರ ನಡುವೆ ಈ ಯೋಜನೆಯ ಜಾರಿಗೆ ನಮ್ಮ ಈಜು-ಕೇಂದ್ರವನ್ನು ಆಯ್ಕೆ ಮಾಡಿರುವುದು ಹೆಮ್ಮೆಯ ಸಂಗತಿ. ವಾಟರ್ ಪೋಲೊ ಕ್ರೀಡೆಯನ್ನು ಅಮೂಲಾಗ್ರವಾಗಿ ಅಭಿ-ವೃದ್ಧಿಪಡಿಸುವ ಅವಕಾಶ ದೊರೆತಿದೆ. ಇದು ಭವಿಷ್ಯದಲ್ಲಿ ದಕ್ಷಿಣ ಭಾರತದ ಪ್ರತಿಭೆಗಳಿಗೆ ಹೆಚ್ಚು ಅನುಕೂಲವಾಗಲಿ-ದೆ’ ಎಂದು ಎನ್‌ಎಸಿ ಮುಖ್ಯಸ್ಥ ವರುಣ್ ನಿಜವಾನ್ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಕಾರ್ತಿಕ್ ಪಡೆಗೆ ಹರಿಯಾಣ ಸವಾಲು

ರಾಜ್‌ಕೋಟ್: ಅನುಭವಿ ಆಟಗಾರ ದಿನೇಶ್ ಕಾರ್ತಿಕ್ ನಾಯಕತ್ವದ ತಮಿಳುನಾಡು ತಂಡವು ಬುಧವಾರ ನಡೆಯಲಿರುವ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಸೆಮಿ-ಫೈನಲ್‌ನಲ್ಲಿ ಹರಿಯಾಣ ತಂಡವನ್ನು ಎದುರಿಸಲಿದೆ.

ಭಾರತ ತಂಡದಲ್ಲಿ ಆಡಿರುವ ವಿಕೆಟ್‌ಕೀಪರ್ ದಿನೇಶ್ ತಂಡವು ಇ ಗುಂಪಿನಲ್ಲಿ ಎರಡನೇ ಸ್ಥಾನ ಪಡೆದು ಕ್ವಾರ್ಟರ್‌ಫೈನಲ್ ಪ್ರವೇಶಿಸಿತ್ತು.

ಆರಂಭ: ಮಧ್ಯಾಹ್ನ 1.30